ಗೋವಿಂದ ಪೈ

ಶತಮಾನೋತ್ಸವದ ನೆನಪಿನ ಸಂಚಿಕೆ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 12
ಸಂಚಿಕೆ 2
ಏಪ್ರಿಲ್-ಜೂನ್-1983

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore
Vol. 12. No. 2, April-June 1983


ವಾರ್ಷಿಕ ಚಂದಾ : ರೂ. 8-00
ರೂ. 5-00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100-00

ಪ್ರಕಾಶಕರು : ಕೆ. ಸಿ. ಶಿವಪ್ಪ
ನಿರ್ದೇಶಕ (ಕಾರ್ಯನಿರ್ವಾಹಕ), ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪರಿವಿಡಿ



ಎಂ. ಗೋವಿಂದ ಪೈ : 1883-1963

ಮಸಣದ ಹಾಡು

ರಘು ಕುಲಕರ್ಣಿ

ಗಡಿಯಾರದ ವರ್ತುಳದಲ್ಲಿ
ಬಾಯ್ತೆರದ ಮುಳ್ಳುಗಳು
ಪರೇಡು ಮಾಡುತ್ತಿರುವಂತೆ
ನನ್ನ ತಾಬೆಗೇs ಒಳಗಾಗಿ
ಎಲುಬಿಲ್ಲದ ಗಾಳಿಯಂತೆ
ನನ್ನನ್ನೇ ನಾನು ಎಳಕೊಂಡು ಬಂದರೆ–
ಸಪಾಟಾದ ಭೂಮಿಯೇ ಸಿಗುವದಿಲ್ಲ
ಬರಿ ತಗ್ಗು–ದಿನ್ನೆ
ಸ್ಮಶಾನ ಮೌನ

ಯಾವುದೋ ಮಸಣದ ಪಡಿಯಚ್ಚು
ಮರೆತರೂ ಮರೆಯಲಾಗದ ಕಚ್ಚು

ಹದ್ದು ಕಾಗೆ ಗೂಬೆ ಬೂದಿ
ಒಣಗಿದ ಗಿಡ ಬಯಲು
ಕುಣಿ ಸುಟ್ಟುಳಿದ ಕಟ್ಟಿಗೆ
ತುಂಡೆಲಬು ಗೋರಿ
ಹಳದೀ ಮಿಶ್ರಿತ ಕೆಂಪು
ನೀಲಿ ಜ್ವಾಲೆ ಚಿಮ್ಮುವ ಚಿತೆ
ಮಸಣದ ಹೂಗಳ ಮಧ್ಯ
ಮೇಲೆ ಬತ್ತಲೇ—ಬತ್ತಲೇ
ಆಕಾಶ ಕೆಪ್ಪು

ಹೌದಂ,

ಅದೇನೋ ಅಸಂಬದ್ಧ ಕ್ರೋಧ ಗಲಿಬಿಲಿ
ನಡುನಡುವೆ ಬಡಿದೆಬ್ಬಿಸುವ
ಹಲಿಗೆಯ ಸಪ್ಪಳ

ಕಡ ಕಡ ಕಿಡಕುಂ
ಅದಾರೋ ಬಂದರು,
ಹೊರತು ಬೇರೇನೂ ಸಿಕ್ಕುವದಿಲ್ಲ
ಸಿಕ್ಕರೂ ದಕ್ಕುವದಿಲ್ಲ
ಎಷ್ಟೋ ದಿನಗಳಾದವು–ಆಗುತ್ತವೆ
ನಾನು ಕೇಳುವುದಿಲ್ಲ
ಮನಸ್ಸು ಉಗಳಿದ ವಿಚಾರಗಳಿಗೆ
ಹಟಮಾರಿಯಂತೆ ಬಲಿಯಾಗಿ
ಸಂಜ್ಞೆಗಳ ಸುಳಿಯಲ್ಲಿ
ರುದ್ರ ಸೌಂದರ್ಯದೊಡನೆ
ನನ್ನನ್ನು ನಾನು ಕರೆದೊಯ್ದು
ಕಣಕಣವನ್ನು ವಿಶ್ಲೇಷಿಸಿದರೆ
ಕುಲುಮೆಯಲ್ಲಿಯ ವಾಕ್ಯ ವೃಂದಗಳೇ
ಬದಲಿಸುತ್ತವೆ.

ಇನ್ನೆಷ್ಟು ದಿನಗಳೋ ಸುಡುಗಾಡು
ಪಂಜರಗಳ ಹೊಡೆತದಲ್ಲಿ ಸಾಯುವುದು
ಸತ್ತು ಬದುಕುವುದು
ಸತ್ತವರ ಪ್ರತಿಮೆಗಳ ನೆರಳಂತೆ
ಕಪ್ಪು ಚೌಕಟ್ಟಿನಲ್ಲಿಯ ಕಪ್ಪುಕಡಲಿನಂತೆ
ನಿರ್ಲಿಪ್ತನಾಗಿ
ಓ ! ದುಃಖದಾನಂದವೇ
ನೀನಾದರೂ ಕೊನೆಗೊಮ್ಮೆ
ಕಿವಿಯಲ್ಲಾದರೂ ಪಿಸಗುಡು
ಇಲ್ಲದಿದ್ದರೆ
ನಿನ್ನ ಪಂಜದಿಂದಾದರೂ

ನೆಲಕಿಟ್ಟು
ಅಗಿದು
ಮುಚ್ಚಿ

ಸಪಾಟು ಮಾಡಿಬಿಡು.

ಗೋವಿಂದ ಪೈ ಕಾವ್ಯ ದೃಷ್ಟಿ

ಕೆ. ವಿ. ತಿರುಮಲೇಶ್

೧

ಗೋವಿಂದ ಪೈ ಒಂದು ದ್ವಂದ್ವ ವ್ಯಕ್ತಿತ್ವ ಹೊಂದಿದ್ದ ಕವಿ. ಅತ್ತ ಪರಂಪರೆಯನ್ನು ಪೂರ್ತಿಯಾಗಿ ಬಿಡಲೂ ಆರದೆ ಇತ್ತ ಅದನ್ನು ಪೂರ್ತಿಯಾಗಿ ಒಪ್ಪಿಕೊಳ್ಳಲೂ ಆರದೆ ಇದ್ದ ಅವರ ಒಳಗಣ ಸಂಘರ್ಷ ಕನ್ನಡ ಕಾವ್ಯ ಮಾರ್ಗದಲ್ಲಿ ಹೊಸ ಸಾಧ್ಯತೆಗಳಿಗೆ ಕಾರಣವಾಯಿತು ಎನ್ನಬಹುದು. ಮೂವತ್ತನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಅವರು ಕನ್ನಡ ಸಾಹಿತ್ಯದ ಏಳಿಗೆಯ ಬಗ್ಗೆ ಮಾತಾಡುತ್ತ, ''ಎಲ್ಲಕ್ಕೂ ಮಿಗಿಲಾಗಿ ಬರಹದಲ್ಲಿ ಹುರುಳಿರಬೇಕು, ತಿರುಳಿರಬೇಕು, ಸಾಕಷ್ಟು ಮರುಳೂ ಇರಬೇಕು, ಅಂದರೆ ಆ ಬರಹ ಅಜರಾಮರವಾಗಿ ಬದುಕುತ್ತದೆ'', ಎಂದರು. ಇಲ್ಲಿ ಬರುವ ಮರುಳು ಎಂಬ ಪದಕಾವ್ಯದ ಸೃಜನಶೀಲತೆಗೆ ಸಂಬಂಧಿಸಿದ್ದು, ಇದನ್ನು ಕಲ್ಪನಾ ವಿಲಾಸ, ಲಹರಿ, ಸ್ಫೂರ್ತಿ, ಭಾವತೀವ್ರತೆ ಎಂದು ಮುಂತಾಗಿ ಅರ್ಥಮಾಡಬಹುದಾಗಿದೆ. ಕವಿಯು ಸೃಜನಶೀಲತೆಗೆ ಪೈ ಬಹಳ ಮಹತ್ವ ಕೊಡುತ್ತಾರೆ. ಇದೇ ಭಾಷಣದಲ್ಲಿ ಕವಿಯನ್ನು ಸೃಷ್ಟಿಕರ್ತನಿಗೆ ಹೋಲಿಸುವ ಅಥರ್ವವೇದದ ಒಂದು ಸಾಲನ್ನು, ಕವಿಗಳ ಹೆಗ್ಗಳಿಕೆಯನ್ನು ಸಾರುವ ಲೀಲಾವತೀ ಪ್ರಬಂಧದ ''ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿ ಸಂತತಿ'' ಎಂಬ ವೃತ್ತವನ್ನು ಅವರು ಉದ್ಧರಿಸುತ್ತಾರೆ. ಸ್ವಂತ ಕಾವ್ಯರಚನೆಯಲ್ಲಂತೂ ಪೈಯ ಸೃಜನಶೀಲತೆ ಅದರ ಉತ್ಕರ್ಷವನ್ನು ತಲಪಿದೆ. ಇದು ಪ್ರಕಟವಾಗುವುದು ಸರ್ವಸಮ್ಮತವಾದ ಕಾವ್ಯತಂತ್ರಗಳಲ್ಲಿ ಮಾತ್ರವಲ್ಲ ; ಕೆಲವೊಮ್ಮೆ ಚಾರಿತ್ರಿಕ ಸತ್ಯಗಳನ್ನು ಕೂಡ ಅವರು ತಮಗೆ ಬೇಕಾದಂತೆ ಮಾರ್ಪಡಿಸಿಕೊಂಡಿದ್ದಾರೆ. ಉದಾಹರಣೆಗೆ ಗೊಲ್ಗೊಥಾದಲ್ಲಿ ಸಿಲುಬೆಗೇರಿಸಿದ ಯೇಸುವನ್ನು ಆ ರಾತ್ರಿ ಕವಿ ಹಾಗೆಯೇ ಸಿಲುಬೆಯ ಮೇಲೆ ಇರಗೊಡುತ್ತಾರೆ. ವಾಸ್ತವದಲ್ಲಾದರೆ ಅಂದು ಶುಕ್ರವಾರವಾಗಿದ್ದು ಆ ಸಂಜೆಯಿಂದ ವಿರಾಮ ದಿನವಾದ ಸಬ್ಬತು ಸುರುವಾಗುವುದರಿಂದ ಯೇಸುವಿನ ಕಳೇಬರವನ್ನು ಸಂಜೆಗೆ ಮೊದಲೆ ಕೆಳಗಿಳಿಸಲಾಗಿತ್ತು. ಈ ಬದಲಾವಣೆಯನ್ನು ಮಾಡಿಕೊಂಡುದರಿಂದ ಕೃತಿಗೆ ಅಗತ್ಯವಾಗಿದ್ದ ಆಶಯಗಳೊಂದಿಗೆ ಅದರ ಮುಕ್ತಾಯವನ್ನು ದೊರಕಿಸಿಕೊಳ್ಳುವುದು ಕವಿಗೆ ಸಾಧ್ಯವಾಗುತ್ತದೆ :

ಗೊಲ್ಗೊಥದ ಹಿಂದಣಿಂದುದಿಸಿದ ಸುಧಾಸೂತಿ
ಬೆಳ್ಗೊಡೆಯುನಮೃತನಾ ಮೃತಮೂರ್ತಿಗೆತ್ತಿಹಂ ;
ಮುನ್ನ ಕೀರ್ತಿಯ ಹಾಲ ಹೊನಲಂತೆ, ತಾನನ್ನೆ
ಗಂ ಬೀರಿದಕ್ಕರೆಯ ಒಲೆಯಂತೆ, ಬೋಧಿಸಿದ
ನಿತ್ಯ ಜೀವನದ ಧವಳಿಮೆಯಂತೆ, ತನ್ನಾತ್ಮ
ದಮೃತತ್ವದಂತೆ ವಿಸಟಂಬರಿಯೆ ಬೆಳದಿಂಗ
ಳೆತ್ತಲುಂ ನಿಷ್ಪಂದಮೆತ್ತಲುಂ ಶಾಂತಂ

ಯೇಸುವಿನ ಮರಣ ಒಂದು ಕೊಲೆಯಾಗದೆ, ಮಹಾತ್ಯಾಗವಾಗುವುದಕ್ಕೆ ಮತ್ತು ಆ ತ್ಯಾಗದ ಕಾರಣವಾಗಿ ಉಂಟಾಗುವ ಶಾಂತಿಗೆ ಕವಿ ಮಾಡಿಕೊಂಡ ಈ ಬದಲಾವಣೆ ಸರಿಯಾಗಿದೆ.

ಬುದ್ಧನ ಪರಿನಿರ್ವಾಣಕ್ಕೆ ಸಂಬಂಧಿಸಿದ ವೈಶಾಖಿಯ ಕೊನೆಯ ಸಾಲುಗಳಲ್ಲಿ ಕೂಡ ಚಂದ್ರೋದಯದ ವರ್ಣನೆಯಿದೆ. ಆದರೆ ಬುದ್ಧನ ಪರಿನಿರ್ವಾಣ ಹುಣ್ಣಿಮೆಯ ರಾತ್ರಿಯೇ ಆದುದೆಂಬ ಐತಿಹ್ಯವಿರುವುದರಿಂದ ಕವಿ ಇಲ್ಲಿ ಕವಿಸಮಯದ ಸ್ವಾತಂತ್ರ್ಯವನ್ನು ಉಪಯೋಗಿಸಬೇಕಾಗುವುದಿಲ್ಲ. ಗೋವಿಂದ ಪೈ ಕಾವ್ಯದ ಒಟ್ಟು ಶಿಲ್ಪಕ್ಕೆ ಬೇಕಾದ ಬದಲಾವಣೆಗಳನ್ನು ಅಪೂರ್ವವಾಗಿ ಹೀಗೆ ಮಾಡಿಕೊಳ್ಳುತ್ತಾರೆಯೇ ಹೊರತು ಚಾರಿತ್ರಿಕ ವಸ್ತು ವಿಷಯಗಳ ಬಗ್ಗೆ ಆದಷ್ಟು ಮಟ್ಟಿಗೆ ವಾಸ್ತವತೆಯನ್ನು ಕಾಪಾಡಿಕೊಳ್ಳಲು ಯತ್ನಿಸುತ್ತಾರೆ. ಕವಿಸಮಯ, ಉಪಮೆ, ರೂಪಕ ಇತ್ಯಾದಿ ಪರಂಪರಾಗತ ಕಾವ್ಯ ಪರಿಕರಗಳನ್ನು ಪಡೆದುಕೊಂಡರೂ ಅವುಗಳ ಉಪಯೋಗದಲ್ಲಿ ಯುಕ್ತಾಯುಕ್ತ ವಿವೇಚನೆಯನ್ನು ಕಳೆದುಕೊಳ್ಳುವುದಿಲ್ಲ. ಅತ್ಯತಿಶಯೋಕ್ತಿ, ಶಬ್ದಶ್ಲೇಷೆ ಮುಂತಾದ ನೀರಸವಾದ ಕಾವ್ಯಾಲಂಕಾರಗಳ ವಿರುದ್ಧ ಅವರು ತಮ್ಮ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ದನಿಯೆತ್ತಿರಿಸಿದ್ದಾರೆ. ಆದರೆ 'ಶಿವನಂತೆ ಗಂಗಾಹಿಮಕರಾಪಹಂ', 'ಕಲಹಂ-ಸಮಾಕೀರ್ಣಮಾಗಿರ್ದ ಕಾಳಗದ ಕಳಮಲ್ಲ' ಎಂಬಿತ್ಯಾದಿ ರೀತಿಗಳನ್ನು ಖಂಡಿಸಿದ ಕವಿಯೇ 'ನೀ ನೀರ ಸಾಗರವೊ ? ನಿರ್ಘೋಷದಾಗರವೊ ?', 'ಅಲೆಯ ಮಲೆಯ ಗಾಳಿಯೋ, ಖಗ ಮೃಗೋರಗಾಳಿಯೋ' ಮೊದಲಾದ ಹಿತವಾದ ಶಬ್ದಾಲಂಕಾರಗಳನ್ನು ಸೃಷ್ಟಿಸುವುದಕ್ಕೆ ಸಮರ್ಥರು.

ಸಾಹಿತಿಯೊಬ್ಬನ ಸೃಜನಕ್ರಿಯೆಯ ಒಳತೋಟಿ ಇಡಿಯ ಸಾಹಿತ್ಯ ಪರಂಪರೆಯ ಒಳತೋಟಿಯೂ ಆಗಿರುವುದು ಸಾಧ್ಯ. ಆದ್ದರಿಂದ ಆಯಾ ಕಾಲಘಟ್ಟಗಳಲ್ಲಿ ಹೊಸ ಸಾಹಿತಿಗಳು ಹುಟ್ಟಿಕೊಂಡು ಸಾಹಿತ್ಯವಾಹಿನಿಗೆ ಹೊಸ ತಿರುವುಗಳನ್ನೂ ಸೆಳೆವುಗಳನ್ನು ಕೊಡುವುದು ಕಂಡುಬರುತ್ತದೆ. ಮದರಾಸಿನ ಸಮುದ್ರದಂಡೆಯಲ್ಲಿ ಹಜ್ಜೆ ಹಾಕುತ್ತ ಕನ್ನಡಕ್ಕೆ ಇಂಗ್ಲಿಷ್ ಭಾವಗೀತೆಗಳ ಸೊಬಗನ್ನು ತರುವ ಬಗೆ ಚಿಂತಿಸಿದ ಬಿ. ಎಂ. ಶ್ರೀ, ಮೈಸೂರಿನ 'ಉದಯರವಿ'ಯಲ್ಲಿ ಹೊಸಗನ್ನಡ ಕಾವ್ಯಕೆ

ಉಪನಿಷತ್ತು ಹಾಗೂ ಸಂಸ್ಕೃತ ಕಾವ್ಯಗಳ ಓಘವನ್ನೂ ಔನ್ನತ್ಯವನ್ನೂ ಮೊದಲಿಗೆ ಕೊಟ್ಟ ಕುವೆಂಪು, 'ಬಿಡದೆಯೆ ಮನೆವಾಳ್ತೆಗೆಯೊಂದರಲ್ಲಿ ಶತಪದ ಹಾಕುತ್ತ ಪ್ರಾಸವನೀಗಲ್ ತೊರೆದು ಬಿಡುವುದೇ ನಿಶ್ಚಯಂ' ಎಂದು ನಿರ್ಧರಿಸಿದ ಗೋವಿಂದ ಪೈ ಇವರೆಲ್ಲರೂ ಹೊಸ ಕಾವ್ಯಮಾರ್ಗವನ್ನು ರೂಪಿಸುವುದಕ್ಕೆ ಕಾರಣರಾದರು. ಐತಿಹಾಸಿಕ ಪ್ರಜ್ಞೆಯಿಲ್ಲದವರಿಗೆ ಪೈ ಪ್ರಾಸದ ಕುರಿತು ಅನುಭವಿಸಿದ ತೊಳಲು ಅರ್ಥವಾಗುವುದಕ್ಕೆ ಕಷ್ಟ. ಆದರೆ ಅಂದು ಕವಿಗೆ ಪ್ರಾಸ ಬಿಟ್ಟು ಬರೆಯುವುದೆಂದರೆ ಬಹುತೇಕ 'ಮೋಕೆ ದಾರಿ'ಯೇ ಆಗಿತ್ತು. ಪ್ರಾಸವನ್ನು ಬಿಟ್ಟುದರಿಂದ ಕವಿಯ ಭಾವಾಭಿವ್ಯಕ್ತಿಗೆ ಮುಕ್ತಿ ದೊರಕಿದಂತಾಯಿತು. ಬಿಡುಗಡೆಗೊಂಡ ಭಾವಾಭಿವ್ಯಕ್ತಿ ಈಗ ಹೊಸ ಹೊಸ ಪ್ರಯೋಗಗಳಲ್ಲಿ ಮುಂದುವರಿಯುವುದಕ್ಕೆ, ಪ್ರಕಟಗೊಳ್ಳುವುದಕ್ಕೆ ಸಾಮರ್ಥ್ಯವನ್ನು ಪಡೆಯಿತು. ಆದರೆ ಪೈ ಬಿಟ್ಟುದು ಸಾಧಾರಣವಾಗಿ ಜನರು ನಂಬುವಂತೆ ಇಡಿಯ ಪ್ರಾಸವಿಧಾನವನ್ನಲ್ಲ; ದ್ವಿತೀಯಾಕ್ಷರ ಪ್ರಾಸವನ್ನು ಮಾತ್ರ. ಶತಮಾನಗಳಿಂದ ಕನ್ನಡದ ಛಂದೋಗತಿಯ ಮೇಲೆ ಅಧಿಕಾರ ಚಲಾಯಿಸಿದ ದ್ವಿತೀಯಾಕ್ಷರ ಪ್ರಾಸವನ್ನು ಹೀಗೆ ತೊರೆದ ಮೇಲೆ ಕವಿ ಅಂತ್ಯಪ್ರಾಸ, ಅನುಪ್ರಾಸ, ಒಳಪ್ರಾಸಗಳಲ್ಲಿ ಅನೇಕತರದ ವಿನ್ಯಾಸಗಳನ್ನು ಸೃಷ್ಟಿಸಿದರೆಂಬುದು ಗಮನಾರ್ಹವಾದ ಸಂಗತಿ. ತಮ್ಮ ದೀರ್ಘ ಕವಿತೆಗಳಾದ ಖಂಡಕಾವ್ಯಗಳಲ್ಲಿ ಯಾವೊಂದು ಪ್ರಾಸಕ್ಕೂ ಬದ್ಧರಾಗದೆ ಇತರ ರಚನೆಗಳಲ್ಲಿ ಒಂದಲ್ಲ ಒಂದು ರೀತಿಯ ಪ್ರಾಸಬಂಧವನ್ನು ಉಪಯೋಗಿಸಿರುವುದು ಕಂಡುಬರುತ್ತದೆ. ಎಂದರೆ ಸೃಜನಶೀಲತೆ ಕೂಡ ಸಂಪೂರ್ಣವಾಗಿ ಮುಕ್ತವಾಗಿರುವುದು ಸಾಧ್ಯವಲ್ಲ; ಮಾತ್ರವಲ್ಲ ಅದು ಸ್ವಾಗತಾರ್ಹವೂ ಅಲ್ಲ. ಕಲೆಯೆಂದರೇನೆ ಭಾವಾವೇಶದ ನಿಯಂತ್ರಣ. ಅನಿಯಂತ್ರಿತವಾದ ಭಾವಾವೇಶ ಅತಿರೇಕಕ್ಕೆ ಹೋಗುತ್ತದೆ. ಅದರಿಂದ ಏನನ್ನೂ ಹೇಳಿದಂತಾಗುವುದಿಲ್ಲ. ಅತ್ಯತಿಶಯೋಕ್ತಿಯಂತೆ ಅದು ಅರ್ಥಹೀನವಾಗಿರುತ್ತದೆ.

ಭಾಷೆಯ ಮೂಲಕವೇ ಅಭಿವ್ಯಕ್ತಿಯನ್ನು ಸಾಧಿಸಿಕೊಳ್ಳಬೇಕಾದ ಕವಿ ಅಭಿವ್ಯಕ್ತಿಯ ದಾರಿಗಳನ್ನು ಕಂಡುಕೊಳ್ಳಬೇಕು. ಈ ಅನ್ವೇಷಣೆಯಲ್ಲಿ ಬೇರೆ ಬೇರೆ ಮಾದರಿಗಳು ಉಪಯೋಗಕ್ಕೆ ಬರಬಹುದಾದರೂ ಮೂಲತಃ ಇಲ್ಲಿ ಕವಿ ಏಕಾಕಿ. ತನಗೇನು ಬೇಡ, ಏನು ಬೇಕು ಎಂಬುದನ್ನು ಅವನೊಬ್ಬನೇ ಅರಿಸಿಕೊಳ್ಳಬೇಕಾಗಿದೆ. ಪ್ರಾಸ, ಛಂದಸ್ಸು, ಯತಿ, ಲಯ ಮುಂತಾದ ಬಂಧಗಳು ಬರಿಯ ಬಂಧಗಳಾಗಿರದೆ ಅಭಿವ್ಯಕ್ತಿಯ ಸಾಧನೆಗಳಾಗಿರುವುದು ಸಾಧ್ಯ ಎಂಬುದಕ್ಕೆ ಪೈಗಳ ಕಾವ್ಯದಲ್ಲಿ ಅನೇಕ ಉದಾಹರಣೆಗಳಿವೆ. ಗೊಲ್ಗೊಥಾದ ಈ ಸಾಲುಗಳನ್ನು ಗಮನಿಸಿರಿ :

ಹದ್ದು ಬಗಿವಿಡಿದ ಲಾವಿಗೆಯಂತೆ, ಪಡುವಣದಿ ಬಿಳಿಯ ಬಿದಿ
ಗೆಯ ತಿಂಗಳಂತೆ, ಬಿಲ್ಲಿಗೆ ತೊಟ್ಟ ಸರಳಂತೆ,
ಮರಣ ವೃಕ್ಷದೊಳಮೃತಫಲದಂತೆ ತೂಗುತಿರೆ,
ತನ್ನ ಬೇನೆಯನಣಂ ಗಣಿಸದವನುಸುರಿದಂ –

ಈ ಕೃತಿಯ ಛಂದಸ್ಸು ಐದು ಮಾತ್ರೆಗಳ ನಾಲ್ಕು ಚರಣಗಳ ಸಾಲುಗಳುಳ್ಳದ್ದು. ಪ್ರಕೃತ ಉದಾಹರಣೆಯ ನಾಲ್ಕನೆ ಸಾಲಿನಲ್ಲಿ ಬರುವ 'ಮರಣವೃಕ್ಷದೊಳಮೃತ ಫಲದಂತೆ' ಎಂಬ ಪದಪುಂಜ ಬರಿ ಅದು ನಿರ್ಮಿಸುವ ಪ್ರತಿಮಾವಿಧಾನಕ್ಕೆ ಮಾತ್ರ ವಲ್ಲ ; ಛಂದಸ್ಸಿನಲ್ಲಿ ಒದಗಿಸುವ ಅಪೂರ್ವವಾದ ಲಯವಿನ್ಯಾಸಕ್ಕೆ ಕೂಡ ಓದುಗರ ಮನಸ್ಸನ್ನು ಸೆರೆಹಿಡಿಯುತ್ತದೆ. ಮರಣವೃಕ್ಷ ಮತ್ತು ಅಮೃತಫಲವೆಂಬ ಪದ ಗಳು ಯಾವುದೋ ಒಂದು ಭಾವದಲ್ಲಿ ಸ್ವಯಂಪೂರ್ಣವಾಗಿದ್ದು ಛಂದಸ್ಸು ಬಯಸುವ ಗಣವಿಭಜನೆಯನ್ನು ಧಿಕ್ಕರಿಸಿ ಪ್ರತ್ಯೇಕವಾದ ಛಂದೋಗತಿಯಲ್ಲಿ ಹರಿಯುವುದೇ ಇದಕ್ಕೆ ಕಾರಣ. ಹೊರಗಿನ ಛಂದಸ್ಸು ಒಂದು, ಒಳಗಿನ ಪ್ರವಾಹ ಬೇರೊಂದು–ಹೀಗೆ ಒಂದನ್ನೊಂದರ ವಿರುದ್ಧ ಇರಿಸಿ ಛಂದೋಗತಿಯಲ್ಲಿ ಹೊಸ ರೀತಿಗಳನ್ನು ನಿರ್ಮಿಸುವ ಪೈಗಳ ಲಾಘವ ಮೆಚ್ಚಬೇಕಾದ್ದು.

ಮೇಲಿನ ಉದಾಹರಣೆಯಲ್ಲಿ ಛಂದಸ್ಸನ್ನು ಮೊಟಕುಗೊಳಿಸಲಾಗಿಲ್ಲ. ಆದರೆ "ಕಾಲಕ್ಕೆ ತಕ್ಕಂತೆ ರಚನೆಯನ್ನೇ ಅಲ್ಲ, ಛಂದಸ್ಸನ್ನೂ ವ್ಯಾಕರಣವನ್ನೂ ಕೂಡ ತನಗೆ ಬೇಕಾದಂತೆ ಮಾರ್ಪಡಿಸಿಯೂ ನೇರ್ಪಡಿಸಿಯೂ ಕೊಳ್ಳಲಿಕ್ಕೆ ಕವಿಗೆ ಅಧಿಕಾರವಿದೆ", ಎಂದು ಪೈ ನಂಬಿದವರು. ತಾವೇ ಹಾಕಿಕೊಂಡ ಛಂದಸ್ಸನ್ನು ಬೇಕಾದಲ್ಲಿ ಬೇಕಾದಂತೆ ನೇರ್ಪಡಿಸಿಕೊಂಡ ಪದ್ಯಗಳು ಅವರ ಸಾಹಿತ್ಯದಲ್ಲಿ ಹೇರಳ ದೊರೆಯುತ್ತವೆ. '**ಕನ್ನಡಿಗರ ತಾಯಿ**' ಎಂಬ ಭಾವಗೀತೆಯ ಮಾಧುರ್ಯ ಅಡಕವಾಗಿರುವುದೇ ಈ ನೇರ್ಪಡೆಯಲ್ಲಿ. ಇನ್ನು ವ್ಯಾಕರಣದ ಬಗ್ಗೆ ಹೇಳುವುದಾದರೆ ಅದು ಛಂದಸ್ಸಿನಂತಲ್ಲ ; ವ್ಯಾಕರಣ ಪ್ರತಿಯೊಂದು ಭಾಷೆಯ ಪ್ರತ್ಯೇಕ ಗುಣ. ಅದು ಸಾಮಾನ್ಯವಾಗಿ ಯಾರ ಹಸ್ತಕ್ಷೇಪವನ್ನೂ ಸಹಿಸುವುದಿಲ್ಲವಾದರೂ ಕವಿಗಳು ಇಲ್ಲೂ ತಮಗೆ ಬೇಕಾದಂತೆ ಪದಗಳನ್ನು ಹಿಂದುಮುಂದೆ ಇಡುವುದೇ ಮುಂತಾದ ಸ್ವಾತಂತ್ರ್ಯವನ್ನು ತೆಗೆದುಕೊಳ್ಳುವುದಿದೆ. ಪೈಗಳಿಗೆ ಇಷ್ಟೇ ಸಾಕಾಗುವುದಿಲ್ಲ. ಕೆಲವೊಮ್ಮೆ ಅವರು ಕಾವ್ಯದಲ್ಲೂ ಕೂಡ ಸರ್ವಮಾನ್ಯವಾಗದ ಪ್ರಯೋಗಗಳನ್ನು ಮಾಡಿದುದುಂಟು. ಉದಾಹರಣೆಗೆ 'ನಾನಿಲ್ಲಿ ಬಂದೇಕೆ' ಕವಿತೆಯ ಈ ಸಾಲುಗಳನ್ನು ನೋಡಬಹುದು :

ನಾನಿಲ್ಲಿ ಬಂದೇಕೆ
ನೀನೆನ್ನ ತಂದೇಕೆ
ಕೆಲಸಮೇನ್ನಿನಗೆ ನನ್ನ ?
ಪೇಳೊಡೆಯ
ಒಗೆಯಲೀ ಲೀಲೆಯನ್ನ
ನನ್ನಳವೆ ?
ಒಲವೊ ಇದು ಛಲವೊ ನಿನ್ನ ?

ಸಂಧಿ ನಿಯಮಗಳಿಗೆ ವಿರುದ್ಧವಾದ 'ಬಂದೇಕೆ', 'ತಂದೇಕೆ' ಎಂಬ ಪದಗಳು, ವಿಭಕ್ತಿ ಪ್ರತ್ಯಯ ಲೋಪಗೊಳ್ಳಬಾರದಲ್ಲಿ ಲೋಪಗೊಂಡು ಅರ್ಥಕ್ಲಿಷ್ಟತೆಗೆ

ಕಾರಣವಾಗುವ 'ನನ್ನ' ಎಂಬ ಪದ – ಪೈ ವ್ಯಾಕರಣ ಸೂತ್ರಗಳನ್ನು ಉಲ್ಲಂಘಿಸಿ ಬರೆಯುವುದಕ್ಕೆ ಉದಾಹರಣೆ. ಆದರೆ ಕವಿತೆಯ ಒಟ್ಟಂದವನ್ನು ಇದು ಕೆಡಿಸುವುದಕ್ಕೆ ಬದಲಾಗಿ ಅದನ್ನು ಸೃಜಿಸುವುದಕ್ಕೆ ಕಾರಣವಾಗುತ್ತದೆ. ಮೊದಲ ಸಾಲುಗಳಲ್ಲಿ ಗೊಂದಲಕ್ಕೊಳಗಾದ ಓದುಗ ಮುಂದೆ ಓದುತ್ತ ಹೋದಂತೆ ಕವಿತೆಯನ್ನು ಪುನರ್ನಿರ್ಮಿಸಲು ಇದರಿಂದ ಸಾಧ್ಯವಾಗುತ್ತದೆ.

ಭಾಷೆಯನ್ನು ತೀವ್ರವಾಗಿ ಪ್ರೀತಿಸುವವನು ಮಾತ್ರವೇ ಭಾಷೆಯೊಂದಿಗೆ ಜಗಳವಾಡಿ ಅದರಿಂದ ತನಗೆ ಬೇಕಾದ್ದನ್ನು ಪಡೆಯಬಲ್ಲ. ಪೈ ತಮ್ಮ ಕಾವ್ಯದ ಮೂಲಕ ನಡೆಸಿದುದು ಅಂಥದೊಂದು ಜಗಳಾಟವನ್ನೆ. ಕನ್ನಡ ಭಾಷೆಯ ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸಲು ಅವರು ಛಂದಸ್ಸು, ವ್ಯಾಕರಣಗಳಲ್ಲಿ ಕೈಯಾಡಿಸಿದುದು ಮಾತ್ರವಲ್ಲದೆ ಇತರ ದಾರಿಗಳನ್ನೂ ಕೂಡ ಹುಡುಕಿದರು. ಬೇರೆ ಭಾಷೆಗಳಿಂದ ತದ್ಭವಗಳನ್ನು ತೆಗೆದುಕೊಳ್ಳುವುದು, ಕನ್ನಡದಲ್ಲೇ ಬಳಕೆ ತಪ್ಪಿದ ಪದಗಳನ್ನು ಮತ್ತೆ ಉಪಯೋಗಿಸುವುದು, ಹೊಸನಾಮಪದ, ಕ್ರಿಯಾಪದಗಳ ಸೃಷ್ಟಿ – ಇವೇ ಮೊದಲಾದುವು ಈ ದಿಸೆಯಲ್ಲಿ ಅವರು ಇಟ್ಟ ಹೆಜ್ಜೆಗಳು. ಹೀಗೆ ಅವರ ಕಾವ್ಯವೆಂದರೆ ತನ್ನ ರಕ್ಷಣೆಯ ಕವಚವನ್ನು ತಾನೇ ನಿರ್ಮಿಸಿಕೊಂಡ ಮುತ್ತುಚಿಪ್ಪಿಯಂತೆ ಬಿಗಿಯಾದ್ದರಲ್ಲಿ ಆಶ್ಚರ್ಯವಿಲ್ಲ. ಆದರೂ ಇದರ ಮೂಲ ಪ್ರೇರಣೆಗಳು ಉದಾತ್ತವಾದವು ಎಂಬುದನ್ನು ಮರೆಯಬಾರದು.

2

ಎಲ್ಲಾ ಪ್ರತಿಭಾವಂತ ಕವಿಗಳೂ ತಮ್ಮ ಕಾವ್ಯದ ಮೂಲಕ ಸದ್ಯದ ಜಗತ್ತಿಗಿಂತ ಭಿನ್ನವಾದ ಜಗತ್ತಿನ ಸೃಷ್ಟಿಯಲ್ಲಿ ತೊಡಗಿರುತ್ತಾರೆ. ಆದರೆ ಹೊಸ ಜಗತ್ತಿನ ಕಲ್ಪನೆ ಗಾಳಿಯಿಂದ ಬರುವುದಿಲ್ಲ. ಕವಿಯ ಅನುಭವದಿಂದ ಬರುವಂತಹದು. ವಾಸ್ತವ ಜಗತ್ತಿಗಿಂತ ಸಾಧ್ಯವಾಗುವ ಜಗತ್ತುಗಳೇ ಹೆಚ್ಚು ಕುತೂಹಲಕಾರಿಯಾಗಿರುತ್ತವೆ. ಸಾಧ್ಯವಾಗುವ ಜಗತ್ತುಗಳನ್ನು ಕಲ್ಪಿಸುವುದರಲ್ಲಿ ಕವಿ ತನ್ನ ವಿಶ್ವಾಸಮೂಲಗಳಿಂದ ಮಾದರಿಗಳನ್ನು ತೆಗೆದುಕೊಳ್ಳುವುದನ್ನು ಕಾಣುತ್ತೇವೆ. ಸನಾತನ ಮೌಲ್ಯಗಳಾದ ಪ್ರೀತಿ, ಪ್ರೇಮ, ದೇವರು, ಸತ್ಯ, ಸ್ವರ್ಗ, ನರಕ, ಜನ್ಮಾಂತರ ಮೊದಲಾದವು ಗೋವಿಂದ ಪೈಯ ಕಾವ್ಯಜಗತ್ತಿನ ಅಂಗಗಳು. ಆದರೆ ಇಲ್ಲಿಯೂ ಸನಾತನ ಪರಂಪರೆಯನ್ನು ಸಾರಾಸಗಟಾಗಿ ಅವರು ಸ್ವೀಕರಿಸಿದವರಲ್ಲ. 'ತುತೂರಿ' ಎಂಬ ಕವಿತೆಯಲ್ಲಿ ಹೀಗಿದೆ:

> ಕಟ್ಟಳೆ ಹಿರಿಯರ ಕಟ್ಟಳೆ ಎಂದು
> ಹಿಂಗಾಲಿಂದಲೆ ನಡೆವಿರ ಮುಂದು
> ಜಗವೆಲ್ಲಿನೆಲ್ಲಿ ಮುಂದರಿವಂದು
> ಅಂದೆಲ್ಲಿಯೊ ನೀವಲ್ಲಿಯೆ ಇಂದು
> ಕತ್ತಲ ಕುಳಿ ಬಾಯ್ತೆತ್ತಿದ ಹಿಂದು

ಕಟ್ಟಳೆಯ ವಿರುದ್ಧವಾದ ಈ ಸಾಲುಗಳ ಕೊನೆಗೆ ಬರುವ 'ಹಿಂದು' ಎಂಬ ಪದದಲ್ಲಿ ಅನುದ್ದೇಶಿತವಾದರೂ ಪರಿಣಾಮಕಾರಿಯಾದ ಅರ್ಥಶ್ಲೇಷೆ ಇದೆ. ಕವಿ ತಮ್ಮ ಕಾವ್ಯದಲ್ಲಿ ಸನಾತನಕ್ಕೆ ಸೇರಿದ ಹಲವು ಕಟ್ಟು ಕಟ್ಟಳೆಗಳನ್ನು ಧಿಕ್ಕರಿಸಿರುವುದನ್ನು ಕಾಣುತ್ತೇವೆ. 'ಹೊಲೆಯನು ಯಾರು ?', 'ಶೂದ್ರರ್ಷಿಕವಷ', 'ಮಾತಂಗಿ' ಮುಂತಾದ ಕವಿತೆಗಳಲ್ಲಿ ಜಾತಿಪದ್ಧತಿಯನ್ನು ಟೀಕಿಸಿದ್ದಾರೆ. ಅದೇ ರೀತಿ ಮತಾಂಧತೆಯಂತಹ ಸಂಕೋಚಗೊಳಿಸುವ ಜಗತ್ತನ್ನು ತಿರಸ್ಕರಿಸಿ, ಎಲ್ಲವನ್ನೂ ಒಳಗೊಳ್ಳುವ ಉದಾತ್ತತೆಯಿಂದ ಮೂಡಿಬಂದ ರಚನೆಗಳು **ಗೊಲ್ಗೊಥಾ, ವೈಶಾಖಿ,** 'ಶ್ರೀ ಗೊಮ್ಮಟ ಜಿನಸ್ತುತಿ' ಹಾಗೂ 'ರುಬಾಯತ್'ನ ಕನ್ನಡ ಭಾಷಾಂತರ. ಕಾವ್ಯವಸ್ತುಗಳ ಆಯ್ಕೆಯಲ್ಲೂ ಸನಾತನವಾದ ಪುರಾಣ ಕಥೆಗಳಿಗಿಂತಲೂ ಈಚಿನವುಗಳಾದ ಬೌದ್ಧ, ಜೈನ ಹಾಗೂ ಕ್ರೈಸ್ತ ಧರ್ಮಗಳಿಗೆ ಸಂಬಂಧಿಸಿದ ಕಥೆಗಳು, ಐತಿಹ್ಯಗಳು ಅವರಿಗೆ ಹೆಚ್ಚು ಹತ್ತಿರವಾದವು. ಅದರಲ್ಲೂ ಬುದ್ಧನ ಕಥೆಗಳು ಎಷ್ಟೋ ಕವಿತೆಗಳಿಗೆ ಕಾರಣವಾಗಿವೆ. ಈ ಒಟ್ಟಾರೆ ದೃಷ್ಟಿಯಿಂದ ನೋಡಿದರೆ ಅವರ ಕಾವ್ಯ ಜಗತ್ತಿನ ದೈವ ದೇವರುಗಳು, ಸ್ವರ್ಗನರಕಗಳು, ಜನ್ಮಾಂತರಗಳು ಕಾವ್ಯರೂಪಗಳಲ್ಲದೆ ಇನ್ನೇನೂ ಅಲ್ಲವೆಂದು ಕಾಣುತ್ತದೆ.

ಪೈಯ ಪ್ರಕಾರ ಕವಿ "ತನ್ನ ದೃಷ್ಟಿಯನ್ನಾದರೊ ತಾರಾಪಥದಲ್ಲಿ ನಟ್ಟಿರಬೇಕು ; ಆ ಉಚ್ಚೈಸ್ತಮವನ್ನು ಮುಟ್ಟಲಿ, ಮುಟ್ಟದಿರಲಿ, ಅದಕ್ಕಿಂತ ಒಂದು ಅಂಗುಲಕ್ಕೆ ಕೆಳಗಿಳಿಸಬಾರದು". ಇದು ಕವಿತೆಯ ಕಸುಬುಗಾರಿಕೆಯ ಕುರಿತಾಗಿ ಹೇಳಿದ ಮಾತು. ಕವಿತೆಯ ಸರಕಿನ ಕುರಿತಾಗಿ ಅಲ್ಲ. ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಭಾಷಣದಲ್ಲಿ ಹೀಗಂದರೆ, ತಮ್ಮ 'ಆತ್ಮಕಥನ'ದಲ್ಲಿ "ಸಾಹಿತ್ಯದಲ್ಲಿ ಮಾನುಷಿಕವಾದ ಎಲ್ಲವಕ್ಕೂ ಎಡೆ ಇರಬೇಕು, ಕೊನೆಗೆ ಅಶ್ಲೀಲಕ್ಕೂ ಸ್ಥಾನವಿರಬೇಕು", ಎನ್ನುತ್ತಾರೆ. ಪುರಾಣ, ಇತಿಹಾಸ, ದಂತ ಕತೆ, ಸಾಮಾಜಿಕ ವಸ್ತುವಿಷಯಗಳು, ಭಾಷೆ ದೇಶ ಸಂಸ್ಕೃತಿಗಳ ಗಡಿಗಳನ್ನು ಮೀರಿ ಕಾವ್ಯಕ್ಕೆ ಸಾಮಗ್ರಿಗಳಾದರೇನೇ ಅದು ಸರ್ವತೋಮುಖವಾಗಿರಲು ಸಾಧ್ಯ ಎಂಬ ದೃಷ್ಟಿ ಪೈಗಳದು. ಪೈಯ ಕಾವ್ಯ ತ್ಯಜಿಸುವುದಕ್ಕಿಂತ ಸ್ವೀಕರಿಸುವುದೇ ಹೆಚ್ಚು. ಅದು ಹೇಳದ ಸಂಗತಿಯಿಲ್ಲ ; ಕಲ್ಪಿಸದ ರೂಪಕವಿಲ್ಲ ; ನಿಲ್ಲಿಸದ ಪ್ರತಿಮೆಯಿಲ್ಲ, ಪ್ರತ್ಯಪ್ರತ್ಯೇಕವಾಗಿ ನೋಡಿದಾಗ ಹಳತ. ರಂತೆ ಕಾಣಿಸುವ ಮರಣ ವೃಕ್ಷದೊಳಮೃತಫಲದಂತೆ ; ಕಾದ ಕಬ್ಬಿಣಕಿತ್ತ ನೀರಂತೆ ; ಮುಂಗಾರ ವಾತಾಲಿಗೊಲೆವ ಕದಲಿಕೆಯಂತೆ ; ಮೇಘ ದುಂದುಭಿ ; ಚಂದ್ರನಲರ್ಚುವ ಕುಮುದ, ಮಾರನ ತರಿದ ನಿಡುವಾಳ–ಮುಂತಾದ ಕಲ್ಪನೆಗಳನ್ನು ಪೈಗಳು ತಮ್ಮ ಕಾವ್ಯ ಸಂದರ್ಭಕ್ಕೆ ತಕ್ಕಂತೆ ಪರಿಣಾಮಕಾರಿಯಾಗಿ ಉಪಯೋಗಿಸಬಲ್ಲರು. ಇವುಗಳಲ್ಲಿ ಬಹಳಷ್ಟು ಕಪೋಲಕಲ್ಪಿತವಾಗಿರದೆ ಜನಜೀವನಕ್ಕೆ ಅತ್ಯಂತ ಸಮೀಪವಾಗಿರುವುದೇ ಹೆಚ್ಚು. ವೈಶಾಖಿಯಲ್ಲಿ 'ಇದೊ ನೋಡ ಶುಭ್ರಗಗನದ ಪಡು

ದಿಗಂತದೇಕಾಂತದಲಿ' ಎಂದು ಮೊದಲಾಗುವ ಚಂದ್ರಾಸ್ತಮಾನದ ವರ್ಣನೆ ಅದ್ಭುತವಾದ ರೀತಿಯಲ್ಲಿ ಹಾಳುಬೀಳಿನ ಬಳಿಗೆ ಸೇರುವ ಗೂಗೆ, ಹಳೆಯಟ್ಟಗಳ ಕಂಡಿಯನ್ನು ತೂರುವ ಬೆಕ್ಕು, ನೀರಲ್ಲಿ ಗೊಟರುವ ಕಪ್ಪೆ, ಮೇಯ್ಮುರಿದು ಬೊಗಳುವ ನಾಯಿ–ಹೀಗೆ ಮೊದಲಾಗಿ ಅರುಣೋದಯದಲ್ಲಿ ಅಲ್ಲಲ್ಲಿ ಮನೆಗಳಿಂದ ಮೇಲೇಳುವ ತೆಳ್ಳನೆ ಹೊಗೆ, ಹೊಲಕ್ಕೆ ಎತ್ತುಗಳನ್ನಟ್ಟುವ ಒಕ್ಕಲಿಗ, ಕಮ್ಮಾರ ಸಾಲೆಯಲ್ಲಿ ಘುಗುಘುಗಿಸುವ ಬೆಂಕಿ—ಎಂದು ಮುಂತಾಗಿ ಬೆಳಗಿನ ವ್ಯವಹಾರಗಳನ್ನು ಚಿತ್ರವತ್ತಾಗಿ ಮೂಡಿಸುತ್ತ ಹೋಗುತ್ತದೆ. ಇತರ ಕವಿತೆಗಳಲ್ಲಿ ಚಂದ್ರಮತಿ ಮರದಡಿಯಲ್ಲಿ ಸೌದೆಗೆ ಹುಡುಕಾಡುತ್ತಾಳೆ; ಮಸಣದಲ್ಲಿ ಕೈಕಾಲು ಕತ್ತರಿಸಲ್ಪಟ್ಟು ಬಿದ್ದ ವಾಸವದತ್ತೆಯನ್ನು ಹುಳಹುಪ್ಪಡಿಗಳು ಪೀಡಿಸುತ್ತವೆ; ಯೇಸುವನ್ನು ಶಿಲುಬೆಗೇರಿಸಿದಾಗ ಕತ್ತಲೊಂದು ಮೃತಿನಾಟಕದ ಕೊನೆಯ ತೆರೆಯಂತೆ ಭೂವ್ಯೋಮಗಳ ನಡುವೆ ಮುಸುಕುತ್ತದೆ; ಕತ್ತಲೆಯ ದಡೆಯಿಂದೆದ್ದ ಕೊಕ್ಕರೆಗಳಂತೆ ಜನರು ಸದ್ದಿಲ್ಲದೆ ತೆರಳುತ್ತಾರೆ. ತನ್ನ ಪರಿಸರವನ್ನೂ ಮನುಷ್ಯರನ್ನೂ ಅನನ್ಯವಾಗಿ ಪ್ರೀತಿಸುವ ಕವಿಗೆ ಮಾತ್ರ ಇಂತಹ ಪ್ರತಿಮಾವಿಧಾನ ಸಾಧ್ಯ. ಪೈಗಳ ಕಾವ್ಯ ನೆಲವನ್ನೂ ಆಕಾಶವನ್ನೂ ಜೋಡಿಸುವ ಕಾಮನ ಬಿಲ್ಲಿನಂತೆ; ಲೌಕಿಕವನ್ನೂ ಪಾರಮಾರ್ಥಿಕವನ್ನೂ, ಸಮಕಾಲೀನವನ್ನೂ ಸರ್ವಕಾಲೀನವನ್ನೂ ಒಂದೇ ಬೀಸಿನಲ್ಲಿ ಒಳಗೊಳ್ಳುತ್ತದೆ.

ಅವರ ಕಾವ್ಯವನ್ನು ಒಟ್ಟಾಗಿ ವೀಕ್ಷಿಸಿದಲ್ಲಿ ಒಂದು ವಿಶಿಷ್ಟತೆ ಕಂಡುಬರುತ್ತದೆ: ಅದೆಂದರೆ ಅವರು ತಮ್ಮ ಸುದೀರ್ಘಕವಿತೆಗಳಿಗೆ ಹೆಚ್ಚಾಗಿ ಆರಿಸಿಕೊಂಡಿರುವುದು ಮಹಾಪುರುಷರ ಕೊನೆಯ ದಿನಗಳನ್ನು ಎಂಬುದು. ತಮ್ಮ ಪತ್ನಿಯನ್ನು ಬಹು ಬೇಗನೆ ಕಳೆದುಕೊಂಡ ಕವಿಗೆ ಮರಣ ಒಂದು ಶಾಶ್ವತ ಸತ್ಯ ಹೇಗೋ ಹಾಗೆಯೇ ಅದೊಂದು ಶಾಶ್ವತ ಸಂಗಾತಿ ಕೂಡ. ಮರಣವೆಂಬ ಸಂಭವದ ತೀವ್ರತೆಯಲ್ಲಿ ಬದುಕಿನ ಹಿಂದು ಮುಂದನ್ನು ಕೇಂದ್ರೀಕರಿಸಿ ಕಾವ್ಯಾನುಭವದ ಉತ್ಕಟಸ್ಥಿತಿಗೆ ಓದುಗರನ್ನು ಒಯ್ಯುವುದು ಪೈಗಳ ವಿಧಾನ. ಎಲ್ಲ ಅಂತ್ಯದಲ್ಲೂ ಇನ್ನೊಂದು ಆರಂಭವಿದೆಯೆಂಬುದನ್ನು ಅವರ ಕವಿತೆಗಳು, ಮುಖ್ಯವಾಗಿ ಖಂಡಕಾವ್ಯಗಳು, ಸಾರುವ ಹಾಗೆ ತೋರುತ್ತದೆ. ಸಾವಿನ ಕುರಿತಾದ ಈ ಭಾವನೆಗಳೇ ಅವರಿಗೆ ಸ್ವಂತ ಕಾವ್ಯದ ಬಗೆಗೂ ಇತ್ತೆಂದು ಹೇಳಬಹುದು. ತಾನು ಬರೆಯುವುದು ಸ್ವಾಂತಃ ಸುಖಾಯ ಎಂದ ಕವಿಯೇ ತನ್ನನ್ನು ಹಿಂದೆ ಮಾಡಿಕೊಂಡು ಕವಿತೆಯನ್ನೂ ಕಾವ್ಯ ಪರಂಪರೆಯನ್ನೂ ಮುಂದೆ ಕಾಲದ ಪ್ರವಾಹದಲ್ಲಿ ಇರಿಸುವಂತೆ ಇರಿಸುತ್ತಾರೆ. ಕವಿಯ ನಿರಂಕುಶತೆ, ಅಧಿಕಾರದ ಬಗ್ಗೆ ಹೇಳಿದ ಪೈ ತಮ್ಮ ನುಡಿಯೇ ತಮ್ಮದಲ್ಲ ಎಂಬ ಅಹಂ ನಿರ್ಮೂಲನವನ್ನೂ ಮಾಡಿಕೊಳ್ಳುತ್ತಾರೆ. ಕವಿಯೆಂದರೆ ಸೃಷ್ಟಿಕರ್ತನಿಗೆ ಎಣೆಯೆಂದವರೇ ತಾನು ಕಾವ್ಯದ ಮಾಧ್ಯಮವಾಗಿ ವಿಧಾತನು ಬಯಸಿದಂತೆ ಹಾಡು

ತ್ತೇನೆ ಎನ್ನುತ್ತಾರೆ. ಆಯಾ ಕಾಲಕ್ಕೆ ತಕ್ಕಂತೆ ಜನ ಸಮುದಾಯ ತನಗೆ ಬೇಕಾದ ಸಾಹಿತ್ಯವನ್ನು ನಿರ್ಮಿಸಿಕೊಳ್ಳುತ್ತದೆ ಎಂಬ ಮಾತಿನ ಇನ್ನೊಂದು ಪರಿಭಾಷೆ ಇದೇ. ತನ್ನ ಮನಃಪೂರ್ವ ಲಿದಂತೆ ಬರೆದ ಪೈಗಳ ಕಾವ್ಯ ಕೇವಲ ಅಂತರ್ಮುಖಿಯಾಗದೆ ಬಹಿರ್ಮುಖಿಯೂ ಸರ್ವತೋಮುಖಿಯೂ ಆಗಿ ಕನ್ನಡ ಸಾಹಿತ್ಯಪರಂಪರೆಗೆ ವಿಶಿಷ್ಟವಾಗಿ ಕೊಡುಗೆಯನ್ನಿತ್ತಿದೆ.

ಗೋವಿಂದ ಪೈಯವರ ಭಾಷಾ ಪ್ರಯೋಗ ಕೆಲವು ವಿಚಾರಗಳು

ಎ. ವಿ. ನಾವಡ

ದಿನದಿನವೂ ಜಗತ್ತಿನ ಉದ್ದಗಲಕ್ಕೂ ನಡೆಯುತ್ತಿರುವ ಸಾಮಾಜಿಕ—ವೈಜ್ಞಾನಿಕ ಬೆಳವಣಿಗೆಗೆ ಬಾಯಿಕೊಡಬೇಕಾಗಿರುವ ಭಾಷೆ ಸಂವಹನ ಸಾಮರ್ಥ್ಯದಲ್ಲಿ ಸಾಮಾಜಕ್ಕೆ ನೆರವಾಗಬೇಕಷ್ಟೆ ! ಈ ದಿಸೆಯಲ್ಲಿ ಜನಸಾಮಾನ್ಯರು ತಮ್ಮ ದಿನಬಳಕೆಯ ಮಾತುಗಳ ಮೂಲಕ ಭಾಷೆಯ ಕಣಜಕ್ಕೆ ಅಪಾರ ಕೊಡುಗೆಯನ್ನು ಕೊಡುತ್ತಿರುವರಾದರೂ ಓದಿದ ಪಂಡಿತರ, ಕವಿಗಳ, ಪತ್ರಕರ್ತರ ಕೊಡುಗೆಯೂ ನಗಣ್ಯವಲ್ಲ. ಭಾಷೆಯ ಆಧುನೀಕರಣ ಎಲ್ಲ ದೇಶದ ಎಲ್ಲ ಕಾಲದಲ್ಲಿ ಕಂಡುಬರುವ ಸಾಮಾನ್ಯ ಸಂಗತಿಯಾದರೂ ಈ ಶತಮಾನದ ಪ್ರಾದೇಶಿಕ ಭಾಷೆಗಳು ಆಧುನಿಕತೆಯನ್ನು ವ್ಯಕ್ತಪಡಿಸುವಂತಹ ಕಾರ್ಯವನ್ನು ಒಂದು ಸವಾಲು ಎನ್ನುವಂತೆ ಎದುರಿಸುತ್ತಿವೆ. ತಮ್ಮ ಕಾಲದ ಅನುಭವಗಳನ್ನು ಹೇಳಲು ಭಾಷೆಯಲ್ಲಿ ಆಧುನೀಕರಣ ಅನಿವಾರ್ಯ ಅಂಶವಾಯಿತು. ಸಬ್ದಕೋಶದ ವಿಸ್ತರಣೆ ಭಾಷೆಯ ಆಧುನೀಕರಣಕ್ಕೆ ಒಂದು ದಾರಿ. ಶಬ್ದಕೋಶದ ಹಿಗ್ಗಲಿಕೆ ಎರಡು ಬಗೆಯಲ್ಲಿ ಸಾಧ್ಯ. ಒಂದು ಹೊರಗಿಂದ ಸ್ವೀಕರಿಸುವುದು, ಇನ್ನೊಂದು ತನ್ನ ಸಾಮಗ್ರಿಯ ಮೂಲಕವೇ ಹೊಸಪದಗಳನ್ನು ಸೃಷ್ಟಿಸಿಕೊಳ್ಳುವುದು.

ಮೇಲಿನ ಸೂತ್ರವನ್ನು ಪೈಯವರ ಬರವಣಿಗೆಗೆ ಅನ್ವಯಿಸಿದರೆ ಅವರ ಬರವಣಿಗೆಯಲ್ಲಿ ಅನ್ಯದೇಶ್ಯಗಳ ನೇರ ಸ್ವೀಕರಣೆ ಅಷ್ಟೊಂದು ಇಲ್ಲ (ಸಂಸ್ಕೃತವನ್ನು ಹೊರತು) ಡೆಲಿಗೇಶನ್ (ಹೃದಯರಂಗ ಪು. ೩೩) ಕಫೆ (ಹೃದಯರಂಗ ಪು. ೬೮) ಎಂಬೆರಡು ಇಂಗ್ಲಿಷ್ ಪದಗಳ ನೇರ ಸ್ವೀಕರಣೆ ನನ್ನ ಗಮನಕ್ಕೆ ಬಂದಿದೆ. ಅನೇಕ ಇಂಗ್ಲಿಷ್, ಹೀಬ್ರು ಪದಗಳನ್ನು ಕನ್ನಡಕ್ಕೆ ತರುವಾಗ ನಮ್ಮ ನಾಲಿಗೆಯ ಜಾಯಮಾನಕ್ಕನುಸರಿಸಿ ಪದಗಳಿಗೆ ಕೀಸುಳಿಹಾಕಿ ಸೊಗಸುಗೊಳಿಸಿದ್ದಾರೆ. ಇಂಗ್ಲೆಂಡ್-ಅಂಗ್ಲಾಳ, ಹೀಬ್ರು-ಇಬ್ರೀಯ, ಮ್ಯಾಥ್ಯೂ-ಮತ್ತಾಯ ಇತ್ಯಾದಿ.

ಇಂಗ್ಲಿಷ್‌ನಲ್ಲಿ ಅಂಗ್ಲೋ ಸ್ಯಾಕ್ಸನ್, ಕೆಲ್ಟಿಕ್ ಮೂಲದ ಪದಗಳು ಹೇಗೋ ಹಾಗೆ ಕನ್ನಡದಲ್ಲಿ ಹಳಗನ್ನಡ. ಸಂಸ್ಕೃತ ಪದಗಳು. ಭಾಷೆಗೆ ಅವು ಬಿಗಿಯನ್ನೂ, ಅಡಕತನವನ್ನೂ ತಂದುಕೊಡುವುದು ಖಂಡಿತ. ಪ್ರೊ. ವಿ. ಎಂ. ಇನಾಂದಾರರು ಹೇಳುವಂತೆ "ಪೈಗಳು ಹಳಗನ್ನಡದಲ್ಲಿ ಸಮಗ್ರ ವ್ಯುತ್ಪತ್ತಿಯುಳ್ಳವರಾಗಿದ್ದರಲ್ಲದೆ ಸಂಸ್ಕೃತವನ್ನು ಚೆನ್ನಾಗಿ ಪಳಗಿಸಿಕೊಂಡವರು. ಇಂಗ್ಲಿಷನ್ನು ಸೂಕ್ಷ್ಮವಾಗಿ ತಿಳಿದವರು.

ಈ ಮೂರು ಭಾಷೆಗಳ ಅಭಿರುಚಿಯು ಮುಪ್ಪುರಿಯೇ ಗೋವಿಂದ ಪೈಯವರ ಶೈಲಿಯ ಜೀವಾಳ."[1]

ಪೈಯವರು ಕನ್ನಡ ಭಾಷೆಗೆ ಏನುಮಾಡಿದರು ಎನ್ನುವುದನ್ನು ಅವರ ಮಾತುಗಳಲ್ಲೇ ಕೇಳೋಣ: "ಕೈಲಾದ ಮಟ್ಟಿಗೆ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸಿ ಶಬ್ದಸ್ತೋಮವನ್ನು ಹೆಚ್ಚಿಸಬೇಕು. ಈ ಕೆಲಸದಲ್ಲಿ ಮೊದಲ ಹೆಜ್ಜೆಯೆಂದರೆ ಸಂಸ್ಕೃತ ಶಬ್ದಗಳಿಗೆ ಕನ್ನಡ ಪ್ರತ್ಯಯ ಹಚ್ಚಿ ಹೊಸ ಕ್ರಿಯಾಪದಗಳನ್ನೂ ಉದಾ: 'ಅರುಣಿಸಿತು ಮೂಡದೆಸೆ' = ಮೂಡಲಲ್ಲಿ ಕೆಂಬೆಳಕು ತೋರಿತು, 'ಸವ್ಯಸಾಚಿಸು'– ಎರಡು ಕೈಗಳಿಂದಲೂ ಬಾಣಗಳನ್ನು ಎಸೆ ಇತ್ಯಾದಿ. ಹೊಸ ನಾಮಪದಗಳನ್ನೂ, ಉದಾ. ಸಮ್ರಾಜಿಕೆ = empire, imperialism ಇತ್ಯಾದಿ. ಕನ್ನಡ ಶಬ್ದಗಳಿಗೂ ಕನ್ನಡ ಪ್ರತ್ಯಯಗಳನ್ನು ಹಚ್ಚಿ ಹೊಸ ಶಬ್ದಗಳನ್ನೂ, ಉದಾ: ಕೆಳಗಿಳಿಸು = ಕೆಳಗೆ ಇಳಿಸು, ಕಮ್ಮಿಸು = ಪರಿಮಳಿಸು ಇತ್ಯಾದಿ ರಚಿಸಬೇಕು. ಮರವೆಯ ಪಾಲಾದ ಅವಯವದೆ (ಪಂ. ಭಾರತ ii 44) = ಬಲುಬೇಗನೆ ಮುಂತಾದ ಕನ್ನಡ ಶಬ್ದಗಳನ್ನು ಎಷ್ಟೋ ಕಾಲದಿಂದ ನಿದ್ದೆಹೋದಲ್ಲಿಂದ ಎಬ್ಬಿಸಬೇಕು. ಕನ್ನಡದ ಸೋದರಿಯರಾದ ಇತರ ದ್ರಾವಿಡ ಭಾಷೆಗಳಿಂದ ಬೇಕಾದ ಶಬ್ದಗಳನ್ನು ಬೇಕಾದಂತೆ ಕನ್ನಡಿಸಿ ಎರಕೊಳ್ಳಬೇಕು. ಇತರ ಭಾಷೆಗಳ ಚಲೋದಾದ ನುಡಿಗಟ್ಟುಗಳನ್ನು ಅನುವದಿಸಿ ಉದಾ: to throw down the gauntlet = ಕೈಹೊಡೆಯನ್ನು ಬಿಸುಡು, ಇತ್ಯಾದಿ ಅವನ್ನು ನಮ್ಮವಾಗಿಸಿಕೊಳ್ಳಬೇಕು... ಬರಹಗಾರರು ಅಕ್ಷರಿಕೆ (spelling) ಯನ್ನು ಚೆನ್ನಾಗಿ ಗಮನಿಸಬೇಕು (1) ನಿಶ್ಚಯಾರ್ಥದ ಕನ್ನಡಶಬ್ದಗಳಾದ ಕಂಡಣೆ, ಕಂಡಿಸು ಎಂಬವುಗಳಿಂದ (ತಪ್ಪು-ತಪ್ಪಿತದಂತೆ) ಹುಟ್ಟಿದ 'ಕಂಡಿತ' ಎಂಬ ತಕಾರಾದಿಯಾದ ರೂಪವೇ ಸರಿಯಲ್ಲದೆ 'ತುಂಡಿಸಿದ' ಎಂಬರ್ಥವುಳ್ಳ ಸಂಸ್ಕೃತದ 'ಖಂಡಿತ' ಎಂಬ ಖಕಾರಾದಿರೂಪವಲ್ಲ ; (೨) ಮುಗಿತ ಎಂಬ ಅರ್ಥದಲ್ಲಿ (ಸಂದಾಯ, ಉಳಿತಾಯಗಳಂತೆ) ಮುಗಿ ಎಂಬ ಧಾತುವಿನಿಂದಾದ ಮುಗಿತಾಯವೇ ನೇರವಾದ ರೂಪವಲ್ಲದೆ ಸರ್ವಥಾ ಮುಕ್ತಾಯವಲ್ಲ; (3) ವಿರಳಾರ್ಥದಲ್ಲಿ 'ಅಪೂರ್ವ' ಎನ್ನಬೇಕಲ್ಲದೆ 'ಕುರೂಪ' ಎಂಬರ್ಥವುಳ್ಳ ಅಪರೂಪವಲ್ಲ. ಆದರೆ, ಹಲವು ಕನ್ನಡ ಶಬ್ದಗಳಿಗೆ ಆಯಾಯ ಅನ್ಯಾನ್ಯ ಪ್ರಾಂತಗಳಲ್ಲಿ ಅಲ್ಲ, ಕೆಲವಕ್ಕೆ ಒಂದೇ ಪ್ರಾಂತದಲ್ಲೂ ಇರುವ ವಿವಿಧ ರೂಪಗಳನ್ನು ತೊಡೆದುಬಿಟ್ಟು ಉದಾ: ಅಡಕೆ–ಅಡಿಕೆ, ಇದಿರು–ಎದುರು. ಉಡಿಗೆ–ಉಡುಗೆ, ಗುಡಸಲು–ಗುಡಿಸಲು–ಗುಡುಸಲು–ಗುಡಲು ಇತ್ಯಾದಿ, ಅವನ್ನು ಯಾವುದೊಂದೇ ರೂಪಕ್ಕೆ ಇಳಿಸಬೇಕೆಂಬ ಪ್ರಯತ್ನವಾದರೆ ನನ್ನ ಮನಸ್ಸಿಗೆ ಒಗ್ಗದು, ಅವೆಲ್ಲಾ ರೂಪಗಳನ್ನು ಬದುಕಗೊಡಬೇಕು, ಅವೆಲ್ಲವನ್ನೂ ಬಳಸಬೇಕು, ಬಾಳಿಸಬೇಕು ಎಂಬುದೇ ನನಗೆ ಮೆಚ್ಚು"[2].

ಭಾಷೆಯ ಬೆಳವಣಿಗೆ – ಆಧುನೀಕರಣವನ್ನು ಕುರಿತು ಪೈಯವರು ಕೆಲವೊಂದು ಮೌಲಿಕ ವಿಚಾರಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅವರ ಬರವಣಿಗೆಯು— ಸಾಹಿತ್ಯದ ಭಾಷೆಯನ್ನು ಕುರಿತಾದುದರಿಂದ 'ಶುದ್ಧತೆ'ಯ ಕುರಿತು ವಿಶೇಷ ಗಮನ ಹರಿಸುವ ಪಂಡಿತ ದೃಷ್ಟಿಕೋನ. ಆದರೆ ಒಂದು ಪದಕ್ಕೆ ಹಲವು ರೂಪಗಳ ಉಚ್ಚಾರಣೆ ಇದ್ದಾಗ ಒಂದನ್ನು ಮಾತ್ರ ಉಳಿಸಿಕೊಂಡು ಅದನ್ನು ಶುದ್ಧ ಎಂದು ಬಗೆದು ಉಳಿದುದನ್ನು ಅಳಿಸಿಹಾಕಕೂಡದು ಎನ್ನುವುದು ತೀರಾ ಆಧುನಿಕ ವೈಜ್ಞಾನಿಕ ಧೋರಣೆಗೆ ಸರಿಹೋಗುತ್ತದೆ. ಪ್ರವರ್ಧಮಾನ ಭಾಷೆಯೊಂದರ ಉಪಭಾಷೆಗಳು ತನ್ನಲ್ಲಿನ ವೈವಿಧ್ಯಗಳನ್ನೆಲ್ಲ ಸಮತಟ್ಟುಗೊಳಿಸಿಕೊಂಡು ಶಿಷ್ಟರೂಪಕ್ಕೆ ತಿರುಗಬೇಕು, ಮುಂದಿನ ಬರವಣಿಗೆ, ಸಮೂಹಮಾಧ್ಯಮಗಳಲ್ಲಿನ ಪ್ರಸಾರ ಈ ಸವೆದ ಶಿಷ್ಟಭಾಷೆಯಲ್ಲೇ ನಡೆಯಬೇಕು ಎನ್ನುವುದು ಒಂದು ವರ್ಗದ ಪಂಡಿತರ ಅಂಬೋಣ. ಆದರೆ ವಾಸ್ತವಿಕವಾಗಿ ನಮ್ಮಂತಹ ಪ್ರಜಾರಾಜ್ಯದಲ್ಲಿ ಈ ಬಗೆಯ ಶಿಷ್ಟಭಾಷೆಯ ಕಲ್ಪನೆಯೇ ಅರ್ಥರಹಿತವಾಗುತ್ತದೆ. ಆಡುಮಾತಿನ ಶುದ್ಧಾಶುದ್ಧತೆಯ ಬಗೆಗಿನ ವಿವೇಚನೆಯೇ ಅರ್ಥಹೀನವಾಗುತ್ತದೆ. ಒಂದು ಭಾಷೆಗೆ ಒಂದು ರೂಪಮಾತ್ರ ಸಾಧು ಎನ್ನುವುದು ಹಳೆಯ ಮಾತಾಯಿತು. ಪೈಯವರು ಇಲ್ಲಿ ಹೊಸಬರಲ್ಲಿ ಹೊಸಬರಾಗುತ್ತಾರೆ.

ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಪದಗಳನ್ನು ಎರವಲು ತರುವಾಗ ನಮ್ಮ ವ್ಯವಸ್ಥೆಗೆ ಹೊಂದುವಂತೆ ಅದರ ಕೈಕಾಲು ಮುರಿಯಬೇಕಾಗುತ್ತದೆ. ಪ್ರಾಚೀನಕಾಲದ ಸಿದ್ಧವ್ಯಾಕರಣಗಳಿಗೆ ವಿರೋಧ ಹೋಗಬೇಕಾಗುತ್ತದೆ. ಭಾಷೆಯ ಅದ್ಯಕರ್ತವ್ಯವೆ ಸಂವಹನವಷ್ಟೆ! ಅದರ ಸಾಮರ್ಥ್ಯದ ಗಣಕ ಹೆಚ್ಚಿಸಿದಷ್ಟೂ ಭಾಷೆ ಶ್ರೀಮಂತ. ಇಲ್ಲಿ ತಪ್ಪುನೆಪ್ಪುಗಳ ತಲೆಕೆಡಿಸುವ ಕೆಲಸ ಬೇಕಿಲ್ಲ. ಭಾಸ ಕಾಳಿದಾಸರು ಪಾಣಿನಿಯನ್ನು ಮಿಕ್ಕಿ ಬರೆದಿಲ್ಲವೆ? ಕನ್ನಡ ಕವಿಗಳು ಕೇಶಿರಾಜನನ್ನು ಮೀರಿ ನಡೆದಿಲ್ಲವೆ? ಧೀರ ಪೈಯವರು ಕೆಲವೊಂದು ಅರಿಸಮಾಸ ಪ್ರಯೋಗಗಳನ್ನು ಮಾಡಿದ್ದುಂಟು. ರಾಜಕನ್ಯೆ, ಅತಿತಿಂದಿ ಇತ್ಯಾದಿ. ಕೆಲವೊಂದು ನಿಯಮಗಳನ್ನು ಹಾಕಿಕೊಂಡು ಎಷ್ಟೋ ಸಂಸ್ಕೃತ ಪದಗಳನ್ನು ನಾವು ಕನ್ನಡಕ್ಕೆ ತಂದಿದ್ದೇವೆ. ಪೈಯವರು ಅನೇಕ ಸಂಸ್ಕೃತದ ಪದಗಳಿಗೆ ಕನ್ನಡದ ಇಸು ಪ್ರತ್ಯಯ ಸೇರಿಸಿ ಕ್ರಿಯಾಪದವಾಗಿಸಿದ್ದಾರೆ.

ಉದಾಹರಣೆಗೆ :

ನಿಪುಣಿಸು—ನಿಪುಣನನ್ನಾಗಿ ಮಾಡು
ಕೋಲಾಹಲಿಸು—ಗಲಭೆ ಮಾಡು
ಮನನಿಸು—ಮನನ ಮಾಡು
ಕೌಮುದಿಸು—ತಿಂಗಳ ಬೆಳಕನ್ನುಂಟುಮಾಡು

ಚಕಾರಿಸು—ಚಕಾರ ಶಬ್ದವನ್ನುಂಟುಮಾಡು
ಅತಿಪಾರ್ಥಿಸು—ಪಾರ್ಥನನ್ನು ಮೀರಿಸು
ಭಗೀರಥಿಸು—ಭಗೀರಥನಂತೆ ವರ್ತಿಸು
ಸಗುಣಿಸು—ಸಗುಣರೂಪವನ್ನು ತಾಳು

ಕೆಲವೊಂದು ಕನ್ನಡ ಪದಗಳನ್ನೂ ಈ ಕ್ರಿಯೆಗೆ ಒಳಪಡಿಸಿದ್ದುಂಟು ಉದಾಹರಣೆಗೆ :

ಬಾಳಿಸು—ಜೀವನ ಮಾಡಿಸು
ಕನ್ನಡಿಸು—ಕನ್ನಡಕ್ಕೆ ಅನುವಾದ ಮಾಡು
ಕಮ್ಮಿಸು—ಪರಿಮಳ ಬೀರು
ವಿಳಿವಿಳಿಸು—ವೇದನೆಯಿಂದ ಹೊರಳಾಡು

ಸವೆದು ಅಳಿದುಹೋದ ಭಾಷೆಯ ಪದಗಳನ್ನು ಮತ್ತೆ ಹೊಸದಾಗಿ ಬಳಕೆಗೆ ತರುವ ಪ್ರಯತ್ನವನ್ನು ಪೈಯವರು ಮಾಡಿದ್ದುಂಟು. ಸುಟ್ಟಿತೋರು, ಹೊಂಬಿಗ, ಬೀದಿವರಿ, ಕೂರು, ಮಲಗು (ನಾಮಪದ) ತಾಗುತಟ್ಟು, ಕುಲ್ಲೆ, ದುಂಗ, ಸೆಗಳಿಕೆ ಇತ್ಯಾದಿ.

ಭಾಷಾಸ್ವೀಕರಣದಲ್ಲಿ ಬೇರೆ ಬೇರೆ ಬಗೆಗಳುಂಟಷ್ಟೆ, ಪೈಯವರು ಇಂಗ್ಲಿಷ್ ನಿಂದ ನೇರವಾಗಿ ಅನುವಾದದ ಮೂಲಕ ಸಿದ್ಧಿಸಿದ ಪದಗಳು ಕೆಲವು : ಮನೆವಳಿಕೆ (homeliness), ಅನರ್ಥಕ (meaningless) ಕನ್ಯಾಕವಿತೆ (vergin poem), ಬೆಳ್ಳರು (whites), ಬೇಕುಗಳು (wants), ನೆನೆವರಿಕೆ (reminder), ಹೊಂಗಾಲ (golden age) ಕೆಲವೊಂದು ಅನ್ಯಭಾಷೀಯ ಪದಗಳಿಗೆ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಪದಗಳನ್ನು ಟಂಕಿಸಿಕೊಂಡಿದ್ದಾರೆ. ಗೊಂದಲ (chorus) — ಇದು ಅವರೇ ಹೇಳಿಕೊಂಡಂತೆ ದ. ಕನ್ನಡದ ಮರಾಠಿಯವರ ಮಂಡಲಾಕಾರದಲ್ಲಿ ಸುತ್ತಿ ಕುಣಿದು ಹಾಡುವ ಗೊಂದಲಪೂಜೆಯ ಹಿನ್ನೆಲೆಯಿಂದ ರೂಪಿಸಿಕೊಂಡದ್ದು. ಪಾನಗೋಷ್ಠಿ (Tea party), ವೈಣಿಕಗೀತೆ (Lyric), ಕ್ಷಣಿಕೆ (lightning), ಹಡಗುವಳ್ಳ (Captain), ಶ್ರೀಕ್ಷನು (Mr. X), ಚತುರ್ದಶ ಪದಿ (sonnet), ಒಳಮಾರು (import), ಹೊರಮಾರು (export), ಮಿಂಚು ದೀಪ (electric light), ಎಡಗೈಯಾಟ (easy task) — ಇಲ್ಲೆಲ್ಲ ಇಂಗ್ಲಿಷ್ ಪದಗಳ ಭಾವಾನುವಾದವನ್ನು ಗಮನಿಸಬಹುದು.

ಇತರರಲ್ಲಿ ಬಳಕೆಯಾಗದ ಪೈಯವರೇ ಮೊದಲ ಬಾರಿಗೆ ಚಲಾವಣೆಗೆ ತಂದ ಕೆಲವೊಂದು ಸಮಾಸ ಪದಗಳು :

ಹೆಬ್ಬೀದಿ—ವಿಶಾಲವಾದ ಬೀದಿ
ಹೆಬ್ಬನಿ—ದೊಡ್ಡ ಹನಿ

ಅಡಿಕೆಗಾಣ—ಸಂಚಾರದ ಸರಹದ್ದು
ಬಾಡು ಮೋರೆ—ಸೊರಗಿದ ಮುಖ
ಹಿಂಡುಗತ್ತಲೆ—ಕಡುಗತ್ತಲೆ
ತೋಡುಗೆಲಸ—ಭೂಖನನ
ಕಡೆ ಬೆಳಕು—ಅಸ್ತಮಾನಕಾಲದ ಮಂದಬೆಳಕು
ಮೋಕೆ ದಾರಿ—ಅಗಲ ಕಿರಿದಾದ ದಾರಿ
ಮುಚ್ಚುಕದ—ಮುಚ್ಚಿದ ಬಾಗಿಲು
ಬಾಂದೊರೆ—ಆಕಾಶಗಂಗೆ
ಉಡುಸೇಸೆ—ನಕ್ಷತ್ರಾಕ್ಷತೆ
ಜಡಿಯೋಲೆ—ಒತ್ತಾಯದ ಪತ್ರ
ಬಾಳನ್ನು ಕಟ್ಟು—ಕಾದಾಟಕ್ಕೆ ಅಣಿಗೊಳಿಸು

ಆಳಿೊತ್ತು, ಕಣ್ಮರವೆ, ಸಿಡುಗಾಲ, ಬಿಡುಗಾಲ ಮುಂತಾದ ಅಚ್ಚಗನ್ನಡ ಪದಗಳನ್ನು ಟಂಕಿಸಿಕೊಂಡ ಪೈಯವರ ಬರವಣಿಗೆಯಲ್ಲಿ ನೇರ ಸಂಸ್ಕೃತ ಪದಗಳ ಬಳಕೆಯಾಗುವುದೂ ಉಂಟು. ಅಲಮಲಂ, ಶಿವಾಸ್ತೇ ಪಂಥಾನಸ್ಸಂತು, ಶತಂ ಜೀವಶರದೋ ವರ್ಧಮಾನ, ಶಂಖಚಿಸು, ಆತಪಿವ, ಏವಂಚ ಇತ್ಯಾದಿ. 'ಕತ್ತರಿಯೊಳಗಣ ಅಡಿಕೆ'–ಎನ್ನುವ ಪದವನ್ನು ಕರ್ತರೀ ಕ್ರಮುಕ ಸ್ಥಿತಿಯೆಂದು ಸಂಸ್ಕೃತಕ್ಕೆ ರೂಪಾಂತರಿಸಿದ್ದಾರೆ.

ಪೈಯವರದು ಚಿತ್ರಗುಪ್ತ ಪ್ರತಿಭೆ. ಅಳಕ್ಕಿಳಿದು ಪದಗಳ ಮೂಲ ಸ್ವರೂಪವನ್ನು ಕೆದಕಿ ಬೆದಕಿ ಬಳಸುವವರು. ನಾವಿಂದು ಸಂಧ್ಯಕ್ಷರವಾಗಿ ಬರೆವ 'ಕೈ'ಯನ್ನು ಅವರು ಕೆಯ್ ಎಂದೇ ಬಳಸುತ್ತಿದ್ದರು ಸಂಧ್ಯಕ್ಷರ ದ್ರಾವಿಡ ಭಾಷೆಗೆ ಸಹಜವಲ್ಲವಷ್ಟೆ! (ಕಿಟೆಲ್ ಕೋಶದಲ್ಲೂ ಕೆಯ್ ಎಂದೇ ಬರೆಯಲಾಗಿದೆ) 'ಆಸು' ಎಂಬ ಧಾತುವಿಗೆ ನಿಷೇದಾರ್ಥಕ ಪ್ರತ್ಯಯವಾದ 'ಅ' ಎಂಬುದು ಸೇರಿ ಉಂಟಾದ ಸಹಾಯಕ ಕ್ರಿಯಾಪದ ಆಸ. ಅಶಕ್ಯಾರ್ಥದ ಈ ಕ್ರಿಯಾಪದವನ್ನು ಪೈಯವರು ಧಾರಾಳವಾಗಿ ಬಳಸಿದ್ದುಂಟು. ಉದಾ: ಅಂಥಾ ಧೀರು ಈ ರಣಗಾಳೆಯನ್ನು ಹೇಗೆ ಊದಿದರೊ ಹೇಳಲಾಸ (ಕನ್ನಡದ ಮೊರೆ ಪು. 83) ತಪ್ಪಿತ, ಮುಗಿತ, ಕಲಿತ, ಬಗೆತ ಮುಂತಾದ ಕೃದಂತಭಾವನಾಮಗಳನ್ನೂ, ರಚಕ, ಕೇಳುಗ, ಕಲಿಕೆ, ಮುಂಬಿಗ ಮುಂತಾದ ತದ್ಧಿತಾಂತ ನಾಮಪದಗಳನ್ನೂ, ಅಜ್ಜತನ, ವರ್ತಕತನ, ಅರಸ್ತಾನ ಮುಂತಾದ ತದ್ಧಿತಾಂತ ಭಾವನಾಮಗಳನ್ನೂ, ಒಮ್ಮೆ, ಇಮ್ಮೆ, ಮೂಮೆ, ಹಲಮೆ ಮುಂತಾದ ಆವೃತ್ತಿವಾಚಕ ತದ್ಧಿತಾವ್ಯಯಗಳನ್ನೂ. ಆರ್ಜ್ ಎನ್ನುವ ಧಾತುವಿನ (=ಸಮರ್ಥವಾಗು) ಭವಿಷ್ಯಕೃದಂತ ರೂಪವನ್ನು ಸೇರಿಸಿ

ರಚಿಸಲಾಪ, ಅರಿಯಲಾಪ ಮುಂತಾದ ಪದಗಳನ್ನೂ ಪೈಯವರು ಬಳಕೆಗೆ ತಂದಿದ್ದಾರೆ.

ದಕ್ಷಿಣ ಕನ್ನಡದ ವಿಶಿಷ್ಟಪದಗಳು ಕೆಲವೊಮ್ಮೆ ತುಳುಪದಗಳು ಧಾರಾಳವಾಗಿ ಬಳಕೆಯಾಗಿವೆ. ನೂಲಮದುವೆ (=ಉಪನಯನ), ಬಾಂದುಗಲ್ಲು (=ಗಡಿಕಲ್ಲು), ಗಾಬಾಗು (=ಬೆರಗಾಗು), ಕೊಕ್ಕೆ ಮಾತನಾಡು (=ಕುಹಕವಾಡು), ಗವುಜು (=ಗದ್ದಲ) ಪಟ್ಟಾಂಗ (ಒಣಹರಟೆ) ಜಂಬರ (=ಕೆಲಸ, ಮದುವೆ, ಮುಂಜಿ ಇತ್ಯಾದಿ ವಿಶೇಷ ಕಾರ್ಯಕ್ರಮ), ಪಿಸುರು ತೆಗೆ (ಕೋಪಿಸು), ತನೆ (=ಗರ್ಭ), ಆಟಿ (=ಆಷಾಢ ಮಾಸ), ಸೋಣ (ಶ್ರಾವಣ ಮಾಸ), ಆಟಿಕಳಂಜ (ಆಷಾಢ ಮಾಸದಲ್ಲಿ ನಲ್ಕೆ ಜನಾಂಗದವರು ಮನೆಮನೆಗೆ ತಿರುಗಾಡಿ ನಡೆಸುವ ಒಂದು ನೃತ್ಯಾಚರಣೆ).

ಸೂಡಿ, ಕಿಣ್ಣಿ, ಅದ್ದಗಣೆ, ಕಳಲು, ಏತ. ಮರಿಗೆ, ಬಾಣೆ, ಜಲ್ಲು, ಕೋವೆ ಮುಂತಾದ ವೃತ್ತಿವಾಚಕ ಪದಗಳನ್ನೂ ಅವರ ಬರೆಹಗಳಲ್ಲಿ ಕಾಣಬಹುದು.

ಪೈಯವರ ಕೆಲವೊಂದು ಪಡೆನುಡಿಗಳು, ನುಡಿಗಟ್ಟುಗಳು, ಗಾದೆಯ ಮಾತುಗಳು ಕನ್ನಡ ಸಾಹಿತ್ಯಲೋಕಕ್ಕೆ ಹೊಸದು. ಕೆಲವು ಅವರ ಅಪಾರ ಓದಿನ ಫಲವಾಗಿ ಬಂದರೆ, ಇನ್ನು ಕೆಲವು ಸ್ವನಿರ್ಮಿತ, ಕೆಲವು ಸುತ್ತಲಿನ ಆಡುಮಾತು ತುಳುವಿನಿಂದ ಎತ್ತಿಕೊಂಡಿದ್ದಿರಬಹುದು. ಆಟಿಗೊಮ್ಮೆ ಸೋಣಕ್ಕೊಮ್ಮೆ (=ಆಗೊಮ್ಮೆ ಈಗೊಮ್ಮೆ), ತೇನೆಯ ಮೇಲಿಟ್ಟ ಕಲ್ಲು, ಮೂಗು ಹಿಡಿದು ಕುಡಿಸು, ಸರಿಕತನದ ಕತ್ತರಿವೀಳೆಯ, ಕಡೆಯಂಗಡಿ ವ್ಯಾಪಾರ, ಚೆಟ್ಟಿ ಈಯು, ಮೊದಲನೆಯ ಮೊಟ್ಟೆ, ಹೋದ ಪುಟ್ಟ ಬಂದ ಪುಟ್ಟ, ರಂಪಣಿ ಬಲೆ ಬೀಸು,

ಬಟ್ಟಲಲ್ಲಿ ಬಿರುಗಾಳಿ, ಪೆಟ್ಟಿಗೆಯಲ್ಲಿ ಅಸ್ಥಿಪಂಜರ, ಕೈಹೊಡೆಯನ್ನು ಬಿಸುಟು, ಬೆಕ್ಕು ಚೀಲದಿಂದ ಹೊರಕ್ಕೆ ಧುಮುಕು, ಕೆರವೊಳಗಣಕಲ್ಲು, ಕುದುರೆಯ ಮುಂದೆ ಬಂಡಿ.

ಕಾದ ಕಬ್ಬಿಣಕ್ಕೆ ಕೊಟ್ಟ ನೀರಿನಂತೆ, ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಅಲೆಯು, ಬೆರಳುಗಳನ್ನು ಎಲುಬನಕಾ ತೇಯು, ಚಕ್ಕಡಿಯನ್ನು ನಕ್ಷತ್ರಕ್ಕೆ ತಗಲುಹಾಕು, ಕುಂಬಾರ ಹುಳು ತಾನಿಟ್ಟ ತತ್ತಿಗೆ ಮಣ್ಣು ಮೆತ್ತುವಂತೆ, ಪುಂಡದಿಂದ ಹಣ್ಣು ಮಾಡಿಸು, ಕುರುಡನಿಗೆ ಕನ್ನಡಕ ಏರಿಸಲೇಕೆ ? ಮಗಸೋತರೂ ಜೂಜಿನ ಒಳವು ಕಲಿತ, ಲಾವಂಚದ ಸೂಡಿನಲ್ಲಿ ಒಣಹುಲ್ಲೇಕೆ ?

ಆಡಳಿತಭಾಷೆಯಾಗಿ, ಶಿಕ್ಷಣಮಾಧ್ಯಮವಾಗಿ ಅಣಿಗೊಳ್ಳುತ್ತಿರುವ ಕನ್ನಡ ಭಾಷೆಗೆ ಪೈಯವರಂತಹ ಧೀಮಂತ ಶಬ್ದಬ್ರಹ್ಮರಿಂದ ಪದಗಳಿಗೆ ಕಸಿಕಟ್ಟುವ ಕೆಲಸ

ಸದಾ ಜರಗುತ್ತಿರಬೇಕು. ಭಾಷೆಯನ್ನು ಬೆಳಸುವ ಈ ಕೆಲಸ ವಿಶೇಷವಾಗಿ ಉಪಭಾಷೆಗಳಿಂದಾಗಬೇಕು. ಉಪಭಾಷೆಗಳು ನಮ್ಮ ಶಿಷ್ಟಭಾಷೆಗೆ ಚೈತನ್ಯಪೂರಣ ಶಕ್ತಿ ಕೇಂದ್ರಗಳು. ಸಂಸ್ಕೃತ, ಇಂಗ್ಲಿಷ್ ಮುಂತಾದ ಅನ್ಯದೇಶಿಯ ಸ್ವೀಕರಣೆಗಿಂತ ಬಲವಾಗಿ ನಮ್ಮ ಉಪಭಾಷೆಗಳಿಂದ ಜೀವಶಕ್ತಿಯನ್ನು ಎರವಲು ಪಡೆಯಬೇಕು. ಪೈಯವರ ಪಂಡಿತಬುದ್ಧಿ ಎಷ್ಟು ಪದಗಳನ್ನು ಸೃಷ್ಟಿಸಿತೊ ಅಷ್ಟೇ ಪದಗಳನ್ನು ಅವರು ನಮ್ಮ ದೈನಂದಿನ ಆಡುಮಾತುಗಳಿಂದ ಎತ್ತಿ ಉಜ್ಜಿ ಬಳಸಿದರು. ಆಗಲೇ ಭಾಷೆಯ ಬೆಳವಣಿಗೆ.

ಉಲ್ಲೇಖ

1 ಪ್ರೊ. ವಿ. ಎಂ. ಇನಾಂದಾರ್ 'ಗೋವಿಂದ ಪೈಗಳ ಕಾವ್ಯ (1965) ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜ್, ಉಡುಪಿ, ಪು. 50.

2 ಮಂ. ಗೋವಿಂದಪೈ ಕನ್ನಡದ ಮೊರೆ ಮತ್ತು ಇತರ ಗದ್ಯ ಲೇಖನಗಳು (1975) ಪು. 58.

ಗೋವಿಂದ ಪೈ ಅವರ ಕವಿತೆ: ನವೋದಯದ ಚೌಕಟ್ಟಿನಲ್ಲಿ

ಜಿ. ಎಸ್. ಶಿವರುದ್ರಪ್ಪ

– 1 –

ಹೊಸಗನ್ನಡದ ಕಿರಣೋದಯಕ್ಕೆ ತಮ್ಮ ವ್ಯಕ್ತಿತ್ವದ ಪ್ರಭೆಯನ್ನು ಸೇರಿಸಿದ ಹಲವು ಹಿರಿಯ ಸಾಹಿತಿಗಳಲ್ಲಿ ಗೋವಿಂದಪೈ ಅವರೂ ಒಬ್ಬರು. ಕನ್ನಡ ಕಾವ್ಯ ಸ್ಥಗಿತಗೊಂಡು ಆಗಲೇ ಮೂರು ಶತಮಾನಗಳಾಗಿದ್ದ, ಅಂದಿನ ಪರಿಸರದಲ್ಲಿ, ಅದಕ್ಕೆ ಹೊಸ ನೀರನ್ನು ನುಗ್ಗಿಸಿ, ಹೊಸ ಕಾಲುವೆಗಳನ್ನು ತೋಡಿ, ಹೊಸ ಹಸಿರನ್ನು ಬೆಳೆಯಲು ಶ್ರಮಿಸಿದವರಲ್ಲಿ ಪೈ ಅವರು ಮುಖ್ಯರಾದವರು. ಅಂದಿನ ಸಾಹಿತ್ಯಕ್ಕೆ ಚಲನಶೀಲತೆಯನ್ನು ತರುವ ಹೊಸರೂಪಗಳ ಹುಡುಕಾಟ ನಡೆದದ್ದು, ಮಂಗಳೂರು, ಮೈಸೂರು ಮತ್ತು ಧಾರವಾಡದ ಪರಿಸರಗಳಲ್ಲಿ. ಮಂಗಳೂರಿನ ಪರಿಸರದಲ್ಲಿ ಇನ್ನೂ ಹಲವರ ಜತೆ, ತಮ್ಮ ಸಂಶೋಧನೆ ಹಾಗೂ ಸೃಜನಶೀಲ ಬರೆಹಗಳ ಮೂಲಕ, ಹೊಸ ರೂಪಗಳನ್ನು ಕನ್ನಡ ಸಾಹಿತ್ಯಕ್ಕೆ ತಂದವರು ಪೈ ಅವರು. ಸಾಹಿತ್ಯ ಸಂಶೋಧನೆ ಮತ್ತು ಕಾವ್ಯ ಈ ಎರಡೂ ಅವರು ಕೆಲಸ ಮಾಡಿದ ಪ್ರಮುಖ ಕ್ಷೇತ್ರಗಳು. ಕನ್ನಡ ಸಂಶೋಧನೆಯ ಶಿಲಾ ತಲದಿಂದ ಅವರು ಅಗೆದು ತೆಗೆದ ಎಷ್ಟೋ ಸಂಗತಿಗಳು, ಮುಂದಿನವರ ಚಿಂತನೆಯ ನೆಲೆಗಟ್ಟುಗಳಾಗಿವೆ.

ಗೋವಿಂದ ಪೈ ಅವರು ಮೊದಲು ತಮ್ಮ ಕವಿತೆಯನ್ನು ಪ್ರಕಟಿಸಿದ್ದು 1900ರಲ್ಲಿ; ಅನಂತರ ಆರು ದಶಕಗಳವರೆಗೆ ಸಾಗಿತು ಅವರ ಸಾಹಿತ್ಯ ನಿರ್ಮಿತಿ. ಪೈ ಅವರು ಸಾಹಿತ್ಯ ನಿರ್ಮಿತಿಗೆ ತೊಡಗಿದ ಕಾಲವನ್ನು ಇಂದು ನಾವು 'ನವೋದಯ' ಎಂದು ಗುರುತಿಸುತ್ತೇವೆ, ಮತ್ತು ಕಾವ್ಯದ ಮಟ್ಟಿಗೆ ಅವರನ್ನು ನವೋದಯ ಪರಂಪರೆಗೆ ಸೇರಿದವರು ಎಂದು ಪರಿಗಣಿಸುತ್ತೇವೆ. ಇಂದು, ಯಾವುವನ್ನು 'ನವೋದಯ ಸಾಹಿತ್ಯದ ಲಕ್ಷಣಗಳು' ಎಂದು ಗುರುತಿಸುತ್ತೇವೆಯೋ, ಅವು, ಪೈ ಅವರ ಕಾವ್ಯದಲ್ಲಿ ಸಮೃದ್ಧವಾಗಿ ಕಾಣಿಸಿಕೊಳ್ಳುತ್ತವೆ. ಈ ದೃಷ್ಟಿಯಿಂದ ಪೈ ಅವರ ಕಾವ್ಯ ನವೋದಯದ ಚೌಕಟ್ಟಿನೊಳಗಣದು. ನವೋದಯ ಕಾವ್ಯದ ಈ ಹಾದಿಯಲ್ಲಿ, ಕನ್ನಡ ಕಾವ್ಯ ಪ್ರಕಾರಗಳ ದೃಷ್ಟಿಯಿಂದ ಮತ್ತು ಪ್ರಯೋಗಗಳ ದೃಷ್ಟಿಯಿಂದ ಅನೇಕ 'ಮೊದಲು'ಗಳನ್ನು ತೆರೆದವರು ಅವರು.

'ಪ್ರಾಸ ತ್ಯಾಗದ ಧೀರ ನಿರ್ಧಾರ'–ಈ 'ಮೊದಲು'ಗಳಲ್ಲಿ ಮುಖ್ಯವಾದದ್ದು ಕನ್ನಡ ಕಾವ್ಯ ಪರಂಪರೆಯಲ್ಲಿ ಶತಮಾನಗಳಿಂದಲೂ, ವಸ್ತು–ರೀತಿ–ಧೋರಣೆ.

ಗಳಲ್ಲಿ ಏನೇ ಬದಲಾವಣೆಗಳಾದರೂ, ದ್ವಿತೀಯಾಕ್ಷರ ಪ್ರಾಸದ ನಿರ್ಬಂಧ ಮಾತ್ರ ಅಚಲವಾಗಿ ಉಳಿದೇ ಬಿಟ್ಟಿತ್ತು. ಕಾವ್ಯದ ರೂಪಗಳು ಬದಲಾದರೂ, ಅಲ್ಲಿ, ಈ ದ್ವಿತೀಯಾಕ್ಷರ ಪ್ರಾಸವನ್ನು ಬಿಟ್ಟು ಬರೆಯುವ ಧೈರ್ಯವನ್ನು ನಮ್ಮ ಕವಿಗಳು ಮಾಡಲಿಲ್ಲ. ಈ ಬಗೆಯ ದ್ವಿತೀಯಾಕ್ಷರ ಪ್ರಾಸ ನಿಯಮವು, ಕಾವ್ಯವನ್ನು ಒಂದು ನಿರ್ದಿಷ್ಟ ಕಟ್ಟುಪಾಡಿಗೆ ಒಳಪಡಿಸುವುದಲ್ಲದೆ, ನಿರರ್ಗಳವಾದ ಅಭಿವ್ಯಕ್ತಿಗೂ ಒಂದು ಆತಂಕವಾಗುವುದೆಂಬುದನ್ನು ಕಂಡುಕೊಂಡ ಪೈ ಅವರು 1911ರಲ್ಲಿ ಈ ಬಗೆಯ ಪ್ರಾಸವನ್ನು ಬಿಟ್ಟು ಬರೆಯುವ ಧೈರ್ಯವನ್ನು ಮೊದಲು ತೋರಿಸಿದರು. ಈ ರೀತಿ ಪ್ರಾಸ ಬಿಟ್ಟು ಅವರು ಬರೆದ ಪದ್ಯ 'ಹೊಲೆಯನು ಯಾರು ?' ಎಂಬುದು. ಇದು ಅವರ 'ಗಿಳಿವಿಂಡು' ಸಂಗ್ರಹದಲ್ಲಿದೆ. 'ಪ್ರಾಸ ತ್ಯಾಗದ ಧೀರ ನಿರ್ಧಾರ'ವೆಂದು ಹೆಸರಿಸಲಾಗಿರುವ ಪೈ ಅವರ ಈ ಪ್ರಯತ್ನ, ಹೊಸಗನ್ನಡ ಕಾವ್ಯ ತನ್ನ ಹೊಸ ರೂಪಗಳನ್ನು ಕಂಡುಕೊಳ್ಳುವ ದಿಕ್ಕಿನಲ್ಲಿ ಮೊದಲ ಹೆಜ್ಜೆಯಾಯಿತು. ದ್ವಿತೀಯಾಕ್ಷರ ಪ್ರಾಸವನ್ನು ಬಿಟ್ಟು ಅವರು ಬರೆದ ಪದ್ಯ ಮೊದಲು ಪ್ರಕಟವಾದಾಗ, ಅದನ್ನು ಕುರಿತು ಎದ್ದ ಕೋಲಾಹಲವನ್ನು ಗಮನಿಸಿದರೆ, ಕನ್ನಡ ಕಾವ್ಯ ಸ್ಥಗಿತಗೊಂಡ ರೀತಿ ಎಷ್ಟು ದಟ್ಟವಾಗಿತ್ತೆಂಬುದು ತಿಳಿಯುತ್ತದೆ.*

ಗೋವಿಂದ ಪೈ ಅವರ ಇನ್ನೊಂದು 'ಮೊದಲು', ಕನ್ನಡದಲ್ಲಿ ಮೊಟ್ಟ ಮೊದಲ 'ಸಾನೆಟ್' ಅನ್ನು ಬರೆದವರು ಅವರು ಎಂಬುದು. 'ಕವಿತಾವತಾರ' ಎನ್ನುವುದು ಅದರ ಶೀರ್ಷಿಕೆ. ಅದು ರಚಿತವಾದದ್ದು 1916ರಲ್ಲಿ. ಪೈ ಅವರು ಇಂಗ್ಲಿಷ್‌ನ 'ಸಾನೆಟ್' ರೂಪಕ್ಕೆ ಕನ್ನಡದಲ್ಲಿ 'ಚತುರ್ದಶಪದಿ' ಎಂದು ಕರೆದರು. ಪೈ ಅವರ ಇನ್ನೂ ಒಂದು 'ಮೊದಲು' ಎಂದರೆ ಕನ್ನಡದಲ್ಲಿ ಖಂಡ ಕಾವ್ಯಗಳನ್ನು ಬರೆದದ್ದು. 1931ರಲ್ಲಿ ಅವರು ಬರೆದ ಗೋಲ್ಗೊಥಾ ಕನ್ನಡದ ಮೊದಲ ಖಂಡ ಕಾವ್ಯ ಮಾತ್ರವಲ್ಲ, ಕ್ರಿಸ್ತನ ಬದುಕನ್ನು ಕುರಿತು ಮೊಟ್ಟಮೊದಲು ರಚಿತವಾದ ಖಂಡ ಕಾವ್ಯ ಇದು. ಜತೆಗೆ ಬಹುಸಂಖ್ಯೆಯಲ್ಲಿ 'ವಿಯೋಗಗೀತೆ' (Elegy) ಗಳನ್ನೂ ಬರೆದವರು ಅವರೇ. ಅವರ 'ಗಿಳಿವಿಂಡು' (1930) ಸಂಗ್ರಹದ 'ಕಡವಿನಲ್ಲಿ' 'ಯುಗಾದಿಯ ನೆನಪು' 'ಸುಮ್ಮನೇಕೆನ್ನನೆಲೆ ವಿಧಿಯು ಕಾಡಿಸುವೆ' ಎಂಬ ಕವಿತೆಗಳಲ್ಲಿ ಕಾಣಿಸಿಕೊಳ್ಳುವ ಅವರ ವಿಯೋಗ ಗೀತೆಗಳು, 'ನಂದಾದೀಪ' ಕವನ ಸಂಗ್ರಹದ ತುಂಬ ತುಂಬಿಕೊಂಡಿವೆ.

ಕನ್ನಡ ನವೋದಯದ ಸಂದರ್ಭದಲ್ಲಿ ನಡೆದ ಬಹುಮುಖ್ಯವಾದ ಕಾರ್ಯವೆಂದರೆ, ಅನ್ಯಭಾಷಾ ಸಾಹಿತ್ಯಗಳ–ಅದರಲ್ಲಿಯೂ ಪಶ್ಚಿಮದ–ಪ್ರೇರಣೆಯಿಂದ ಹೊಸ ರೂಪಗಳನ್ನು ಆವಿಷ್ಕಾರ ಮಾಡಿದ್ದು. ಗೋವಿಂದ ಪೈ ಅವರು

---

* ವಿವರಗಳಿಗೆ ನೋಡಿ : ಎಸ್. ಅನಂತನಾರಾಯಣ : ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ : ಪು. 39–41.

ಮೊದಲು ಕನ್ನಡದಲ್ಲಿ ಬರೆದ 'ಸಾನೆಟ್' 'ಖಂಡ ಕಾವ್ಯ' ಇವುಗಳು ಮೂಲತಹ ಪಶ್ಚಿಮದ ಕಾವ್ಯದಿಂದಲೇ ಪ್ರೇರಣೆ ಪಡೆದವು. ಪಾಶ್ಚಾತ್ಯ ಕಾವ್ಯ ರೂಪಗಳಿಗೆ ಸಂವಾದಿಯಾದ ರೂಪಗಳನ್ನು ನಮ್ಮಲ್ಲಿ ಸಿದ್ಧಪಡಿಸುವುದರ ಜತೆಗೆ, ಪಶ್ಚಿಮದ ಕೃತಿಗಳ ಅನುವಾದ ರೂಪಾಂತರಗಳ ಮೂಲಕವೂ ಕನ್ನಡ ಕಾವ್ಯಕ್ಕೆ ಹೊಸ ತಿರುವನ್ನು ತರುವುದು, ಅಂದಿನವರ ಉದ್ದೇಶವಾಗಿತ್ತು. ಗೋವಿಂದ ಪೈ ಅವರೂ ಈ ಬಗೆಯ ಅನುವಾದಗಳನ್ನು ಮಾಡಿದ್ದಾರೆ. ವರ್ಡ್ಸ್‌ವರ್ತ್‌ನ ಚಿಟ್ಟೆಗೆ (To a butterfly) ; ಷೆಲ್ಲಿಯ 'ಬಾನಕ್ಕಿಗೆ' (To a skylark) ; ಜರ್ಮನ್ ಕವಿಯ ಪದ್ಯ, ಕೊಳಂಗುಳದ ಮಃನವಿ ; ಉಮರ್ ಖಯ್ಯಾಮನ ರುಬಾಯತ್‌ಗಳ ಅನುವಾದ ; ಇಕ್ಬಾಲ್ ಕವಿಯ (ಉರ್ದೂ) ಹಿಂದೂಸ್ತಾನ್ ಹಮಾರ ; ಟ್ಯಾಗೂರ್ ಅವರ, ಮರಾಠಿಯ ಕೇಶವಸುತರ ಕವಿತೆಗಳ ಅನುವಾದ ಹಾಗೂ ಅಳವಡಿಕೆಗಳು – ಇಂಥವುಗಳ ಮೂಲಕ ಪೈ ಅವರು ಹೊಸ ಕಾವ್ಯದ ಹೊಸ ರೂಪ ಗಳನ್ನು ಕನ್ನಡಕ್ಕೆ ತಂದವರಲ್ಲಿ ಒಬ್ಬರು. ಆದರೆ ಪೈ ಅವರ ಅನುವಾದ ಇತ್ಯಾದಿಗಳು, ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರ ಪ್ರಯತ್ನಗಳ ಹಾಗೆ ನವೋನವವೂ, ಮಾರ್ಗದರ್ಶಕವೂ ಆಗಲಿಲ್ಲ.

ನವೋದಯ ಕಾವ್ಯದ ಮತ್ತೊಂದು ಮುಖ್ಯ ಲಕ್ಷಣ ರಾಷ್ಟ್ರೀಯತೆ. ಭಾರತವನ್ನು ಕುರಿತ ಪ್ರೀತಿ, ಸ್ವಾತಂತ್ರ್ಯದ ಹಂಬಲ, ಕರ್ನಾಟಕದ ಮೇಲಿನ ಹಾಗೂ ಕನ್ನಡದ ಮೇಲಿನ ಅಭಿಮಾನ, ಇತ್ಯಾದಿಗಳೆಲ್ಲವೂ ಇದರಲ್ಲಿ ಸಮಾವೇಶ ವಾಗುತ್ತವೆ. ಪೈ ಅವರ ಕಾವ್ಯದಲ್ಲಿ ರಾಷ್ಟ್ರೀಯ ಭಾವನೆಯನ್ನು ಕುರಿತ ಕವನಗಳು ಸಾಕಷ್ಟು ಸಂಖ್ಯೆಯಲ್ಲಿದೆ. 'ಗಿಳಿವಿಂಡು' ಸಂಗ್ರಹದಲ್ಲಿ ಐದು, 'ಹೃದಯರಂಗ'ದಲ್ಲಿ ಹದಿಮೂರು, ಕವನಗಳಿವೆ. ಜತೆಗ 'ಚಿತ್ರಭಾನು' ಎಂಬ ಅವರ ನಾಟಕವೂ ಇದೇ ವಸ್ತುವನ್ನುಳ್ಳದ್ದು. ಈ ಜಾತಿಗೆ ಸೇರಿದ ಕವಿತೆಗಳನ್ನು ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕಾಲದವುಗಳೆಂದು ವಿಭಾಗಿಸಿ ನೋಡಬಹುದು. ಇದೇ ಕಾಲದಲ್ಲಿ ಬರೆಯುತ್ತಿದ್ದ ಬಿ. ಎಂ. ಶ್ರೀಯವರಲ್ಲಿ, ಕಾಣಿಸಿಕೊಳ್ಳದಿದ್ದ, ರಾಷ್ಟ್ರೀಯ ಪ್ರಜ್ಞೆ ಪೈ ಅವರಲ್ಲಿ ಸಾಕಷ್ಟು ಗಮನಾರ್ಹವಾಗಿ ಕಾಣಿಸಿಕೊಂಡಿದ್ದು ವಿಶೇಷವಾದ ಸಂಗತಿಯಾಗಿದೆ. ಭಾರತೀಯ ಸ್ವಾತಂತ್ರ್ಯದ ಕಳಕಳಿ, ಮತ್ತು ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಭ್ರಷ್ಟಾಚಾರಗಳನ್ನು ಪೈ ಅವರು ತಮ್ಮ ಈ ಕವಿತೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಈ ದೇಶವನ್ನು ಕುರಿತು

ಭಾರತವನುಳಿಯುತ್ತ, ಅನ್ನಜೀವನವೆತ್ತ
ಭಾರತವೆ ನನ್ನುಸಿರು ನನ್ನೊಗೆದ ಬಸಿರು
ಭಾರತವೆ ಧನ ಧಾನ್ಯ, ಭಾರತವೆ ಮನೆ ಮಾನ್ಯ
ಭಾರತವೆ ದೇವಾರ ವೆನ್ನ ಸಂಸಾರ

....
ಭಾರತಿಯ ಸ್ವಾತಂತ್ರ್ಯ ಸಾಧನವೆ ನಿಜಮಂತ್ರ
ಭಾರತದ ಜಯಮೂರ್ತಿ ಮನ್ನನ ಪೂರ್ತಿ

(ಹೃದಯ ರಂಗ, ಪು. 2)

ಎಂದು ಆಶಿಸಿದ ಪೈ ಅವರು, ಬೇರೊಂದು ಕವಿತೆಯಲ್ಲಿ,

ನಮಗೀ ಪರತಂತ್ರದ ಹೊಲೆಗಲಸಿರಲಿಂತು
ನಿನ್ನಯ ಸಂತಾನರೆಂತು ?

(ಗಿಳಿವಿಂಡು, ಪು. 16)

ಎಂದು ತಮ್ಮನ್ನು ತಾವೇ ನಿಂದಿಸಿಕೊಳ್ಳುತ್ತಾರೆ. 'ಹೊಲೆಯರು ಯಾರು' ಎಂಬ ಕವಿತೆಯಲ್ಲಿ

ರಾಷ್ಟ್ರದುನ್ನತಿಯ ಸಾಧಿಸೆ ಶ್ರಮಿಸದವ ಹೊಲೆಯ
ತನ್ನ ರಾಷ್ಟ್ರಕೆ ದ್ರೋಹ ಚಿಂತಿಪನೆ ಹೊಲೆಯ
ಸ್ವಾರ್ಥದಿಂ ರಾಷ್ಟ್ರಹಿತವನು ಮರೆವವನು ಹೊಲೆಯ
ರಾಷ್ಟ್ರಭಕ್ತಿಯ ಲವಲೇಶವಿಲ್ಲದವ ಹೊಲೆಯ

(ಗಿಳಿವಿಂಡು. ಪು. 16)

ಎಂದು, ರಾಷ್ಟ್ರದ ಬಗ್ಗೆ ಚಿಂತಿಸುವ ಸಂದರ್ಭ, ಬದಲಾದ ಪರಿಸರದಲ್ಲಿ 'ಹೊಲೆಯ'ನನ್ನು 'ಹೊಲೆತನ'ವನ್ನು ಕುರಿತ ವ್ಯಾಖ್ಯಾನವೂ ಆಗಿದೆ. ಹಾಗೆಯೆ, ಅಂದಿನ ರಾಷ್ಟ್ರೀಯ ಹೋರಾಟವನ್ನು ಕುರಿತು, ಕೇಶವಸುತರ ಮರಾಠೀ ಕವಿತೆಯೊಂದರಿಂದ ಪ್ರೇರಣೆ ಪಡೆದು

ತಾರ ನನಗೊಂದು ತುತೂರಿಯಂ

ಎಂದು ಮೊದಲಾಗುವ ಸುದೀರ್ಘ ಪದ್ಯವೊಂದನ್ನು ಬರೆದಿದ್ದಾರೆ. "ಎದ್ದೇಳಿರಿ ಜೀವನ ರಣವೀರರೆ ಮೆಟ್ಟಿದಡಿಯ ಹಿಮ್ಮೆಟ್ಟದೆ ನಡಿರಿ" ಎಂದು 225 ಪಂಕ್ತಿಗಳಷ್ಟು ಹರಹಿಕೊಂಡಿರುವ ಈ ಕವಿತೆ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕುವ ಕರೆಯನ್ನು ಅತ್ಯಂತ ಕಳಕಳಿಯಿಂದ ನಿರೂಪಿಸುತ್ತದೆ. ಸ್ವಾತಂತ್ರ್ಯಪೂರ್ವದ ಈ ಕಳಕಳಿ ಮತ್ತು ಈ ಎಚ್ಚರ, ಸ್ವಾತಂತ್ರ್ಯೋತ್ತರ ಪರಿಸರದಲ್ಲಿಯೂ ಮುಂದುವರಿದಿದೆ. ಸ್ವಾತಂತ್ರ್ಯೋತ್ತರ ಭಾರತೀಯ ಪರಿಸರದ ಘಟನೆಗಳು ಪೈ ಅವರ ಕನಸನ್ನು ಒಡೆದು ತಲ್ಲಣಗೊಳಿಸಿವೆ. ನವಖಾಲಿಯ ಕಗ್ಗೊಲೆಗಳು, ಹಿಂದೂ ಮುಸ್ಲಿಂ ಜಾತೀಯ ಜಗಳಗಳು, ಕಲ್ಕತ್ತಾದ ಭೀಕರ ಬರಗಾಲದ ಬವಣೆಗಳು ಅವರ ಮನಸ್ಸನ್ನು ಕಲಕಿ, ಸ್ವಾತಂತ್ರ್ಯ ಬಂದದ್ದರಿಂದ ನಾವು ಪಡೆದುಕೊಂಡದ್ದೇನು ಎಂಬ ಚಿಂತೆಯೂ ಅವರನ್ನು ಕಾಡಿದೆ. ಈ ಸಂದರ್ಭದಲ್ಲಿ ಅವರು ದೇವರನ್ನು ಕುರಿತು

"ಬೇಡಿದೀ ಸ್ವಾತಂತ್ರ್ಯವಿತ್ತು ಅಖಿಲ ಕೇಡತೊಡಗಿಸಿದೆ"

(ಮನೆವಾರ್ತೆ. ಹೃದಯರಂಗ, ಪು. 46)

ಎಂದು ನೊಂದು ನುಡಿಯುತ್ತಾರೆ. ಸ್ವಾತಂತ್ರ್ಯ ಬಂದದ್ದು, ರಾಹು ಹೋಗಿ ಕೇತು ಬಂದಂತಾಯಿತು ಎನ್ನುತ್ತಾರೆ.

"ಏನು ತೋರಿಸಿದೆಮಗೆ, ಮೇಣೇನನಿತ್ತೆ ?
ಕಳಕೊಂಡ ಬಿಡುಗಡೆಯು ನಮಗಿತ್ತೆ ತಂದೆ
ಆದರೀಗಣ ಕತೆಯ ಬಲ್ಲೆಯಾ ಮತ್ತೆ?
ರಾಹುವನು ತೊಲಗಿಸಿದೆ ಕೇತುವನು ತಂದೆ"

(ಹೃದಯರಂಗ, ಪು. 49)

ಒಟ್ಟಿನಲ್ಲಿ ಸ್ವಾತಂತ್ರ್ಯ ಬಂದುದರಿಂದ ಏನನ್ನೂ ಪಡೆದಂತಾಗಲಿಲ್ಲ. ಪರದೇಶದ ಶೋಷಕರು ತೊಲಗಿ, ಸ್ವದೇಶೀ ಶೋಷಕರು ನೆಲೆನಿಂತಂತಾಯಿತು; ರಾಹುವಾಗಲೀ ಕೇತುವಾಗಲಿ ಮಾಡುವ ಕೆಲಸ ಬರೀ 'ನುಂಗು'ವುದು ತಾನೇ ! ಒಟ್ಟಿನಲ್ಲಿ ಅನಿಷ್ಟದಿಂದ ಈ ದೇಶ ಪಾರಾಗಲಿಲ್ಲ ಎಂಬುದು ಪೈ ಅವರ ಅನುಭವ. ಈ ಸ್ಥಿತಿಯಲ್ಲಿ

ಧನ್ಯಂ ತೋರ್ದೆನಗಂದು ಮದ್ಭರತ ಭೂಸ್ವಾತಂತ್ರ್ಯ ಸಂಪ್ರಾಪ್ತಿಯುಂ
ಐಕ್ಯಂ ಬಾರದೆ, ಶಾಂತಿ ಸಾರದೆ, ಎಮಗೀ ಸ್ವಾತಂತ್ರ್ಯವಿದ್ದೇಂ ಫಲಂ?
ತಾರಾಶಾಂತಿಯನ್, ಎಮ್ಮೊಳೈಕ್ಯವ ಶ್ರೀ ಮಾತೃಭೂಮೀಶ್ವರಾ

(ಹೃದಯರಂಗ, ಪು. 51)

ಎಂದು ಮಾತೃಭೂಮೀಶ್ವರನಲ್ಲಿ ಮೊರೆಯಿಡುತ್ತಾರೆ. ಸ್ವಾತಂತ್ರ್ಯಪೂರ್ವದಲ್ಲಿ ಕಂಡ ಆಸೆಗಳು ನುಚ್ಚುನೂರಾಗಿವೆ.

ಬಡವರತಿಪಾಡು ನೀಗಿಸುವ ಮದ್ದಿಲ್ಲ
ದೇಶದ ಹೆಸರ ನೆವದಿ ತಮ್ಮ ಜಂಬವ ಮೆರೆಸೆ
ಎನಿತೊ ವಾಚಾಲಕರ ಜಗದ ತಿರುಗಾಟ

(ಹೃದಯರಂಗ ಪು. 55)

ಜನ ಬಡತನದಿಂದ ನರಳುವ ಹೊತ್ತಿನಲ್ಲಿ ನಮ್ಮ ರಾಜಕಾರಣಿಗಳು, ತಮ್ಮ ಪ್ರತಿಷ್ಠೆಗಳನ್ನು ಮೆರೆಸುವ ಸಲುವಾಗಿ ದೇಶದೇಶಗಳನ್ನು ಸುತ್ತುತ್ತಾ ಕೇವಲ ವಾಚಾಲಕ (ಭಾಷಣಕಾರ) ರಾಗಿದ್ದಾರೆ. ಹೀಗಾಗಿ

"ಹೊರಗೆ ಹೆಸರಿನ ಕಂಪು ಒಳಗೆ ತವುಡಿನ ಬೆಂಕಿ
ನೆಚ್ಚಿನ ಅಮೆರಿಕಾವೊ ಹೊನ್ನೊರೆಯ ಕತ್ತಿ"

(ಹೃದಯರಂಗ, ಪು. 46)

ಎಂಬಂತಾಗಿದೆ ನಮ್ಮ ಸ್ಥಿತಿ. ಈ ಪರಿಸ್ಥಿತಿಯಲ್ಲಿ ಮಹಾತ್ಮ ಗಾಂಧಿಯವರು ಜೀವಂತರಾಗಿದ್ದರೆ ಚೆನ್ನಾಗಿತ್ತು, ಹಾಗಾಗಿದ್ದರೆ ದೇಶ ಹೀಗಿರುತ್ತಿರಲಿಲ್ಲ ಎಂಬ ಕನವರಿಕೆಯಲ್ಲಿ

ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು
ಈಗ ಭಾರತಕಗತ್ಯವಿದೆ ನಿನ್ನ
ಬಿರುಗಾಳಿಗೊಲೆವ ಹಡಗದಂತಿಹುದಾಸತ್ತು
ನಿನ್ನ ಹೊರತಾರೊಯ್ಕೆ ರೇವಿನೊಳದನ್ನ

ಸ್ವಾರ್ಥಪರರಾಗಿಹೆವು. ದೇವರಿಲ್ಲಮಗಿಂದು
ಸೋದರತೆ ಇಲ್ಲ, ಮುಂದಿನದಿಲ್ಲ ಗೊಡವೆ
ಧರ್ಮ ಬಾಹಿರರೆಮ್ಮನೆತ್ತಲಾರೆಂದು
ತೋಚದೆ ಮಹಾತ್ಮಾ ನಿನಗಿಂತು ಮೊರೆಯಿಡುವೆ

(ಹೃದಯರಂಗ ಪು. 4)

ಮಹಾತ್ಮಗಾಂಧಿಯವರ ಅಗತ್ಯವನ್ನು ಕುರಿತ ಈ ಪದ್ಯ, ಸದ್ಯದ ಪರಿಸ್ಥಿತಿಯನ್ನು ಅತ್ಯಂತ ಕಳಕಳಿಯಿಂದ ನಿರೂಪಿಸುತ್ತದೆ. ಈ ಪದ್ಯ ಕೂಡಾ ಮಿಲ್ಟನ್‌ನನ್ನು ಕುರಿತು, ವರ್ಡ್ಸ್ ವರ್ತ್ ಬರೆದ ಪದ್ಯದ ಅನುಕರಣವಾದರೂ ('Milton thou shouldst be living at this hour, England hath need of thee'), ಪೈ ಅವರ ಕಳಕಳಿ ಇದರ ಮೂಲಕ ಅತ್ಯಂತ ಪ್ರಾಮಾಣಿಕವಾಗಿ ಮೈ ಪಡೆದಿದೆ.

ಸಂಶೋಧನೆಯ ಸುರಂಗದಲ್ಲಿದ್ದರೂ, ಪೈ ಅವರ ಕವಿ ಹೃದಯ, ಈ ರಾಷ್ಟ್ರದ ಆಗು–ಹೋಗುಗಳನ್ನು ಕುರಿತು ಹೇಗೆ ಸದಾ ಎಚ್ಚರದಲ್ಲಿದ್ದುಕೊಂಡು ಪ್ರತಿಕ್ರಿಯಿಸುತಿತ್ತು ಎನ್ನುವುದಕ್ಕೆ ರಾಷ್ಟ್ರೀಯ ಭಾವನೆಯನ್ನು ಕುರಿತು, ಅವರು ಬರೆದ ಬಹುಸಂಖ್ಯೆಯ ಕವಿತೆಗಳು ಸಾಕ್ಷಿಯಾಗಿವೆ.

ಇದರ ಜತೆಗೆ, ನಿಜವಾದ ಸ್ವಾತಂತ್ರ್ಯ ಪ್ರಿಯತೆ ಎನ್ನುವುದು, ಕೇವಲ ತನ್ನ ದೇಶವೊಂದನ್ನು ಕುರಿತ ಪ್ರೀತಿ ಮಾತ್ರವಲ್ಲ; ಜಗತ್ತಿನಲ್ಲಿ ಎಲ್ಲಿ ಎಲ್ಲಿ ಪರತಂತ್ರಕ್ಕೆ ಸಿಕ್ಕ ದೇಶಗಳಿವೆಯೋ, ಅವುಗಳ ಸ್ವಾತಂತ್ರ್ಯಪ್ರಿಯತೆಯನ್ನು ಗೌರವಿಸುವುದು, ಬೆಂಬಲಿಸುವುದು, ಸ್ವಾತಂತ್ರ್ಯವನ್ನು ಒಂದು ಮೌಲ್ಯವೆಂದು ಕಂಡುಕೊಂಡ ವ್ಯಕ್ತಿತ್ವದ ನಿಲುವಾಗಿರಬೇಕು. ಇದು ಮುಖ್ಯವಾಗಿ ಪ್ರಕಟವಾಗುವುದು, ಅನ್ಯಾಕ್ರಮಣ ವಿರೋಧಿ ಅಥವಾ ಯುದ್ಧ ವಿರೋಧೀ ನಿಲುವಿನಲ್ಲಿ. ಪೈ ಅವರಲ್ಲಿ ಉದ್ದಕ್ಕೂ ಸ್ವಾತಂತ್ರ್ಯವೆಂಬ ಮೌಲ್ಯದ ಬಗ್ಗೆ ಗೌರವ ಹಾಗೂ ಯುದ್ಧ ವಿರೋಧೀ ನಿಲುವುಗಳು ಕಂಡು ಬರುತ್ತವೆಂಬುದು ಮಹತ್ವದ ಸಂಗತಿಯಾಗಿದೆ. ಇಟಲಿ ದೇಶವು ತುರ್ಕಿಯ ಮೇಲೆ ಧಾಳಿ ಮಾಡಿದಾಗ—

ನಿರಪರಾಧಿಯ ರಕ್ತ
ದಿಂದ ನೆಲಜಲಸಿಕ್ತ
ವಾಗದೊಲು ಕಾಪಾಡು ದೇವಕೀ ತನಯಾ

(ಗಿಳಿವಿಂಡು, ಪು. 17)

ಎಂದು 'ತುರ್ಕಿಯ ಪರವಾಗಿ ದೇವರೊಡನೆ ಪ್ರಾರ್ಥನೆ' ಮಾಡುತ್ತಾರೆ. ಅಮೆರಿಕಾ ಜಪಾನಿನ ಹಿರೋಷಿಮಾ ನಾಗಸಾಕಿಗಳ ಮೇಲೆ ಅಣುಬಾಂಬನ್ನೆಸೆದಾಗ—

"ಈ ಯುದ್ಧ ಸರ್ವಥಾ ಅಂತಿಮ ಯುದ್ಧವಲ್ಲ
ಹೊಸತೆನಿತೊ ಯುದ್ಧಗಳ ತಾಯಿ, ಮುತ್ತಾಯಿ.
ಪರರ ಬಿಡುಗಡೆಯ ನಡಿ ಮೆಟ್ಟಿ, ಜಗವೆಲ್ಲ
ತನಗೆ ತನಗೆಂಬ ಮನುಜಾ ಸಾಯೊ ಸಾಯಿ.

(ಹೃದಯರಂಗ, ಪು. 1)

ಎಂದು, ಪರರ ಸ್ವಾತಂತ್ರ್ಯವನ್ನು ಮೆಟ್ಟುವ ಪ್ರವೃತ್ತಿಯನ್ನು ಖಂಡಿಸುತ್ತಾರೆ. ಪೈ ಅವರ ಈ ಯುದ್ಧ ವಿರೋಧೀ ಧೋರಣೆ ಸ್ವಾತಂತ್ರ್ಯವನ್ನು ಒಂದು ಮೌಲ್ಯವೆಂದು ಪರಿಗಣಿಸಿದ ಚೇತನದ ಅಭಿವ್ಯಕ್ತಿಯಾಗಿದೆ.

ನವೋದಯದ ಇನ್ನೊಂದು ಮುಖ್ಯ ಲಕ್ಷಣವೆಂದರೆ, ರಾಷ್ಟ್ರೀಯತೆಯ ಒಂದು ಅಂಗವಾಗಿ, ತಮ್ಮ ತಮ್ಮ ಪ್ರಾದೇಶಿಕ ಸಂಸ್ಕೃತಿಯ ಬಗ್ಗೆ ತಾಳಿದ ಎಚ್ಚರ. ಕರ್ನಾಟಕದ ಮಟ್ಟಿಗೆ ಅದು, ಒಂದು ಭಾಷೆಯನ್ನಾಡುವ ಜನ ಒಂದಾಗುವುದು ಅಗತ್ಯವೆಂಬ, ತಮ್ಮ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಗ್ಗೆ ಅಭಿಮಾನವನ್ನು ಬೆಳೆಯಿಸಿಕೊಳ್ಳಬೇಕೆಂಬ ಪ್ರವೃತ್ತಿಯಾಗಿ ಪ್ರಕಟವಾಯಿತು. ಒಟ್ಟಿನಲ್ಲಿ 'ಕನ್ನಡತನದ' ಅರಿವು ಇದರಲ್ಲಿ ಮುಖ್ಯವಾದದ್ದು—

"ತನು ಕನ್ನಡ ಮನ ಕನ್ನಡ ಧನ ಕನ್ನಡ"

ಎನ್ನುವ ಪೈ ಅವರು, ಕನ್ನಡ ತಾಯನ್ನು 'ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ' ಎಂದು ಪ್ರಾರ್ಥಿಸುತ್ತಾರೆ. ತನ್ನ ಭಾಷೆಯಲ್ಲಿ ಅಲ್ಲದೆ ಬೇರೆ ಭಾಷೆಯ ಮೂಲಕ ನಾವು ನಿಜವಾದ ಅರಿವನ್ನು ಪಡೆಯುವುದು ಸಾಧ್ಯವೇ ಇಲ್ಲ ಎಂಬ ತಿಳಿವಿನಿಂದ

"ತನ್ನ ತಾಯ್ನುಡಿಯಿಂದ ದುಡಿದ ಬಿಜ್ಜೆಯೆ ಬಿಜ್ಜೆ
ಹೆರರ ನಾಲಗೆಯೆಂಜಲೆನ್ನಗಂ ಸವಿಯೆ ?"

(ಗಿಳಿವಿಂಡು, ಪು. 36)

ಎಂದು ಶಿಕ್ಷಣದ ಮೂಲ ತತ್ವವನ್ನು ಎತ್ತಿ ಹಿಡಿಯುತ್ತಾರೆ. ಯಾವುದೇ ಒಂದು ಭಾಷೆಗೆ ಸತ್ವವನ್ನು ತುಂಬಬೇಕಾದರೆ, ಅದನ್ನು ಎಲ್ಲ ಹಂತಗಳಲ್ಲಿಯೂ ದುಡಿಸಿ

ಕೊಳ್ಳುವ ಸಾಮರ್ಥ್ಯವನ್ನು ಪಡೆದ ಜನರಿಂದ ಮಾತ್ರ ಸಾಧ್ಯ. ಆದರೆ ಕನ್ನಡ ಜನ ಎಂಥವರೆಂದರೆ—

ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ"

(ಗಿಳಿವಿಂಡು, ಪು. 82)

ಎಂಬಂತಾಗಿದೆ. ತನ್ನೊಳಗಿರುವ ಕಂಪನ್ನು ತಾನರಿಯದೆ, ಅದನ್ನು ಹೊರಗೆ ಹುಡುಕುವ ಕಸ್ತೂರಿ ಮೃಗದಂತಾಗಿದ್ದಾರೆ ನಮ್ಮ ಜನ. ಆದ ಕಾರಣ—

ಕನ್ನಡ ಕಸ್ತೂರಿಯನ್ನ
ಹೊಸತುಸಿರಿಂ ತೀಡದನ್ನ
ಸುರಭಿ ಎಲ್ಲಿ ? ನೀನದನ್ನ
ನವಶಕ್ತಿಯಿನೆಬ್ಬಿಸು
ಹೊಸ ಸುಗಂಧ ದೊಸಗೆಯಿಂದ ಜಗದಿ ಹೆಸರ ಹಬ್ಬಿಸು.

(ಗಿಳಿವಿಂಡು, ಪು. 68)

ಎಂದು ಕನ್ನಡಿಗರನ್ನು ಎಚ್ಚರಿಸುತ್ತಾರೆ. ತಮ್ಮ ಕಾವ್ಯ ಹಾಗೂ ಸಂಶೋಧನೆಗಳ ಮೂಲಕ, ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿ–ಇತಿಹಾಸ ಇತ್ಯಾದಿಗಳ ಬಗ್ಗೆ, ಪೈ ಅವರು ತೆರೆದು ತೋರಿದ ಕನ್ನಡದ ಶ್ರೀಮಂತಿಕೆ, ಮತ್ತು ಹೊಸ ಅರಿವು ಸ್ಮರಣೀಯವಾಗಿವೆ.

(ಭಾರತೀಯ ನವೋದಯದ ಇನ್ನೊಂದು ಲಕ್ಷಣವೆಂದರೆ, ದೇವರು – ಧರ್ಮ ಇತ್ಯಾದಿಗಳ ವಿಚಾರದಲ್ಲಿದ್ದ, ಪರಂಪರಾಗತವಾದ ದೃಷ್ಟಿಕೋನಗಳನ್ನು ಬದಲಾಯಿಸಿದ್ದು. ಇದು ಸಾಧ್ಯವಾದದ್ದು ಸಾಂಸ್ಥಿಕ ಧರ್ಮಗಳ ನಿರಾಕರಣದಿಂದ. ಇದರಿಂದ ಒಂದು ಧಾರ್ಮಿಕ ಉದಾರವಾದೀ ಧೋರಣೆ ಅಥವಾ ಸಮನ್ವಯದೃಷ್ಟಿ ಉದಯವಾಯಿತು. ಪೈ ಅವರಿಗೆ ವೈಯಕ್ತಿಕವಾಗಿ, ಕೃಷ್ಣ 'ಇಷ್ಟದೈವ' ವಂತೆ ಕಂಡರೂ ಕೃಷ್ಣ-ಕ್ರಿಸ್ತ-ಬುದ್ಧ ಈ ಮೂವರು ವ್ಯಕ್ತಿತ್ವಗಳು ಸಂಗಮಿಸಿದ ಒಂದು ಧಾರ್ಮಿಕ ನಿಲುವು ಅವರಲ್ಲಿ ಕಾಣಿಸುತ್ತದೆ.) ಒಂದು ಕವಿತೆಯಲ್ಲಿ ಯೇಸು ಮತ್ತು ಕೃಷ್ಣ ಇವರಿಬ್ಬರ ಸಾಮ್ಯವನ್ನು ತರ್ಕಬದ್ಧವಾಗಿ ಗುರುತಿಸುತ್ತಾರೆ :

ಕೊಳಲ ಸೂಸಿ ಹಸುಮೇಸಿದೆ, ಕೊಡತಿಯ
ಹಿಡಿದು ಬಡಗಿಯಾ ಪಡಿ ದುಡಿದೆ.
ರಾಧೆ ಬಿಗಿದ ಭುಜ ಬಂಧದ ಬಂದಿಯೊ
ಮರಿಯಳ ಮುತ್ತುಗಳಂದುಗವೊ (ಗಿಳಿವಿಂಡು, ಪು. 40)

ಎಂಬ ಸಮೀಕರಣ ಈ ನಿಲುವಿಗೆ ಸಾಕ್ಷಿಯಾಗಿದೆ. ಮಹಾತ್ಮಗಾಂಧಿಯವರು ಇಪ್ಪತ್ತೊಂದು ದಿನಗಳ ಕಾಲ ಉಪವಾಸ ಮಾಡಿದಾಗ, (1924ರಲ್ಲಿ) "ಉರುವೇಲಿ

ಯರಳಿಯಡಿಯಲಿ ಚಿರಂ ಹಸಿದು ಮಾರನಂ ಮುರಿದು" ತಪಸ್ಸುಮಾಡಿದ ಬುದ್ಧನ ನೆನಪಾಗುತ್ತದೆ ಪೈ ಅವರಿಗೆ. ಹಾಗೆಯೇ "ಯೇಸು ಯೋರ್ದನಿನ ಬನದಿ ನಲವತ್ತು ದಿನ ಹಸಿದಂ' ಎಂಬುದನ್ನೂ, ಮುಹಮ್ಮದ್ ಪೈಗಂಬರ್ ಅವರು ಉಪವಾಸಮಾಡಿ ಹೊಸ ಜೀವನವನ್ನು ಹುಡುಕಿದ ಪರಿಯನ್ನೂ (ಗಿಳಿವಿಂಡು ಪು. 45) ಪೈಗಳು ನೆನಪಿಗೆ ತಂದುಕೊಳ್ಳುತ್ತಾರೆ. (ಮುಂದೆ 'ಗೊಲ್ಗೊಥಾ' 'ವೈಶಾಖಿ' ಇತ್ಯಾದಿ ಖಂಡಕಾವ್ಯಗಳಿಗೆ ಬುನಾದಿಯಾದದ್ದು ಈ ಧಾರ್ಮಿಕ ಉದಾರವಾದೀ ಧೋರಣೆ.) ಭಾರತೀಯ ಪರಿಸರದಲ್ಲಿ ಬಂದು, ಕ್ರೈಸ್ತಧರ್ಮವೇ ಶ್ರೇಷ್ಠವೆಂಬ ಧೋರಣೆ ಯಿಂದ, ಅದನ್ನು ಪ್ರಚಾರಮಾಡಿ ಭಾರತೀಯರನ್ನು ಮತಾಂತರ ಗೊಳಿಸುತ್ತಿದ್ದ ಕ್ರೈಸ್ತಮಿಷನರಿಗಳಿಗೆ, ಕ್ರಿಸ್ತನ ವಿಚಾರದಲ್ಲಿ ಅನನ್ಯ ಶ್ರದ್ಧೆಯಿಂದ 'ಗೊಲ್ಗೊಥಾ' ಖಂಡಕಾವ್ಯವನ್ನು ಬರೆದ ಪೈ ಅವರ ನಿಲುವು ಒಂದು ಸವಾಲು ಹಾಗೂ ಸಮಸ್ಯೆ ಯಾಗಿ ಕಂಡಿದ್ದರೆ ಆಶ್ಚರ್ಯವಿಲ್ಲ. ಕ್ರಿಸ್ತ, ಬುದ್ಧರನ್ನು ಕುರಿತಂತೆ ಕಾವ್ಯಬರೆದ ಪೈ ಅವರು, ಕೃಷ್ಣನ ಕೊನೆಯದಿನಗಳನ್ನು ಕುರಿತು, ಗಾಂಧೀಜಿಯ ಕೊನೆಯ ದಿನಗಳನ್ನು ಕುರಿತು, ಬರೆದ ಖಂಡಕಾವ್ಯಗಳು, ಅರ್ಧದಲ್ಲೇ ನಿಂತಿವೆ.

(ಒಂದು ಸ್ವಾರಸ್ಯವಾದ ಸಂಗತಿಯೆಂದರೆ, ಪೈ ಅವರಲ್ಲಿ ಕಂಡುಬರುವ ನಿಸರ್ಗ ಪರವಾದ ತಲ್ಲೀನತೆಯ ಹಾಗೂ ಸಾಮಾಜಿಕ ಕಳಕಳಿಯ ಅಭಾವ.) ವಾಸ್ತವವಾಗಿ ನವೋದಯ ಕಾವ್ಯದ ಬಹು ಮುಖ್ಯವಾದ ಲಕ್ಷಣಗಳಲ್ಲಿ ನಿಸರ್ಗಪರವಾದ ತಲ್ಲೀನತೆ ಅತ್ಯಂತ ಮುಖ್ಯವಾದದ್ದು. ತನ್ನ ಸುತ್ತಣ ನಿಸರ್ಗದ ಸೊಗಸನ್ನು, ಅತ್ಯಂತ ತಲ್ಲೀನತೆಯಿಂದ ವರ್ಣಿಸುವ ಕವಿತೆಗಳು ನವೋದಯ ಕಾವ್ಯದ ಬಹುಭಾಗವನ್ನು ತುಂಬಿಕೊಂಡಿವೆ. ಈ ಪ್ರವೃತ್ತಿ ಒಂದು ರೀತಿಯಲ್ಲಿ ಜೀವನಪ್ರೀತಿಯ ವಿಸ್ತರಣೆ ಕೂಡಾ. ಇದರ ಜತೆಗೆ, ತಮ್ಮ ಅನುಭಾವಿಕ ಅಥವಾ ಉದಾರ ಧಾರ್ಮಿಕ ನಿಲುವಿ ನೊಂದಿಗೆ ತಾಕಲಾಟದ ರೀತಿಯಲ್ಲಿ ಈ ಕಾಲದ ಕವಿಗಳು, ತಮ್ಮ ಸುತ್ತಣ ಸಾಮಾಜಿಕ ಅಸಮತೆ-ವಿಷಮತೆಗಳನ್ನೂ ಕುರಿತು ಸಾಕಷ್ಟು ಸಂಖ್ಯೆಯ ಕವಿತೆಗಳನ್ನು ಬರೆದರು. ಇದು ಮುಂದಿನವರ 'ಸಾಮಾಜಿಕಪ್ರಜ್ಞೆ'ಯಷ್ಟು ದಟ್ಟವಾಗಿರದಿದ್ದರೂ, ತಮಗೆ ಹಿಂದೆ ಇಲ್ಲದಿದ್ದ ರೀತಿಯಲ್ಲಿ ಕಾಣಿಸಿಕೊಂಡ 'ಸಾಮಾಜಿಕ ಪ್ರಜ್ಞೆ' ಎಂದು ಗುರುತಿಸ ಬಹುದು. ಆದರೆ ಗೋವಿಂದ ಪೈ ಅವರಲ್ಲಿ ಭಗವತ್ ಪರವಾದ ಒಂದು ನಿಲುವು, ಅವರ ಅನೇಕ ಕವನಗಳ ಹಿಂದೆ ಇದ್ದರೂ, ಅವರಲ್ಲಿ ನಿಸರ್ಗವನ್ನು ಕುರಿತು ತಲ್ಲೀನತೆಯಿಂದ ಬರೆದ ಒಂದು ಕವಿತೆಯೂ ಕಾಣದಿರುವುದು ಮತ್ತು ಸುತ್ತಣ ಸಾಮಾಜಿಕ ಪರಿಸರವನ್ನು ಕುರಿತು ಯಾವ ಪ್ರತಿಕ್ರಿಯೆಯೂ ಕಾಣದಿರುವುದು ಆಶ್ಚರ್ಯದ ಸಂಗತಿಯಾಗಿದೆ. ಅವರ ಕವಿತೆಗಳು, ರಾಷ್ಟ್ರಪ್ರೇಮ, ಕನ್ನಡಭಾಷೆ, ಯುದ್ಧವಿರೋಧೀ ಧೋರಣೆ, ಭಗವದ್‌ಭಕ್ತಿ ಇತ್ಯಾದಿ 'ಸಾರ್ವತ್ರಿಕ' ವಿಷಯ ಗಳನ್ನು ಕುರಿತದ್ದಾಗಿವೆಯೆ ಹೊರತು, ತೀರಾ 'ವ್ಯಕ್ತಿನಿಷ್ಠ' ವಿಷಯಗಳನ್ನು

ಕುರಿತಿರುವುದು (ಅವರ ಪತ್ನೀವಿಯೋಗವನ್ನು ಕುರಿತ ಕೆಲವು ಕವಿತೆಗಳನ್ನು ಹೊರತು) ತೀರಾ ಕಡಿಮೆ. ಅವರ ಭಗವತ್ ಪರವಾದ ನಿಲುವನ್ನು ಕುರಿತ ಅನೇಕ ಕವಿತೆಗಳ ಮೇಲೆ ಕೂಡಾ ರವೀಂದ್ರನಾಥ ಟ್ಯಾಗೂರರ ಕವಿತೆಗಳ ದಟ್ಟವಾದ ಪ್ರಭಾವಗಳನ್ನು ಗುರುತಿಸಬಹುದು.

– 2 –

ಪೈ ಅವರ ಸಾಹಿತ್ಯಕ ಜೀವನ ಶುರುವಾದದ್ದೆ ಕಾವ್ಯರಚನೆಯಿಂದ. ಅವರು ಮೊಟ್ಟಮೊದಲು ಬರೆದ ಪದ್ಯ 'ಸುಹಾಸಿನಿ' ಎಂಬ ಹೆಸರಿನದು ; ಅದನ್ನು ಬರೆದದ್ದು 1900 ರಲ್ಲಿ. ಅದು, ಅದೇ ಹೆಸರಿನ ಪತ್ರಿಕೆಯಲ್ಲಿ ಪ್ರಕಟವಾಯಿತು. ಅವರ ಕೊನೆಯ ಪದ್ಯ, 1962 ರಲ್ಲಿ ಬರೆದದ್ದು, 'ರಾಹುವನು ತೊಲಗಿಸಿದೆ, ಕೇತುವನು ತಂದೆ' ಎಂಬುದು. ಇದು ಅವರ 'ಹೃದಯ ರಂಗ' ಸಂಗ್ರಹದಲ್ಲಿ ಬಂದಿದೆ. ಅರು ವತ್ತೆರಡು ವರ್ಷಗಳ ಕಾಲ ಬರೆಹದಲ್ಲಿ ತೊಡಗಿದ ಪೈ ಅವರು, ಮುಖ್ಯವಾಗಿ ಕವಿಯಾಗಿ ಕೆಲಸಮಾಡಿದ್ದು ಮೊದಲ ಮೂವತ್ತು ಮೂವತ್ತೆರಡು ವರ್ಷಗಳು ಮಾತ್ರ. (ಅವರ ಮೊದಲ ಕವನಸಂಗ್ರಹ 'ಗಿಳಿವಿಂಡು' ಪ್ರಕಟವಾದದ್ದು, 1930ರಲ್ಲಿ) "ಈ ಕವಿತೆಗಳು ಕಳೆದ ಮೂವತ್ತೇನೋ ವರ್ಷಗಳಲ್ಲಿ ಅಪ್ಪಮಿಗೊಂದು, ಶಿವರಾತ್ರಿಗೊಂದು ಎಂಬಂತೆ ರಚಿತವಾಗಿವೆ'' ಎಂದು ಅವರೆ 'ಗಿಳಿವಿಂಡು' ಸಂಗ್ರಹದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. "ಅನಂತರದ ಕೆಲವು ವರ್ಷಗಳಲ್ಲಿ ಅವರ ಕವಿತಾ ರಚನೆ ತುಸು ಹಿಮ್ಮೆಟ್ಟಿ ಪ್ರಾಕ್ತನಶೋಧನೆಯಲ್ಲಿ ಅವರು ಮುಳುಗಿ ಬಿಟ್ಟರೆಂದು ತೋರುತ್ತದೆ.'' ನಾಟಕ ಕ್ಷೇತ್ರದಲ್ಲೂ ಅವರು ಮನಸ್ಸು ತೊಡಗಿಸಿದುದು 1946-47ರಲ್ಲಿ.) (ಹೀಗಾಗಿ 1927 ರಿಂದ 1947 ರ ವರೆಗೆ ಇಪ್ಪತ್ತು ವರ್ಷಗಳ ಅವಧಿ ಅವರ ಬಹು ಬಗೆಯ ಬರವಣಿಗೆಯ ಉತ್ಕರ್ಷದ ಕಾಲ. ಅನಂತರದ ಬರವಣಿಗೆ ಮಂದಗತಿಯದು.) 1953ರ ವೇಳೆಗೆ (ಆಗ ಅವರ ವಯಸ್ಸು ಎಪ್ಪತ್ತು) ಅದು ತೀರಾ ಕುಂಠಿತವಾಯಿತು (ಗೋವಿಂದಪೈ ವಾಙ್ಮಯ ದರ್ಶನ. ಪು.8)

ಪೈ ಅವರು ಕಾವ್ಯ ರಚನೆಗೆ ಶುರುಮಾಡುವ ವೇಳೆಗೆ, ಹೊಸಗನ್ನಡ ಕಾವ್ಯದ ನೆಲವನ್ನು ಹೊಸ ಬೆಳೆಗೆ ಹಸನು ಮಾಡುವ ಕೆಲಸನಡೆದಿತ್ತು—ಕೆಂಪು ನಾರಾಯಣ, ಬಸವಪ್ಪಶಾಸ್ತ್ರೀ, ಶಾಂತಕವಿಗಳು, ಪಂಜೆ ಮಂಗೇಶರಾಯರು ಹಟ್ಟಿಯಂಗಡಿ ನಾರಾಯಣರಾಯರು ಇಂಥವರಿಂದ. ಇಂಗ್ಲಿಷ್ ಕವಿಗಳ ಕವನಗಳ ವರ್ಚಸ್ಸು ಕನ್ನಡಕ್ಕೆ ಬರುವಂತೆ ಮಾಡಿದವರಲ್ಲಿ ಪಂಜೆಯವರೇ ಮೊದಲಿಗರು. 1893ಕ್ಕೆ ಮೊದಲೇ ಪಂಜೆಯವರು ಕವಿತೆಗಳನ್ನು ಬರೆದಂತೆ ತೋರುತ್ತದೆ. ಈ ಹಿನ್ನೆಲೆಯಲ್ಲಿ ಪೈ ಅವರು 1900ರಿಂದ 1930 ರವರಿಗೆ ಬರೆದ ಕವಿತೆಗಳ ಸಂಗ್ರಹ, "ಗಿಳಿ ವಿಂಡು'' 1930 ರಲ್ಲಿ ಮೊದಲು ಬೆಳಕು ಕಂಡಿತು. ವಾಸ್ತವವಾಗಿ 1900 ರಿಂದ 1930 ರವರೆಗಿನ ಹೊಸ ಗನ್ನಡದ ಕಿರಣೋದಯದ ಈ ಕಾಲ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ

ಮಹತ್ವದಕಾಲ. ಹೊಸಗನ್ನಡದ ತನ್ನ ನೆಲೆಯನ್ನು ಕಂಡುಕೊಂಡ ಉತ್ಸಾಹದ ಕಾಲ ಅದು. ಮಾಸ್ತಿಯವರ ಮೊದಲ ಸಂಗ್ರಹ 'ಬಿನ್ನಹ' ಪ್ರಕಟವಾದದ್ದು 1922 ರಲ್ಲಿ; 'ಅರುಣ' 1924ರಲ್ಲಿ; ಡಿ.ವಿ.ಜಿ. ಯವರ ನಿವೇದನ ಪ್ರಕಟವಾದದ್ದು 1924ರಲ್ಲಿ; ಶ್ರೀಯವರ ಇಂಗ್ಲಿಷ್ ಗೀತೆಗಳು 1926ರಲ್ಲಿ; ಕುವೆಂಪು ಅವರ ಕೊಳಲು 1930ರಲ್ಲಿ* ವಿ.ಸೀ ಯವರ 'ಗೀತಗಳು' 1931ರಲ್ಲಿ; ಬೇಂದ್ರೆಯವರ ಗರಿ 1932ರಲ್ಲಿ; ಕಡೆಂಗೋಡ್ಲು ಶಂಕರ ಭಟ್ಟರ 'ಹಣ್ಣು ಕಾಯಿ' 1933ರಲ್ಲಿ; ಪು.ತಿ.ನ. ಅವರ 'ಹಣತೆ' 1933ರಲ್ಲಿ. ಅಂತೂ, 1900ರಿಂದ 1930ರ ವರೆಗಿನ ಕಾಲ, ಹೊಸಗನ್ನಡದ ನವೋದಯದಲ್ಲಿ ಹೆಸರು ಮಾಡಿದ ಕವಿಗಳೆಲ್ಲರೂ ಅತ್ಯಂತ ಕ್ರಿಯಾಶೀಲವಾಗಿದ್ದ ಕಾಲ ಅದು. ಈ ಪರಿಸರದಲ್ಲಿ ಬಂದ ಪೈ ಅವರ ಕಾವ್ಯ, ಈಗಾಗಲೇ ಪ್ರಸ್ತಾಪಿಸಿದಂತೆ ಕೆಲವು 'ಮೊದಲು'ಗಳನ್ನು ಸ್ಥಾಪಿಸಿದರೂ, ಉಳಿದ ಅನೇಕರ ಕವಿತೆಯು ಹಾಗೆ ತನ್ನ ಲವಲವಿಕೆಯನ್ನು ಕಾಯ್ದುಕೊಳ್ಳದೆ ಒಂದು ರೀತಿಯಲ್ಲಿ ಸ್ಥಗಿತಗೊಂಡಂತೆ ತೋರುತ್ತದೆ. ಕೆಲಮಟ್ಟಿಗೆ ಡಿ.ವಿ.ಜಿ.ಯವರ ಕಾವ್ಯದೊಂದಿಗೆ, ಅದನ್ನು ಹೋಲಿಸಬಹುದಾದರೂ, ಡಿ.ವಿ.ಜಿ.ಯವರ ಕಾವ್ಯ ಪಡೆದುಕೊಂಡ ಗೆಲುವನ್ನೂ, ಪೈ ಅವರ ಕಾವ್ಯ ಪಡೆದುಕೊಂಡಿತೆಂದು ಹೇಳಲಾಗುವುದಿಲ್ಲ.

ಪೈ ಅವರ ಕವಿತೆಯ ಹಾದಿಯನ್ನು ಪರಿಶೀಲಿಸಿದರೆ, ಅವರ ಕಾವ್ಯರಚನೆ 1962ರವರೆಗೆ ಚಾಚಿಕೊಂಡರೂ (ಅವರ ಕೊನೆಯ ಪದ್ಯ 'ರಾಹುವನು ತೊಲಗಿಸಿದೆ ಕೇತುವನು ತಂದೆ' 1962ರಲ್ಲಿ ಬರೆದದ್ದು) ಅವರ ಮೊದಲ ಸಂಗ್ರಹದ ಕವಿತೆಗಳ ಭಾಷೆಗೂ, ಅವರ ಕಡೆಯ ಪದ್ಯದ ಭಾಷೆಗೂ ಅಂತಹ ವ್ಯತ್ಯಾಸವೇ ಇಲ್ಲ (ತಾಯೆ ಬಾರ ಮೊಗವ ತೋರ ಇಂತಹ ಒಂದೆರಡು ಕವಿತೆಗಳ ಹೊರತು) ಎನ್ನಿಸುತ್ತದೆ. ಈ ಅವಧಿಯಲ್ಲಿ ಕನ್ನಡ ಕಾವ್ಯ ತೊಟ್ಟರೂಪಗಳೆಷ್ಟು, ಅದಕ್ಕೆ ಹಿನ್ನೆಲೆಯಾದ ಸಾಹಿತ್ಯಕ ಚಳುವಳಿಗಳೆಷ್ಟು! ಅದೊಂದೂ ಪೈ ಅವರನ್ನು ತಟ್ಟಿದಂತೆ ಕಾಣುವುದಿಲ್ಲ. ಹಾಗೆಂದರೆ ಅವರ ಕಾವ್ಯ ನವೋದಯದ ಹೊಸ ಸಂವೇದನೆಗಳಿಗೆ ಅಭಿವ್ಯಕ್ತಿ ನೀಡಲಿಲ್ಲವೆಂದಲ್ಲ. ಅವರ ಕವಿತೆ ನವೋದಯದ ಭಾವನೆಗಳು–ಆಲೋಚನೆಗಳನ್ನು, ವಿಚಾರಗಳನ್ನು ಹೇಗೆ ಅಭಿವ್ಯಕ್ತಿಸಿದೆ ಎಂಬುದನ್ನು ಈಗಾಗಲೇ ತೋರಿಸಲಾಗಿದೆ.

---

*ಕೆ. ವಿ. ಪುಟ್ಟಪ್ಪ (ಕುವೆಂಪು) ನವರು 1924ರವರೆಗೂ ಒಂದೂ ಪದ್ಯವನ್ನು ಕನ್ನಡದಲ್ಲಿ ಬರೆದಿರಲಿಲ್ಲ. ಅವರು ಬರೆಯುತ್ತಿದ್ದುದೆಲ್ಲಾ ಇಂಗ್ಲಿಷಿನಲ್ಲಿ. 1924ರ ಜುಲೈ ಎರಡನೆ ತಾರೀಖು ಅವರು ಜೆ. ಎಚ್. ಕಸಿನ್ಸ್ ಅವರನ್ನು ಭೇಟಿಯಾಗಿ, ಅನಂತರ ಕನ್ನಡದ ಕಡೆ ತಿರುಗಿದರು. ಈ ಹಾದಿಯಲ್ಲಿ ಅವರು ಬರೆದ ಮೊದಲ ಕನ್ನಡ ಪದ್ಯ 'ಪೂವು'. 1924ರ ಜುಲೈ ಆರನೇತಾರೀಖು ರಚಿತವಾದದ್ದು. ಆದರೆ ಮುಂದೆ, 1930ರ ವೇಳೆಗೆ ಕುವೆಂಪು ಕನ್ನಡ ಕವಿಯಾಗಿ, ತಮ್ಮ ಮೊದಲ ಕವನ ಸಂಗ್ರಹ 'ಕೊಳಲು' ಅನ್ನು ಪ್ರಕಟಿಸಿದರು. ಕೇವಲ ಆರೇ ವರ್ಷಗಳಲ್ಲಿ ಕುವೆಂಪು ಕನ್ನಡ ಕವಿಯಾಗಿ ಸಮೃದ್ಧವಾದ ಕವಿತೆಗಳನ್ನು ರಚಿಸಿದರು.

ಆದರೆ ಈ ಹೊಸ ಸಂವೇದನೆಗಳಿಗೆ ಅವರು ಸಮರ್ಥವಾದ ಹೊಸ ಭಾಷೆಯನ್ನು ನಿರ್ಮಾಣಮಾಡಿಕೊಳ್ಳಲಿಲ್ಲ; ಹೊಸರೂಪಗಳೇನೋ ಇವೆ ಅವರಲ್ಲಿ, ಆದರೆ ಆ 'ರೂಪ' ಹೊಸಭಾಷೆಯಿಂದ ನಿರ್ಮಿತವಾದದ್ದಲ್ಲ. ಒಂದೇ ಒಂದು ನಿದರ್ಶನದಿಂದ ಈ ಮಾತನ್ನು ಸ್ಪಷ್ಟಪಡಿಸುವುದಾದರೆ,—

ಬಲ್ಲುದೆ ಲತೆ ಫಲಂ ತನ್ನ
ಸಿಹಿಯೊ ಕಹಿಯೊ ಎಂಬುದನ್ನ

(ಗಿಳಿವಿಂಡು ಪು. 103)

ಎಂದು ಮೊದಲಾಗುವ ಕವಿತೆಯ ಈ ಎರಡು ಸಾಲುಗಳು,

ಬಲ್ಲುದೆ ಲತೆ ತನ್ನ ಫಲಂ
ಸಿಹಿಯೊ ಕಹಿಯೊ ಎಂಬುದಂ

ಎಂದು ರಚಿತವಾಗಿದ್ದರೆ, 'ಫಲಂ' 'ಎಂಬುದಂ' ಎಂಬ ಹಳಗನ್ನಡ ರೂಪಗಳು ಹಾಗೆ ಉಳಿದು ಕೊಂಡೂ, 'ಫಲಂ ತನ್ನ' 'ಎಂಬುದನ್ನ' ಎಂಬುದನ್ನೊಳಗೊಂಡ ಬಂಧಕ್ಕಿಂತಲೂ ಹೊಸತಾಗಿ ತೋರುತಿತ್ತೆಂದು ನನಗೆ ಅನ್ನಿಸುತ್ತದೆ. ಆದರೆ ಪೈ ಅವರ 'ರಚನೆ' ಹೊಸಗನ್ನಡವಾಗಿಯೂ (ಭಾಷೆಯ ದೃಷ್ಟಿಯಿಂದ), ಹೇಗೆ ಓದುಗರ ಪಾಲಿಗೆ ಸುಗಮವಾಗದೆ ಹೋಗುತ್ತದೆಂಬುದನ್ನು ಗಮನಿಸಬಹುದು. ದ್ವಿತೀಯಾಕ್ಷರ ಪ್ರಾಸವನ್ನು ಬಿಟ್ಟರೂ ಅವರ ಕವಿತೆ, ಮತ್ತೆ ಹಳೆಯ 'ಬಂಧ'ಗಳನ್ನೇ ನೆನಪಿಗೆ ತರುವ ರೂಪಗಳಲ್ಲಿ ಮೈ ಪಡೆದುಕೊಂಡಂತೆ ತೋರುತ್ತದೆ. ಅವರಿಗೆ ಷಟ್ಪದಿ ಮತ್ತು ಸಾನೆಟ್ ಈ ರೂಪಗಳು ಯಾಕೆ ಹೆಚ್ಚು ಪ್ರಿಯವಾದುವೆಂಬುದನ್ನು ಈ ಹಿನ್ನೆಲೆಯಿಂದ ನೋಡಬಹುದು. ಅವರು ತಮ್ಮ ಸುತ್ತ ಕಾವ್ಯ ಭಾಷೆಯಲ್ಲಿ ನಡೆದ ಪ್ರಯೋಗಗಳನ್ನು ಗಮನಿಸಿ ಅವುಗಳಿಂದ ಯಾವ ಪ್ರೇರಣೆಯನ್ನೂ ಪಡೆಯಲಿಲ್ಲವೇನೋ. ಅವರ ಗುರುಗಳಾದ 'ಪಂಜೆ'ಯವರ ಪದ್ಯಗಳಲ್ಲಿರುವ ಆ ಉತ್ಸಾಹ ಹಾಗೂ ಹೊಸತನಕ್ಕಾಗಲಿ, ಶ್ರೀಯವರು ಮತ್ತಿತರ ಮುಖ್ಯ ಕವಿಗಳು ಕಾವ್ಯ ಭಾಷೆಗೆ ತಂದ ಜೀವಂತಿಕೆಗ್ನಾಗಲಿ, ಸುತ್ತಣ ಜನಭಾಷೆಯ ಜಾನಪದೀಯ ಪ್ರೇರಣೆಗಾಗಲಿ ಪೈ ಅವರು ಸ್ಪಂದಿಸಿದಂತೆ ತೋರುವುದಿಲ್ಲ. ಬಹುಶಃ ಈ ಕಾರಣದಿಂದಲೇ ಅವರ ಕಾವ್ಯದ ಭಾಷೆ ಪೆಡಸಾಗುತ್ತ, ಹಳೆಯ ಕಾಲದ ಕೋಟೆ ಕೊತ್ತಲಗಳಂತೆ ತಟಸ್ಥವಾಗಿ ನಿರತುಕೊಂಡ ಹಾಗೆ ತೋರುತ್ತದೆ.

ಹೀಗಾದದ್ದಕ್ಕೆ ಕಾರಣ, ಅವರ ಸಂಶೋಧನೆ ಅವರೊಳಗಿನ ಕವಿಯನ್ನು 'ಇಕ್ಕಿ ಮೆಟ್ಟಿ'ದ್ದೇ ಇರಬಹುದು. ಅವರು ಕಾವ್ಯ ಬರೆಯುವಾಗ ಕೂಡಾ, ತಾವು ಎತ್ತಿಕೊಂಡ ಕಾವ್ಯ ವಸ್ತುವಿನ ಬಗ್ಗೆ ಸಂಶೋಧನೆಯಲ್ಲಿ ತೊಡಗುತ್ತಾರೆ. 'ಗೋಲ್ಗೊಥಾ'ದಂಥ ವಸ್ತುವನ್ನು ಕುರಿತು ಬರೆಯುವ ಮುನ್ನ, ಅದಕ್ಕೆ ಸಂಬಂಧ

ಪಟ್ಟ ಸಂಗತಿಗಳನ್ನು ಆಮೂಲಾಗ್ರವಾಗಿ ಅಧ್ಯಯನಮಾಡಿ, ಅನಂತರ ಅದನ್ನು ಕಾವ್ಯವನ್ನಾಗಿ ನಿರ್ವಹಿಸುತ್ತಾರೆ. 'ವೈಶಾಖಿ'ಯನ್ನು ಬರೆದಾಗಲೂ ಅಷ್ಟೆ. ಇಡೀ ಬೌದ್ಧ ಸಾಹಿತ್ಯವನ್ನು ತಮ್ಮ ಅಧ್ಯಯನಕ್ಕೆ ಒಳಗುಪಡಿಸಿಕೊಳ್ಳುತ್ತಾರೆ. ಈ ಬಗೆಯ ವ್ಯುತ್ಪತ್ತಿಯನ್ನು, ಪೈ ಅವರು ತಮ್ಮ ಕಾವ್ಯಕ್ಕೆ ಹಿನ್ನೆಲೆಯನ್ನಾಗಿ ಇರಿಸಿಕೊಂಡದ್ದರಿಂದಲೇ, ಗೋಲ್ಗೊಥಾ ಹಾಗೂ ವೈಶಾಖಿ ಕೃತಿಗಳು ವಸ್ತುವಿನ ದೃಷ್ಟಿಯಿಂದ ಅತ್ಯಂತ ನಿರ್ದುಷ್ಟವೂ, ಅಧಿಕೃತವೂ ಆಗಿವೆ. ಜತೆಗೆ ಅವರು ತಮ್ಮ ಎಷ್ಟೋ ಕವಿತೆಗಳಿಗೆ ಕೊಡುವ ಅಡಿಟಿಪ್ಪಣಿಗಳೂ ಹಾಗೂ ದಾಖಲೆಗಳೂ, ಈ ಸಂಶೋಧಕ ಪ್ರವೃತ್ತಿಯ ಪರಿಣಾಮಗಳಾಗಿವೆ. ಅವರ ಕವಿತೆಗಳೂ ಸಂಶೋಧಕ ಲೇಖನಗಳಂತೆ ಅಡಿಟಿಪ್ಪಣಿಗಳಿಂದ ಕೂಡಿರುವುದು, ಪೈ ಅವರ ಕಾವ್ಯದ ಒಂದು ಲಕ್ಷಣವಾಗಿದೆ. ಒಂದೆಡೆ ಕಾವ್ಯ ಮತ್ತೊಂದೆಡೆ ಸಂಶೋಧನೆ ಈ ಎರಡನ್ನೂ ಹಿಡಿದು ನಡೆಸುವ ತಮ್ಮ ಕಷ್ಟವನ್ನು ಕುರಿತು, ಅವರೆ ತಮ್ಮ "ಸಾಹಿತ್ಯಜ್ಞರ ಆತ್ಮ ಕಥನ"ದಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ಕವಿತಾಮಾರ್ಗ ಬೇರೆ, ಸಂಶೋಧನದ ಮಾರ್ಗ ಬೇರೆ. ವಿಶಿಷ್ಟವಾದ ದೈವಕೃಪೆ ಉಳ್ಳವರು ಅವೆರಡನ್ನೂ ಕೈಕೊಂಡು ಹೊತ್ತನ್ನು ಹಿಡಿತದಿಂದ ಬಳಸಿದರೆ ಸವ್ಯಸಾಚಿಯಾಗಬಹುದಾದರೂ, ನನ್ನ ಬಗೆಗಾದರೊ ಅವು ಮುಳುವಾಗಿವೆ. ಹಾಲು ಕಾಸಲಿಕ್ಕೂ ಹುರುಳಿ ಹುರಿಯಲಿಕ್ಕೂ ಸರಿಯಾಗದೆ ಅವನ್ನು ಸವಡಿಸಲಿಕ್ಕೆ ಯತ್ನಿಸುವಲ್ಲಿ, ಒಂದು ಒರೆಯಲ್ಲಿ ಎರಡು ಕತ್ತಿಗಳನ್ನು ಸಿಕ್ಕಿಸಿಡಲಿಕ್ಕೆ ಪೇಚಾಡುತ್ತೇನೆ. ಅವಲ್ಲಿ ಒಂದೊ ಅಥವಾ ಎರಡೂ ಮುರಿಯದಿರವೆಂದು ಬಲ್ಲೆ. ಆದರೆ ಎಷ್ಟೋ ವರ್ಷಗಳಿಂದ ಅವೆರಡನ್ನು ಸಾಧಿಸುತ್ತಾ ಹೋದ ಮೇಲೆ ಇನ್ನು ಹೆಡ ಮೆಟ್ಟಲಾಗುವುದಿಲ್ಲ. ಕಾಲವೂ ತಪ್ಪಿತು. ಕಾಲೂ ತಪ್ಪಿತು. ಈಸಿದಷ್ಟು ಈಸುವುದು, ಮತ್ತೆ ಗಂಗಾ ದೇವಿ ತೇಲಿಸಿಕೊಂಡು ಹೋದಲ್ಲಿ..." (ದೀವಿಗೆ : ಭಾಗ. 2, ಕೃತಿಗಳು. ಕನ್ನಡ ಸಾಹಿತ್ಯಜ್ಞರ ಆತ್ಮಕಥನ. ಪು.4.5)

ಇದು ಪೈ ಅವರ ಇಕ್ಕಟ್ಟು. ನಿರಂತರ ಸಂಶೋಧನೆ, ಮತ್ತೆ ಅನೇಕ ಭಾಷೆಗಳ ಮೇಲೆ ಪ್ರಭುತ್ವವನ್ನು ಸಾಧಿಸಿಕೊಳ್ಳುವ ಪ್ರಯತ್ನ—ಇತ್ಯಾದಿಗಳಿಂದಾಗಿ, ಅವರ ಮನಸ್ಸನ್ನು ಕವಿತೆಯೊಂದರ ಮೇಲೇ ಕಾವು ಕೊಡುವುದು ಸಾಧ್ಯವಾಗಲಿಲ್ಲ. ಅವರ ಸಂಶೋಧನೆ ಹಾಗೂ ಇತರ ಸೃಜನಶೀಲ ಬರವಣಿಗೆಗಳನ್ನು ಒಟ್ಟಿಗೆ ಇರಿಸಿಕೊಂಡು ನೋಡಿದರೆ, ಅವರ ಸಾಧನೆ ಬಹು ದೊಡ್ಡದು; ಮತ್ತು ಅದರೊಳಗಿನಿಂದ ಮೂಡಿನಿಲ್ಲುವ ವ್ಯಕ್ತಿತ್ವ ಇನ್ನೂ ದೊಡ್ಡದು, ಹಾಗೂ ಗೌರವಾಸ್ಪದವಾದದ್ದು.*

---

* ತಾ. 23-3-83 ರಂದು ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ 'ಗೋವಿಂದ ಪೈ ಶತಮಾನೋತ್ಸವ'ದ ಅಂಗವಾಗಿ ಏರ್ಪಡಿಸಿದ್ದ ವಿಚಾರ ಸಂಕಿರಣದ ಗೋಷ್ಠಿಯೊಂದರಲ್ಲಿ ಮಾಡಿದ 'ಅಧ್ಯಕ್ಷ ಭಾಷಣ' ದವಿಸ್ತೃತರೂಪ.

ವೈಶಾಖಿದಲ್ಲಿನ ಕೇಂದ್ರ ಪ್ರಜ್ಞೆ ಇತ್ಯಾದಿ......

-ವೇಣುಗೋಪಾಲ ಸೊರಬ

‘ವೈಶಾಖಿ’ ಕಾದಂಬರಿಯ ಕೇಂದ್ರ ಪಾತ್ರ ಲಕ್ಕ, ಶೋಷಣೆಗೆ ಒಳಗಾದ ಒಬ್ಬ ಹರಿಜನ, ಆತನ ಅಣ್ಣ ಗೆಜ್ಜುಗಣ್ಣನಿಗೆ ತನ್ನ ತಮ್ಮ ವಿದ್ಯಾಭ್ಯಾಸಮಾಡಿ ಮುಂದೆ ಬರಬೇಕು ಎಂಬ ಮಹತ್ವಾಕಾಂಕ್ಷೆ. ಆದರೆ ಒಂದುದಿನ ಮಳೆಬಂದಾಗ, ಲಕ್ಕ ಸಿವಾಚಾರದ ಹುಡುಗಿ ಗಂಗಿಯನ್ನೂ ತನ್ನ ಗೊರಗಿನಲ್ಲಿಯೇ ಕರೆದುಕೊಂಡು ಶಾಲೆಗೆ ಹೋಗುತ್ತಾನೆ. ಶಾಲೆಯ ಉಪಾಧ್ಯಾಯನ ಕಣ್ಣಿಗೆ ಇದು ಬಿದ್ದು, ಆತ ಲಕ್ಕನ ತಂದೆಯನ್ನು ಕರೆಸಿ, ಲಕ್ಕನನ್ನು ಶಾಲೆಗೆ ಕಳಿಸಬಾರದೆಂದು ಆಜ್ಞೆ ಮಾಡುತ್ತಾನೆ. ಲಕ್ಕನಂತಹ ಹುಡುಗರಿಂದ ವರ್ಣಸಂಕರ ಉಂಟಾಗುತ್ತದೆ ಎನ್ನುವುದೇ ಅವನ ಮುಖ್ಯ ಆರೋಪ. ಇದರಿಂದ, ಮತ್ತೊಮ್ಮೆ ಲಕ್ಕ ಜೀತಕ್ಕೆ ಪಕ್ಕಾಗುತ್ತಾನೆ. ಮುಂದೆ ಗಜ್ಜುಗಣ್ಣ ಮಾಲಿಂಗಿ ಮಡುವಿನಲ್ಲಿ ಮುಳುಗಿ ಸತ್ತುಹೋಗುತ್ತಾನೆ. ಅವನ ಮದುವೆಗೆಂದು ಸಾಲಮಾಡಿದ ದುಡ್ಡಿನಲ್ಲಿ, ಬುಡಮ್ಮನಿಗೆ ಹಣಕೊಟ್ಟು ಲಕ್ಕನನ್ನು ಜೀತದಿಂದ ಬಿಡಿಸುವ ಕೆಲಸವೇನೋ ಆಗುತ್ತದೆ. ಆದರೆ ಸಾಲ ಹಿಂತಿರುಗಿಸುವಲ್ಲಿ, ಹಣ ಕಡಿಮೆ ಬೀಳುತ್ತದೆ, ಕೃಷ್ಣಶಾಸ್ತ್ರಿಯ ತೋಟಕ್ಕೆ ಲಕ್ಕ ಕೆಲಸಕ್ಕೆ ಹೋದಾಗ, ಶಾಸ್ತ್ರಿ ಲಕ್ಕನಿಗೆ ಐವತ್ತು ರೂಪಾಯಿ ಸಾಲ ಕೊಟ್ಟಿದ್ದರಿಂದ, ಮದುವೆಯ ಸಾಲವೇನೋ ತೀರುತ್ತದೆ. ಆದರೆ ವರ್ಷಾನುಗಟ್ಟಲೆ ದುಡಿದರೂ ಶಾಸ್ತ್ರಿಯ ಸಾಲ ತೀರದೆ, (ಶಾಸ್ತ್ರಿ ಲಕ್ಕ ಮಾಡಿದ ಕೆಲಸಕ್ಕೆ ಕೂಲಿಯನ್ನೂ ಆಗಾಗಲೇ ಕೊಡುತ್ತಾನೆ) ಲಕ್ಕ ಒಂದು ರೀತಿಯಲ್ಲಿ ಶಾಸ್ತ್ರಿಯ ಜೀತದ ಆಳೇ ಆಗಿ ದುಡಿಯಬೇಕಾಗುತ್ತದೆ. ಲಕ್ಕನಿಗೆ ತಾನು ಜೀತಗಾರನಾಗಿ ದುಡಿಯಬೇಕಾಗಿದೆಯಲ್ಲ ಎಂಬ ಹೇವರಿಕೆ ಇದ್ದರೂ, ಅದನ್ನು ಪ್ರತಿಭಟಿಸಬೇಕೆಂಬ ನೆರಳೂ ಅವನಲ್ಲಿ ಸುಳಿಯುವುದಿಲ್ಲ. ಹಾಗೆ ನೋಡಿದರೆ ವ್ಯವಸ್ಥೆ ಮತ್ತು ಅದರ ಕ್ರೌರ್ಯದ ಬಗ್ಗೆ ಲಕ್ಕನಿಗೆ ಏನೂ ಅನ್ನಿಸುವುದೇ ಇಲ್ಲ.

‘ವೈಶಾಖಿ’ ಪ್ರಕಟವಾಗಿರುವುದು ಇಪ್ಪತ್ತೊಂದನೆಯ ಶತಮಾನದ ಹೊಸ್ತಿಲಿನಲ್ಲಿ. ಇದು ಹೇಳಿ ಕೇಳಿ ದಲಿತರು ರಾಜಕೀಯವಾಗಿ ತಮ್ಮ ಪ್ರಜ್ಞೆಯನ್ನು ಪ್ರಖರಗೊಳಿಸುತ್ತಿರುವ ಕಾಲ. ಇಂತಹ ಕಾಲದಲ್ಲಿ ಹೀಗೆ ರಾಜಕೀಯವಾಗಿ ಸಂಪೂರ್ಣವಾಗಿ ಜಡ್ಡುಗಟ್ಟಿ ಹೋಗಿರುವ ಲಕ್ಕನ ಕತೆಯನ್ನು ಹೇಳುವುದರಲ್ಲಿ ಚದುರಂಗರ ಆಶಯವೇನು ? ಎಂದು ಪ್ರಶ್ನಿಸಬೇಕಾಗುತ್ತದೆ. ಕಾದಂಬರಿಯ

ಆಶಯ ಕೇವಲ ದಲಿತನೊಬ್ಬನ ಮನೋವ್ಯಾಪಾರ, ದಲಿತ ಜಗತ್ತಿನ ವ್ಯಾಪಾರಗಳನ್ನು ಚಿತ್ರಿಸುವುದೇ ಆಗಿದ್ದಲ್ಲಿ, ರುಕ್ಮಿಣಿಯನ್ನು ಕಾದಂಬರಿಯ ನಾಯಕಿಯ ಹಾಗೆ ಚಿತ್ರಿಸುವುದರಲ್ಲಿ, ಇಡೀ ಕಾದಂಬರಿಯ ನಡೆಗೆ ಕುಂಠಿತವಾಗುವ ರೀತಿಯಲ್ಲಿ, ಅವಳ ಪ್ರಜ್ಞೆಯ ಮೂಲಕ, ಕತೆ ಹೇಳಿಸುವುದರಲ್ಲಿ ಇರಬಹುದಾದ ಉದ್ದೇಶವಾದರೂ ಏನು ?

ನಿಜ, ಕಾದಂಬರಿಯ ಆರಂಭದಲ್ಲೇ ಪಂಚಾಯಿತಿ ಹೇಗೆ ಮೇಲಿನವರ ಕಡೆಗೇ ತೀರ್ಪು ನೀಡುತ್ತದೆ ಎಂಬ ಪ್ರಸ್ತಾಪ ಬರುತ್ತದೆ. ಆದರೆ ಹೀಗೆ ಯೋಚನೆ ಮಾಡಬಲ್ಲ ಲಕ್ಕ, ತನ್ನ ಹಿಂದಿನ ಅನುಭವಗಳ ಬಗ್ಗೆ ಸುದೀರ್ಘವಾಗಿ ನೆನಪಿಸಿಕೊಳ್ಳಬಲ್ಲ (ಚಿಂತಿಸಬಲ್ಲ-ಅಲ್ಲ) ಲಕ್ಕ-ಹೀಗೆ ಅನ್ಯಾಯವಾಗುತ್ತಿರುವುದರ ಬಗ್ಗೆ ಸಂಗತವಾಗುವ ರೀತಿಯಲ್ಲಿ ಯೋಚಿಸುವುದಕ್ಕೆ ಪುರಾವೆಯೇ ಇಲ್ಲ. ಬದಲಾಗಿ ತನಗೆ ಹೇಳಿದ ಕೆಲಸವನ್ನೆಲ್ಲ ಮಾಡಿಕೊಂಡು ಹೋಗುತ್ತಾನೆ. ತನ್ನ ಅಣ್ಣ ಗೆಜ್ಜುಗಣ್ಣ ಸಾಯಬೇಕಾಗಿ ಬಂದ ಸಂದರ್ಭವನ್ನು ಕುರಿತ ನೆನಪಾಗಲೀ, ತನ್ನ ದೊಡ್ಡಪ್ಪನ ಮಗ ಪೀಟರ್ (ಮತಾಂತರಗೊಳ್ಳುವ ಮೊದಲಿನ ಪುಟ್ಟಾರಿ) ಅನುಭವಿಸಬೇಕಾಗಿ ಬಂದ ಅನ್ಯಾಯವನ್ನು ಕುರಿತ ನೆನಪಾಗಲೀ, ವೃಥಾ ಆರೋಪಕ್ಕೆ ಒಳಗಾಗಿ ದೊಡ್ಡ ಮೊತ್ತದ ದಂಡ ಕೊಡಬೇಕಾಗಿಬಂದ ಟಗರೂರನ ನೆನಪಾಗಲೀ, ಲಕ್ಕನನ್ನು ಯಾವುದೇ ವಿಧದ ನಿರ್ಧಾರಗಳಿಗೆ ತಳ್ಳುವುದಿಲ್ಲ. ಅಷ್ಟೇ ಅಲ್ಲ, ತನ್ನ ತಂಗಿ ಸಿವುನಿಯೇ ಗಂಡನ ಬಗ್ಗೆ ರೇಜಿಗೆ ಪಟ್ಟು ಹಿಂದಿರುಗಿ ಬಂದಾಗ, ಅವಳಿಗೆ ಬೇರೆ ಒಬ್ಬನನ್ನು ಗಂಡನನ್ನಾಗಿ ಮಾಡುವ ಆಲೋಚನೆ ಅವನಿಗೆ ಬರುತ್ತದೆಯೇ ಹೊರತು, ಲಕ್ಕ ಅದಕ್ಕಿಂತ ಮುಂದೆ ಹೋಗಿ, ತನ್ನ 'ಬಾವ'ನನ್ನೇ ವಿಚಾರಿಸಿಕೊಳ್ಳುವ ಗೋಜಿಗೆ ಹೋಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಸುಮಾರು ನಲವತ್ತು-ನಲವತ್ತೈದು ವರ್ಷಗಳ ಹಿಂದೆಯೇ ಮುಲ್ಕ್‌ರಾಜ್ ಆನಂದ್ ಬರೆದ 'ಅಸ್ಪೃಶ್ಯ' ಕಾದಂಬರಿಯ ಬಾಖಾನನ್ನು ಇಲ್ಲಿ ಪರಿಗಣಿಸಬಹುದು. ಲಕ್ಕನ ಹಾಗೆ ಬಾಖಾನಿಗೂ ವೃದ್ಧ ತಂದೆ, ಒಬ್ಬ ತಂಗಿ ಎಲ್ಲ ಇದ್ದಾರೆ. ಆದರೂ ಬಾಖಾನಿಗೆ ಲಕ್ಕನಿಗಾದಷ್ಟು ವಯಸ್ಸಾಗಿಲ್ಲ. ಆದರೂ ಮುಲ್ಕ್‌ರಾಜ್ ಆನಂದ್ ಬಾಖಾನಿಗೆ ತನ್ನದೇ ಆದ ಒಂದು ವ್ಯಕ್ತಿತ್ವವನ್ನು ರೂಪಿಸಿದ್ದಾರೆ. ಲಕ್ಕ ಮಾತ್ರ ಅಂತಹ ವ್ಯಕ್ತಿತ್ವದ ನೆರಳೂ ಇಲ್ಲದೆ ನವೆದುಹೋಗಿದ್ದಾನೆ. ನಿಜ, ಲಕ್ಕನ ಪಾತ್ರವನ್ನೂ ಬಾಖಾನ ಪಾತ್ರದಂತೆಯೇ ಪ್ರಜ್ಞಾ ಪ್ರವಾಹ ಶೈಲಿಯಲ್ಲಿ ರಚಿಸಲಾಗಿದೆ. ಆದರೆ ಲಕ್ಕ ತನ್ನ ಅಸ್ತಿತ್ವದ ಬಗ್ಗೆ ಯೋಚಿಸುವ ಗೋಜಿಗೇ ಹೋಗುವುದಿಲ್ಲ.

ಬಹುಶಃ ಲಕ್ಕನಿಗೆ ತೀವ್ರವಾಗಿ ತನ್ನ ಜಾತಿಪ್ರಜ್ಞೆ (ಇದೇತಾನೆ ಇವೊತ್ತು ರಾಜಕೀಯ ಅಸ್ತ್ರವಾಗಿ ಬಳಸಲ್ಪಡುತ್ತಿರುವುದು?) ಕೆಲಸ ಮಾಡುವುದು, ಪೋಲೀಸ್ ಇನ್ಸ್‌ಪೆಕ್ಟರ್ ಗೂಳಣ್ಣ ತಮ್ಮ ಹಳ್ಳಿಗೆ ಬಂದಾಗ ಮಾತ್ರ. ಶಾನುಭೋಗ,

ಲಕ್ಕನಿಗೆ ಆ ಇನ್ಸ್‌ಪೆಕ್ಟರ್ 'ಎಡಗೈ ಮಾದಿಗ' ಅಂತ ಹೇಳಿದಾಗ, ತಮ್ಮವನೊಬ್ಬ ನಡೆಸುವ ಅಧಿಕಾರ ಲಕ್ಕನ ಮನಸ್ಸಿನ ಮೇಲೆ ಪರಿಣಾಮ ಉಂಟುಮಾಡುತ್ತದೆ. ಆತ ಇನ್ಸ್‌ಪೆಕ್ಟರ್‌ನನ್ನು ತಮ್ಮ ಕೇರಿಗೆ ಬರಬೇಕು ಎಂದು ಆಹ್ವಾನಿಸುತ್ತಾನೆ. ಆದರೆ ಇನ್ಸ್‌ಪೆಕ್ಟರ್ ತಾನು ತುಮಕೂರಿನಲ್ಲಿದ್ದಾಗ, ಹೇಗೆ ತನ್ನ ಮಗನನ್ನು ಒಮ್ಮೆ ಹಳ್ಳಿಯೊಂದರ ಹರಿಜನ ಕೇರಿಗೆ ಕರೆದುಕೊಂಡು ಹೋಗಬೇಕಾಯಿತೆನ್ನುವುದನ್ನು ತಿಳಿಸಿ, ಅದರ ಪರಿಣಾಮವಾಗಿ, ಆತ ಬಾಯಿಲೆ ಬಿದ್ದುದನ್ನೂ ಹೇಳಿ, ಹರಿಜನ ಕೇರಿಗೆ ಬರಲು ನಿರಾಕರಿಸುತ್ತಾನೆ. ಬಹುಶಃ ಈ ಅನುಭವ ಲಕ್ಕನಲ್ಲಿ ಇದ್ದ ಅಲ್ಪ ಸ್ವಲ್ಪ ಜಾತಿಪ್ರಜ್ಞೆ ಮತ್ತು ಆ ಬಗೆಗಿನ ಅಭಿಮಾನ ಎಲ್ಲವನ್ನೂ ಗುಡಿಸಿಹಾಕಿಬಿಡುತ್ತದೆಯೇನೋ.

ಇನ್ನು ಕಾದಂಬರಿಯಲ್ಲಿ ಬರುವ ಕೃಷ್ಣಶಾಸ್ತ್ರಿ-ರುಕ್ಮಿಣಿ ಮತ್ತು ರುಕ್ಮಿಣಿ-ಲಕ್ಕ ಇವರ ಸಂಭೋಗದ ವಿವರಗಳು ಕಾದಂಬರಿಯನ್ನು ಕೇವಲ ರೋಚಕವಾಗಿ ಮಾಡಲೆಂದೇ ಗಿಡಿದವುಗಳಾಗಿವೆ, ಎಂಬ ಅಂಶದತ್ತ ಗಮನಹರಿಸಬಹುದು. ಇಲ್ಲಿ ಕಾದಂಬರಿಕಾರರಿಗೆ ಲಕ್ಕನ ಬಗ್ಗೆ ಯಾವ ಬಗೆಯ ಸಹಾನುಭೂತಿಯೂ ಇಲ್ಲ, ಲಕ್ಷ್ಯವೂ ಇಲ್ಲ. ಹಾಗಲ್ಲದಿದ್ದರೆ, ಕೃಷ್ಣಶಾಸ್ತ್ರಿಯ ಮನೋವ್ಯಾಪಾರವನ್ನು–ತಮ್ಮ ಈ ಆಕ್ರಮಣದ ವಿಷಯದಲ್ಲಿ ತೊಡಗಿಸಿದಷ್ಟೇ ರುಕ್ಮಿಣಿಯ ಮನೋವ್ಯಾಪಾರವನ್ನೂ ಚಿತ್ರಿಸುವ ಕಾದಂಬರಿಕಾರರು, ಲಕ್ಕನ ಮನೋವ್ಯಾಪಾರ ಚಿತ್ರಣಕ್ಕೆ ಯಾಕೆ ತೊಡಗುವುದಿಲ್ಲ. (ಈ ತನ್ನ ಮೇಲೆ ನಡೆದ ಆಕ್ರಮಣಕ್ಕೆ ಸಂಬಂಧಿಸಿದ ಹಾಗೆ)? ಕೃಷ್ಣಶಾಸ್ತ್ರಿ ಪಾತ್ರವಂತೂ ಕಾದಂಬರಿಯ ಕ್ರಿಯೈಕ್ಯತೆಯ ದೃಷ್ಟಿಯಿಂದ ಹೊರಗೇ ನಿಲ್ಲುತ್ತದೆ. ಕೃಷ್ಣಶಾಸ್ತ್ರಿ ಸೊಸೆಯ ಮೇಲೆ ನಡೆಸಿದ ಆಕ್ರಮಣಕ್ಕೆ ಯಾವುದೇ ನೆಲಗಟ್ಟೇ ಇಲ್ಲ. ಹಾಗಿದ್ದೂ ಕೃಷ್ಣಶಾಸ್ತ್ರಿ ಪ್ರಾಯಶ್ಚಿತ್ತ ಮಾಡಿಕೊಳ್ಳುವುದರ ಸುದೀರ್ಘವಿವರವನ್ನು ಕೊಡುವ ಕಾದಂಬರಿಕಾರರು ಲಕ್ಕ ತನ್ನ ಮತ್ತು ರುಕ್ಮಿಣಿಯ ಪ್ರಾಯಶ್ಚಿತ್ತದ ಬಗ್ಗೆ ಯೋಚಿಸದೆಯೇ ಇರುವಹಾಗೆ ಮಾಡಿದ್ದಾರೆ. [ಇಡೀ ಕಾದಂಬರಿಯಲ್ಲಿ ನೈತಿಕಪ್ರಜ್ಞೆ (ಕಾಮಕ್ಕೆ ಸಂಬಂಧಿಸಿದಂತೆ) ಎಚ್ಚರವಾಗುವುದು ಪುಟ್ಟಾರಿ ಮತ್ತು ಕೃಷ್ಣಶಾಸ್ತ್ರಿ–ಇಬ್ಬರಲ್ಲೇ. ಆದರೆ ಪುಟ್ಟಾರಿಯಲ್ಲಿ ಅದು ಎಷ್ಟು ಗಟ್ಟಿಯಾಗಿ ಉಂಟಾಗುತ್ತದೆಯೋ, ಕೃಷ್ಣಶಾಸ್ತ್ರಿಯಲ್ಲಿ ಅದು ಅಷ್ಟೇ ಮಟ್ಟಿಗೆ ಪೊಳ್ಳಾಗುತ್ತದೆ.]ರುಕ್ಮಿಣಿ ತನ್ನ ಮೇಲೆ ಆಕ್ರಮಣ ನಡೆಸಿದಮೇಲೆ, ಲಕ್ಕ ಸಿವಾಚಾರದ ಗಂಗಿ ತಾನಿನ್ನೂ ಹತ್ತುವರ್ಷದವನಿದ್ದಾಗ, ತನ್ನ ಮೇಲೆ ಬಿದ್ದುದನ್ನು ನೆನಪಿಸಿಕೊಳ್ಳುತ್ತಾನೆ ಅಷ್ಟೇ. ಆದರೆ ತನ್ನ ತಂಗಿ ಸಿವುನಿ ಕೇಶವಯ್ಯನ ಜತೆಗೆ ಮಲಗಿದುದನ್ನು ಕಂಡು ಕ್ರೋಧಗೊಳ್ಳುವ ಲಕ್ಕ, ತನ್ನ ಮತ್ತು ರುಕ್ಮಿಣಿಯ ಸಂಬಂಧದ ಬಗ್ಗೆ ಏನನ್ನೂ ತಾರ್ಕಿಕವಾಗಿ ಯೋಚಿಸಲಾರದಷ್ಟು ಮುಗ್ಧನೇ ? (ಆದರೆ ರುಕ್ಮಿಣಿ

ಯನ್ನ ಅವಳ ಅಕ್ಕ ಪಾರ್ವತಿ ಮನೆಯಲ್ಲಿ ಬಿಟ್ಟ ಕೂಡಲೇ, ಊರಿಗೆ ವಾಪಸ್ಸು ಹೊರಟುಬಿಡಬೇಕೆನ್ನುವ ಭಾವುಕ ನಡವಳಿಕೆ ಅವನ ಮುಗ್ಧತೆಯನ್ನೇ ಹೇಳುತ್ತದೆ.)

ರುಕ್ಮಿಣಿಯ ಮೇಲೆ ಕೃಷ್ಣಶಾಸ್ತ್ರಿಯ ಆಕ್ರಮಣ, ಅವಳಿಗೆ ಗೊತ್ತಿಲ್ಲದಂತೆ ಅಚಾನಕವಾಗಿ ನಡೆಯುತ್ತದೆ. ಆ ಅನುಭವದಿಂದ ಕೆರಳಿದ ರುಕ್ಮಿಣಿ ಲಕ್ಕನಮೇಲೆ ಆಕ್ರಮಣ ಮಾಡುವುದರಲ್ಲಿ ತಥ್ಯವಿದೆ ಎಂದು ಭಾವಿಸುವುದು ಸಹಜವೇ. ಆದರೆ ಈ ಮೂಲಕ ಕೃಷ್ಣಶಾಸ್ತ್ರಿ ಮಾಡಿದ ಅನ್ಯಾಯವನ್ನು ಲಕ್ಕನ ತಲೆಗೆ ಕಟ್ಟುವುದರಲ್ಲಿ ಕಾದಂಬರಿಕಾರರು ಯಶಸ್ವಿಯಾಗಿದ್ದಾರೆ. ಲಕ್ಕ ಮತ್ತು ರುಕ್ಮಿಣಿಯರ ನಡುವೆ ಅನೀತಿ ಸಂಬಂಧವಿದೆ ಎಂಬ ವಿಷಯ ಮೊದಲು ಹೊರಬರುವುದು ಲಕ್ಷ್ಮಮ್ಮನಿಂದ. ಲಕ್ಷ್ಮಮ್ಮನಂತಹ ಹರಕುಬಾಯಿಯ ಹೆಂಗಸಿಗೆ ಒಂದು ವೇಳೆ ಕೃಷ್ಣಶಾಸ್ತ್ರಿ ನಡೆಸಿದ ಆಕ್ರಮಣದಿಂದ ಮಾತ್ರವೇ ರುಕ್ಮಿಣಿ ಬಸಿರಾಗಿದ್ದರೂ, ಆ ಅನ್ಯಾಯವನ್ನು ಲಕ್ಕನ ಮಡಿಲಿಗೆ ತಲಪಿಸುವುದು ಕಷ್ಟವಾಗುತ್ತಿರಲಿಲ್ಲ. ಅವಳ ಆರೋಪಣೆಗೆ ಮುಖ್ಯ ಸಾಕ್ಷಿ ಅಂದರೆ, ರುಕ್ಮಿಣಿ ಲಕ್ಕನನ್ನು ಔಷಧಿ ತರುವುದಕ್ಕೆ ಹೇಳಿದಳು ಎನ್ನುವುದು. ಅಂದರೆ ರುಕ್ಮಿಣಿ ಲಕ್ಕನಿಂದಲೇ ಬಸುರಾಗಿದ್ದಾಳೆ ಎಂಬ ನಿರ್ಣಯಕ್ಕೆ ಲಕ್ಷ್ಮಮ್ಮ ಬರುವುದಕ್ಕೆ ಲಕ್ಕ ಮನೆಯಲ್ಲಿ ಆಳು ಮಗನಾಗಿ ದುಡಿಯುತ್ತಿದ್ದ ಎಂಬ ಮಾಹಿತಿ ಯೊಂದೇ ಆಧಾರ. ಪರಿಣಾಮವಾಗಿ ತನ್ನ ತಪ್ಪು ಗೊತ್ತಿದ್ದೂ ಸುಮ್ಮನಿರುವ ಕೃಷ್ಣಶಾಸ್ತ್ರಿಯ ಕುಯುಕ್ತಿಗೆ ಇದು ಸಹಕಾರಿಯಾಗುತ್ತದೆ. ಅಲ್ಲದೆ, ಲಕ್ಕ ಔಷಧಿ ಯನ್ನು ತರುವ ವೇಳೆಗೆ ಊರೆಲ್ಲ, ಲಕ್ಕನಿಂದ ರುಕ್ಮಿಣಿ ಬಸುರಾಗಿದ್ದಾಳೆ ಎಂಬ ಸುದ್ದಿ ಢಾಣಾಡಂಗುರವಾದಾಗ, ಕೃಷ್ಣಶಾಸ್ತ್ರಿ ಆಗಲೇ ಯಾಕೆ ತನ್ನ ತಪ್ಪನ್ನು ಎಲ್ಲರ ಎದುರಿಗೂ ಒಪ್ಪಿಕೊಳ್ಳಬಾರದಾಗಿತ್ತು ? ಅಲ್ಲಿಗೂ ಲಕ್ಕ ಮಾನಸಿಕವಾಗಿ ಅನುಭವಿಸುತ್ತಿದ್ದ ಶಿಕ್ಷೆ ಅಲ್ಪಸ್ವಲ್ಪವೇನಲ್ಲ.

ಹೀಗೆ ಹೇಳಿದ್ದರ ಉದ್ದೇಶ ಕಥೆ ಈಗ ನಡೆದ ರೀತಿಯಲ್ಲಿ ನಡೆದಿರಲು ಸಾಧ್ಯ ವಿಲ್ಲ ಎಂದಲ್ಲ. ಆದರೆ ಈಗ ನಡೆದಿರುವಂತೆ ಚಿತ್ರಿಸಿರುವುದರ ಮುಖ್ಯ ಉದ್ದೇಶ– ರುಕ್ಮಿಣಿಯ ಮನಸ್ಸಿನಲ್ಲಿ ಉಂಟಾಗುವ–ತಾನು ಬಸುರಾದದ್ದು ಕೃಷ್ಣಶಾಸ್ತ್ರಿ ಯಿಂದಲೋ ? ಲಕ್ಕನಿಂದಲೋ ? – ಎಂಬ ಪ್ರಶ್ನೆಯನ್ನು ನಿಜ ಮಾಡಿಸುವುದಕ್ಕೆ. ಆ ಮೂಲಕ ಓದುಗರ ಆಸಕ್ತಿಯನ್ನು ಕೆರಳಿಸುವುದಕ್ಕೆ ಅಷ್ಟೇ. ಇಲ್ಲದಿದ್ದರೂ ಮೇಲೆ ಹೇಳಿದಂತೆ, ಲಕ್ಕ ಆರೋಪ ಹೊರುವುದು, ಶಿಕ್ಷೆ ಅನುಭವಿಸುವುದೂ ನಡೆಯುತ್ತಲೇ ಇತ್ತು.

ಇಲ್ಲಿಯೇ ಈ ಸಮಸ್ಯೆಯ ಇನ್ನೊಂದು ಮುಖವನ್ನೂ ನೋಡಬಹುದು : ಕಾದಂಬರಿಯ ನಿರೂಪಣೆಯಲ್ಲಿ ರುಕ್ಮಿಣಿಗೆ ಕೊಟ್ಟಿರುವ ಎಲ್ಲಿಲ್ಲದ ಪ್ರಾಶಸ್ತ್ಯ. ಹೀಗೆ ರುಕ್ಮಿಣಿಯ ಮೂಲಕವೂ ಕತೆ ಹೇಳಿಸುವುದರಿಂದ, ಕಾದಂಬರಿಯ ಒಂದು ದೊಡ್ಡ ದೋಷ ಉಂಟಾಗಿದೆ. ಅದೆಂದರೆ ದಲಿತನಾದ ಲಕ್ಕನಿಗೆ ರುಕ್ಮಿಣಿಯ

ಶಿಷ್ಟಪ್ರಜ್ಞೆಯನ್ನು ಒಳಗೊಳ್ಳಲು ಸಾಧ್ಯವಾಗಿಲ್ಲ ಎನ್ನುವುದು. ಸಂಗತಿಗಳು ಈಗ ಇರುವ ಹಾಗೇ ಇದ್ದು ಲಕ್ಕನ ಪ್ರಜ್ಞೆಯ ಮೂಲಕವೇ ಇಡೀ ನಿರೂಪಣೆಯನ್ನು ನಿರ್ವಹಿಸಿದ್ದಲ್ಲಿ, ಕಾದಂಬರಿಯಲ್ಲಿ ಹೆಚ್ಚಿನ ಕ್ರಿಯೈಕ್ಯತೆ ಉಂಟಾಗುತ್ತಿದ್ದುದರ ಜತೆಗೆ, ಇಡೀ ಶಿಷ್ಟಸಮಾಜದ ಪಾತ್ರಗಳನ್ನೂ ಒಂದೇ ಬಗೆಯಲ್ಲಿ ನಡೆಸಿಕೊಳ್ಳುವುದು, ಕಾದಂಬರಿಕಾರರಿಗೆ ಸಾಧ್ಯವಾಗುತ್ತಿತ್ತು. ಆದರೆ ಕಾದಂಬರಿಕಾರರಿಗೆ ರುಕ್ಮಿಣಿ-ಕೃಷ್ಣಶಾಸ್ತ್ರಿ ಸಂಬಂಧವನ್ನು ಲಕ್ಕನ ಪಾತ್ರದ ಮೂಲಕ ಚಿತ್ರಿಸುವುದು ಕಷ್ಟವೆನಿಸಿರಬಹುದೇನೋ. ಆದರೆ ನಿಜವಾದ ಕಲಾವಿದನಿಗೆ ಇದು ಕಷ್ಟವಾಗಬಾರದು. ಅನೇಕ ವಿಷಯಗಳನ್ನು ನಿರಾಯಾಸವಾಗಿ ತಿಳಿಯುವ (ಹೆಣದ ಹೆಬ್ಬೆಟ್ಟಿನ ಗುರುತು ಒತ್ತಿಸಿಕೊಳ್ಳುವ ಪ್ರಸಂಗ ಇ.) ಲಕ್ಕನಿಗೆ ರುಕ್ಮಿಣಿ-ಕೃಷ್ಣಶಾಸ್ತ್ರಿ ಸಂಬಂಧ ತಿಳಿದುಕೊಳ್ಳುವುದು ಅಷ್ಟೇನೂ ಕಷ್ಟವಾಗುತ್ತಿರಲಿಲ್ಲ ಎನ್ನಬಹುದು.

ಲಕ್ಕನ ಪಾತ್ರವೊಂದನ್ನೇ ಕೇಂದ್ರಪ್ರಜ್ಞೆಯಾಗಿಟ್ಟುಕೊಂಡಿರುವ ಕಾದಂಬರಿಕಾರರು, ರುಕ್ಮಿಣಿಯ ಪಾತ್ರಕ್ಕೆ ಕೊಟ್ಟಿರುವ ವಿನಾಯಿತಿ, ಮೇಲೆ ಹೇಳಿದಂತೆ ದೋಷಕ್ಕೆ ಎಡೆಕೊಟ್ಟಿದೆ. ಇದರಿಂದ ಕಾದಂಬರಿ ಓದುವವರಿಗೂ, ಭಾಷೆ ತೊಡಕಾಯಿತು ಎಂಬ ಆರೋಪ ಹೊರಿಸಲು ಅವಕಾಶವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ, ದಲಿತ ಪ್ರಜ್ಞೆಯ ಎಚ್ಚರದಲ್ಲಿ ಶಿಷ್ಟಜನರ ನಡವಳಿಕೆ ಹೇಗೆ ನಿರ್ಣೀತವಾಗುತ್ತವೆ ಎಂಬುದನ್ನು ತಿಳಿಯುವ ಮಹತ್ತರ ಅವಕಾಶ ತಪ್ಪಿಹೋಗಿದೆ.

ಇಷ್ಟು ಹೇಳಿದ ಮೇಲೂ, ಮೇಲಿನ ವಾದವನ್ನು ತಳ್ಳಿಹಾಕುವಂತಹ ಬೆಳವಣಿಗೆ ಕಾದಂಬರಿಯಲ್ಲಿ ಇದ್ದೇ ಇದೆ. ಆದರೆ ಅದು ಎಷ್ಟರಮಟ್ಟಿಗೆ ಅರ್ಥಪೂರ್ಣವಾಗುತ್ತದೆ ಎನ್ನುವುದರ ಮೇಲೆ ಇಡೀ ವಾದದ ಸಾರ್ಥಕತೆ ನಿಲ್ಲುತ್ತದೆ. ಇಲ್ಲಿ ಹೇಳಬೇಕಾದದ್ದು, ಲಕ್ಕ ಮತ್ತೊಮ್ಮೆ ಎಲ್ಲಿ ತಾನು ಪಂಚಾಯಿತಿ ಮುಂದೆ ನಿಂತು ಛಡಿಯೇಟು ತಿನ್ನಬೇಕಾಗುತ್ತದೆಯೋ ಎಂದು ಯೋಚನೆ ಮಾಡುವುದು. ಇದು ಕಾದಂಬರಿಯ ಕೊನೆಯ ಘಟ್ಟದಲ್ಲಿ ಬರುವಂತದ್ದು. ಲಕ್ಕ ಹೀಗೆ ಯೋಚಿಸುವುದಕ್ಕೆ ಕಾರಣ, ನಂಜೇಗೌಡನ ಹೆಂಡತಿಯ ಶವವನ್ನು ಕೆಲವು ಆಭರಣಗಳೊಂದಿಗೆ ಹುಗಿದಾಗ, ಅವುಗಳನ್ನು 'ಮಾರಿಗುಡಿ ಅಣ್ಣದೀರು' ಅಪಹರಣ ಮಾಡಿದ್ದು. ಈ ಸಂಗತಿಯನ್ನು ಓದಿದಾಗ, ಯಾರಿಗೇ ಆಗಲಿ, ಇದೊಂದು ವಿಷಯಕ್ಕೆ ಇಷ್ಟೊಂದು ತಾರ್ಕಿಕವಾಗಿ ಯೋಚನೆಮಾಡಬಲ್ಲ ಲಕ್ಕ, ಈ ಮೊದಲಿನ ಯಾವುದೇ ವಿಷಯದಲ್ಲಿ ಯಾಕೆ ಇದೇ ರೀತಿ ಚಿಂತಿಸಲಿಲ್ಲ ಎಂಬ ಸಂಶಯ ಮೂಡಿಯೇ ಮೂಡುತ್ತದೆ. ಲಕ್ಕ ಮೊದಲಿನಿಂದಲೂ ಪ್ರಾಮಾಣಿಕತೆಗೆ, ಮುಗ್ಧತನಕ್ಕೆ ಹೆಸರಾದವನೇ ಹೊರತು, ಕಳ್ಳತನ, ಮೋಸ, ವಂಚನೆಗಳಿಗೆ ಅಲ್ಲ. ಅಲ್ಲದೆ, ರುಕ್ಮಿಣಿಯ ಸಂಬಂಧದ ವಿಷಯವನ್ನು ಅವನು ಎಲ್ಲರ ಎದುರಿಗೂ ಒಪ್ಪಿಕೊಳ್ಳು

ವುದೂ ಕೂಡ, ರುಕ್ಮಿಣಿಗೆ ತೊಂದರೆಯಾಗಬಹುದು ಎಂಬ ಸ್ವಯಂಸಿದ್ಧಾಂತ ದಿಂದಲೇ ಹೊರತು, ಯಾರ ಒತ್ತಾಯಕ್ಕೆ ಮಣಿದೂ ಅಲ್ಲ. ಹಾಗೆ ನೋಡಿದರೆ, ಹೆಣದ ಮೇಲಿನ ಆಭರಣ ಹೊತ್ತು ಹಾಕಿದ ಆರೋಪಕ್ಕೆ ತಾನೇ ಕಾರಣ ಎಂದೂ ಜನ ಭಾವಿಸಬಹುದು ಎಂದು ಲಕ್ಕ ಶಂಕೆಪಟ್ಟುಕೊಳ್ಳುವುದಕ್ಕೆ, ಯಾವುದೇ ಬಗೆಯ ಸಮರ್ಥನೆಯೂ ಇಲ್ಲ. (ಅವನನ್ನು ಆಗಲೇ ಊರಿನಿಂದ ಹೊರಗೆ ಅಟ್ಟಿಬಿಟ್ಟಿರುತ್ತಾರೆ ಎನ್ನುವುದೂ ಕೂಡ ಇಲ್ಲಿ ಮುಖ್ಯ.) ಹಾಗಿದ್ದೂ ಇದೊಂದು ಬಾರಿ ಅವನು ತರ್ಕಬದ್ಧವಾಗಿ ಯೋಚಿಸಿದ ಎಂದು ಹೇಳುವುದೂ ಲಕ್ಕನ ವ್ಯಕ್ತಿತ್ವಕ್ಕೇ ಅನ್ಯಾಯ ಮಾಡಿದಂತಾಗುತ್ತದೆ. ಅದಕ್ಕೂ ಹೆಚ್ಚಾಗಿ ಬಹಳ ಎಚ್ಚರಿಕೆಯಿಂದ ತಂದುಹಾಕಿರುವ ಈ ತಿರುವಿನ ಮೂಲಕ ಲಕ್ಕನ ವ್ಯಕ್ತಿತ್ವವನ್ನೇ ಹಾಳುಗೆಡವಿದಂತಾಗಿದೆ.

ಈ ಎಲ್ಲ ವಾದದಿಂದ ನಮಗೆ ವ್ಯಕ್ತವಾಗುವ ಅಂಶವೆಂದರೆ, ಲಕ್ಕನ ಪಾತ್ರ ವನ್ನು ಅತಿ ಆದರ್ಶ ಮಾಡಲಿಕ್ಕೆ ಹೋಗಿ, ಕಾದಂಬರಿಕಾರರು ಎಡವಿದ್ದಾರೆ. ಲಕ್ಕ ಮತ್ತು ರುಕ್ಮಿಣಿ - ಹೀಗೆ ಎರಡು ಕೇಂದ್ರಪ್ರಜ್ಞೆಗಳನ್ನು - ಒಂದು ದಲಿತ ಮತ್ತೊಂದು ಶಿಷ್ಟ - ಸೃಷ್ಟಿಸುವುದರ ಮೂಲಕವೂ - ಲಕ್ಕನ ವ್ಯಕ್ತಿತ್ವದ ಎಲ್ಲ ಮುಖಗಳೂ ತಂತಾನೆ ಅರಳಿಕೊಳ್ಳುವುದಕ್ಕೂ ಕಾದಂಬರಿಕಾರರು ತಡೆಹಾಕಿದ್ದಾರೆ. ಅಂದರೆ, ಕಾದಂಬರಿಯನ್ನು ಹೆಚ್ಚು ಸಂಕೀರ್ಣ, ಹೆಚ್ಚು ರೋಚಕ ಮಾಡುವ ಯತ್ನದಲ್ಲಿ, ಕಾದಂಬರಿಕಾರರು ದಲಿತ ಪ್ರಜ್ಞೆಯ ಕೇಂದ್ರ ಪಾತ್ರದ ಸಂಪೂರ್ಣ ಪೋಷಣೆಗೆ ತಡೆಯೊಡ್ಡಿದ್ದಾರೆ. ಏಕೆಂದರೆ ಕಾದಂಬರಿಯಲ್ಲಿ ಬರುವ ಚಿತ್ರಮೂಲನ ಕೋಟೆ, ಘಟಸ್ಫೋಟದ ವಿವರಗಳು–ಲಕ್ಕನ ಪ್ರಜ್ಞೆಯನ್ನು ತಟ್ಟುವುದೇ ಇಲ್ಲ. ಚಿತ್ರಮೂಲನ ಕೋಟೆ ತಕ್ಕಮಟ್ಟಿಗೆ ತಟ್ಟುತ್ತದೆ ಎಂದು ವಾದಿಸಬಹುದಾದರೂ, ಲಕ್ಕನ ಪಾಲಿಗೆ ಅದರ ಗುಹ್ಯಾತ್ ಗುಹ್ಯತರಗಳ್ಯಾವುವೂ ತಟ್ಟುವುದಿಲ್ಲ. (ಗಮನಿಸಿ : 'ಊರಿಗೆ ಊರನ್ನೇ ಮುಕ್ಕಿ ತಿನ್ನುತ್ತಿರುವ ಕಾಮದ ಗಂಧವೂ ಲಕ್ಕನಿಗಿಲ್ಲ' - ಕೆ, ನರಸಿಂಹಮೂರ್ತಿ, ವೈಶಾಖದ ರಿವ್ಯೂ-ಸಾಕ್ಷಿ-43)

ಈ ಕಾರಣಗಳಿಂದಾಗಿ, ಗ್ರಾಮಜೀವನದ ದಟ್ಟ ಚಿತ್ರಣವನ್ನು 'ವೈಶಾಖ' ಕೊಡುತ್ತದೆಯಾದರೂ, ಲಕ್ಕನ ಕೇಂದ್ರಪ್ರಜ್ಞೆಯನ್ನು ಹಿಗ್ಗಾ ಮುಗ್ಗಾ ಎಳೆದ ಹಾಗೆ ಆಗಿದೆ. ಆ ಮೂಲಕ, ಕಾದಂಬರಿ ಕಲಾತ್ಮಕವಾಗಿ ಸೋತಿದೆ.

ಹಸ್ತಪ್ರತಿ-ಲಿಪಿಕಾರರು

ಬಿ. ಆರ್. ಹಿರೇಮಠ

ಹಸ್ತಪ್ರತಿಗಳಲ್ಲಿ 'ಲಿಪಿಕಾರ' ಎಂಬ ಪದಪ್ರಯೋಗವಿಲ್ಲ. ಆದರೆ ಹಸ್ತ ಪ್ರತಿಗಳ ನಕಲುಕಾರ್ಯ ಮಾಡಿದವರು ಅವುಗಳ ಆದಿ-ಅಂತ್ಯಗಳಲ್ಲಿ ಲೇಖಿಸ, ಬರಹ, ಲಿಖಿತ, ಹಸ್ತಾಕ್ಷರ, ಕಂನಡಿಸು, ದಸ್ತೂರ ಎಂಬ ಪದಗಳನ್ನು ಬಳಸಿ ದ್ದಾರೆ. ಇವು ಅವರ ಲೇಖಿನ ವ್ಯವಸಾಯವನ್ನು ವಿವರಿಸುತ್ತವೆ. "ವೀರನಾರಾ ಯಣನೆ ಕವಿ, ಲಿಪಿಕಾರ ಕುಮಾರವ್ಯಾಸ" ಯೆಂಬ ಉಕ್ತಿಯಲ್ಲಿ ಮಾತ್ರ ಲೇಖಿನ ವ್ಯವಸಾಯ ಮಾಡುವವನನ್ನು 'ಲಿಪಿಕಾರ' ನೆಂದು ಕರೆಯಲಾಗಿದೆ. ಆದುದರಿಂದ ಹಸ್ತಪ್ರತಿಗಳನ್ನು ನಕಲು, ಪ್ರತಿನಕಲು, ಬಳಿನಕಲುಗೊಳಿಸುವ ಲೇಖಿನ ವ್ಯವಸಾಯ ಕೈಗೊಂಡವರನ್ನು 'ಲಿಪಿಕಾರರೆಂ'ದು ಕರೆಯಬಹುದು. ಇದರ ಪರ್ಯಾಯ ಪದ, ಪ್ರತಿಕಾರ.

'ಇನ್ನೂರ ಹದಿನಾರು ಸಕೀಲದ ಟಿಪ್ಪಣಾರ್ಥ"[1] ಹಸ್ತಪ್ರತಿಯ ಅಂತ್ಯದಲ್ಲಿ "ಅಕ್ಕಮಹಾದೇವಿಯೆಂಬ ಶಿವಶರಣೆಗೆ ಚನ್ನಮಲ್ಲಪ್ರಭು ಇನ್ನೂರ ಹದಿನಾರು ಸಕೀಲದ ಟಿಪ್ಪಣದರ್ಥವ ಬೋಧಿಸುವ ಸಮಯದಲ್ಲಿ ವಾಲೆ ಶಾಂತಯ್ಯನು ಲಿಖಿತವ ಮಾಡಿದ ಟಿಪ್ಪಣದರ್ಥ" ಎಂಬ ಹೇಳಿಕೆಯಿಂದ ಈಗಿನ ಮಟ್ಟಿಗೆ ವಾಲೆ ಶಾಂತ ಯ್ಯನೇ ಹಸ್ತಪ್ರತಿಯ ಪ್ರಥಮ ಲಿಪಿಕಾರನೆಂದು ಹೇಳಬೇಕಾಗುತ್ತದೆ. ಹಸ್ತಪ್ರತಿ ಗಳಲ್ಲಿ ಕಾಣಸಿಗುವ ಹಲವು ವರ್ಗ, ವರ್ಣ, ವಯೋಮಾನ, ವಿಭಿನ್ನ ಪ್ರವೃತ್ತಿಯ ಲಿಪಿಕಾರರನ್ನು

1. ನಿಯುಕ್ತ ಲಿಪಿಕಾರರು (Appointed writers)
2. ವೃತ್ತಿ ಲಿಪಿಕಾರರು (Professional writers)
2. ಹವ್ಯಾಸಿ ಲಿಪಿಕಾರರು (Amateur writers)

ಎಂದು ವರ್ಗೀಕರಿಸಿ[2], ಅಭ್ಯಸಿಸಬಹುದು.

---

1. ಧಾವಭಾಂ, ಕಾಪ್ರ :1091/2, 1383/1, 2007.
2. ಕಗ್ರಂಸಂಶಾ, ಪುಟ : 43

1. ನಿಯುಕ್ತ ಲಿಪಿಕಾರರು

ರಾಯಸ್ತ, ಸೇನಬೋವ (–ಕರಣಿಕ), ಲೇಖರಿ ಮುಂತಾದ ವಿಶೇಷಣ ಹೊಂದಿದ ವ್ಯಕ್ತಿಗಳು ಹಸ್ತಪ್ರತಿಗಳನ್ನು ಪ್ರತಿಗೊಳಿಸಿದ್ದಾರೆ. ಇವರು ಚಕ್ರವರ್ತಿ ಅಥವಾ ಮಂಡಲೇಶ್ವರರು ನಿಯಮಿಸಿಕೊಂಡ ಲಿಪಿಕಾರರು. ಇಂಥ ಲಿಪಿಕಾರರು ರಾಜ್ಯಾಡಳಿತದ ಲೆಕ್ಕಪತ್ರದೊಂದಿಗೆ ಗ್ರಂಥಲೇಖನ ಕಾರ್ಯವನ್ನೂ ಮಾಡು ತ್ತಿದ್ದಿರಬಹುದು ಇಲ್ಲವೆ ಕೇವಲ ಗ್ರಂಥಲೇಖನ ಕಾರ್ಯವನ್ನೇ ಕೈಕೊಂಡಿರ ಬಹುದು. ಈ ನಿಯುಕ್ತ ಲಿಪಿಕಾರರು ಅರಸು ವರ್ಗದವರಿಗೂ ಸಾಮಾನ್ಯ ವರ್ಗದವರಿಗೂ ಗ್ರಂಥಗಳನ್ನು ಪ್ರತಿಗೊಳಿಸಿಕೊಡುತ್ತಿದ್ದರು. ಇದಕ್ಕಾಗಿ ಇವರು ಈ ಎರಡೂ ವರ್ಗದವರಿಂದಲೂ ಸಂಭಾವನೆ ಪಡೆಯುತ್ತಿದ್ದಿರಬೇಕೆನಿಸುತ್ತದೆ.

''ಶ್ರೀಮತು ಘನಲಿಂಗ ಚಕ್ರವರ್ತಿಗಳಾದ ಕಲ್ಲಪ್ಪದೇವರ ಮೊಮ್ಮಗ ರುದ್ರಪ್ಪನವರಿಗೆ ಹಟ್ಟಿ ರಾಯಸ್ತ ವೆಂಕಣ್ಣನ ಮಗ ರಂಗಪ್ಪನು ಪುತ್ರಪೌತ್ರಾಭಿ ವೃದ್ಧಿಯಾಗಲೆಂದು ಬರೆದು ಕೊಟ್ಟ ಚೆನ್ನಬಸವ ಪುರಾಣದ ಪುಸ್ತಕ''[3]

''ಸುಬೇದಾರ ವೀರಣ್ಣನವರು ರಾಯಸ್ತ ವೆಂಕಟರಮಣಯ್ಯನ ಕೈಲಿ ಬರಸಿದ ಅಂಬಿಕಾ ವಿಜಯಕೆ ನಿತ್ಯ ಜಯಮಂಗಳ''[4]

"ಶ್ರೀಯುತ ಮೈಸೂರ ಚಿಕ್ಕಯ
ರಾಯನ ರಾಯಸದ ಲಕ್ಷ್ಮೀಪತಿ ಹರ್ಷದಿನಾ
ತ್ರೇಯ ಸುಗೋತ್ರನೆನಿಪ ತ
ದ್ರಾಯಗೆ ಬರೆದಿತ್ತನಜೀತನಾಥನ ಕೃತಿಯಂ"[5]

''ರಾಯಬೇಲೂರ ಸ್ಥಳದ ಶಾನಭೋಗಿ ನರಸಯ್ಯ ಬರದ ಚೋರಕಥೆ ಪುಸ್ತಕ''[6]

''ನಾಗಸೂರ ಕರಣಿಕ ಬಸವಲಿಂಗಯ್ಯನ ಪುತ್ರ ಶಿವಲಿಂಗಯ್ಯನ ಬರವು, ಬರಸಿದವ ದಳವಾಯಿ ಶಿವಪ್ಪ''[7]

''...ಅರಮನೆ ಲೇಖರೀ ಕಾನಕಾನಹಳ್ಳಿ ದಾಸಪ್ಪನ ಬರಹಾ''[8] ಎಂಬಿವು ನಿಯುಕ್ತ ಲಿಪಿಕಾರರನ್ನು ಸೂಚಿಸುವ ಉದಾಹರಣೆಗಳಾಗಿರುತ್ತವೆ.

---

3. ಧಾವಭಾಂ, ತಾಪ್ರ ; 1016
4. ಮೈಹಸೂ, II 199
5. ಕನ್ರಂಸಂ, ಪುಟ : 47
6. ಧಾವಭಾಂ, ತಾಪ್ರ : 1966/1
7. ಅದೇ, ತಾಪ್ರ : 1316/1 ಪ್ರಭುಲಿಂಗ ಲೀಲೆ
8. ಮೈಹಸೂ, I 122 ಆದಿತ್ಯ ಪುರಾಣ

2. ವೃತ್ತಿ ಲಿಪಿಕಾರರು

ಜೀವನ ನಿರ್ವಹಣೆಗಾಗಿ ಗ್ರಂಥಗಳನ್ನು ಪ್ರತಿಗೊಳಿಸುವುದನ್ನೇ ಒಂದು ವೃತ್ತಿಯನ್ನಾಗಿರಿಸಿ ಕೊಂಡವರು ವೃತ್ತಿಲಿಪಿಕಾರರು. ವಿವಿಧ ಗ್ರಂಥಗಳನ್ನು ಲಿಪಿಗೊಳಿಸಿ ಕೊಟ್ಟುದುದಕ್ಕಾಗಿ ಜನರಿಂದ ಕಾಣಿಕೆ ಅಥವಾ ಉಡುಗೊರೆಯನ್ನು ಪ್ರತಿಫಲವಾಗಿ ಪಡೆಯುತ್ತಿದ್ದರು.

“ಈ ಶರಣಲೀಲಾಮೃತ ಬರದಾತಾ ಜಟೂರಲ್ಲಿ ಬರಸಿದ. ಹಲುವಾಗಲ ದೊಡ್ಡಪ್ಪನು ಬರದುಕೊಟ್ಟದ್ದು. ಉಪ್ಪಳಿಯಲ್ಲಿ ಇರುವ ಒಡೆಯಪ್ಪ ಗೌಡರಿಗೆ ಬರಕೊಟ್ಟು ಇರುತ್ತದೆ. ಇದಕ್ಕೆ ಬರದಕ್ಕೆ ಕೊಟ್ಟುದು ಅವರು (ರಾಶಿ) ಉಡುಗರ ಕೊಟ್ಟು ಇರುತ್ತಾರೆ.”[9] “ಈ ರಾಮಾಯಣದ ಪುಸ್ತಕ ಕಿಮುವಿನ ಕೋಟೆ ಗೋಪಾಲಯ್ಯನ ತಮ್ಮ ನೀಲಯ್ಯಗೆ ಬರೆದು ಕಾಣಿಕೆ ತೆಗೆದುಕೊಂಡು ಕೊಟ್ಟೆನು (ಲಿಪಿಕಾರನ ಹೆಸರು ಮಂಜೇಶ್ವರದ ಲಿಂಗಣ್ಣ)”[10] ಎಂಬ ಉಲ್ಲೇಖಗಳು ವೃತ್ತಿಲಿಪಿಕಾರರಾದ ಹಲುವಾಗಲ ದೊಡ್ಡಪ್ಪ ಹಾಗೂ ಮಂಜೇಶ್ವರದ ಲಿಂಗಣ್ಣರಿಗೆ ಸಂದ ಉಡುಗೊರೆ ಅಥವಾ ಕಾಣಿಕೆಗಳನ್ನು ತಿಳಿಸುತ್ತವೆ.

ಶಾಸ್ತ್ರದಾನಕ್ಕಾಗಿ ಅತ್ತಿಮಬ್ಬೆ ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಕೆಳದಿ ಬಸವಭೂಪಾಲ ‘ಆಗಮ ಶಿವಶಾಸ್ತ್ರಲಿಖಿತ ಪುಸ್ತಕ’ಗಳ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಪ್ರತಿಗಳನ್ನು ಇಂಥ ಲಿಪಿಕಾರರಿಂದ ಮಾಡಿಸಿದುದರಲ್ಲಿ ಯಾವ ಸಂದೇಹವಿಲ್ಲ.

ಹಸ್ತಪತ್ರಿಗಳಲ್ಲಿ ಲಿಪಿಕಾರರ ಹೆಸರಿನ ಹಿಂದೆ ಕಂಡುಬರುವ ‘ಬರಹದ’, ‘ಲೇಖ್ಯದ’ ‘ಬರೆವ’ ವಿಶೇಷಣಗಳು ವೃತ್ತಿಲಿಪಿಕಾರರನ್ನು ನಿರ್ದೇಶಿಸುತ್ತವೆ. ಉದಾಹರಣೆ :

“ಚಿನ್ನಮ (ಪುರ)ದ ಬಸಪ್ಪಯ್ಯನವರಿಗೆ ಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆಯನ್ನು ಬರೆದುಕೊಟ್ಟ, ಗುಮ್ಮಹಾಳಪುರದ ಬರಹದ ಬಸವಣ್ಣೊಡೆಯ”[11]

“ಬಿದರೆಯ ಅಂತಣ್ಣಗಳಾದ ಜೀಯನವರುಗಳಿಗೆ ಪೊನ್ನನ ಶಾಂತಿಪುರಾಣವನ್ನು ಬರದುಕೊಟ್ಟ ಬೆಳತಂಗಡಿಯ ಬರಹದ ಸೆಟ್ಟಿ ಶಾಂತ”[12]

“ಬರಹದ ಗುರುಸಿಂಜದೇವರು ಸೇರಿಸಿದ” ಶತಕತ್ರಯ।[13]

---

9 ಧಾವಭಾಂ. ಶಾಪ್ರ : 2159

10 ಕಗ್ರಂಸಂಪಾ. ಪುಟ : 44 ತೊರವೆರಾಮಾಯಣ

11 ಅದೇ ಪುಟ : 44

12 ಅದೇ

13 ಕಹಪ್ರಇ. ಪುಟ : 69

“ಶಿವತತ್ವಗಳ ಲೇಖ್ಯವುಂ ಮಾಳ್ಪ ಲೇಖ್ಯದ ಕರಿಯಾಸಿದ್ಧ ಬಸವೇಶ...”[14]

“ಹುನಗುಂದದ ಬರೆವ ಚೆನಿವೀರದೇವರು”[15]

ಓದಿಸುವುದರೊಂದಿಗೆ ಲೇಖನವನ್ನೂ ವೃತ್ತಿಯನ್ನಾಗಿ ಮಾಡಿಕೊಂಡವರಿದ್ದಾರೆ. ಹೀಗೆ ಇವರು ಓದಿಸುವ, ಲಿಪಿಗೊಳಿಸುವ ಎರಡೂ ವೃತ್ತಿಗಳನ್ನು ಜೊತೆ ಜೊತೆಯಾಗಿ ಮುಂದುವರಿಸಿಕೊಂಡು ಬಂದರು. ಓದಿಸುವ ಸಮಯದಲ್ಲಿ ಉಪಾಧ್ಯಾಯರಾಗಿದ್ದ ಇವರು ನಕಲುಗೊಳಿಸುವ ಸಮಯದಲ್ಲಿ ವೃತ್ತಿಲಿಪಿಕಾರರಾಗಿ ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ, ತಮ್ಮ ಅಧ್ಯಾಪನಕ್ಕಾಗಿ, ಇತರ ವ್ಯಕ್ತಿಗಳ ಜ್ಞಾನಾರ್ಜನೆಗಾಗಿ ಹಲವು ಸಂಖ್ಯೆಯ ಗ್ರಂಥಗಳನ್ನು ಲಿಪಿಗೊಳಿಸಿರುವರು.

“ಓದಿಸುವ ಸಮಾದಯ್ಯನವರಲ್ಲಿ ವಸ್ತ್ರದ ಚನವೀರಪ್ಪನವರು ದಾರಿಣೆಗೆ ತಕ್ಕೊಂಡು ಇದಾರು”[16]

“ಬಡ್ಡಣಿಯ ಸ್ಥಳದ ಸಾಲಿ ನಾಗಪ್ಪನ ಸ್ವಹಸ್ತದ ಬರಹವು...ರಾ| ಚೆನ್ನೂರ ಹಿರೇಮಠದ ಚರಂತ್ಯಪ್ಪನವರಿಗೆ ಮಾರಲಿಕ್ಕೆ ಕೊಟ್ಟಿತು”[17]

“ಹುನಗುಂದದ ಬರೆವ ಚೆನಿವೀರದೇವರ ಗರ್ಭೋದ್ಭವ ಅಯ್ಯಣದೇವರ ಗರ್ಭೋದ್ಭವ ಓದಿಸುವ ಬಾಲಕ ಚೆನಿವೀರದೇವರು ತಂಮ ಸುಹಸ್ತದಿಂದಲೂ ಪುಸ್ತಕವ ಬರದರು.[18] ಈ ಮಾತುಗಳಿಂದ ಓದಿಸುವವರು ಹಣ ತೆಗೆದುಕೊಂಡು ಗ್ರಂಥಗಳನ್ನು ಪ್ರತಿ ಮಾಡಿಕೊಡುತ್ತಿದ್ದರೆಂದೂ ಓದಿಸುವ ವೃತ್ತಿಯೊಂದಿಗೆ ಲೇಖನ ವೃತ್ತಿಯನ್ನೂ ವಂಶಪಾರಂಪರ್ಯವಾಗಿ ಮುಂದುವರಿಸಿಕೊಂಡು ಬರುತ್ತಿದ್ದರೆಂದೂ ಗೊತ್ತಾಗುವುದು. ಇದಲ್ಲದೆ ಓದಿಸೊ ಲಿಂಗಪ್ಪ–ಷಟ್‌ಸ್ಥಲಜ್ಞಾನ ಸಾರಾಮೃತ[19], ಮನೋವಿಜಯ, ಅವಧೂತಗೀತೆ, ವೃಷಭಗೀತೆ, ಸ್ವರೂಪಾಮೃತ, ಕಲ್ಯಾಣೇಶ್ವರ, ಸದ್ಗುರು ರಹಸ್ಯ, ಯೋಗಾಂಗವಿಭೂಷಣ ;[20] ಸಗರದ ಓದಿಸೊ ಚನ್ನಯ್ಯ - ಪ್ರಭುದೇವರ ಷಟ್‌ಸ್ಥಲವಚನಗಳ ಟೀಕೆ[21], ಓದಿಸುವ ಮಠದ್ವೀರಯ್ಯ – ಗಣದಾಸಿ ವೀರಣ್ಣನ ವಚನಗಳು,[22] ರಾಮಗೆರೆಮಠದ ಓದಿಸು ಸಂಗನಾರಾಧ್ಯ – ರಟ್ಟ

---

14 ಕಕಚ II, ಪುಟ : 339
15 ಧಾವಭಾಂ, ಕಾಪ್ರ 183 ಅಖಂಡೇಶ್ವರ ವಚನಗಳು
16 ಧಾವಭಾಂ, ಕಾಪ್ರ ; 27/2 ದೀಪದ ಕಲಿಯರ ಕಾವ್ಯ
17 ಅದೇ, ತಾಪ್ರ : 705 ರಾಘವಾಂಕನ ಕಾವ್ಯ
18 ಅದೇ, ತಾಪ್ರ : 183 ಅಖಂಡೇಶ್ವರ ವಚನಗಳು
19 ಅದೇ, ತಾಪ್ರ ! 1102
20 ಅದೇ, ತಾಪ್ರ : 2379
21 ಅದೇ, ತಾಪ್ರ ; 525
22 ಅದೇ, ತಾಪ್ರ : 1349/3

ಶಾಸ್ತ್ರ[23], ಮಾಯಿಕೊಂಡದ ಓದಿಸೊಲಿಂಗಪ್ಪ ಶೂನ್ಯಸಂಪಾದನೆ (ಗೂಳೂರ)[24], ಸೊಂಡೂರ ಶಿರಿವಾರಮಠದ ಓದಿಸೊ ಸಿದ್ಧಯ್ಯನವರ ಮಗ ಶರಣಯ್ಯ - ಗಣದಾಸಿ ವೀರಣ್ಣನ ವಚನಗಳು,[25] ಗದುಗಿನ ವೋದಿಸುವ ಪರುತ ದೇವರು-ಭುವನಕೋಶ[26] ಓದಿಸುವ ಗೋವಿಂದ - ಗುರುಬೋಧಾಮೃತ,[27] ಓದಿಸುವಶಾಂತದೇವರ ಪುತ್ರ ಸಿದ್ಧಲಿಂಗಯ್ಯ-ಅನುಭವ ಷಡುಸ್ಥಲ,[28] ಓದಿಸುವ ಲಿಂಗಯ್ಯ-ಗಿರಿಜೆಸಂವಾದ[29] ಗ್ರಂಥ ಪ್ರತಿಮಾಡಿದುದನ್ನು ಇಲ್ಲಿ ನೆನೆಯಬೇಕು. ಇಂಥ ಇನ್ನೂ ನೂರಾರು ಉಲ್ಲೇಖ ಹಸ್ತಪ್ರತಿಗಳಲ್ಲಿ ಲಭಿಸುತ್ತವೆ.

ಒಂದಕ್ಕಿಂತ ಹೆಚ್ಚು ಗ್ರಂಥಗಳನ್ನು ಪ್ರತಿಮಾಡಿಕೊಟ್ಟವರೂ ವೃತ್ತಿ ಲಿಪಿಕಾರರಾಗಿದ್ದಾರೆ. ಉದಾಹರಣೆ : ಬಳಗಾನೂರ ಹಿರೇಮಠದ ಸೂಗಯ್ಯ-ಅನುಭವಸಾರ (ಶಕ 1882, ವಿಕೃತಿನಾಮ ಸಂವತ್ಸರ, ಮಾಘ, ಕೃಷ್ಣಪಕ್ಷ ಬುಧವಾರ), ಜ್ಞಾನಚಿಂತಾರತ್ನ ಟೀಕೆ (ಶಕ 1882, ವಿಕೃತಿ, ಮಾಘ, ಶುಕ್ಲಪಕ್ಷ 3 ಬುಧವಾರ) ;[30] ಮಾಡಿಹಾಳ ರಾಮಯ್ಯ-ಸಾರಂಗಧರ ಕಥೆ, ಗುಂಡಬ್ರಹ್ಮಯ್ಯನ ಸಾಂಗತ್ಯ[31] ಹಿರೇಹುಂಗರಗಿಯ ಶ್ರೀಗುರುಸ್ವಾಮಿ ಮೋಲ್ಮಿಕ-ಸಿದ್ಧಾಂತಸಾರಾಮೃತವಚನ (ಶಕ ಮಾರ್ಗಶಿರ, ಪದ್ಯ, ರೋಜ ಸೋಮವಾರ, ಆರಿದ್ರಾ, ಅಮೃತಯೋಗ), ಮಡಿವಾಳಯ್ಯನ ಸ್ತೋತ್ರ (ಶಕ 1855, ಶ್ರೀಮುಖ, ಕಾರ್ತಿಕ ಬಹುಳ, ರೋಜ ಸೋಮವಾರ) ;[32] ದಿಗ್ಗಾವಿಪುರದ ಅಂಬಾಜಯ್ಯ-ಭೈರವೇಶ್ವರಕಾವ್ಯ, ಭಾವಚಿಂತಾರತ್ನ, ಮನೋವಿಜಯ, ಶಿವನ ಭಿಕ್ಷಾಟನ ಲೀಲೆ, ಗುರುಭಕ್ತಾಂಡಾರಿ ಚರಿತ್ರೆ, ಬಸವಪುರಾಣ, ನೀಲಮ್ಮನಸ್ತೋತ್ರ ತ್ರಿಭುವನ ತಿಲಕ, ವಾತುಳಾಗಮ.[33] ಅಮ್ಮಿನಬಾವಿಯ ಯಳವತ್ತಿಮಠದ ಸಾಲಿ ಚೆನ್ನಯ್ಯ-ಸಿಂಗಿರಾಜಪುರಾಣ (ಶಕ 1750 ಕಾಳಯುಕ್ತಿ. ಫಾಲ್ಗುಣ, ಬಹುಳ 5, ಸೌಮ್ಯವಾಸರ), ರಾಜಶೇಖರ ವಿಳಾಸ (ಶಕ 1763 ಪ್ಲವ, ವೈಶಾಖ, ಶು. 13

---

23 ಅದೇ, ತಾಪ್ರ : 3115

24 ಅದೇ, ತಾಪ್ರ : 1935

25 ಅದೇ, ತಾಪ್ರ : 2025/1

26 ಅದೇ, ತಾಪ್ರ : 310/2

27 ಅದೇ, ತಾಪ್ರ : 1020-1

28 ಧಾವಭಾಂ, ಕಾಪ್ರ : 475/1

29 ಅದೇ, ತಾಪ್ರ : 1980

30 ಅದೇ, ಕಾಪ್ರ : 2672/3, 4

31 ಅದೇ, ತಾಪ್ರ : 1983/2, 4

32 ಅದೇ, ಕಾಪ್ರ : 217, 218

33 ಅದೇ, ತಾಪ್ರ : 214 ವಾತುಲತಂತ್ರ, ಟೀಕೆ

ಬುಧವಾರ), ವಿವೇಕ ಚಿಂತಾಮಣಿ (ಶಕ 1773, ವಿರೋಧಿಕೃತ, ಕಾರ್ತಿಕ ಕೃಷ್ಣ ದಶಮಿ ಭೌಮವಾಸರ) ರಾಘವೇಶ್ವರ ಕಾವ್ಯ (ಶಕ 1777 ರಾಕ್ಷಸ, ಆಶ್ವಿಜ ಶು. 6 ಮಂಗಳವಾರ), ಪಾರಮಾರ್ಥ ಪ್ರಕಾಶಿಕೆ (ಶಕ 1780 ಕಾಳಯುಕ್ತ ಆಶ್ವಿಜ ಶು ಚತುರ್ಥಿ ಬುಧವಾರ) ;[34] ಚನ್ನಬಸವಸ್ವಾಮಿ-ನಂದೀಶ್ವರ ಭೃಂಗಿ ವೀರವೃಷಭ ಸ್ಕಂದ ಟೀಕೆ (ವಿಭವ, ಜೇಷ್ಠ ಶು 7 ಮಂಗಳವಾರ), ಗುರು ರಗಳೆ ಟೀಕೆ (ವಿಕ್ರಮ, ಪುಷ್ಯ ಶು 21 ಬುಧವಾರ), ಶಿವಾನಂದಲಹರಿ ಟೀಕೆ (ಶಕ 1734 ವಿಷು, ಪುಷ್ಯ 10 ಬುಧವಾರ), ಶಿವಾಧಿಕ್ಯ ಟೀಕೆ (ವಿಕ್ರಮ, ಮಾಘ ಬ 10), ಶ್ರೀರುದ್ರ ವ್ಯಾಖ್ಯಾನ (ಶಕ 1734 ವಿಷು, ಫಾಲ್ಗುಣ ಶು 10)[35] ಉತ್ತಂಗಿ ಕೆಂಪಯ್ಯ-ಶಾಸ್ತ್ರಿ ವೈದ್ಯಪುಸ್ತಕ, ಪಂಚಸ್ತೋತ್ರ, ಬಿಡಿಸ್ತೋತ್ರ, ಶಬರಶಂಕರವಿಳಾಸ, ಗಿರಿಜಾ ಕಲ್ಯಾಣ, ಹಮ್ಮೀರ ಕಾವ್ಯ[35a]ಗಳನ್ನು ಪ್ರತಿಮಾಡಿದುದರಿಂದ ಇವರು ವೃತ್ತಿಲಿಪಿ ಕಾರರು. ಇವಲ್ಲದೆ ಗುಂಡೇನಹಳ್ಳಿ ವಾಸಸ್ಥರಾದ ಶಿಗ್ಗಾವಿ ಶಿವಲಿಂಗಪ್ಪನವರ ಆಜ್ಞಾ ನುಸಾರ ತಯಾರಿಸಿದ ಫಕೀರಪ್ಪ ಮಲ್ಲಪ್ಪ ಕರಡಿಕರಳ್ಳಿ[36], ಹೊಂಗಲವಿರಕ್ತಮಠದ ಚೆನ್ನಸ್ವಾಮಿಯವರ ಅಪ್ಪಣೆಯಿಂದ ಬರೆದ ಚೆನ್ನಪ್ಪರು[37] ವೃತ್ತಿ ಲಿಪಿಕಾರರಿರ ಬೇಕೆನಿಸುತ್ತದೆ.

2. **ಹವ್ಯಾಸಿ ಲಿಪಿಕಾರರು :** ಇವರು ಲೀಲಾವಿನೋದ, ಸ್ವಾನುಭವ, ಪಾರಾಯಣ (ಪಠನ) ಪ್ರವಚನ ಅಧ್ಯಯನ ಮೊದಲಾದ ಉದ್ದೇಶಗಳಿಂದ ತಮಗಾಗಿ ಗ್ರಂಥಗಳನ್ನು ಬರೆದುಕೊಂಡಿದ್ದಾರೆ. ಲೀಲಾವಿನೋದ, ಪುಣ್ಯಪ್ರಾಪ್ತಿ, ಅಧ್ಯಯನ ಗಳಿಗಾಗಿ (ಸ್ವಾಮಿ) ಗುರು, ಭಕ್ತ (ಶಿಷ್ಯ), ದೇಸಾಯಿ, ನಾಯಕ, ಗೌಡ, ಅಭ್ಯಾಸಿ (ಸ್ತ್ರೀ, ಪುರುಷ) ಮೊದಲಾದ ವಿವಿಧ ರೀತಿಯ ವ್ಯಕ್ತಿಗಳಿಗೆ ಭಕ್ತಿ, ಪ್ರೀತಿ, ಪ್ರೇಮ, ಸಂತೋಷದಿಂದ ಬರೆದುಕೊಟ್ಟಿದ್ದಾರೆ. ಹೀಗೆ ಸ್ವಪ್ರಯೋಜನ, ಪರಪ್ರಯೋಜನ ಗಳಿಗಾಗಿ ಹವ್ಯಾಸಿ ಲಿಪಿಕಾರರು ಪ್ರತಿಮಾಡಿದ ಗ್ರಂಥಗಳ ಸಂಖ್ಯೆ ವಿಪುಲವೂ

---

34 ಅದೇ, ಕಾಪ್ರ : 1073, 1047, 1039, 1050, 1040 ಇದಲ್ಲದೆ ಈತನು ಚನ್ನ ಬಸವಪುರಾಣ ಕಾಪ್ರ (1042), ಕೈವಲ್ಯ ಪದ್ಧತಿ ಟೀಕೆ (ಕಾಪ್ರ 1043), ಪಂಚಸ್ತೋತ್ರದ ಟೀಕೆ (ಕಾಪ್ರ 1044), ದೇಹಹಾರಿದ ಫಲ (ಕಾಪ್ರ 1035), ನಾನಾರ್ಥ ರತ್ನಾಕರ (ಕಾಪ, 1034), ನಕ್ಷತ್ರ ಚೂಡಾಮಣಿ (ಕಾಪ್ರ, 1049), ರಾಘವೇಶ್ವರನ ನಾಂದ್ಯ ಪದ್ಯಗಳು (ಕಾಪ್ರ 1052), ದಶವಿಧ ಪಾದೋದಕದ ಲಕ್ಷಣದ ವಚನ (ಕಾಪ್ರ 1053), ವೇತಾಳ ತಂತ್ರ (ಕಾಪ್ರ 1056), ನೀಲಲೋಚನೆಯ ನಾಂದಿಯ ಟೀಕೆ (ಕಾಪ್ರ 1061)ಗಳನ್ನೂ ಲಿಪಿಗೊಳಿಸಿರುವ ಸಾಧ್ಯತೆಯಿದೆ.

35 ಧಾವಭಾಂ, ತಾಪ್ರ : 2488/1, 3, 4, 5, 6,

35a ಅದೇ, ತಾಪ್ರ 2652/3 ಹಮ್ಮೀರ ಕಾವ್ಯ

36 ಧಾವಬಾಂ, ಕಾಪ್ರ : 261 ಚಿದೈಶ್ವರ್ಯ ಚಿದಾಭರಣ

37 ಅದೇ, ಕಾಪ್ರ : 1305/3 ಪ್ರೌಢರಾಯನ ಕಾವ್ಯ

ವೈವಿಧ್ಯಮಯುವೂ ಆಗಿದೆ. "ಬನ್ನೂರ ಸ್ಥಲದಲ್ಲಿ ಹೊಸಮಠದ ಶ್ರೀ ಶಿವಲಿಂಗ ದೇವರು ತಮ್ಮ ಲೀಲಾವಿನೋದಕ್ಕಾಗಿ ಬರೆದ ಶೂನ್ಯ ಸಂಪಾದನೆ"[38].

"ಶಿವರದ ಚೆನ್ನಂಜೇದೇವರ ಶಿಷ್ಯರು ಬಸವಲಿಂಗದೇವರು ತಮಗೆ ಸ್ವಾನು ಭಾವಾರ್ಥ ವಿರಚಿತ ಲಿಖಿತಂ"[39]

"ಹೊಂಗಲದ ಪುರಾಣಿಕ ಮಠದ ದುರದುಂಡೆಪ್ಪನು ಪಠಿಸಿ ಕೃತಾರ್ಥವಾಗು ವುದಕ್ಕೋಸ್ಕರ ಬರಿದುಕೊಂಡಿರ್ಪನು"[40]

"ಕಲ್ಲಮಠ ಮಹಾಂತ ಕರಿಬಸಪ್ಪನ ಕುಮಾರ ಚನ್ನವೀರಪ್ಪ ಪುರಾಣಿಕವೀ ತನು ಮನೋಭಿಲಾಷದಿಂದ ವಾಚಿಸುವುದಕ್ಕೆ ಲೇಖಿನ ಗೈದಿರುತ್ತಾರೆ".[41]

"ಗದಗು ಶ್ಯಾಪುರಪ್ಯಾಟಿಯಲ್ಲಿ ಇರುವಂತ ಹಿರೇಹಡಗಲಿ ಹುಚ್ಚಪ್ಪನ ಬರಹ. ನನ್ನ ಮನೋಪ್ರೀತಿಯಿಂದ ಓದು ಅಪೇಕ್ಷೆಯಿಂದ ಬರಕೊಂಡು ಇದ್ದೇನೆ"[42]

"ಜಲೂರ ಪ್ಯಾಟಿ ಸಾಲಿಮಠದ ಚನ್ನಬಸವಯ್ಯನು ತನ್ನ ಮನಿಯೊಳಗೆ ಓದಿ ಹಾಡುವದರ ಪ್ರೀತಿಯಿಂದ ಬರಕೊಂಡು ಇದ್ದಾನೆ"[43]

"ಬೆಳವಟ್ಟಿಗಿ ಹಿರೇಮಠದ ಬೋಳಯ್ಯನ ಗರ್ಭ ಕ್ಷೀರಾರ್ಣವದೊಳಗೆ ಶ್ರೀ ಮುರಿಗಿಸ್ವಾಮಿ ಪಾದಸೇವೆಗೆ ಕಿಂಕರನಾದ ಅಡಿವಯ್ಯನು ತಮ್ಮ ಮನೋ ಮುದದಿಂ ಭಕ್ತ ಮಾಹೇಶ್ವರರಿಗೆ ಓದಿ ಹೇಳಿ ಪರಿಣಮಿಸಬೇಕೆಂದು ತಮ್ಮ ಸ್ವಹಸ್ತ ದಿಂದ ಬರವ ಸುಪ್ರತಿ"[44] ಇಲ್ಲಿ ಶಿವಲಿಂಗದೇವರು, ಬಸವಲಿಂಗದೇವರು, ದುರ ದುಂಡೆಪ್ಪ, ಚೆನ್ನವೀರಪ್ಪ, ಹುಚ್ಚಪ್ಪ, ಚನ್ನಬಸಯ್ಯ, ಅಡಿವಯ್ಯರು ಕ್ರಮವಾಗಿ ಲೀಲಾವಿನೋದ, ಸ್ವಾನುಭವ, ಪಠನ, ವಾಚನ, ಅಧ್ಯಯನ, ಹಾಡುವಿಕೆಗಾಗಿ ಕೃತಿ ಗಳನ್ನು ನಕಲುಗೊಳಿಸಿಕೊಂಡಿದ್ದಾರೆ, ಜೊತೆಗೆ

"ಕೊಕ್ಕಟನೂರ ಪರಗಣೆಯೊಳಗಣ ಪಟ್ಟಣಶೆಟ್ಟಿ ಪೆದ್ದಯೀರಪ್ಪನವರ ಪುತ್ರ ವೀರಭದ್ರಪ್ಪನ ತನುಜ ಸಂಗಪ್ಪನು ತಮ್ಮ ಪ್ರೀತಿಯಿಂದೆ ಓದಲಿಕ್ಕೆ ಬರಸಿದನು.

---

38 ಅದೇ, ಕಾಪ್ರ : 130
39 ಅದೇ, ತಾಪು : 856/1 ಪ್ರಭುದೇವರ ಟೀಕಿನ ವಚನಗಳು
40 ಅದೇ, ಕಾಪ್ರ : 915 ವೃಷಭೇಂದ್ರ ವಿಜಯ
41 ಅದೇ, ಕಾಪ್ರ : 723/1 ಕ್ರಿಯಾಸಮರಸದ ವಚನ
42 ಅದೇ, ಕಾಪ್ರ : 354/3 ವಚನದ ನುಡಿಗಣ ಟೀಕೆ
43 ಅದೇ, ಕಾಪ್ರ : 2887 ಬಸವಪುರಾಣ
44 ಅದೇ, ಕಾಪ್ರ : 379 ರಾಘವೇಶ್ವರನ ಕಾವ್ಯ

ಕಲಬುರ್ಗಿ ಪರಗಣೆಯು ವೀರಭದ್ರದೇವರ ಸೇವಕ ಹೆಬ್ಬಾಳದ ಮಠಪತಿ ಪಾವಡಯ್ಯನ ಪುತ್ರ ನಾಗಯ್ಯನು ತನ್ನ ಸ್ವಹಸ್ತದಿಂದ ಲೇಖಿಸವ ಮಾಡಿದ"[45] "ಬಸವತೀರ್ಥ ಸಿಂಹಾಸನ ಶಿವಾನುಭಾವ ಚರಮೂರ್ತಿಗಳು ಚೆನ್ನಬಸವ ಸ್ವಾಮಿಗಳು ತಮ್ಮ ಲೀಲಾ ವಿನೋದದಿಂದ ಬರಸಿದರು. ಬರದವರು ದಾರೆಂದರೆ ಸಿರೂರ ಮಠದ ವಿಶ್ವನಾಥ ದೊಡ್ಡಯ್ಯ, ಸ್ವಾಮಿಗಳ ಲೀಲಾವಿನೋದಕ್ಕೆ ಬರದನು"[46] "ಷಡುಸ್ಥಲದ ಚೆನವೀರಸ್ವಾಮಿಗಳು ಮರಿಗಳು ಬಸವಲಿಂಗದೇವರಿಗೆ ಕಂಚಗಾರ ಹೊನ್ನಪ್ಪನ ಮಗ ನರಸನ್ನ ಕುಮಾರ ಅಯ್ಯಪ್ಪನವರು ಬರದುಕೊಟ್ಟದು"[47] "ಮೂಗನಾಯಕನ ಕೋಟೆ ಗುರುಸ್ಥಲದ ಮಠದ ಗಂಗಪ್ಪದೇವರ ಕುಮಾರ ಚೆನ್ನವೀರದೇವರು ಸದರ್ರಿ ಇದೇ ಊರಲ್ಲಿ ಇರುವ ಮದ್ದಿನ ಮಲ್ಲಪ್ಪನ ಕುಮಾರ ಗಂಗಣ್ಣಂಗೆ ಧನಕನಕ ವಸ್ತುವಾಹನ ಛತ್ರಚಾಮರ ಆಂದೋಳಿಕ ಪುತ್ರಪೌತ್ರ ಅಷ್ಟಭಾಗ್ಯ ಅಷ್ಟಭೋಗ ಮೊದಲಾಗಿ ಚಂದ್ರಾರ್ಕ ಪರಿಯಂತರ ಅಭಿವೃದ್ಧಿಯಾಗಿ ಚಿರಂಜೀವಿಯಾಗಿ, ಸತ್ಯಸದಾಚಾರ ಸಂಪನ್ನರಾಗಿ ಗುರುಲಿಂಗ ಜಂಗಮಕ್ಕೆ ಸದಾ ದಾಸೋಹಿಯಾಗಿ ಸುಖದಿಂದ ಇರಲಿ ಎಂಬುದಾಗಿ ಸಂತೋಷದಿಂದ ತ್ರಿಕಾಲಲಿಂಗ ವೇಳೆಯಲ್ಲಿ ಹರಸಿ ಬರಸಿಕೊಟ್ಟ ಶರಣಲೀಲಾಮೃತ"[48]

ಈ ಉದಾಹರಣೆಗಳು ನಾಗಯ್ಯ, ವಿಸ್ವನಾಥ ದೊಡ್ಡಯ್ಯ, ಅಯ್ಯಪ್ಪ, ಚೆನ್ನವೀರದೇವರು ಅಧ್ಯಯನ, ಲೀಲಾವಿನೋದ, ಪುಣ್ಯಾಭಿಲಾಷಿಗಳಾದ ಸಂಗಪ್ಪ, ಚೆನ್ನಬಸವಸ್ವಾಮಿ, ಬಸವಲಿಂಗದೇವ, ಗಂಗಣ್ಣರಿಗೆ ಪ್ರತಿಮಾಡಿ ಕೊಟ್ಟುದನ್ನು ತಿಳಿಸುತ್ತವೆ. ಇದಲ್ಲದೆ ತಂದೆ ಮಗನಿಗೆ, ಮಗ ತಂದೆಗೆ, ತಂದೆ ಮಗಳಿಗೆ ಬರೆದು ಕೊಟ್ಟ; ಅರಸು, ಸ್ನೇಹಿತರಿಗೆ ನಕಲುಗೊಳಿಸಿಕೊಟ್ಟ ಹೇರಳ ಉದಾಹರಣೆಗಳೂ ದೊರೆಯುತ್ತವೆ.

ಪುರುಷರಂತೆ ಸ್ತ್ರೀಯರೂ ಪರಪ್ರಯೋಜನಾರ್ಥವಾಗಿ ಗ್ರಂಥಗಳನ್ನು ಲಿಪಿಗೊಳಿಸಿರುವುದು ಕಂಡುಬರುತ್ತದೆ. ಈ ಕೆಳಗಿನ ಉದಾಹರಣೆಗಳಿಂದ ಇದು ಮನದಟ್ಟಾಗುತ್ತದೆ:

---

45 ಧಾವಭಾಂ ಕಾಪ್ರ : 744 ದೀಪದ ಕಲಿಯರ ಕಾವ್ಯ

46 ಅದೇ. ಕಾಪ್ರ : 534/2 ಶೂನ್ಯಸಂಪಾದನೆ (ಮಹಾದೇವಯ್ಯ)

47 ಅದೇ, ತಾಪ್ರ : 1363 ಪ್ರಭುಲಿಂಗಲೀಲೆ

48 ಅದೇ, ತಾಪ್ರ : 699 ಶರಣ ಲೀಲಾಮೃತ

"ರಾಮನ ಸಾಂಗತ್ಯದ ಬರೆದವಳು ಓದಿಸುವ ಗುರುಬಸಪ್ಪದೇವರ ಮಗಳು ಸಿಂಗಮ್ಮ..."[49]

"ಸಿಗ್ಗಾವಿಯ ಚನ್ನಗವುಡರ ಸೊಸೆ ಭೈರಾಜಿ ತಂಮ ಶ್ರೀಗುರುವಿನ ಕೃಪೆಯಿಂದ ಲಿಂಗಲೀಲಾವಿಲಾಸದ ಪುಸ್ತಕವನು ಪ್ರತಿಮಾಡಿ ಮಹಾಗಣಂಗಳು ಕೇಳಿ ಓದಿ ನಂಮ ಕೃತಾರ್ಥವಮಾ[ಡಿ]ರಿ ಎಂದು ಮಹಾಗಣಂಗಳಿಗೆ ಪ್ರತಿಮಾಡುತ್ತಿರ್ದೆನು"[50]

"ಸ್ವಸ್ತಿ ಶ್ರೀ ಸೇನಗಣಾಗ್ರಗಣ್ಯರು ಕರವೀರಕ್ಷೇತ್ರ ಕೊಲ್ಲಾಪುರದ ಶ್ರೀಜಿನಸೇನಭಟ್ಟಾರಕಸ್ವಾಮಿ ಕರಕೃತ ಸಂಜಾತ ಗುಣಭದ್ರಸ್ವಾಮಿಗಳ ಶಿಷ್ಯರು ಶಾಂತಿಮತಿ ಕಂತಿಯರು ಅಪ್ಪಿಗೆಪುರದ ಶ್ರೀ ಅಜಿತನಾಥನ ದಿವ್ಯ ಚೈತ್ಯಾಲ್ಯಯದಲ್ಲಿ ಪ್ರತಿ ನೋಡಿ ಬರೆದೆವು"[51]

"ವಿಕ್ರಮ ಸಂವತ್ಸರದ ಶ್ರಾವಣ ಶುದ್ಧ ಸಪ್ತಮಿ ಗ್ರುರವಾರದಲ್ಲು ಭೂಕೈಲಾಸ ಉಳುವೆ ಮಹಾಮನೆ ಸೂತ್ರಾನುವರ್ತಿಗಳಾದ ಬಾಳಪ್ಪಸ್ವಾಮಿಗಳ ಕರಸಂಜಾತಳಾದ ಪುಟ್ಟನಂಜಮ್ಮ"[52]

ಇವುಗಳೊಂದಿಗೆ ಅಪೂರ್ವವೆನಿಸುವ

"...ಶ್ರೀ ಗುರುಲಿಂಗ ಜಂಗಮದ ಭೃತ್ಯರ ಭೃತ್ಯನಾದ ಚೆನ್ನವೀರದೇವರು ಸಣ್ಣ ಬರಹದ ಗುರುನಂಜಯ್ಯನವರಿಗೆ ಲೇಖನವ ಬರದುಕೊಟ್ಟು"[53]

"ಶ್ರೀಮತು ಸಜ್ಜನಶುದ್ಧ ಶಿವಾಚಾರ ಸಂಪಂನರುಮಪ್ಪ ಪೃಥ್ವಿಯುನುಂಡ ಮಹಾಮಪತ್ತಿನೊಳಗಾದ ಸಂಪಾದನೆಯ ಚೆನ್ನವೀರದೇವರ ಶ್ರೀಪಾದಪದ್ಮಂಗಳಿಗೆ ಶರಣುಶರಣಾರ್ಥಿ. ಅವರ ಶಿಷ್ಯ ಮರಿಮಲ್ಲೇಶನು ಬರದ ಪ್ರಭುದೇವರ ಟೀಕು ಸಮಾಪ್ತ"[54]

ಈ ಅಂಶಗಳನ್ನು ಗಮನಿಸಬಹುದು ಅವಶ್ಯವೆನಿಸುತ್ತದೆ. ಇಲ್ಲಿ ಸಣ್ಣ ಬರಹದ ಗುರುನಂಜಯ್ಯನಿಗೆ ಚೆನ್ನವೀರದೇವರು ಬಸವರಾಜ ವಿಜಯ ಕೃತಿ ಪ್ರತಿ ಮಾಡಿಕೊಟ್ಟುದೂ ಸಂಪಾದನೆಯ ಚೆನ್ನವೀರದೇವರ ಶಿಷ್ಯ ಮರಿಮಲ್ಲೇಶ ಪ್ರಭುದೇವರ ಟೀಕಿನ ವಚನಗಳನ್ನು ಲಿಪಿಗೊಳಿಸಿರುವುದೂ ಗಮನಾರ್ಹ.

---

49 ಕ ಗ್ರಂ ಸಂ ಶಾ ಪುಟ : 45
50 ಅದೇ
51 ಧಾವ. ಭಾಂ ಕಾಪ್ರ : ನಿಂಬ ಸಾಮಂತ ಚರಿತೆ
52 ಕಹಪ್ರಇ. ಪುಟ : 59 ಪ್ರೌಢದೇವರಾಯನ ಕಾವ್ಯ
53 ಧಾವ. ಭಾಂ, ತಾಪ್ರ : 623
54 ಅದೇ. ಕಾಪ್ರ : 336

ಶಾಸ್ತ್ರದಾನ ಹಾಗೂ ಗುರುಭಕ್ತಿಗಳಿಂದಲೂ ಕೆಲವು ಹವ್ಯಾಸಿಲಿಪಿಕಾರರು ಗುರುಗಳಿಗೆ ಗ್ರಂಥಗಳನ್ನು ಪ್ರತಿಮಾಡಿಕೊಟ್ಟಿದ್ದಾರೆ. ಅದಕ್ಕಾಗಿ "ಅಗಳಿ ಪಾಯಣ್ಣಗಳು ಬರೆದ ಚಂದನ ಕಥೆ. ಪ್ರತಿ ಇದ್ದ ಹಾಗೆ ಬರೆದೆನು...ಶ್ರೀ ಹೇವಳಂಬಿ ಸಂವತ್ಸರ ಭಾದ್ರಪದ ಶು. 10ರಲ್ಲೂ ದೊಡಸಾಮಿಗೆ ಶಾಸ್ತ್ರದಾನವಾಗಿ ಬರೆದು ಕೊಟ್ಟದ್ದು.[55] "ಹೊನ್ನಾಳಿ ಸಿಂಹಾಸನಕ್ಕೆ ಕಾರಣಕರ್ತರಾದ ಚೆನ್ನಬಸವರಾಜದೇವರಿಗೆ ಗದುಗಿನ ಮಠದ ರುದ್ರನು ತನ್ನ ಭಕ್ತಿಯಲಿ ಬರೆದು ನಮಸ್ಕಾರವ ಮಾಡಿದ ಪ್ರಭು ದೇವರ ಟೀಕಿನ ಪುಸ್ತಕ"[56] "ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿಸ್ವರೂಪ ಷಟ್ಸ್ಥಲ ಬ್ರಹ್ಮಿಗಳಾದ ಗುರುಶಾಂತಸ್ವಾಮಿಯವರ ಪಾದಕ್ಕೆ ಇಕ್ಕೇರಿ. ಹಿರೇಮಠದ ಷಟ್ಸ್ಥಲ. ಗುರುಪಾದಸ್ವಾಮಿಯವರ ಈರಪ್ಪನ ಭದ್ರಪ್ಪನ ಮಗ ಶಿಷ್ಯನಾದ ಬಯಲೂರ ಚೆನ್ನವೀರಯ್ಯನು ಬರಕೊಟ್ಟ ಷಟ್ಸ್ಥಲತಿಲಕ"[57] ಮೊದಲಾದ ಉದಾಹರಣೆಗಳನ್ನು ನೋಡಬಹುದು. ಇದಲ್ಲದೆ ಆರ್. ನರಸಿಂಹಾ ಚಾರ್ಯರು[58] ವೆಂಕಟಶರ್ಮ ಲಿಪಿಕಾರನ ಬಗೆಗೆ ರುದ್ರಭಟ್ಟನ (ಸು. 1180) ಜಗನ್ನಾಥ ವಿಜಯದ ಒಂದು ಪ್ರತಿಯ ಅಂತ್ಯದಲ್ಲಿ ಆ ಪ್ರತಿಯನ್ನು ಈತನು ದುಂದುಂಭಿವರ್ಷದಲ್ಲಿ ಬರೆದುದಾಗಿ ಹೇಳುವುದಲ್ಲದೆ ತನ್ನ ವಿಷಯವಾಗಿಯೂ ಆ ಗ್ರಂಥದ ವಿಷಯವಾಗಿಯೂ ಹಲವು ಪದ್ಯಗಳನ್ನು ಬರೆದಿದ್ದಾನೆ. ಈ ಪದ್ಯಗಳನ್ನು ನೋಡಿದರೆ ಇವನು ಕವಿಯೂಗಿದ್ದನೆಂದು ಹೇಳಬಹುದಾಗಿದೆ" ಎಂದು ಹೇಳುವ ಉಕ್ತಿ ಗಮನಾರ್ಹವೂ ಪರಿಶೀಲನಾರ್ಹವೂ ಆದುದಾಗಿದೆ. ಒಂದುವೇಳೆ ಈ ವೆಂಕಟಶರ್ಮನು ಕವಿಯಾಗಿದ್ದಲ್ಲಿ[59] ಕವಿಯೇ ಲಿಪಿಕಾರನಾಗಿ ಕಾರ್ಯಮಾಡಿದ ಪ್ರಥಮವ್ಯಕ್ತಿಯೆಂಬ ಮರ್ಯಾದೆಪಡೆಯುತ್ತಾನೆ.

ಒಟ್ಟಿನಲ್ಲಿ ಹಸ್ತಪ್ರತಿಗಳ ಪರಿಶೀಲನೆಯಿಂದ ಸ್ವಪ್ರಯೋಜನ, ಪರಪ್ರಯೋಜನ ಗಳಿಗಾಗಿ ಗ್ರಂಥಗಳನ್ನು ಪ್ರತಿಮಾಡಿದ ಹವ್ಯಾಸಿಲಿಪಿಕಾರರಲ್ಲಿ ಗುರು (ಸ್ವಾಮಿ), ಶಿಷ್ಯ, ತಂದೆ, ಮಗ, ಉಪಾಧ್ಯಾಯ, ಕಂಚಗಾರ, ಅರಸು, ಗೌಡ, ಸ್ತ್ರೀಯರು ಪ್ರಮುಖರಾಗಿರುವುದು ವ್ಯಕ್ತವಾಗುತ್ತದೆ.

---

55 ಕಹಪ್ರಇ. ಪುಟ : 58
56. ಧಾವಭಾಂ, ತಾಪ್ರ : 1964
57. ಅದೇ, ತಾಪ್ರ : 1897/4
58. ಕಕಚ II, ಪುಟ : 319
59. ಮುದ್ದಣನ ಸ್ವಹಸ್ತಾಕ್ಷರವುಳ್ಳ ರಾಮಾಶ್ವಮೇಧದ ಹಸ್ತಪ್ರತಿ ಬೆಂಗಳೂರ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿದೆ.

ಸಾಮಾನ್ಯವಾಗಿ ಹಸ್ತಪ್ರತಿ ನಕಲುಕಾರ್ಯ ಮಾಡುವವ ಒಬ್ಬನೇ ಲಿಪಿಕಾರ. ಆದರೆ ಒಂದೇ ಹಸ್ತಪ್ರತಿಯನ್ನು ಇಬ್ಬರು ಲಿಪಿಕಾರರು ಪ್ರತಿಮಾಡಿದುದನ್ನೂ ಕಾಣುತ್ತೇವೆ. ವಿರಳವೂ ವೈಶಿಷ್ಟ್ಯಪೂರ್ಣವೂ ಎನಿಸಿದ ಇಂಥ ಉದಾಹರಣೆಗಳು ಹೀಗಿವೆ.

"ಸಾಲಿವಾಹನಶಕ 1797 ಯುವನಾಮ ಸಂ॥ ಕಾರ್ತಿಕ ಶು ೧ ರೋಜ ಮಂದವಾಸಾರ ಸ್ವಾತಿ ನಕ್ಷತ್ರದಲ್ಲಿ ಸಂಪೂರ್ಣ ಬರದು ಮುಗದು. ಇದನು ತಮಗೆ ನೋಡುದರದಸಿಂದ ಕಸಬಾಬುಗಳಹಳ್ಳಿ ಹೊಸಮಠದ ವೀರಯ್ಯನವರು ಮದಲಿಂದ ಬರದು ಇರುತ್ತಾರೆ. ಅದರ ತರುವಾಯದಲ್ಲಿ ಅವರ ಅನುಜ ಗುಳ್ಳಯನವರು ಅರ್ಧ ಬರದು ಈ ಪ್ರತಿ ಮುಗಿಸಿರುತ್ತಾರೆ"[60]

"ಚನ್ನವೀರಾಚಾರ್ಯನು ಶಿವಲಿಂಗದೇವರಿಗೆ ಬೋಧಿಸಿದ ವಿಶೇಷಾನುಭವ ಷಟ್‌ಸ್ಥಲ ಸಂಪೂರ್ಣ ಮಂಗಳ ಮಹಾಶ್ರೀಶ್ರೀಶ್ರೀ. ಶಾಂತಲಿಂಗದೇಶಿಕೇಂದ್ರನು ಮೊದಲಿಟ್ಟಂತ ಶಾಸ್ತ್ರವನು ಟೀಕಿನ ಗುರುಪಾದದೇವರು ಸಮಾಪ್ತಮಂ ಮಾಗಿಸಿದರು"[61]

"ಇದನ್ನು ಬರದವರು ಯಾರ್‍ಯಾರೆಂದರೆ ಪ್ರಥಮದಲ್ಲಿ ಶ್ಯಾವಾರಪೇಟೆಯಲ್ಲಿ ಹಿರೇಹಡಗಲಿ ಹುಚ್ಚಪ್ಪ ಹಾಗೂ ಆಖೈರದಲ್ಲಿ ಬರದೋರು ಹಿರೇಮಠದ ಸ. ದಸ್ತೂರ ಬುದ್ಧ"[62]

"ಬರದವರು ಶಿವಬಸವಯ, ಮಾಟದೇವರು ಇರ್ವರು ಹಸ್ತಾಕ್ಷರ"[63] ಇಲ್ಲಿ ಮೊದಲನೆಯ ಲಿಪಿಕಾರ ಲೇಖನವನ್ನು ಅರ್ಧಕ್ಕೆ ನಿಲ್ಲಿಸಿದ ಸ್ಪಷ್ಟವಾದ ಕಾರಣವೇನೂ ತಿಳಿದುಬರುವುದಿಲ್ಲ. ಬಹುಶಃ ಆತನು ಮರಣ ಹೊಂದಿರಬಹುದು ಇಲ್ಲವೆ ದೈಹಿಕವಾಗಿ ಬರೆಯಲು ಅಸಮರ್ಥನಾಗಿರಬಹುದು.

ನಮಗೆ ಲಭಿಸುವ ಹಸ್ತಪ್ರತಿಗಳಲ್ಲಿ ನಕಲುಪ್ರತಿ (ಎಷ್ಟನೆಯದಾದರೂ ಆಗಿರಬಹುದು) ಗಳೇ ಅತ್ಯಂತ ಅಧಿಕ ಸಂಖ್ಯೆಯಲ್ಲಿರುತ್ತವೆ. ಗ್ರಂಥಸಂಪಾದನಾಕಾರ್ಯ ವಿಧಾನದ ಪ್ರಮುಖ ಹಂತಗಳಲ್ಲಿ ಹಸ್ತಪ್ರತಿಗಳ ವಂಶಾವಳಿ ನಿರ್ಣಯವೂ ಒಂದು. ಇಂಥ ನಕಲು ಪ್ರತಿಗಳಲ್ಲಿರುವ ಸಂಯೋಜಕ, ವಿಚ್ಛೇದಕ, ವಿಶಿಷ್ಟಸ್ಖಾಲಿತ್ಯಗಳ ಬಲದಿಂದ ಈ ವಂಶಾವಳಿ ನಿರ್ಣಯಿಸುತ್ತಾರೆ. ಆದರೆ ನಕಲುಪ್ರತಿಯ ಲಿಪಿಕಾರನೇ ಅದರ ಮೂಲಪ್ರತಿ (ಕವಿಯ ಸ್ವಹಸ್ತಾಕ್ಷರಪ್ರತಿ ಅಲ್ಲ) ಯನ್ನು ಹೇಳಿದ್ದರೆ ವಂಶಾವಳಿ

---

60 ಧಾವಭಾಂ, ಕಾಪ್ರ: 1674/2 ಸ್ಕಂದಪುರಾಣ (ಕನ್ನಡಾನುವಾದ)

61 ಅದೇ, ಕಾಪ್ರ: 606

62 ಅದೇ, ತಾಪ್ರ: 1221 ಷಟ್‌ಸ್ಥಲಜ್ಞಾನಸಾರಾಮೃತ

63 ಅದೇ, ಕಾಪ್ರ: 747/1 ಪಂಚತಂತ್ರ

ನಿರ್ಣಯ ಕಾರ್ಯ ಇನ್ನೂ ಸುಗಮವಾಗುತ್ತದೆ. ಕಾರಣ ನಕಲುಪ್ರತಿಯ ಮೂಲ ಪ್ರತಿ (ಕವಿಯ ಸ್ವಹಸ್ತಾಕ್ಷರ ಪ್ರತಿಯಲ್ಲ) ಯನ್ನು ಹೇಳಿರುವ ಉದಾಹರಣೆಗಳನ್ನು ಈಗ ಪರಿಶೀಲಿಸಬಹುದು.

''ಈ ಪುಸ್ತಕವು ಜಿಗಜಿನ್ನಿ ಸಿದ್ಧಲಿಂಗಪ್ಪನವರ ಪ್ರತಿ ನೋಡಿ ಬರದ್ದದ್ದು. ಶಾಲಿವಾಹನಶಕ 1761 ವಿಕಾರಿನಾಮಸಂವತ್ಸರದಲ್ಲಿ ಆಶ್ವಿನಿ (ಜ) ಶುದ್ಧ ಅಷ್ಟಮಿ ಮಂಗಳವಾರ ಹತ್ತನೇ ತಾಸಿನಲ್ಲಿ ನಾಗನೂರ ಹಿರೇಮಠದ ಉದಾಸೀನದೇವರ ಗುರು ಬಸಪ್ಪನ ಹೆಸರಿಟ್ಟು ವಿವೇಕಚಿಂತಾಮಣಿ ಪರಿಸಮಾಪ್ತಿ''[64]

"ಮಹಲಿಂಗಪುರದಲ್ಲಿ ಇರುವ ತೊಂಡಿಕಟ್ಟಿಯ ರಾಮನಗೌಡನ ವಂಶೋದ್ಭವ ನಾದ ತರಳ ಶಿವಬಸವನು ಬರದಿಹನು. ಶ್ರೀ ಗುರು ಶಾಂತೇಶ್ವರನ ದಯದಿಂದ ದುರ್ಮುಖಿನಾಮ ಸಂವತ್ಸರದ ವೈಶಾಖ ಮಾಸ ಶುಕ್ಲಪಕ್ಷ ಮಂಗಳವಾರ ಶುಭ ಮುಹೂರ್ತದಲ್ಲಿ ಮುಗಿಯಿತು. ಈ ಪ್ರತಿಯ ನೋಡಿ ಬರದವರಾರೆಂದರೆ ಬಸಪ್ಪ ಗಲಗಲಿ ಅವಧೂತಾಶ್ರಮ ಇವರ ಪುಸ್ತಕ"[65]

"ಶಿವಾನುಭಾವಿಗಳಾದ ಹೊಸಕೋಟೆಯ ಮಹಾಂತಸ್ವಾಮಿಯವರ ವಂಶೋ ದ್ಭವರಾದ ಮರಿಶಿದ್ಧಲಿಂಗಯ್ಯನವರು ಬರೆಸಿದ ಸ್ಥಲದ ವ್ಯಾಖ್ಯಾನದ ಯಥಾ ಪ್ರತಿಯು"[66]

''ಈ ಪುಸ್ತಕ ಹಿಪ್ಪರಗಿ ಕಾಡೇಶ್ವರ ಮಠದ ಅದೃಶ್ಯಪ್ಪನವರ ಪುತ್ರ ಸಿದ್ಧ ವೀರಪ್ಪನವರಲ್ಲಿದ್ದ ತಾಡವಲ್ಲಿ ತಂದು ಬರದದ್ದು''[67]

ಉಲ್ಲೇಖಗಳಿಂದ ವಿವೇಕ ಚಿಂತಾಮಣಿ, ಶೂನ್ಯಸಂಪಾದನೆ, ಏಕೋತ್ತರ ಶತಸ್ಥಲ, ಸೃಷ್ಟಿಯ ವಚನ ಟೀಕೆಗಳ ಮೂಲ ಪ್ರತಿಗಳ ವಿಷಯ ವ್ಯಕ್ತವಾಗು ತ್ತದೆ. ಹೀಗೆ ಮೂಲ ಪ್ರತಿ (ಕವಿ ಪ್ರತಿಯಲ್ಲ)ಗಳ ಮಾಹಿತಿ ದೊರೆಯುವುದು ಅತ್ಯಂತ ವಿರಳ.

ಅರಸು, ಮಾಂಡಲಿಕ ಮೊದಲಾದ ರಾಜವರ್ಗದವರು ಯಾವ ಧರ್ಮೀಯ ರಿರುತ್ತಿದ್ದರೋ ಹೆಚ್ಚಾಗಿ ಅದೇ ಧರ್ಮದ ಗ್ರಂಥಗಳನ್ನು ನಿಯುಕ್ತ ಲಿಪಿಕಾರರು ; ತಮ್ಮ ತಮ್ಮ ಧರ್ಮದ ಗ್ರಂಥಗಳನ್ನು ವೃತ್ತಿ ಮತ್ತು ಹವ್ಯಾಸಿ ಲಿಪಿಕಾರರು ಅಧಿಕ ಸಂಖ್ಯೆಯಲ್ಲಿ ಪ್ರತಿ ಮಾಡಿರುವುದು ಕಂಡುಬರುತ್ತದೆ. ಆದರೆ ಅಲಂಕಾರ,

---

64. ಅದೇ. ಕಾಪ್ರ : 1096/2
65. ಧಾವಭಾಂ, ಕಾಪ್ರ : 2029/11 ಶೂನ್ಯ ಸಂಪಾದನೆ
66. ಅದೇ. ತಾಪ್ರ : 1946 ಏಕೋತ್ತರ ಶತಸ್ಥಲ
67. ಅದೇ. ಕಾಪ್ರ : 2029/7 ಸೃಷ್ಟಿಯವಚನ ಟೀಕೆ

ಛಂದಸ್ಸು, ವ್ಯಾಕರಣ, ನಿಘಂಟು, ವೈದ್ಯ, ಜ್ಯೋತಿಷ್ಯ ಮೊದಲಾದ ಗ್ರಂಥಗಳನ್ನು ಸರ್ವಧರ್ಮೀಯರೂ ನಕಲುಗೊಳಿಸಿದ್ದಾರೆ.

ಕನ್ನಡವನ್ನೇ ಮಾತೃಭಾಷೆಯಾಗಿಸಿಕೊಂಡಿದ್ದ ಜೈನ, ವೀರಶೈವ ಲಿಪಿಕಾರರು ಸಿಂಹಪಾಲು ಗ್ರಂಥಗಳನ್ನು ಪ್ರತಿಮಾಡಿದ್ದಾರೆ. ಸಂಸ್ಕೃತ ಧರ್ಮ ಭಾಷೆ, ಕನ್ನಡ ಸಂಪರ್ಕ ಭಾಷೆಯನ್ನಾಗಿಸಿಕೊಂಡಿದ್ದ ಬ್ರಾಹ್ಮಣ ಲಿಪಿಕಾರರು ಅತ್ಯಲ್ಪ ಸಂಖ್ಯೆಯ ಕನ್ನಡ ಕೃತಿಗಳನ್ನು ನಕಲು ಗೊಳಿಸಿದ್ದಾರೆ. ಹೀಗೆ ಕನ್ನಡ ಮಾತೃಭಾಷೆಯನ್ನು ಬದುಕಿಸಿದ ಜೈನ, ವೀರಶೈವ ಲಿಪಿಕಾರರ ಸಂಖ್ಯೆಯೂ ಅವರು ಪ್ರತಿಮಾಡಿದ ಹಸ್ತಪ್ರತಿಗಳ ಮೊತ್ತವೂ ಅಧಿಕವಾಗಿದೆ.

* * * *

ಲಿಪಿಕಾರರ ಚರಿತ್ರೆಗೆ ಸಂಬಂಧಿಸಿದಂತೆ (ಅವರು ವಾಸಿಸುತ್ತಿದ್ದ) ಗ್ರಾಮ, ಗುರು, ಶಿಷ್ಯ, ತಂದೆ, ಸಹೋದರ, ಮಗ, ಮಗಳು, ಸ್ನೇಹಿತ ಹಾಗೂ ಲೇಖನ ಮಿತಿ (ಪ್ರತಿ ಸಂಪೂರ್ಣಗೊಂಡ) ಮೊದಲಾದ ಮಹತ್ವದ ಸಂಗತಿಗಳು ಹಸ್ತಪ್ರತಿಗಳ ಆದಿ, ಅಂತ್ಯ ಭಾಗದ ಪ್ರಶಸ್ತಿಗಳಿಂದ ಗೊತ್ತಾಗುತ್ತವೆ.

''ಮಹಾಮಲ್ಲನಕೆರೆ ಚೆನ್ನಬಸವೇಶ್ವರ ಸ್ವಾಮಿಗಳವರಿಗೆ ತತ್ ಶಿಷ್ಯನಾದ ಅಳವುಂಡಿಲಿರುವ ಕುಡುತಿನಿಮಠದ ಬಂಪಯ್ಯನು''[68]

''ಕೆಂಭಾವಿ ಹಿರಿಮಠದ ಪಟದ ಘನಲಿಂಗ ಚಕ್ರವರ್ತಿಗಳಾದಂಥ ಶಾಂತ್ಯಪ್ಪದೇವರು ಬರದ ದಸ್ತೂರವು''[69]

''...ಸೊಲ್ಲಾಪುರದ ಕೊಟ್ರಪ್ಪನ ಹಸ್ತಾಕ್ಷರದಿಂದ ಬರದದ್ದು''[70]

''ಕರಡಿಮಠದ ನಿಡುಮಾಮಿಡಿ ಕರಿಬಸಪ್ಪರಾಜ ದೇವರ ಶಿಷ್ಯ ಲಿಂಗಬಸವರಾಜದೇವರ ಕರಕಮಲೋದ್ಭವ ಲಿಂಗಯ್ಯ ದೇವರು, ಅವರ ವಕ್ಷೋದ್ಭವ ಮುನಿಲಿಂಗದೇವರು, ಅವರ ವುದರೋದ್ಭವ ರಾಮಯ್ಯ ದೇವರು ಈ ಪ್ರತಿ ತಮಗೆ ಬೇಕೆಂದು ಗುರುವಿನ ಕೃಪೆಯಿಂದ ಗುರುಧ್ಯಾನದಿಂದ ಗುರು ಚಿತ್ತದಿಂದ ಗುರುವನೆ ಆರಾಧಿಸುತ್ತ ತನ್ನ ಸುಹಸ್ತದಿಂದ ಈ ಪ್ರತಿಯನೆ ಬರದರು''[71]

---

68. ಅದೇ, ಕಾಪ್ರ : 2609 ಎಲ್ಲಾ ಪುರಾತನರ ವಚನ
69. ಅದೇ, ಕಾಪ್ರ : 654/1 ಷಡಕ್ಷರಸ್ವಾಮಿಗಳ ವಚನ
70. ಧಾವಭಾಂ, ಕಾಪ್ರ : 1088 ಚೆನ್ನಬಸವಪುರಾಣ
71. ಅದೇ, ಕಾಪ್ರ : 1720 ರೇವಣಸಿದ್ಧೇಶ್ವರ ಕಾವ್ಯ

"ಶ್ರೀಮದ್ಘನಲಿಂಗ ಚಕ್ರವರ್ತಿಗಳಾದ ರಾಜಾಧಿರಾಜ ಪೂಜಿತ ರಾಜ ಮಾನ್ಯ ಶ್ರೀ...ಹುನಗಂಡಿ ಹಿರೇಮಠದ ಪ್ರಭುದೇವರ ಪುತ್ರ ಪಂಚಾಕ್ಷರಿಯಪ್ಪನವರ ಗರ್ಭ ಸುಜಾತಕ ಚಲೂರಪ್ಯಾಟಿ ಸಾಲಿಮಠವ ಚನ್ನಬಸವಯ್ಯನು"[72]

"ಸಪ್ತದೀಪದ ಮಧ್ಯದ ಜಂಬೂದ್ವೀಪದಲ್ಲಿರುವ ಜಂಬುಲಿಂಗನ ಜಂಬುಖಿಂಡಿ ಸ್ಥಲದಲ್ಲಿ ಬರದ ಪುಸ್ತಕ ಪ್ರತಿ ಮಠಾರ ಇಳಿವಿಕೊಂಡರು । ನಿರ್ವಾಯ ಪ್ರಭುವಿನ ಸಂತತಿಯ ಪುತ್ರರಾದ ಬಾಗಡ ಕೋಟೆ ಸ್ಥಲದ ಟೀಕಿನಮಠದ ಪ್ರಭು ಸ್ವಾಮಿಗಳ ಸಂತತಿ ಅಚಲೇರಿ ವಿರಕ್ತಮಠದ ಬಸವಲಿಂಗಪ್ಪನವರ ಕರಕಮಲದಲಿ ವುದ್ಭವಿಸಿದಂತ ಸಿದ್ಧರಾಮನು ತನ್ನ ಮನ ಹರುಷದಿಂದ ಬರದ ಪುಸ್ತಕ"[73]

"...ಕಸಬಾಬುಗಳಹಳ್ಳಿ ಹೊಸಮಠದ ವೀರಯ್ಯನು........ಅವರ ಅನುಜ ಗುಳ್ಳೈಯ್ಯನವರು......"[74]

"ರಾಮನ ಸಾಂಗತ್ಯವ ಬರದವಳು ಓದಿಸುವ ಗುರುಬಸಪ್ಪ ದೇವರ ಮಗಳು ಸಿಂಗಮ್ಮ"[75]

"ಶ್ರೀಮನ್ನೃಪಶಾಲಿವಾಹನ ಶಕ 1785 ರುದಿರೋದ್ಗಾರಿನಾಮ ಸಂವತ್ಸರದ ಆಶ್ವಿನ (ಜ) ಮಾಸದ ಬಹುಳ ಪ್ರತಿಪದ ಮಂಗಳವಾರ ಉದಯ ತಾಸು 4 ಸಮಾಪ್ತಿಯಾಯಿತ್ತು......ಶಿವಲಿಂಗದೇವರು ತಮ್ಮ ಸ್ವಹಸ್ತದಿಂದ ಲೇಖನವ ಮಾಡಿದ್ದಿದು"[76] ಹೀಗೆ ದೊರೆಯುತ್ತಿರುವ ಲಿಪಿಕಾರರ ಚರಿತ್ರೆಯ ವಿವರಗಳು ಅಭ್ಯಾಸಯೋಗ್ಯವಾಗಿವೆ, ಜೊತೆಗೆ ಲಿಪಿಕಾರ ಅಥವಾ ಆತನ ಗುರುವಿನ ಗೋತ್ರ, ಸೂತ್ರ, ಶಾಖೆಗಳ ಬಗೆಗೂ ಮಾಹಿತಿ ಸಿಗುತ್ತದೆ. ಇದಲ್ಲದೆ ಪ್ರತಿ ಬರೆಸಿದ ವ್ಯಕ್ತಿಗಳ ಗ್ರಾಮ, ಮನೆತನದ ವಂಶಾವಳಿ, ಅವರ ವ್ಯಕ್ತಿತ್ವ–ಅಭಿರುಚಿ–ಆಸಕ್ತಿ, ಹೊಂದಿದ್ದ ಸಾಮಾಜಿಕ–ರಾಜಕೀಯ–ಧಾರ್ಮಿಕ ಸ್ಥಾನಮಾನ, ಬದುಕಿದ್ದ ಅವಧಿ, ಪ್ರಾದೇಶಿಕ ವಿವರ ಮುಂತಾದ ಅಪೂರ್ವ ಅಂಶಗಳನ್ನು ಅರಿಯಲು ಸಾಧ್ಯವಾಗುವುದು. ಈ ದಿಶೆಯಲ್ಲಿ ವ್ಯವಸ್ಥಿತವಾದ ಅಧ್ಯಯನ ಕಾರ್ಯವನ್ನು ಕೈಕೊಳ್ಳಬೇಕಾಗಿದೆ. ಹಸ್ತಪ್ರತಿಗಳನ್ನು ಬರಸಿದ ಮಠಾಧಿಪತಿ, ನಾಯಕ, ದೇಸಾಯಿ, ಒಡೆಯರ ಗ್ರಾಮ, ಕಾಲ, ಪ್ರದೇಶಗಳನ್ನು ಹೇಳುವ ಕೆಲವು ಉದಾಹರಣೆಗಳು ಹೀಗಿರುತ್ತವೆ :

---

72. ಅದೇ, ಕಾಪ್ರ : 2887 ಬಸವಪುರಾಣ
73. ಅದೇ, ಕಾಪ್ರ : 653 ವೀರಶೈವ ಷಟ್‌ಸ್ಥಲ
74. ಅದೇ, ಕಾಪ್ರ : 1674|2 ಸ್ಕಂದಪುರಾಣ (ಕನ್ನಡಾನುವಾದ)
75. ಕಗ್ರಂಸಂಶಾ, ಪುಟ : 45
76. ಧಾವಭಾಂ, ಕಾಪ್ರ : 134/3 ಪ್ರಭುದೇವರ ಟೀಕಿನ ವಚನಗಳು

"......ಶ್ರೀಮನ್ನೃಪ ಶಾಲಿವಾಹನ ಶಕಾಬ್ದ ಪರಿಮಿತ 1353 ಮನ್ಮಥನಾಮ ಸಂವತ್ಸರೇ ಫಾಲ್ಗುಣ ಮಾಸೇ ಪುತ್ತ್ರಾಯಣೇ ಶಶಿರುಕಾ (ಶಿಶಿರಋತು) ಶುಕ್ಲಪಕ್ಷೇ ೧೨ ಸೋಮವಾರೇ ಪುಷ್ಯ ನಕ್ಷತ್ರೇ ಶೋಭನನಾಮಯೋಗೇ ವೈಯಾಕರಣಕ್ಕೆ ॥ 0 ॥ ಶ್ರೀ ಬಸವೇಶ್ವರದೇವರ ಪುರಾಣ ಬರದು ಸಂಪೂರ್ಣವಾಯಿತು. ಯಿ ಪುಸ್ತಕವಂ ಬರಸಿದವರು ಆರುಯೆಂದರೆ ಶ್ರೀಮನ್ ಮಹಾನಿರಂಜನ ಜಗದ್ಗುರು ಸೂನ್ಯ ಸಿಂಹಾಸನಾಧೀಶ್ವರ ಭೂಪುರದ ಮೂರುಸಾಹಸ್ರಮಠಾಧಿಕಾರಿಗಳಾದ ಗಂಗಾಧರ ಸ್ವಾಮಿಯವರು ಕರಕಮಲೋದ್ಭವರಾದ ಗುರುಸಿದ್ಧ ಸ್ವಾಮಿಯವರು ಬರಸಿದ್ದು......"[77] "ಶ್ರೀ ತೋಂಟದ ಸಿದ್ದೇಶ್ವರದೇವರ ಸಂಪ್ರದಾಯುಕರಾದ ವಿರಕ್ತಮಠದ ನೀಲಕಂಠ ಸ್ವಾಮಿಗಳವರಿಗೆ ತಮ್ಮ ಕಾರುಣ್ಯಪ್ರಿಯ ಭಕ್ತರಾದಂಥ......ದೇವರ ವರಪ್ರಸನ್ನರಾದ ರಾಜಾಧಿರಾಜ ಶ್ರೀ ಹಂಡೇರಾಮಪ್ಪ ನಾಯಕರು ಭಕ್ತಿಯಿಂದ ಬರಸಿ ನಮಸ್ಕರಿಸಿದಂಥ ಭಕ್ತಿರಸಸೋನೆಯ ಪುಸ್ತಕ (ಶಕ 1741, ಬಹುಧಾನ್ಯ ಸಂವತ್ಸರ, ಶ್ರಾವಣ ಶುದ್ಧ 10 ಸೋಮವಾರ ಅಭಿಜಿನ್ ಮುಹೂರ್ತ ಶುಕ್ರನ ಹೋರೆ [ಗ್ರಂಥ] ಮುಕ್ತಾಯ)"[78] "ಶ್ರೀಮನ್ನೃಪ ಶಾಲಿವಾಹನಶಕ 1707ನೆಯ ವಿಶ್ವಾವಸುನಾಮಸಂವತ್ಸರದ ಶ್ರಾವಣ ಶುದ್ಧ 3 ಸೋಮವಾರ ಉತ್ರಿ ನಕ್ಷತ್ರ ಬುಧುವನ ಹೋರ್ರ್ಯದಲ್ಲಿ ಶುಭಲಗ್ನ ಶುಭಮುಹೂರ್ತದಾಗ ಪಂಚತಂತ್ರ ಪುಸ್ತಕ ಸಂಪೂರ್ಣ......ಬರಸಿದವರು ಆರೆಂದರೆ ಬೀಳಗಿಸೀಮೆ ಸೊನ್ನದ ದೇಸಾಯಿ ಭೀಮಪ್ಪನ ಸುಗರ್ಭಸಂಜಾತ ಫಕೀರಪ್ಪನ ಧರ್ಮಬಾಲಕನಾದಂಥ ಸಂಕ್ರೆಪ್ಪ। ಆತನ ವರಕುಮಾರನಾದ ಬಸಪ್ಪನು। ಈತನ ಮಗನಾದ ಮಳಿಯಪ್ಪನು......"[79]

"ಸ್ವಸ್ತಿ ವಿಜಯಾಭ್ಯುದಯ ಶಾಲಿವಾಹನಶಕ ವರುಷ 1502ನೆಯ ವಿಕ್ರಮ ಸಂವತ್ಸರದ ಕಾರ್ತಿಕ ಬಹುಳ 3 ಮಂಗಳವಾರದಲ್ಲು ಸರ್ವಾಧಾರಸಂಪಂನ ಏಕಲಿಂಗ ನಿಷ್ಠಾಪರ ವೀರಶೈವ ಸಂಪಂನ ಗುಂಮ್ಮಳಾಪುರದ ಸಿಂಹಾಸನಕ್ಕೆ ಕರ್ತೃರಾದ ವಿರಕ್ತ ಸಿದ್ಧಲಿಂಗದೇವರಿಗೆ ಹದಿನಾಡ ಎಳಂದೂರ ಅರಸು ಚೆಂನೊಡೆಯರು ಈ ಶೂನ್ಯ ಸಂಪಾದನೆಯ ವಚನ ಸಂಗ್ರಹವನು ಬರಸಿ ಸೇವಾರ್ಪಿತವಾಗಿ ನಮಸ್ಕರಿಸಿದರು"[80]

ಹೀಗೆ ಈ ಉಕ್ತಿಗಳಿಂದ ಹುಬ್ಬಳ್ಳಿ ಮೂರು ಸಾವಿರ ಮಠದ ಗುರುಸಿದ್ಧ ಸ್ವಾಮಿ (ಶಕ 1353), ಹಂಡೆರಾಮಪ್ಪನಾಯಕ (ಶಕ 1741), ಸೊನ್ನದ ದೇಸಾಯಿ

---

77 ಕಂಗ್ರಸಂ, ಪುಟ : 50

78 ಧಾವಭಾಂ, ಕಾಪ್ರ : 2582

79 ಅದೇ, ಕಾಪ್ರ : 717

80 ಅದೇ, ತಾಪ್ರ : 455

ಮಳಿಯಪ್ಪ (ಶಕ 1707), ಹದಿನಾಡ ಎಳಂದೂರ ಅರಸು ಚೆನ್ನೊಡೆಯರ ಕಾಲಾವಧಿ ಸ್ಪಷ್ಟವಾಗಿ ಗೊತ್ತಾಗುವವು.

ಹಸ್ತಪ್ರತಿಗಳ ಪ್ರಶಸ್ತಿಭಾಗದ ಸೂಕ್ಷ್ಮವಾದ, ವ್ಯವಸ್ಥಿತವಾದ ಅಧ್ಯಯನ ದಿಂದ ಕರ್ನಾಟಕದ (ಮೊದಲಿದ್ದ) ವೀರಶೈವ, ಜೈನ, ಬ್ರಾಹ್ಮಣ ಮಠಗಳ ಹೆಸರು, ಸಂಖ್ಯೆ, ಸ್ವರೂಪ, ಮಠಾಧಿಪತಿಗಳ ಹೆಸರು, ಕಾಲಾವಧಿ, ಶಿಷ್ಯಪರಂಪರೆ, ಕರ್ತವ್ಯ, ಪ್ರದೇಶಿಕ ವಿಸ್ತಾರಗಳನ್ನೂ ನಾಡಗೌಡ, ಗೌಡ, ದೇಸಾಯಿ, ನಾಯಕ, ಕರಣಿಕ ಮುಂತಾದವರಿಗೆ ಸಂಬಂಧಿಸಿದ ಚರಿತ್ರೆಯ ವಿವರಗಳನ್ನೂ ಇನ್ನು ವ್ಯಾಪಕವಾಗಿ ಗುರುತಿಸಲು ಸಾಧ್ಯವಿದೆಯೆಂಬುದನ್ನು ಮರೆಯಬಾರದು. ಇದಲ್ಲದೆ ಈ ಕೆಳಗೆ ಕೊಟ್ಟಿರುವ

"ಈ ಪುಸ್ತಕವ ದೇವರ ದಾಸ್ಮೈಯ್ಯನ ಸಂಪ್ರದಾಯಕ ಚಿತ್ತಾಪುರದ ಅಮಾತಪ್ಪನವರಿಗೆ......ಬರದುಕೊಟ್ಟ ಪಂಚತಂತ್ರದ ಕಥೆ"[81]

"ಈ ಕಥಾಗರ್ಭವನ್ನು ಬರದವನು ಕಲ್ಯಾಣದ ಕಲಬುರ್ಗಿಯ ನಡುಮಧ್ಯದ ಗ್ರಾಮವಾದ ಗೌಡನಹಳ್ಳಿಯ ಕಿನ್ನರಿಬ್ರಹ್ಮಯ್ಯಾಸ ಸಾಂಪ್ರದಾಯಕರಾದ ಮಲ್ಲಪ್ಪ ನವರ ಪುತ್ರನಾದ ಬಸಪ್ಪನು ಬರದ ಹಸ್ತಾಕ್ಷರ......"[82]

"ಚಿತ್ರಗಿ ಹಿರೇಮಠದ ಮುಪ್ಪಿನಸ್ವಾಮಿಗಳ ಶಿಷ್ಯ ಶ್ರೀಮತು ಸಜ್ಜನಶುದ್ಧ ಶ್ರೀ ಬಸವೇಶ್ವರ ಸಾಂಪ್ರದಾಯಿಕ ಶಿವಭಕ್ತ ಶಿರೋಮಣಿ ಗುರುಲಿಂಗಜಂಗಮಪ್ರೇಮಿ ಬಿಪ್ಪರಡ್ಡಿ ಸಂಗನಬಸಪ್ಪನು ತನ್ನ ಸುಹಸ್ತದಿಂದ ತನ್ನ ಮನೋಪ್ರೀತಿಯಲಿ ಮೋದಿ ಹೇಳಬೇಕೆಂದು ಬರದನು"[83]

"ಶ್ರೀಮತು ಷಟ್‌ಸ್ಥಲ ಚಕ್ರವರ್ತಿ ತೋಂಟದಾರ್ಯ ಸಂಪ್ರದಾಯರಾದ ಮುರಿಗೆಯಂ ಶಾಂತವೀರಯ್ಯನವರ ಪ್ರಬೋಧಕರಾದ ಲೋಚಿನ ರುದ್ರಯ್ಯ ನವರು......"[84]

"ಮುರಿಗಾ ಸಾಂಪ್ರದಾಯಿಕ ಶ್ರೀ ಶಿವಲಿಂಗಬಸವ ಶಾಂತನಿರಂಜನಪ್ರಭು ಗಂಗಾಧರ ಗುರುಗಳಿಂ ಈ ಲೇಖನಕ್ಕೆ ಶುಭಮಸ್ತು......"[85] ಮೊದಲಾದವು ವೀರ ಶೈವ ಶರಣರ ಸಂಪ್ರದಾಯದ ಇತಿಹಾಸವನ್ನು ತಿಳಿಸಿಕೊಡುತ್ತವೆ.

೦ ೦ ೦ ೦

---

81 ಕಗ್ರಂಸಂಶಾ. ಪುಟ: 49
82 ಅದೇ. ಪುಟ: 5೦
83 ಧಾವಭಾಂ. ಕಾಪ್ರು: 41/2 ರಾಘವೇಶ್ವರನ ಕಾವ್ಯ
84 ಅದೇ. ತಾಪ್ರು: 1867/1 ಗಿರಿಜಾ ಕಲ್ಯಾಣ
85 ಅದೇ, ತಾಪ್ರು: 403 ಬಸವರಾಜ ವಿಜಯ

ಹೆಚ್ಚಿನ ಸಂಖ್ಯೆಯ ಹಸ್ತಪ್ರತಿಗಳಲ್ಲಿ ಲಿಪಿಕಾರರು ಲೇಖನಮಿತಿ ಹೇಳಿಲ್ಲ. ಹೀಗಿದ್ದರೂ ನೂರಕ್ಕೆ ಇಪ್ಪತ್ತರಷ್ಟು ಜನ ಲಿಪಿಕಾರರು ಮಾತ್ರ ಅಂತ್ಯದಲ್ಲಿ ಹಸ್ತಪ್ರತಿ ನಕಲುಕಾರ್ಯ ಪೂರ್ಣಗೊಂಡ ಮಿತಿಯನ್ನು ಹೇಳಿರುವರು. ಆದರೆ ಆದಿಯಲ್ಲಿ ಕೇವಲ ಲೇಖನಾರಂಭದ ಮಿತಿ ಉಲ್ಲೇಖಿಸಿರುವವರು ಅಲ್ಪಜನ ಪ್ರತಿಮಾಡುವ ಕಾರ್ಯ ಆರಂಭಗೊಂಡ ಮಿತಿ, ಮುಕ್ತಾಯವಾದ ಮಿತಿಗಳನ್ನು ನಮೂದಿಸಿರುವವರು ಇನ್ನೂ ಅತ್ಯಲ್ಪ ಜನ. ಇವುಗಳಲ್ಲಿ ಈಗ ಲಿಪಿಕಾರರು ಗ್ರಂಥದ ಪ್ರಾರಂಭ ಮತ್ತು ಮುಕ್ತಾಯ ಮಿತಿಗಳನ್ನು ಹೇಳಿದ ಹಸ್ತಪ್ರತಿಗಳನ್ನು ನೋಡಬಹುದು.

''ಶಾಲಿವಾಹನಶಕ ವರುಷಂಗಳು 1769ನೆಯ ಪ್ಲವಂಗನಾಮ ಸಂವತ್ಸರದ ಕಾರ್ತಿಕ ಶುದ್ಧ 4 ಬುಧವಾರ ದಿವಸ ಚೋರಬಸವ ಚಾರಿತ್ರ ಬರವುದಕ್ಕೆ ಶುಭಮಸ್ತು......

ಪ್ಲವಂಗನಾಮ ಸಂವತ್ಸರದ ಮಾರ್ಗಶಿರ ಬ. 11 ಶುಕ್ರವಾರ ವಿಶಾಖಾ ನಕ್ಷತ್ರದಲ್ಲಿ ಚೋರಬಸವ ಚಾರಿತ್ರ ಸಂಪೂರ್ಣ ಮುಗದು ಇದ್ದಿತು''[86]

"ಶಾಲಿವಾಹನಶಕ 1756ನೇ ಪ್ರವರ್ತಮಾನ ಜಯಸಂವತ್ಸರದ ಜೇಷ್ಠ ಬ 5 ಭಾರ್ಗವ ವಾರದಲ್ಲು ಪ್ರೌಢರಾಯನ ಕಾವ್ಯವನ್ನು ಪ್ರಾರಂಭಮಾಡಿ ಬರವುದಕ್ಕೆ ಶುಭಮಸ್ತು......

ಶಾಲಿವಾಹನಶಕ ವರುಷ 1756ನೆಯ ಪ್ರವರ್ತಮಾನ ಜಯಸಂವತ್ಸರದ ಶ್ರಾವಣ ಶುದ್ಧ ಬೃಹಸ್ಪತಿವಾರ ಪ್ರೌಢರಾಯನ ಕಾವ್ಯ ಸಮಾಪ್ತ''[87]

"ಶಕ 1807 ಪಾರ್ಥಿವನಾಮ ಸಂವತ್ಸರ ಭಾದ್ರಪದ ಶುದ್ಧ 13 ಚಂದ್ರವಾರ ಆರಂಭ ಮಾಡಿ, ಭಾದ್ರಪದ ಬಹುಳ 4 ರವಿವಾರ 25 ಘಟಿಕದೊಳಗೆ ಸಂಪೂರ್ಣವಾಯಿತು"[88]

"ಬನಹಟ್ಟಿ ಮಠದಲ್ಲಿ ಆರಂಭಮಾಡಿದ್ದು. ಪ್ರಾರಂಭದ ಮಿತಿ ಶಕ 1807 ಸಾಲದಾ ಪಾರ್ಥಿವನಾಮ ಸಂವತ್ಸರ ಆಷಾಢ ವದ್ಯ ಮಂಗಳವಾರ ದಿವಸ ಹಗಲ 5 ತಾಸು...ಸಮಾಪ್ತ ಆದುದು ಹೂನೂರ ಹೊರಗಿನ ಮಠದಲ್ಲಿ. ಕರಣಹಸಿಗೆ ಮುಗಿದ ಮಿತಿ ಶಕ 1807 ಸಾಲದಾ ಪಾರ್ಥಿವನಾಮ ಸಂವತ್ಸರ ಶ್ರಾವಣ ಶುದ್ಧ 6 ರವಿವಾರ 9 ತಾಸು"[89]

---

86 ಅದೇ, ತಾಪ್ರ : 2510

87 ಅದೇ, ತಾಪ್ರ : 2516

88 ಧಾವಭಾಂ, ಕಾಪ್ರ : 1307/2 ಸೂಕ್ಷ್ಮತಂತ್ರ

89 ಅದೇ, ಕಾಪ್ರ : 2029/4

"ವರುಷಪ ಮೇಲೆ ಆರು ತಿಂಗಳು, ದಿನ 7 ಅಶ್ವಿಜ ಶುದ್ಧ ಸಪ್ತಮಿ ಸೋಮವಾರ ದಿನದಲ್ಲಿ..."[90]

ಈ ಮೇಲಿನ ಉದಾಹರಣೆಗಳು ಚೋರಬಸವ ಚಾರಿತ್ರ, ಪ್ರೌಢರಾಯನ ಕಾವ್ಯ, ಸೂಕ್ಷ್ಮತಂತ್ರ, ಕರಣಹಸಿಗೆ, ಜ್ಯೋತಿಷ್ಯಶಾಸ್ತ್ರ ಗ್ರಂಥಗಳನ್ನು ಪ್ರತಿ ಮಾಡಲು ಲಿಪಿಕಾರರು ತೆಗೆದುಕೊಂಡ ಅವಧಿಯನ್ನು ಹೇಳುತ್ತವೆ.

ಲಿಪಿಕಾರರು ಲಿಪಿಗೈದ ಸ್ಥಳಗಳನ್ನು ತಿಳಿದುಕೊಳ್ಳುವುದು ಗ್ರಂಥಸಂಪಾದನೆಯ ದೃಷ್ಟಿಯಿಂದ ಅತ್ಯಂತ ಉಪಯುಕ್ತ. ಕಾರಣ ಇದಕ್ಕಾಗಿ ಕೆಳಗಿನ ಉದಾಹರಣೆಗಳನ್ನು ಗಮನಿಸಬೇಕು :

"ಯಲಬರಿಗೆ ಸೀಮೆಯೊಳಗಣ ಮು. ಕಲ್ಲೂರ ಸ್ಥಳಕ್ಕೆ ಮುಖ್ಯ ಕರ್ತೃವಾಗಲ್ಪಟ್ಟಂಥ ಕಲ್ಮೇಶ್ವರನ ದೇವಾಲಯಂದ ರಂಗಮಧ್ಯದಲ್ಲಿ ಕುಳಿತು ಎಡದಲ್ಲಿ ಕಲ್ಲಿನಾಥ, ಬಲದಲ್ಲಿ ಬಸವೇಶ್ವರನ ಸನ್ನಿಧಿಯಲ್ಲಿ ಕುಳಿತು ಬರಕೊಂಡ ಪುಸ್ತಕವು...[91]

"ದುಮ್ಮಿಯ ವೀರೇಶ್ವರನ ಗುಡಿಯೊಳಗೆ ಮೂಡಮುಖವಾಗಿ ಕಳಿತು ಬರದ, ಗುರುಬೋಧಾಮೃತವನು, ಓದಿಸುವ ಗೋವಿಂದಯ್ಯನು..."[92]

"ಶ್ರೀಕ್ಷೇತ್ರ ಸೊನ್ನಲಾಪುರದಲ್ಲಿ ಲೇಖನ ಸಮಾಪ್ತಿ"[93]

"ಬನಹಟ್ಟಿ ಹಿರೇಮಠದಲ್ಲಿ ಮೇಲಮಾಳಿಗೆ ವಳಗ ಕೂತಕೊಂಡು ಬರದದ್ದು..."[94]

"ಬಿಜ್ಜಕಲ್ಲಮಠದಲ್ಲಿ ಪ್ರಾರಂಭಿಸಿ ತಾವರಗೆರಿಯ ಪಳಿತವಾದ ಒಂದಾಲೆಯಲ್ಲಿ ಮುಕ್ತಾಯವಾಯಿತ್ತು"[95]

"ಆದವಾನಿ ತಾಲೂಕು ಪೈಕಿ ಕುರುಕಳ್ಳಿ ಒಳಗೆ ಇರುವ ನಂದಿಪುರದ ಕರಿಬಸಯ್ಯನವರು ಚಾಣಕನೂರು ಒಳಗೆ ಸಾಲಿ ಹೇಳುವ ವ್ಯಾಳ್ಯ ಹುಡುಗರ ಗದ್ದಲ ಒಳಗೆ ಬರದು ಇದ್ದೇನೆ"[96]

---

90 ಅದೇ, ತಾಪ್ರ : 466 ಜ್ಯೋತಿಷ್ಯಶಾಸ್ತ್ರ
91 ಅದೇ. ಕಾಪ್ರ : 2606 ರಾಘವಾಂಕನ ಕಾವ್ಯ
92 ಅದೇ, ತಾಪ್ರ : 1020/1 ಗುರುಬೋಧಾಮೃತ
93 ಅದೇ. ಕಾಪ್ರ : 223/6 ಶ್ರೀಶೈಲಕಲ್ಪ
94 ಅದೇ. ಕಾಪ್ರ ; 2029/2 ಏಕೋತ್ತರ ಶತಸ್ಥಲ ಟೀಕೆ
95 ಅದೇ, ತಾಪ್ರ : 2646/4 ಷಟ್‌ಸ್ಥಲ ಜ್ಞಾನಸಾರಾಮೃತ
96 ಅದೇ. ಕಾಪ್ರ : 2718 ಶರಣ ಲೀಲಾಮೃತ

"ಸಿರಪುರ ಶ್ರೀಮಹಾಲಿಂಗೇಶ್ವರಾಧೀಶಚ್ಛತ್ರದಲ್ಲಿ ಪರಿಸಮಾಪ್ತಂ"[97]

"ನನ್ನಯ್ಯನ ಚಾರಿತ್ರ ವಾ(ಹ)ಡಗಲಿಯ ಭೀಮರಾಯನ ಮುಖಮಂಟಪದಲ್ಲಿ ಮುಗಿಯಿತ್ತು"[98]

"[ಯಡ]ರಾಮಿ ಸ್ಥಳದಲ್ಲಿ ಡಂಬಳದವರ ಗೃಹದಲ್ಲಿ ಮುಗಿಯಿತ್ತು"[99]

"ಯಿದು ಅಂದಾನಿ ಸ್ವಾಮಿಗಳ ಪಾದತ್ತಾವ ಮುಗಿತು"[100]

"ಹಾರನಹಳ್ಳಿ ನೀಲಲೋಚನಾಖ್ಯ ದೇಶೀಕೇಂದ್ರ ಕಲ್ಲುಮಠದಲ್ಲಿ ಬರೆಯಲ್ಪಟ್ಟಿತು"[101]

"ಮಂದ್ಯೆಯನ ಕೊಪ್ಪದ ಮಠದ ಮೂರಂಕಳದಲ್ಲಿ ಬರೆದು ಮುಗಿಸಿದ ಷಟ್ಕಾವ್ಯದ ಪುಸ್ತಕ"[102]

ಮಹಾಂಕಾಳೆಯೆಂಬ ಪುರಾತನರು ಇದ್ದ ಸ್ಥಾನವೆಂಬ ಜಂಬೂರ ವಿರಕ್ತ ಮಠದಲ್ಲಿ..."[103]

"ಕುಂದಗೋಳದ ಸಾದಂಗೇರಿಯ ಮೂಕಬಸವೇಶ್ವರನ ಗುಡಿಯಲ್ಲಿ ರಾಘವಾಂಕನ ಕಾವ್ಯ ಸಮಾಪ್ತಿ"[104]

"ಕಂಚುಗಲ್ಲು ಬಿದರಿಯಲ್ಲಿದ್ದ ಕಲ್ಮೇಶ್ವರನ ಗುಡಿಯಲ್ಲಿ ಸಮಾಪ್ತಿಯು"[105]

"ತ್ರಿಭುವನ ತಿಲಕ ಚೂಡಾಮಣಿ ಬಸದಿಯಂ ಚಂದ್ರನಾಥಸ್ವಾಮಿಯ ಸನ್ನಿಧಾನದಲ್ಲೂ ವೇಣುಪುರದ ಚಂದ್ರಯ್ಯನು ಬರದ ಹರಿವಂಶ ಗ್ರಂಥ"[106]

"ಕಂದಗಲ್ಲ ವಿರಕ್ತಮಠದಲ್ಲಿ ಶುಕ್ರವಾರ ಮುಕ್ತಾಯುವಾಯಿತು"[107]

---

97 ಅದೇ, ಕಾಪ್ರ : 2617|3 ರಾಜಶೇಖರ ವಿಳಾಸ
98 ಧಾವಭಾಂ, ಕಾಪ್ರ : 2031
99 ಅದೇ, ಕಾಪ್ರ : 2082 ಪ್ರಭುಲಿಂಗಲೀಲೆ
100 ಅದೇ, ತಾಪ್ರ : 179/11 ಷಟ್‌ಸ್ಥಲ ವಚನ (ಬಸವಣ್ಣ)
101 ಅದೇ, ತಾಪ್ರ : 246 ವೀರಶೈವ ಚಿಂತಾಮಣಿ
102 ಅದೇ, ತಾಪ್ರ : 1891/7 ಮನೋವಿಜಯ
103 ಅದೇ, ಕಾಪ್ರ : 1367/1 ಬಸವ ಪುರಾಣ
104 ಅದೇ, ಕಾಪ್ರ : 705 ರಾಘವಾಂಕನ ಕಾವ್ಯ
105 ಅದೇ, ಕಾಪ್ರ : 224 ಭಾವ ಚಿಂತಾರತ್ನ
106 ಅದೇ, ಕಾಪ್ರ : 2197 ನೇಮಿಜಿನೇಶ ಸಂಗತಿ
107 ಅದೇ, ತಾಪ್ರ : 2637/2 ಏಕೋತ್ತರ ಶತಸ್ಥಲ ಟೀಕೆ

"ನಾಗಲಪುರದ ಒಪ್ಪತ್ತಿನ ಸ್ವಾಮಿಗಳ ಮಠದಲ್ಲಿ ಒಂಬತ್ತನೆ ತಾಸಿನೊಳಗೆ ಸಕಲಗಣಂಗಳ ಕರುಣಾವಲೋಕನದಿಂ ಶಾಂತಮಲ್ಲದೇವನು ಬರದ ಲೇಖನದ ಪುಸ್ತಕ"[108]

"ಗದುಗಿನ ಹಿರಿಯಮಠದಲ್ಲಿ ಮುಗಿಯಿತ್ತು"[109]

"ಸುಲೇಗಾವಿ ಮಹಾನಾಡಿನ ಮಠದಲ್ಲಿ ಸಾಸಲ ಭೈರವೇಶ್ವರ ಕಾವ್ಯ ಬರದು ಸಂಪೂರ್ಣವಾಯಿತು"[110]

ಇವುಗಳಿಂದ ಲಿಪಿಕಾರರ ಮನೋಧರ್ಮ, ಹಸ್ತಪ್ರತಿಗಳ ಪ್ರಾದೇಶಿಕತೆ ತಿಳಿದು ಬರುವುದು. ಹಸ್ತಪ್ರತಿಗಳ ಆದಿ ಇಲ್ಲವೆ ಅಂತ್ಯದಲ್ಲಿ ಹೇಳುವ "ಶ್ರೀಗುರು ಕೊಟ್ಟೂರೇಶಾಯನಮಃ"[111] "ಶ್ರೀ ಮೊಗಲಿ ಸಂಗಮೇಶ್ವರಾಯನಮಃ"[112] "ಚಿತ್ತರಗಿ ಬಸವಲಿಂಗಸ್ವಾಮಿಗಳ ಪಾದವೇ ಗತಿ"[113] ಎಂಬ ಮಂಗಲವಾಚಕಗಳು ಅವರ ಇಷ್ಟದೈವವನ್ನೂ ಪ್ರಾದೇಶಿಕತೆಯನ್ನೂ ಸೂಚಿಸುವಂತಿವೆ.

ಹೀಗೆ ಲಿಪಿಕಾರರ ವಾಸಸ್ಥಳ, ಲೇಖನ ಮಿತಿ, ಲಿಪಿಗೈದ ಸ್ಥಳಗಳಿಂದ ಪ್ರಾದೇಶಿಕ ಪಾಠ ಸಂಪ್ರದಾಯ, ಆ ಕಾಲದ ಲಿಪಿಯ ಸ್ವರೂಪ, ಭಾಷೆಯಸ್ವರೂಪ ಗಳೆಂಬ ಮಹತ್ವದ ಅಂಶಗಳು ವ್ಯಕ್ತವಾಗುತ್ತವೆ.

ಲಿಪಿಕಾರರು ಗುರುವಿನ ಬಳಿಯಲ್ಲಿದ್ದು ಹಸ್ತಪ್ರತಿ ನಕಲು ಮಾಡುವುದನ್ನು ಕಲಿಯುತ್ತಿದ್ದಿಬೇಕು. "ಬರಹವ ಕಲಿಸಿದ ಮಲ್ಲಪ್ಪಯ್ಯನ ಪಾದಕ್ಕೆ ಶರಣು ಶರಣು"[114] "ವಿದ್ಯಾಗುರು ಸಿದ್ಧಲಿಂಗ ದೇವರ ಕೃಪೆಯಿಂದ ಬರೆದುಕೊಟ್ಟಾತ ಗೌಡನು"[115] ಎಂಬ ಉಲ್ಲೇಖಗಳು ಈ ಸಂಗತಿಯನ್ನು ಸೂಚಿಸುವಂತಿವೆ.

ಲಿಪಿಕಾರರು ಹಸ್ತಪ್ರತಿಗಳ ಬಗೆಗೆ ಅತ್ಯಂತ ಪೂಜ್ಯಭಾವನೆ ಹೊಂದಿದ್ದರು. ಹಸ್ತಪ್ರತಿಗಳ ಆದಿ, ಅಂತ್ಯಗಳಲ್ಲಿ ಹೇಳಿದ ಮಂಗಲವಾಚಕ ಪದಗಳು; ದೇವಾಲಯ, ಮಠ, ಪುಣ್ಯಕ್ಷೇತ್ರಗಳಲ್ಲಿ ಮಾಡಿದ ಗ್ರಂಥಲೇಖನ ಕಾರ್ಯಗಳು ಅವರು ಹಸ್ತಪ್ರತಿಗಳ ಬಗೆಗೆ ಇಟ್ಟುಕೊಂಡಿದ್ದ ಭಕ್ತಿಗೌರವ ಹಾಗೂ ಪವಿತ್ರ ಭಾವನೆಗಳನ್ನು ಪ್ರಕಟಪಡಿಸುತ್ತವೆ.

---

108 ಅದೇ, ಕಾಪ್ರ : 2637/1 ಪ್ರಭುದೇವರ ಟೀಕಿನ ವಚನ
109 ಅದೇ, ಕಾಪ್ರ : 1733/2 ಭೈರವೇಶ್ವರ ಕಾವ್ಯದ ಕಥಾಸಾಗರ
110 ಅದೇ, ಕಾಪ್ರ : 622/1 ಭೈರವೇಶ್ವರ ಚಾರಿತ್ರ
111 ಅದೇ, ಕಾಪ್ರ : ವೃಷಭೇಂದ್ರ ವಿಜಯ
112 ಅದೇ, ಕಾಪ್ರ : 219 ಅಖಂಡೇಶ್ವರ ವಚನ
113 ಅದೇ, ತಾಪ್ರ : 179/1 ಗುರುರಗಳೆ ವ್ಯಾಖ್ಯಾನ
114 ರಹ ೯, ಪುಟ : 71
115 ಸ್ವಂತ ಸಂಗ್ರಹ

ಹಸ್ತಪ್ರತಿಗಳಲ್ಲಿ ನಡೆಯುವ ಗ್ರಂಥಲೋಪ, ಗ್ರಂಥಪ್ರಕ್ಷಿಪ್ತಗಳ ಪರಿಜ್ಞಾನ ಲಿಪಿಕಾರರಿಗಿದ್ದಿತು.

"ಬಸವಪುರಾಣದಲ್ಲಿಯು ಪಟ್ಟದಂಗಳು। ಸೂತ್ರ ತಪ್ಪಿ ಹಿಂದುಮುಂದಾಗಿರುತ್ತಿದ್ದಾಗ। ಪೂರ್ವಾರ್ಧ ಉತ್ತರಾರ್ಧ ಪದನು ಹಿಂದು ಮುಂದಾಗಿದ್ದ ಕಥೆಯಂ। ಹಿಂಚುಮುಂಚಾಗಿರುತ್ತಿದ್ದ ಖಾಂಡಗಳು ಹಿಂಚು ಮುಂಚಾಗಿರುತ್ತಿದ್ದವು ॥ ೦ ॥ ಖಾಂಡವಲ್ಲಿ ಬಂದ ನಾಂದ್ಯಗಳೆ ಪುನರಪಿಯಾಗಿ ಬರುತ್ತಿದ್ದವು. ಬರಲಾಗದು... ಖಾಂಡಕ್ಕೆ ಬಂದ ನಾಂದ್ಯವೆ ಪುನರಪಿ ಪುನರಪಿಯಾಗಿ ಬರಲಾಗದು। ಎಂಬ ಸಂಜ್ಞೆಗೆ ಶುದ್ಧ ಅಂತು ಖಂಡ 8 ಕಂ ಸಂಧಿ 60 ಕ್ಕಂ ಪದನು 3621 ಕ್ಕಂ ಹೆಚ್ಚಾಗಿದ್ದಡೆ ಹೆಚ್ಚಿನದೆಂದು ತಿಳಿಯುವುದು. ಕಡಿಮೆಯಾಗಿದ್ದಡೆ ಲೇಖಿನದೋಷವೆಂದರಿಯುವುದು. ಶುದ್ಧಪ್ರತಿಯಲ್ಲಿ ನೋಡಿ ಬರೆದುದು"[116]

"ಅಂತು ಸಂಧಿ 7ಕಂ ಪದ 495 ಕ್ಕಂ ಮಂಗಳ ಮಹಾಶ್ರೀ। ಅಂತು ಕಾಂಡ 8 ಕ್ಕಂ ಸಂಧಿ 60 ಕ್ಕಂ ಪದ 3052. ಇದಕ್ಕೆ ಸೋತ್ರಪದ ಆಶೀರ್ವಾದ ಪದಗಳಿಂದ 21 ಪದನ ಕಳೆದು ಕಥಾಲಾವಣಿಗೆಗೆ 3031 ಪದನು ಭೀಮ ಕಮಿಯ ಪ್ರೋಕ್ತಂಗಳು ಗುರುಭಕ್ತನ ಕಥೆ ಮೊದಲಾದವು ಪ್ರಕ್ಷಿಪ್ತಂಗಳು. ಆ ಕಥೆಗೆ ಸೇರಿದ ಪದಗಳು ಸಂಧಿ 10 ಕ್ಕಂ ಪದ 562. ಅಂತು ಉಭಯಂ ಕೂಡಿ ಸಂಧಿ 60 ಕ್ಕಂ ಪದ 3621 ಕ್ಕಂ ಮಂಗಳ ಮಹಾಶ್ರೀ ಅಂತು ಉಭಯಂ, ॥ [116A]

"ಅಂತು ಸಂಧಿ 63 ಕ್ಕಂ ಪದನು 2883. ಇದಲ್ಲದೆ ಐವತ್ತು ಮೂರನೆ ಸಂಧಿಯಲ್ಲಿ ಇನ್ನೊಂದು ಪ್ರತಿಯಲ್ಲಿ ಇದ್ದ ಹೆಚ್ಚಿನ ಪದ 10. ಉಭಯಂ ಪದನು 2893 ಕಂ ಚೆನ್ನಬಸವಪುರಾಣ ಸಂಪೂರ್ಣಂ......"[117]

ಇವು ಬಸವಪುರಾಣ, ಚೆನ್ನಬಸವಪುರಾಣ ಪ್ರತಿಗಳಲ್ಲಿಯ ಗ್ರಂಥಲೋಪ, ಗ್ರಂಥ ಪ್ರಕ್ಷಿಪ್ತಗಳನ್ನು ಎತ್ತಿ ತೋರಿಸುತ್ತವೆ. ಇವುಗಳಲ್ಲದೆ

"ಸವರಿ ಬರೆವ ಸಂಗ್ರ ಸಂಪೂರ್ಣ ಇಲ್ಲದ ಕಾರಣ ಅರ್ಥ ಬರೆದು ಇರುತ್ತದೆ. ತಿಳಿದಿರಬೇಕು"[118]

"ಮುಂದೆ ದೊಡ್ಡಪ್ರಕರಣಕ ವಾಲಿ ಸಾಲಲಿಲ್ಲ. ಮತ್ತೆ ಬರದೇವೆಂತ ಬಿಟ್ಟೆವು. ಬರೆಯೋಣವಾಗಲಿಲ್ಲ. ಇನ್ನುವಾದರು ನಿಘಂಟುಕಾರರು ವಿಚಾರಿಸಿ ಬರೆಯಬೇಕು."[119]

116 ಧಾವಭಾಂ, ತಾಪ್ರ : 1367/6 ಬಸವ ಪುರಾಣ

116A ಅದೇ, ಕಾಪ್ರ : 1193 ಬಸವಪುರಾಣ

117 ಅದೇ, ಕಾಪ್ರ : 1016 ಚೆನ್ನಬಸವಪುರಾಣ

118 ಅದೇ, ಕಾಪ್ರ : 2939/ ಜ್ಞಾನಸಿಂಧು (?)

119 ಅದೇ, ಕಾಪ್ರ : 1046 ರಾಜಶೇಖರ ವಿಳಾಸ ಟೀಕೆ

ಈ ಪ್ರಸಾದ ಚಿಂತಾಮಣಿ ಪುಸ್ತಕಾ ವುದಗಿರಿಯಲ್ಲಿ ಜವಕಿಮಠದಾ ಚೆನ್ನಯ್ಯನು ಈ ಪುಸ್ತಕಾ ಪೂರ್ಣವಿಲ್ಲದಕ್ಕಾಗಿ ಇಲ್ಲಿಗೆ ಸವಾಪ್ತ"[120]

"ವಚನಗಳ ಸಂಖ್ಯೆ ಪೂರ್ವಪ್ರತಿ ಲೇಖಕ ಬರಿಯದ ಕಾರಣ ಶ್ರೀಬಸವೇಶ್ವರ ದೇವರ ವಚನದೊಳಗಣಕ್ಷರಗಳ ಕ್ಲುಪ್ತಿಗೆ ತರುವ ಬುದ್ಧಿಗಳಿಲ್ಲ. ವಚನಗಳಿಗ್ಯಾತರ ಕ್ಲುಪ್ತಿಯಿಂದಂ ಬಿಟ್ಟಿದ್ದಾರಾದೀತೆಂದು ನಾನು ಬರಿಯಲಿಲ್ಲವು"[121]

ಎಂಬ ವಿಶೇಷ ಉದಾಹರಣೆಗನ್ನು ಇಲ್ಲಿ ಲಕ್ಷಿಸಬೇಕು.

x x x x

ಹಸ್ತಪ್ರತಿ ಹಾಗೂ ಶಾಸನ ಲಿಪಿಕಾರರ ಲೇಖನ ಪರಿಣತಿ, ಸೌಂದರ್ಯಪ್ರಜ್ಞೆಗಳನ್ನು ಸುಂದರ ಲೇಖನ, ಅಲಂಕಾರಲೇಖನ, ಶೀಘ್ರಲೇಖನ, ಬಹುಲಿಪಿಲೇಖನ, ಸಣ್ಣಲಿಪಿ ಲೇಖನಗಳೆಂದು ವಿದ್ವಾಂಸರು ಪರಿಭಾವಿಸಿದ್ದಾರೆ.[122] ಆದರೆ ಹಸ್ತಪ್ರತಿ ಲಿಪಿಕಾರರು ಕೇವಲ ಸುಂದರಲೇಖನ, ಸಣ್ಣಲಿಪಿಲೇಖನ ಪರಿಣತಿ ಹೊಂದಿದುದು ಕಂಡು ಬರುತ್ತದೆ.

ಸುಂದರ ಲೇಖನ

ಕೆಲವು ಲಿಪಿಕಾರರು ಕನ್ನಡ ಅಕ್ಷರಗಳನ್ನು ಮುತ್ತಿನಂತೆ ಬರೆದಿದ್ದಾರೆ. ಇಂಥ ಲಿಪಿಕಾರರ ಗುಂಪಿಗೆ ಸೇರುತ್ತಾನೆ, ಪುಷ್ಪದಂತ ಪುರಾಣವನ್ನು ಪ್ರತಿಮಾಡಿದ ನವಿಲ್ಗುಂದದ ಮಾದಿರಾಜ. ಈತನು ಬಿಂದುವಿನೊಂದು ಶೋಭೆ, ತಲೆಕಟ್ಟಿನ ಪೊರ್ಕುಳಿ ಚೆಲ್ವು, ಮಾತ್ರೆಯೊಳ್ ನಿಂದ ಬೆಡಂಗು, ಬಳ್ಳಿಯೊಳೊಡಂಬಡುತಿರ್ದ ನಯಂ, ವಿಸರ್ಗದೊಳ್ಪೊಂದಿರಲಕ್ಕರಕ್ಕೆ ಬರೆವಂ ಚದುರರ್ ಪರಿವರ್ಣಿಸಲ್ ನವಿಲ್ಗುಂದದ ಮಾದಿರಾಜ ವಿಬುಧಂ ವಿಬುಧೋದಿತ ನವ್ಯ ಕಾವ್ಯಮಂ ॥ ಎಂಬ ಪದ್ಯದಲ್ಲಿ[123] ಬರೆವಣಿಗೆಯ ಚಲುವಿಕೆ, ಸುಸ್ಪಷ್ಟತೆಗಳನ್ನು ಒತ್ತಿ ಹೇಳಿದ್ದಾನೆ.

ಸಣ್ಣಲಿಪಿ ಲೇಖನ

ಲಿಪಿಕಾರರಲ್ಲಿ ಕೆಲವರು ಇದನ್ನು ಒಂದು ಕಲೆಯಾಗಿ ಪರಿಪಾಲಿಸಿಕೊಂಡು ಬಂದುದು ಸ್ಪಷ್ಟವಾಗುತ್ತದೆ. ಇಲ್ಲಿಯ

---

120 ಅದೇ. ಕಾಪ್ರ : 522/1 ಪ್ರಸಾದ ಚಿಂತಾಮಣಿ ಟೀಕೆ
121 ಅದೇ. ಕಾಪ್ರ : 1073 ಸಿಂಗಿರಾಜ ಪುರಾಣ
122 ಕಗ್ರಂಸಂಶಾ. ಪುಟ : 52
123 ಕಗ್ರಸಂಶಾ. ಪುಟ : 54

"...ಚೆನ್ನವೀರದೇವರು ಸಣ್ಣ ಬರಹದ ಗುರುನಂಜಯ್ಯನವರಿಗೆ ಲೇಖಿಸವ ಬರದುಕೊಟ್ಟ"[124]

"ಸಂಪಾದನೆಯು ಸಂಣ ಬರಹದ ಗುರುಬಸವರಾಜದೇವರು ಸೇರಿಸಿದ ಶರಣ ಚಾರಿತ್ರದ ವಚನ"[125]

"ಸಂಣ ಬರಹದ ಗುರುಬಸವರಾಜದೇವರು ಶ್ರೀಪಾದ ಕಟಾಕ್ಷದಿಂದ ಶಿವಲಿಂಗ ದೇವರಿಗೆ ಟೀಕು ಯೋತೋತ್ತರ ಸಮಾಪ್ತಿ"[126]

ಎಂಬ ಮಾತುಗಳು ಗುರುನಂಜಯ್ಯ ಹಾಗೂ ಗುರುಬಸವರಾಜದೇವರ "ಸಂಣ ಬರಹ"ವನ್ನು ತಿಳಿಸುವವು.

ಹೀಗೆ ಸುಂದರಲೇಖನ, ಸಣ್ಣಲಿಪಿ ಲೇಖನಗಳನ್ನು ಕಲೆಯಾಗಿ ಪೋಷಿಸಿ ಕೊಂಡುಬಂದ ಲಿಪಿಕಾರರು ಹಲವು ಸಂಖ್ಯೆಯ ಹಸ್ತಪ್ರತಿಗಳನ್ನು ಲಿಪಿಗೊಳಿಸಿದ್ದಾರೆ. ಇದಲ್ಲದೆ ಸಾಮಾನ್ಯಲಿಪಿಕಾರರು ಸಾವಿರಾರು ಸಂಖ್ಯೆಯ ಗ್ರಂಥಗಳನ್ನು ಪ್ರತಿಮಾಡಿ ದ್ದಾರೆ. ಇದು ಲಿಪಿಕಾರರು ನಾಡಿನ ಕವಿಗಳನ್ನು ಅಮರರನ್ನಾಗಿಸಿದ, ನಾಡವರ ಸಂಸ್ಕೃತಿಯನ್ನು ಅಕ್ಷಯವಾಗಿ ಉಳಿಸಿದ ಪರಮ ಪುಣ್ಯಕಾರ್ಯ. ಹಸ್ತಪ್ರತಿಗಳ ಮೂಲಕ ಇಂಥ ಲಿಪಿಕಾರರ. "ಬದುಕಿನ ಶಿಸ್ತು-ಅಶಿಸ್ತು, ಹೊಣೆಗಾರಿಕೆ-ಹೊಣೆ ಗೇಡಿತನ, ಗಂಭಿರ-ಲಘು ಸ್ವಭಾವಗಳೆಲ್ಲ ವೇದ್ಯವಾಗುತ್ತವೆ. ಆದಕ್ಕಾಗಿ ಒಂದರ್ಥ ದಲ್ಲಿ ಹಸ್ತಪ್ರತಿಗಳ ಅಭ್ಯಾಸವೆಂದರೆ ಪ್ರಾಚೀನ ಲಿಪಿಕಾರರ ಮನೋಧರ್ಮದ ಅಭ್ಯಾಸವೆನಿಸುತ್ತದೆ" ಎಂಬ ಡಾ. ಎಂ. ಎಂ. ಕಲಬುರ್ಗಿ[127] ಅವರ ಮಾತು ಹೆಚ್ಚು ಅರ್ಥಪೂರ್ಣವಾಗಿದೆ.

ವಿವಿಧ ಮಟ್ಟದ ಲಿಪಿಕಾರರು ತಾವು 'ಪ್ರತಿಸಮಾನವಾಗಿ' 'ಪ್ರತಿಯಿದ್ದಂತೆ' ನಕಲುಕಾರ್ಯ ಮಾಡಿರುವುದಾಗಿ ಹೇಳಿದ್ದಾರೆ. ಹೀಗಿದ್ದರೂ ಹಸ್ತವೇಗ, ಮರಹು, ಆಲಸ್ಯಗಳಿಂದ ಅನೇಕ ತಪ್ಪುಗಳು ಹಸ್ತಪ್ರತಿಗಳ ಒಡಲಲ್ಲಿ ಮೂಡಿನಿಂತಿವೆ. ಇವು ಮುಂದೆ ಬಳಿನಕಲು, ಪ್ರತಿನಕಲುಗಳಲ್ಲಿ ದಟ್ಟವಾಗಿ ಬೆಳೆದುಬಂದಿವೆ. ಕಾರಣ ತಪ್ಪುಗಳಾಗದಂತೆ ಪ್ರತಿಮಾಡುವ ಆದರ್ಶ ವ್ರತವನ್ನು ಲಿಪಿಕಾರರು ಹಿಡಿದರು, ತ್ರಿಕರಣಪೂರ್ವಕ ಅದನ್ನು ಪಾಲಿಸಿದರು. ಹಸ್ತಪ್ರತಿಗಳ ಅಂತ್ಯದಲ್ಲಿರುವ

124 ಧಾವಭಾಂ, ತಾಪ್ರ : 623 ಬಸವರಾಜವಿಜಯ

125 ಕಗ್ರಸಂಶಾ. ಪುಟ : 56

126 ಅದೇ.

127 ಅದೇ, ಪುಟ : 57

ಯಾದೃಶಂ ಪುಸ್ತಕಂ ದೃಷ್ಟ್ವಾತಾದೃಶಂ ಲಿಖಿತಂ ಮಯಾ
ಅಬದ್ಧೋ ವಾ ಸುಬದ್ಧೋ ವಾ ಮಮ ದೋಷೋ ನ ವಿದ್ಯತೇ ॥

ತಪ್ಪಂ ಬರೆದಾತಂ ಕಡುಜಡ
ನಪ್ಪಾತನೆಂದು ಬಯ್ಯಲ್ ಬೇಡಂ
ತಪ್ಪಿಲ್ಲ ಶುದ್ಧಮಕ್ಕುಂ
ತಪ್ಪಿಲ್ಲದೆ ಪ್ರತಿಸಮಾನವಾಗಿಯೆ ಬರೆದೆಂ ॥

ಬಲ್ಲಪುರುಷರು ನೋಡಿ ಗ್ರಂಥದ
ಸೊಲ್ಲು ತಪ್ಪೆಂಕೆದು ಬರದನ
ಹೊಳ್ಳುಗಳೆಯದೆ ನೀತಿಯಲಿ ತಿದ್ದುದು ಮನವೊಲಿದು
ಬಲ್ಲವನು ತಾನಲ್ಲ ಪ್ರತಿಯೊಳ
ಗುಳುಳಿದನು ನೋಡುತ್ತ ಬರೆದೆನು
ಸಲ್ಲದಾವುದು ಸಲುವುದಾವುದುಯೆಂದು ನಾನರಿಯೆ ॥'[128]

॥ ಯಿಂತು ಸೇರಿವೆಯ ಕ್ರಮದಲ್ಲಿ ತಪ್ಪುಳ್ಳಡೆ ನಿಮ್ಮ ಅಕ್ಷರಜ್ಞಾನದಿಂದಲಿ ತಿದ್ದಿ ಯಿವನಾನುಭಾವ ಪ್ರಸಂಗಮಂ ಶುದ್ಧಮಾಡಿ ಸುಖಿಸುವುದು । ತಪ್ಪು ಬರದುದ ಕಂಡು ಜರಿದು ನುಡಿಯಲುಬೇಡ । ತಪ್ಪು ಮರವಿಂಗಲ್ಲದೆ ಬರೆವಂಗುಂಟೆ? ನಾನಾದರು ಪ್ರತಿಯಿದ್ದಂತೆ ಬರೆದಿದ್ದೇನೆ. ತಪ್ಪುಳ್ಳಡೆ ಬಲ್ಲವರು ತಿದ್ದಿ ಲಕ್ಷಣಮನ ಪಸುವದು । ನಿಮ್ಮ ಧರ್ಮ ನಿಮ್ಮ ಧರ್ಮ ಶರಣು ಶರಣಾರ್ಥಿ"[129]

ಎಂಬ ಪದ್ಯ, ಗದ್ಯಗಳಲ್ಲಿ ಲಿಪಿಕಾರರ ಶ್ರದ್ಧೆ, ನಿಷ್ಠೆ, ವಿಧೇಯತೆ, ಪ್ರಾಮಾಣಿಕತೆಗಳು ಒಡೆದು ಕಾಣುತ್ತವೆ. ಇದ್ದುದನ್ನು ಇದ್ದಂತೆ ಬರೆದಿದ್ದೇನೆ, ತಪ್ಪು ನನ್ನದಲ್ಲ ಮೂಲ ಪ್ರತಿಯದುಯೆಂದು ಹೇಳುವ ಇವರ ನೇರ ಮನಸ್ಸು ಮೆಚ್ಚುವಂತಹದಾಗಿದೆ. ಮರಹು, ಆಲಸ್ಯ, ಹಸ್ತವೇಗ ದೃಷ್ಟಿದೋಷ, ಶ್ರವಣದೋಷಗಳಿಂದ ಗ್ರಂಥಗಳಲ್ಲಿ ತಪ್ಪುಗಳಾಗುವುದು ಸಹಜ. ಆದುದರಿಂದ ಈ ಅನಿವಾರ್ಯ ತಪ್ಪುಗಳನ್ನು ಮನ್ನಿಸಬೇಕೆಂದು

ಕರವೇಗದೊಳಗಾಲಸ್ಯದಿ
ಭರದೊಳು ಉರು ಮದದಿಂ ಹಂಕಾರದಿಂ
ಬರೆದ ಲಿಪಿಯೊಳು ತಪ್ಪಿ
ದ್ದರಿದನು ಕೂಡಿ ನೆರೆ ತಿದ್ದಿ ಮೆರೆವುದು ಸುಜನರು ॥[130]

---

128 ಕಗ್ರಂಸಂಶಾ, ಪುಟ 58

129 ಧಾವಭಾಂ, ಕಾಪು 335/1 ಗಣಭಾಷಿತರತ್ನಮಾಲೆ

130 ಕಗ್ರಸಂಶಾ, ಪುಟ 59

ಪದಪದ್ಧತಿಗಳ ಬರದವ
ನಥವುಂ ಪಾಪಂಡಿ ಮಾತ್ರೆಗಳಿಂ ಜನವರಿಯದೆ
ಮುದಡಿದೆ ಕೃತಿಗೆಟ್ಟನೆನ್ನದಿಂ
ಚದುರರು ತಪ್ಪಿದರೆ ತಿದ್ದಲು ಕೀರ್ತಿ ತರುಕು ।।131

ಕವಿತೆಯ ಗುಣಮನೆ ತಿಳಿಯದೆ
ಯಿವನೇತಕೆ ಬರೆದನೆಂದು ನಿಂದಿಸ......
ಶಿವಶರಣರೆನ್ನ ತಪ್ಪನು
ವಿವರಿಸದೆ ತಿದ್ದಿ ತಪ್ಪು, ನಮಿಸುವೆ ನಿಮಗಂ ।।132

ಕುಂದಿದ ಪದಕ್ಷರಂಗಳ
ಒಂದೊಂದ ತೆಗೆದು ಈಗಲಿ ಬಯ್ಕಲಿ ಬೇಡ
ಮುಂದುಗೆ ಬೇಕೆಂದು ಭಕ್ತರ
ಚಂದದಿ ಶ್ರೀಚರಣವ ನೆನೆವೆನು ನಡಿಸಿ ಪ್ರತಿಯಂ ।।133

ಎಂಬ ಪದ್ಯಗಳಲ್ಲಿ ಅವರು ಕಳಕಳಿಯ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಇಂಥ ಪದ್ಯಗಳನ್ನು ಪ್ರೌಢಲಿಪಿಕಾರರಲ್ಲಿ ಮಾತ್ರ ಕಾಣುತ್ತೇವೆ. ಇವು ಆಯಾ ಲಿಪಿಕಾರರ ಸ್ವಂತ ರಚನೆಗಳಾಗಿರಬಹುದು ಇಲ್ಲವೆ ಸಾಂಪ್ರದಾಯಿಕವಾಗಿ ಬಳಸಿಕೊಂಡಂಥವು ಗಳಾಗಿರಬಹುದು. ಸಾಮಾನ್ಯ ಲಿಪಿಕಾರರು ತುಂಡುಗದ್ಯಗಳಲ್ಲಿ ವಿವಿಧ ರೀತಿಯಾಗಿ ವಿನಂತಿಸಿಕೊಂಡಿದ್ದಾರೆ. ಪದ್ಯಗಳಿಗಿಂತಲೂ ಗದ್ಯದಲ್ಲಿ ಸ್ವತಂತ್ರ ರಚನೆ ಅಧಿಕ ವೆನಿಸುತ್ತದೆ. ಒಟ್ಟಿನಲ್ಲಿ ತಪ್ಪುಗಳನ್ನು ತಿದ್ದಿಕೊಳ್ಳಬೇಕೆಂಬ ಲಿಪಿಕಾರರ ಪ್ರಾರ್ಥನೆ ಸ್ವಂತ ಗದ್ಯ ಹಾಗೂ ಸಾಂಪ್ರದಾಯಿಕ ಪದ್ಯಗಳಲ್ಲಿ ವಿಪುಲವಾಗಿಯೂ ಸ್ವಂತ ಪದ್ಯ ಗಳಲ್ಲಿ ವಿರಳವಾಗಿಯೂ ಇರುವುದು ಗೊತ್ತಾಗುತ್ತದೆ.

ಭಕ್ತಿ, ಪ್ರೀತಿ, ಉತ್ಸಾಹ, ಪರಿಶ್ರಮ, ಪ್ರಯತ್ನ ಹಾಗೂ ಸಮರ್ಪಣ ಭಾವನೆಯಿಂದ ತಾವು ಮಾಡಿದ ಸಕಲ ಕಾರ್ಯ ಮುಂದಿನ ಜನಾಂಗಕ್ಕೆ ನಡೆದು ಬರುವಂತಾಗಬೇಕು, ಲೇಖನತಪಸ್ಸು ಲೋಕದ ಜನರಿಗೆ ಸದ್ವಿನಿಯೋಗವಾಗ ಬೇಕೆಂಬ ದಾರ್ಶನಿಕ ದೃಷ್ಟಿ ಲಿಪಿಕಾರರದು. ಆದುದರಿಂದ ಲೇಖನ, ಸಂರಕ್ಷಣ ಕಾರ್ಯಗಳೆರಡೂ ಲಿಪಿಕಾರರಿಗೆ ಸಮಾನ ಮಹತ್ವದವುಗಳಾಗಿ ಪರಿಣಮಿಸಿದವು. ಅಲ್ಲದೆ ಲಿಪಿಕಾರರ ದೃಷ್ಟಿಯಲ್ಲಿ ಗ್ರಂಥಗಳು ದೈವೀ ಸ್ವರೂಪವನ್ನು ಪಡೆದಿದ್ದವು. ಹೀಗಾಗಿ ಅವುಗಳನ್ನು ನಾಶವಾಡಬಾರದು ಎಂದು ಅಂತಃಕರಣಪೂರ್ವಕವಾಗಿ ಬಿನ್ನವಿಸಿಕೊಂಡಿದ್ದಾರೆ. ಹಸ್ತಪ್ರತಿಗಳ ಅಂತ್ಯದಲ್ಲಿರುವ

---

131 ಸ್ವಂತ ಸಂಗ್ರಹ
132 ಧಾವಭಾಂ, ತಾಪ್ರ : 421/11 ಮಲ್ಲೇಶ್ವರನಾಂದ್ಯ
133 ಅದೇ, ಕಾಪ್ರ : 1647 ಗುರುಬೋಧಾಮೃತ

ಭಗ್ನಪೃಷ್ಠಕಟಿಗ್ರೀವಾ ಬದ್ಧದೃಷ್ಟಿರಥೋಮುಖಂ
ಕಷ್ಟೇನಲಿಖಿತಂ ಶಾಸ್ತ್ರಂ ಯತ್ನೇನ ಪರಿಪಾಲಯನ್ ।।

(ಬೆನ್ನು, ಸೊಂಟ, ಕೊರಳುಗಳನ್ನು ನೋಯಿಸಿಕೊಂಡು ಮುಖ ಕೆಳಗೆಮಾಡಿ ಕಣ್ಣಲ್ಲಿ ಕಣ್ಣಿಟ್ಟು ಅತ್ಯಂತ ಕಷ್ಟಪಟ್ಟು ಬರೆದಿರುವ ಈ ಶಾಸ್ತ್ರವನ್ನು ಪ್ರಯತ್ನಪೂರ್ವಕವಾಗಿ ಕಾಪಾಡಿರಿ)

ತೈಲಾದ್ರಕ್ಷೇ ಜ್ವಲಾದ್ರಕ್ಷೇದ್ರಕ್ಷೇಚ್ಛಿಥಿಲಬಂಧನಾತ್
ಮೂರ್ಖ ಹಸ್ತೇ ನ ದಾತ್ಯಮೇವಂ ವದತಿ ಪುಸ್ತಕಂ ।।

(ನನ್ನನ್ನು ಎಣ್ಣೆಯಿಂದ ರಕ್ಷಿಸಿರಿ, ಜಲದಿಂದ ರಕ್ಷಿರಿಸಿ, ಸಡಿಲು ಕಟ್ಟುವಿಕೆಯಿಂದ ರಕ್ಷಿಸಿರಿ. ಮೂರ್ಖನ ಕೈಯಲ್ಲಿ ನನ್ನನ್ನು ಕೊಡಬೇಡಿರಿ–ಎಂದು ಪುಸ್ತಕ ಹೀಗೆ ಬೇಡಿಕೊಳ್ಳುತ್ತದೆ)

ಪುಸ್ತಕಂ ವನಿತಾ ವಿತ್ತಂ ಪರಹಸ್ತ ಗತಂ ಗತಂ
ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾಚ ಖಂಡಶಃ ॥

[ಪುಸ್ತಕ, ಸ್ತ್ರೀ, ಧನ–ಈ ಮೂರು ಬೇರೆಯವರ ಕೈಸೇರಿದರೆ ಹೋದಂತೆಯೇ. ಒಂದುವೇಳೆ ಅವು ತಿರುಗಿಬಂದರೆ (ಪುಸ್ತಕ) ಜೀರ್ಣವಾಗಿರುತ್ತದೆ, (ಸ್ತ್ರೀ) ಭ್ರಷ್ಟಳಾಗಿರುತ್ತಾಳೆ, (ಧನ) ಭಾಗಶಃ ಬರುತ್ತದೆ] ಎಂಬ ಮಾತುಗಳು ಲಿಪಿಕಾರರಿಗಿದ್ದ ಗ್ರಂಥರಕ್ಷಣೆಯ ಭಾವನೆಯನ್ನು ಪ್ರಚುರಪಡಿಸುತ್ತವೆ.

ಸಂಕ್ಷೇಪಗಳು :

ಕಗ್ರಸಂ—ಕನ್ನಡ ಗ್ರಂಥ ಸಂಪಾದನೆ
ಕಗ್ರಂಸಂಶಾ—ಕನ್ನಡ ಗ್ರಂಥಸಂಪಾದನಾಶಾಸ್ತ್ರ
ಕಕಚ—ಕರ್ನಾಟಕ ಕವಿಚರಿತೆ
ಕಹಪ್ರಇ—ಕನ್ನಡ ಹಸ್ತಪ್ರತಿಗಳ ಇತಿಹಾಸ
ಕಾಪ್ರ—ಕಾಗದ ಪ್ರತಿ
ತಾಪ್ರ—ತಾಳೆಗರಿ ಪ್ರತಿ
ಧಾವಭಾಂ—ಧಾರವಾಡ (ಕನ್ನಡ ಅಧ್ಯಯನ ಪೀಠ) ವಚನಸಾಹಿತ್ಯ ಹಸ್ತಪ್ರತಿ ಭಾಂಡಾರ
ಮೈಹಸೂ—ಮೈಸೂರು ಹಸ್ತಪ್ರತಿ ಸೂಚಿ

ಬನವಾಸಿ: ಸ್ಥಳನಾಮ ವಿವೇಚನೆ

ಎಂ. ಎಂ. ಕಲಬುರ್ಗಿ

ಸ್ಥಳನಾಮ ವಿದ್ವಾಂಸರಿಗೆ 'ಬನವಾಸಿ' ಹೆಸರಿನ ನಿಷ್ಪತ್ತಿ ಇಂದಿಗೂ ಒಂದು ಆಹ್ವಾನವಾಗಿ ನಿಂತಿದೆ. ನಮ್ಮ ನಾಡಿನ ಪ್ರಾಚೀನತಮ ಮತ್ತು ಪ್ರಥಮ ರಾಜಧಾನಿಯಾದ ಇದು ಬೌದ್ಧ–ಜೈನ-ಹಿಂದೂ ಕೃತಿಗಳಲ್ಲಿ, ಪ್ರವಾಸಿಗಳ ದಿನಚರಿಗಳಲ್ಲಿ, ಶಾಸನ ಐತಿಹ್ಯಗಳಲ್ಲಿ ಉದ್ದಕ್ಕೂ ಉಲ್ಲೇಖಗೊಂಡಿದೆ. ಅಲ್ಲಿ ಜಯಂತಿ-ವೈಜಯಂತಿ ಮತ್ತು ಇವುಗಳ ಅನೇಕ ರೂಪಗಳೂ, ಬನವಸೆ-ಬನವಾಸಿ ಮತ್ತು ಇವುಗಳ ಅನೇಕ ರೂಪಗಳೂ ಕಂಡುಬರುತ್ತವೆ. ಈ ಬನವಸೆ-ಬನವಾಸಿಗಳಲ್ಲಿ ಯಾವುದು ಮೂಲ, ಯಾವುದು ನಿಷ್ಪನ್ನವೆಂಬುದು ಚಿಂತನೀಯ ವಿಷಯವಾಗಿದೆ.

ಕನ್ನಡ ಪದಗಳ ಪ್ರಾರಂಭದಲ್ಲಿ ಒಂದು ದೀರ್ಘ ಇಲ್ಲವೆ ಎರಡು ಹ್ರಸ್ವ ವರ್ಣಗಳು ಅತ್ಯವಶ್ಯ. ತರುವಾಯದ ಅಕ್ಷರ ಹ್ರಸ್ವವಾಗಿದ್ದರೂ ಆಡುಮಾತಿನಲ್ಲಿ ದೀರ್ಘವಾಗುತ್ತದೆ-ಮಾದರ ಚೆನ್ನಯ್ಯ > ಮಾದಾರ ಚೆನ್ನಯ್ಯ. ಹೊಸಕೆರೆ > ಹೊಸಕೇರಿ. ಈ ಮೇರೆಗೆ ಬನವಸೆ > ಬನವಾಸೆ ಆಗಿ, ಪದಾಂತ್ಯದ 'ಎ' ಕಾರವು 'ಇ' ಕಾರವಾಗುವ ತತ್ವಕ್ಕನುಸರಿಸಿ ಕೊನೆಗೆ ಇದು 'ಬನವಾಸಿ' ಎಂಬ ರೂಪಕ್ಕೆ ತಿರುಗಿದೆ. ಒಟ್ಟಿನಲ್ಲಿ 'ಬನವಸೆ' ಮೂಲದ ಶುದ್ಧರೂಪ, 'ಬನವಾಸಿ' ತರುವಾಯದ ಅಶುದ್ಧ ರೂಪ.

ಯಾವುದೇ ಪದಕ್ಕೆ ಎರಡು ರೂಪಗಳಿದ್ದರೆ ಗ್ರಂಥ ಸಂಪಾದನ ತತ್ವದ ಪ್ರಕಾರ ಇವುಗಳಲ್ಲಿ ಸಾಮಾನ್ಯವಾಗಿ ಸರಳರೂಪ ಅರ್ವಾಚೀನವಾಗಿರುತ್ತದೆ; ಅಶುದ್ಧವಾಗಿರುತ್ತದೆ. ಈ ಮೇರೆಗೆ ಕೆಲವು ವಿದ್ವಾಂಸರು "ಬನ + ವಾಸಿ" ಎಂದು ತೊಂದರೆಯಿಲ್ಲದೆ ಅರ್ಥವತ್ತಾಗಿ ಬಿಡಿಸಿ ಒಪ್ಪಿಕೊಂಡಿರುವ "ಬನವಾಸಿ" ಎಂಬ ಸರಳರೂಪ ಅರ್ವಾಚೀನ, ಅಶುದ್ಧವೆನ್ನಬೇಕಾಗುತ್ತದೆ. ಇದಲ್ಲದೆ ಇವರ ಮಾದರಿಯಲ್ಲಿಯೇ ತೊಗರಸೆ, ವಡ್ಡರಸೆ ಗ್ರಾಮನಾಮಗಳನ್ನು ಕರ + ವಸೆ, ತೊಗ + ರಸೆ ಎಂದು ಬಿಡಿಸಿ, ಪೂರ್ವಪದ ಹೋಗಲಿ, ಉತ್ತರ ಪದಗಳಾದ ವಸೆ, ರಸೆಗಳಿಗೆ ಏನು ಅರ್ಥ ? ಎಂದು ಕೇಳಿದರೆ ಇವರು ನಿರುತ್ತರರಾಗುತ್ತಾರೆ. ಆದುದರಿಂದ 'ಬನವಸೆ'ಯನ್ನೇ ಶುದ್ಧರೂಪವೆಂದಿಟ್ಟುಕೊಂಡು ಈ ಮಾದರಿಯ ಹೆಸರುಗಳನ್ನು—

೧.	ತೊಗರ +	ಸೆ
	ವಡರ +	ಸೆ
೨.	ಬನವ +	ಸೆ
	ಕೆರವ +	ಸೆ

ಎಂದು ವಿಗ್ರಹಿಸಿ ಅರ್ಥಹುಡುಕುವುದು ಅನಿವಾರ್ಯವಾಗುತ್ತದೆ. ಈ ನಾಲ್ಕು ಗ್ರಾಮನಾಮಗಳಲ್ಲಿ ತೊಗರ, ವಡ್ಡರ ಒಂದು ಗುಂಪು; ಬನವ, ಕೆರವ ಇನ್ನೊಂದು ಗುಂಪು. 'ಮುಂಡರಗಿ' ಗ್ರಾಮನಾಮದ ಪೂರ್ವಪದವಾದ 'ಮುಂಡರ' ಎಂಬುದು 'ಮುಂಡ' ಜನಾಂಗನಾಮದ ಷಷ್ಠೀಬಹುವಚನ ರೂಪವಾಗಿರುವಂತೆ ಇಲ್ಲಿಯು ತೊಗರ, ವಡ್ಡರ ಎಂಬಿವು ತೊಗ,[1] ವಡ್ಡ ಹೆಸರಿನ ಜನಾಂಗನಾಮಗಳ ಷಷ್ಠೀಬಹುವಚನ ರೂಪಗಳಾಗಿವೆ.

ಇನ್ನು ಎರಡನೆಯ ಗುಂಪಿನ ಬನವ, ಕೆರವ ಎಂಬಿವುಗಳ ವಿಚಾರ : ಕೇಶಿರಾಜ ಉದಾಹರಿಸಿದ ಕಾಟ, ಕಸವ, ಮಾಚ, ತಿಪ್ಪಗಳಲ್ಲಿ 'ಕಸವ' ಎಂಬುದು ಅಂಕಿತನಾಮವಾಗಿದೆ. ಹೀಗಾಗಿ ಇಲ್ಲಿಯು ಬನವ, ಕೆರವಗಳೂ ಅಂಕಿತನಾಮಗಳೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಇವುಗಳಲ್ಲಿ ಬನವಪ್ಪ (ಬನಪ್ಪ?) ಅಥವಾ ಬನವಮ್ಮ (ಬನಮ್ಮ?) ಗಳ ಸಣ್ಣಿಸಿದ ರೂಪ ಬನವ ಆಗಿರಬಹುದು.[2] ಅದೇನೇ ಇರಲಿ ಪೂರ್ವಪದ ಬನವ ಎಂಬುದು ವ್ಯಕ್ತಿನಾಮವೆಂಬುದು ಗಟ್ಟಿಮಾತು. ಇದನ್ನು ಬೆಂಬಲಿಸುವಂತೆ ಶಾಸನಗಳಲ್ಲಿ ಬನವಳಿ. ಬನವೂರು ಹೆಸರಿನ ಗ್ರಾಮಗಳೂ ಬನವಣ್ಣ, ಬನವಪ್ಪ, ಬನವಿಭಟ್ಟ, ಬನವಿಗಾವುಂಡ, ಬನವಿಗೊಂಡ[3] ಎಂಬ ಅಂಕಿತನಾಮಗಳೂ ಸಿಗುವುದನ್ನು ಇಲ್ಲಿ ನೆನೆಯಬೇಕು.

---

1. ಶಾಸನಗಳಲ್ಲಿ ದೀರ್ಘ ಚಿಹ್ನೆ ಬಳಸುವುದಿಲ್ಲವಾದುದರಿಂದ ಇದರ ಸರಿಯಾದ ರೂಪ ತೋಗ ಇರಬಹುದು, ತೋಗೆರೆ (ತೋಗ + ಕೆರೆ) ಹೆಸರಿನ ಗ್ರಾಮ ಮೈಸೂರು ಪ್ರದೇಶದಲ್ಲಿರುವುದನ್ನು ಗಮನಿಸಬೇಕು.
2. 'ಪ್ರಣವ'ದ ತದ್ಭವರೂಪ ಬನವ ಆಗಿರಬಹುದೇ ? ಕದಂಬರ ಮೂಲಗ್ರಾಮ ತಾಳಗುಂದದಲ್ಲಿ ಪ್ರಣವೇಶ್ವರ ಹೆಸರಿನ ದೇವರಿರುವುದನ್ನೂ, ಕದಂಬರು ಈ ದೇವರ ಭಕ್ತರೆಂಬುದನ್ನೂ ಇಲ್ಲಿ ನೆನೆಯಬೇಕು.
3. ಇಲ್ಲಿ ಬನವಿರೂಪ ಚಿಂತನೀಯ : ಬನವಯ್ಯ + ಭಟ್ಟ > ಬನವೇಭಟ್ಟ > ಬನವಿಭಟ್ಟ. ಬನವಯ್ಯ + ಗಾವುಂಡ > ಬನವೇಗಾವುಂಡ > ಬನವಿಗಾವುಂಡ > ಬನವಿಗೊಂಡ ಹೀಗೆ ರೂಪ ಸಿದ್ಧಿಸುವುದು ಕನ್ನಡದಲ್ಲಿ ಸಾಮಾನ್ಯ.

ಈಗ ಉತ್ತರದಲ್ಲಿರುವ 'ಸೆ' ಆಕೃತಿಯ ವಿಚಾರ : ಯ್, ವ್ ಮೊದಲಾದುವು ಅರ್ಧಸ್ವರಗಳಾದುದರಿಂದ ಪದಮಧ್ಯ ಮತ್ತು ಪದಾಂತ್ಯ ಸ್ಥಾನಗಳಲ್ಲಿ ಅವು ಬಿದ್ದು ಹೋಗುತ್ತವೆ. ಈ ತತ್ವದಂತೆ ಇಲ್ಲಿಯು 'ಸೆ' ಎಂಬುದು 'ಸೆಯ್' ಆಕೃತಿಯಾದ ಸಣ್ಣಸಿದ ರೂಪವಾಗಿರಬಹುದು. ದ್ರಾವಿಡ ಭಾಷೆಯ ಚ್ > ಸ್ ವ್ಯತ್ಯಾಸಕ್ರಿಯೆಯು ಒಪ್ಪಿಲೆಯಲ್ಲಿ ಈ 'ಸೆಯ್' ಎಂಬುದರ ಹಿಂದಿನ ರೂಪ 'ಚೆಯ್' ಎಂದೂ, ಕ್ > ಚ್ ವ್ಯತ್ಯಾಸಕ್ರಿಯೆಯು ಒಪ್ಪಿಲೆಯಲ್ಲಿ ಈ 'ಚೆಯ್' ಎಂಬುದರ ಹಿಂದಿನರೂಪ 'ಕೆಯ್' ಎಂದೂ ಹೇಳಬೇಕಾಗುತ್ತದೆ. ಇದರಿಂದ 'ಬನವ+ಸೆ'ಯ ಹಳೆಯ ರೂಪ 'ಬನವ+ಸೆಯ್,' ಇನ್ನೂ ಹಳೆಯ ರೂಪ 'ಬನವ+ಚೆಯ್', ಮತ್ತೂ ಹಳೆಯ ರೂಪ 'ಬನವ+ಕೆಯ್' ಎಂದು ಸ್ಪಷ್ಟವಾಗುತ್ತದೆ. 'ಕೆಯ್' ಎಂಬ ಪದಕ್ಕೆ ಪ್ರದೇಶ, ಸ್ಥಳವೆಂದು ಅರ್ಥವಿರುವುದರಿಂದ ಬನವಕೆಯ್ > ಬನವಚೆಯ್ > ಬನವಸೆಯ್ > ಬನವಸೆ ಎಂದರೆ ಬನವ ಎಂಬವನ ಸ್ಥಳ ಅಥವಾ ಗ್ರಾಮವೆಂದು ಅರ್ಥ.

ಈ ಬನವಕೆಯ್ ಪ್ರದೇಶದಲ್ಲಿ ಗ್ರಾಮನಾಮಗಳಾಗಿ ತೊರೆಯಕೆಯ್ (ತೊರ್ಕೆ), ಮೂಲಕೆಯ್ (ಮೂಲ್ಕಿ) ಎಂಬ ಸಮಾಸ್ಯ ರೂಪಗಳು ಸಿಗುವುದರಿಂದ ಅಂದಿನಕಾಲದಲ್ಲಿ ಊರುಗಳಿಗೆ ಇಂಥ ಹೆಸರುಗಳು ಅಲ್ಲಿ ಸಹಜವಾಗಿದ್ದುವೆಂದು ಸ್ಪಷ್ಟವಾಗುತ್ತದೆ. ಹೀಗೆ ಕೆಯ್ ಎಂಬುದು ಕೆ, ಕಿ (ತೊರ್ಕೆ, ಮೂಲ್ಕಿ)ಯಾಗಿರುವುದಲ್ಲದೆ 'ಗಿ' ರೂಪವನ್ನು ತಾಳಿರುವುದಕ್ಕೆ ಕಲಬುರಗಿ (ಕಲಂಬರ+ಕೆಯ್), ಜೇವರಗಿ (ಜೇವರ+ಕೆಯ್)ಗಳು ಉದಾಹರಣೆಯಾಗಿವೆ. ಒಟ್ಟಿನಲ್ಲಿ

ಕೆಯ್ - ಕೆ - ಕಿ
(ತೊರ್ಕೆ, ಮೂಲ್ಕಿ)
↓

ಗೆಯ್–ಗೆ–ಗಿ
(ಕಲಬುರಗಿ, ಜೇವರಗಿ)

ಚೆಯ್–ಚೆ–ಚಿ
(ಗೊಡಚಿ, ತೊಣಚಿ)
↓

ಸೆಯ್–ಸೆ–ಸಿ
(ಬನವಸೆ, ತೊಗರ್ಸಿ)

(ಜೆಯ್–ಜೆ–ಜಿ
(ತೊಳಂಜೆ, ಅಣಜಿ)

ಹೀಗೆ 'ಕೆಯ್' ಆಕೃತಿಯಾದ ವಿವಿಧರೂಪಗಳು ಗ್ರಾಮನಾಮಗಳಲ್ಲಿ ಸೇರಿಕೊಂಡು ಕರ್ನಾಟಕದ ತುಂಬ ವ್ಯಾಪಿಸಿವೆ.

ನಿಸರ್ಗವಾಚಿ, ಜನಾಂಗವಾಚಿ ಗ್ರಾಮನಾಮಗಳಿಗಿಂತ ವ್ಯಕ್ತಿವಾಚಿ ಗ್ರಾಮನಾಮ ಅರ್ವಾಚೀನವೆಂದು ನಾನು ಬೇರೊಂದೆಡೆಯಲ್ಲಿ ಪ್ರಸ್ತಾಪಿಸಿರುವ ಮೇರೆಗೆ

ಬನವ ಹೆಸರಿನ ವ್ಯಕ್ತಿಸೂಚಿಯಾದ ಬನವಸೆ ಕಾಲ–ದೃಷ್ಟಿಯಿಂದ ನಮ್ಮನಾಡಿನ ಗ್ರಾಮಗಳ ಇತಿಹಾಸದ ಮೂರನೆಯ ಘಟ್ಟದಲ್ಲಿ ಅಸ್ತಿತ್ವಕ್ಕೆ ಬಂದ ಗ್ರಾಮವಾಗಿದೆಯೆಂದು ಊಹಿಸಬಹುದು. ಎರಡನೆಯದಾಗಿ ಇದು ಬನವಕೆಯ್ ಹೆಸರಿಟ್ಟುಕೊಂಡು ಹುಟ್ಟಿ ಬನವಚೆಯ್ ಅವಸ್ಥೆಯನ್ನು ಅನುಭವಿಸಿ, 'ಬನವಸೆಯ್' ರೂಪಕ್ಕೆ ತಿರುಗಿತೋ, 'ಸೆಯ್' ಪ್ರಚಾರದಲ್ಲಿದ್ದ ಕಾಲಘಟ್ಟದಲ್ಲಿಯೇ ಹುಟ್ಟಿ ಬೆಳೆಯಿತೋ ಸ್ಪಷ್ಟವಾಗುವುದಿಲ್ಲ; ಆದರೆ ಕೆಯ್, ಚೆಯ್‌ಗಳಿಗಿಂತ ಸೆಯ್ ಅರ್ವಾಚೀನ, ಇದಕ್ಕಿಂತ 'ಸೆ' ಇನ್ನೂ ಅರ್ವಾಚೀನವೆಂಬುದನ್ನು ನೆನೆದರೆ ಇಂದು ನಮ್ಮ ಕೈಗೆ ಇಳಿದು ಬಂದ 'ಬನವಸೆ' ಎಂಬ ಹೆಸರೂ ರೂಪದೃಷ್ಟಿಯಿಂದ ತೀರ ಇತ್ತೀಚಿನದೆಂದು ಹೇಳಬೇಕಾಗುತ್ತದೆ.

ಸೃಷ್ಟಿ

ಪ್ರೀತಿ, ಎಸ್.

ರೂಹಿಲ್ಲದ ಶಿಲೆಯಲ್ಲಿ
ಜೀವ ಗೂಡಾಗಿಸುವ ಹವಣಿಕೆ
ಗಕ್ಕನೆ ಮುಗಿದಾಗ—

ಉಳಿ ಚಾಣಗಳ ಹಿಡಿದ
ಶಿಲ್ಪಿ ಕೈ ಮಾತ್ರ,
ಕೋಟಿ ಶತಕೋಟಿ ಚಿಗುರುಗಳಾಗಿ
ರೋಮ ರಂಧ್ರಗಳ ಮೂಲಕ್ಕೇ
ಉಜ್ಜಿ, ತೀಡಿ ಮಾಟವಾಗಿಸುವ
ಕಾಯಕ ಕುಲುಮೆಯಲ್ಲಿ ನಿರತ.

ಬೇಕಾದ್ದು ಉಳಿಸುವ
ಬೇಡವಾದ್ದು ಇಲ್ಲವಾಗಿಸುವ
ಬೇಕು–ಬೇಡಗಳ ಮೂಸೆಯಲ್ಲಿ
ಕಣ್ಣು, ಮೂಗು, ಬಾಯಿ
ಕೈ, ಕಾಲು, ತಲೆ
ರಕ್ತ ಜುಳು ಜುಳು ಹರಿದು
ಚಿಗುರು ಹೂ ಹಣ್ಣು
ಕವಿ ಕಲ್ಪನೆಯ ಕಣ್ಣು
ತಮಗೆ ತಾವೇ ಕೆತ್ತುತ್ತಾ
ನುಣುಪು ನಕ್ಷತ್ರಗಳಾಗಿ
ಮೂರ್ತಿ ಅರಳುವಾಗ—

ಕೆತ್ತಿ ಕೆತ್ತಿ ಹೊರತೆಗೆದ
ಶಿಲೆಯ ಚೂರುಗಳು ಚೀರುತ್ತವೆ :

"ನಮಗೊಂದು ರೂಪು ಕೊಡಿ
ನಮಗೊಂದು ಆತ್ಮ ಕೊಡಿ"

ಹೂವೆದೆಯ ಇಬ್ಬನಿ ಬದಲು
ಈ ಚೂರುಗಳ ಚುಚ್ಚು ಅಲಂಕಾರದಲ್ಲಿ
ರಕ್ತ ಕರುಣೆ ದ್ರವಿಸುವ ಮುಳ್ಳುಕಿರೀಟದಲ್ಲಿ
ನನ್ನ ಕವಿತೆ ಮೈದಾಳಿ

ಇಂಪಾದ ಮೌನ ಭರಿಸುವ
ಪ್ರೇಮದ ಕ್ರೂರ ಸಂಯಮ ಶಿಕ್ಷೆಗೆ
ಜೀವಂತ ಸಾಕ್ಷಿಯಾಗುತ್ತದೆ.

ಆಧುನಿಕ ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ವಾಕ್ಯಾರ್ಥ ವಿಶ್ಲೇಷಣೆ— ಒಂದು ಸ್ಥೂಲ ಪರಿಚಯ

ಹೆಚ್. ಎನ್. ಮುರಳೀಧರ

ಭಾಷೆಯ ಅಧ್ಯಯನ, ವಿಶ್ಲೇಷಣೆ ವಿವಿಧ ಜ್ಞಾನಾಂಗಗಳಲ್ಲಿ ವಿವಿಧ ಉದ್ದೇಶಗಳಿಗಾಗಿ ನಡೆಯುತ್ತದೆ. ಭಾಷಾವಿಜ್ಞಾನಿಗೆ ಭಾಷೆಯನ್ನು ಅಧ್ಯಯನ ಮಾಡುವುದೇ ಉದ್ದೇಶ, ಅದೇ ಅವನ ಗುರಿ. ಹಾಗೆಯೇ ಸಮಾಜ ಮತ್ತು ಭಾಷೆಗಳ ಪರಸ್ಪರ ಸಂಬಂಧಾಂತರಗಳನ್ನು ಅರಿಯುವುದಕ್ಕಾಗಿ ಸಾಮಾಜಿಕ ಭಾಷಾ ವಿಜ್ಞಾನಿಗಳು ಭಾಷೆಯ ಅಧ್ಯಯನವನ್ನು ಕೈಗೊಂಡರೆ, ಮನಶ್ಶಾಸ್ತ್ರೀಯ ಭಾಷಾ ವಿಜ್ಞಾನಿಗಳು ಭಾಷೆಯನ್ನು ಅಧ್ಯಯನ ಮಾಡುವುದು ಮನುಷ್ಯನ ಮಾನಸಿಕ ಪ್ರಕ್ರಿಯೆ, ಆಲೋಚನಾ ವಿಧಾನಗಳನ್ನು, ಭಾಷೆ ರೂಪಿಸುವ ಬಗೆಯನ್ನು ತಿಳಿಯುವುದಕ್ಕಾಗಿ. ಇದರಂತೆಯೇ ತತ್ತ್ವಶಾಸ್ತ್ರಜ್ಞ ಭಾಷೆಯನ್ನು ಅಧ್ಯಯನ ಮಾಡುವುದು ತಾತ್ತ್ವಿಕ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕಂಡು ಹುಡುಕುವುದರಲ್ಲಿ ಭಾಷೆಯ ವಿಶ್ಲೇಷಣೆಯ ಸಹಾಯವನ್ನು ಪಡೆಯುವುದಕ್ಕಾಗಿ. ಭಾಷೆಯ—ಅದರಲ್ಲೂ ಮುಖ್ಯವಾಗಿ ವಾಕ್ಯದ ಹಂತದಲ್ಲಿ ಭಾಷೆಯ—ವಿವಿಧ ಪದರಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ತನ್ಮೂಲಕ ಒದಗುವ ಫಲಿತಗಳನ್ನು ತತ್ತ್ವಶಾಸ್ತ್ರದ ಮೂಲಭೂತದ ಸಮಸ್ಯೆಗಳಿಗೆ ಅನ್ವಯಿಸಿ ಅವುಗಳನ್ನು ಪರಿಹರಿಸುವುದು ತತ್ತ್ವಶಾಸ್ತ್ರಜ್ಞನ ಉದ್ದೇಶ. ಭಾಷೆಯ ಅಧ್ಯಯನ ತತ್ತ್ವಶಾಸ್ತ್ರಜ್ಞನ ಪ್ರಾಥಮಿಕ ಹಂತ ಮಾತ್ರ.[1]

---

1. ಉದ್ದೇಶದ ದೃಷ್ಟಿಯಿಂದಲ್ಲದೆ ಭಾಷಾವಿಜ್ಞಾನಿಗೂ ತತ್ತ್ವಶಾಸ್ತ್ರಜ್ಞನಿಗೂ ಭಾಷೆಯ ಅಧ್ಯಯನವನ್ನು ಕುರಿತಂತೆ ಇನ್ನೂ ಕೆಲವು ವ್ಯತ್ಯಾಸಗಳಿವೆ. ಅವುಗಳಲ್ಲಿ ಕೆಲವೆಂದರೆ: ಭಾಷೆಯ ಅಧ್ಯಯನವನ್ನು ಕೈಗೊಳ್ಳುವಾಗ ಭಾಷಾವಿಜ್ಞಾನಿ ಒಂದು ಭಾಷೆಯ ಆಡುಮಾತಿನ ಪ್ರಭೇದದ ಮಾದರಿಯೊಂದನ್ನು ಮುಖ್ಯವಾಗಿ ತನ್ನ ಗಮನದಲ್ಲಿಟ್ಟುಕೊಳ್ಳುತ್ತಾನೆ; ಆದರೆ ತತ್ತ್ವಶಾಸ್ತ್ರಜ್ಞನಿಗೆ ತಾತ್ತ್ವಿಕ ಚಿಂತನೆಯೊಂದರ ಮಂಡನೆಯ ಸಂದರ್ಭದಲ್ಲಿ ಪ್ರಯೋಗವಾಗಿರುವ ಭಾಷೆ ಮಾತ್ರ ಪ್ರಸ್ತುತ. ಭಾಷಾವಿಜ್ಞಾನಿಯ ಭಾಷಿಕ ವಿಶ್ಲೇಷಣೆ ಧ್ವನಿ, ಧ್ವನಿಮಾ, ಆಕೃತಿ, ಆಕೃತಿಮಾ ಮೊದಲಾದ ಹಂತಗಳಲ್ಲಿ ನಡೆದರೆ, ತತ್ತ್ವಶಾಸ್ತ್ರಜ್ಞನ ಭಾಷಿಕ ವಿಶ್ಲೇಷಣೆ ನಡೆಯುವುದು ಮುಖ್ಯವಾಗಿ ವಾಕ್ಯದ ಹಂತದಲ್ಲಿ. ಭಾಷಾವಿಜ್ಞಾನಿಯ ಕೆಲಸ ತನ್ನ ಅಧ್ಯಯನಕ್ಕೊಳಪಟ್ಟ ಭಾಷೆಯನ್ನು ವಿವರಿಸುವುದು ಮಾತ್ರವಾದ್ದರಿಂದ, ಅವನ ಕೆಲಸ ಕೇವಲ ವರ್ಣನಾತ್ಮಕವೇ ಹೊರತು ವಿಧೇಯಕ (Prescrip-

ತಾತ್ತ್ವಿಕ ಕಾರಣಗಳಿಗಾಗಿ ಭಾಷೆಯನ್ನು ವಿಶ್ಲೇಷಿಸುವುದರ ಕಡೆಗೆ ತತ್ತ್ವಶಾಸ್ತ್ರಜ್ಞರ ಗಮನ ಹೆಚ್ಚಾಗಿ ಹರಿದದ್ದು ಹತ್ತೊಂಬತ್ತನೆಯ ಶತಮಾನದ ಅಂತ್ಯಭಾಗ ಮತ್ತು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ. ಈ ತಾತ್ತ್ವಿಕ ಪಂಥದ ಹೆಸರುಗಳಲ್ಲೊಂದಾದ 'Lingusltic Philosophy' ಎಂಬುವೇ ಸೂಚಿಸುತ್ತದೆ, ಇವರು ತಾತ್ತ್ವಿಕ ಕಾರಣಗಳಿಂದಾಗಿ ಭಾಷೆಯನ್ನು ವಿಶ್ಲೇಷಿಸುವವರು ಎಂದು.

ಈ Linguistic Philosophy ಹುಟ್ಟಿಕೊಂಡದ್ದು, ಇದರ ಪ್ರತಿಪಾದಕರೇ ಹೇಳುವಂತೆ, ಹಿಂದಿನ ತತ್ತ್ವಶಾಸ್ತ್ರದ ಕೆಲವು 'ಜಾಡ್ಯ'ಗಳನ್ನು ನಿವಾರಿಸುವುದಕ್ಕಾಗಿ ಇವರು ಪರಿಹರಿಸಹೊರಟ ಈ 'ಜಾಡ್ಯ' ಅತೀಂದ್ರಿಯ ತತ್ತ್ವಶಾಸ್ತ್ರದ ಚಿಂತನೆ (Metaphysical Speculations)ಗಳಿಗೆ ಒತ್ತುಕೊಟ್ಟಿದ್ದ ಬುದ್ಧಿಪ್ರಮಾಣವಾದಿಗಳ (Rationalists)ಕೆಲವು ತಾತ್ತ್ವಿಕ ನಿರ್ಣಯಗಳನ್ನು ಕುರಿತದ್ದು. ಈ ಕುರಿತು ಈ ತಾತ್ತ್ವಿಕ ಪಂಥದ ಪ್ರತಿಪಾದಕ ಮಂಡಿಸಿದ ವಾಕ್ಯಾರ್ಥ ವಿಶ್ಲೇಷಣೆಯನ್ನು ಗಮನಿಸುವುದಕ್ಕೆ ಮೊದಲು ಈ ಬುದ್ಧಿಪ್ರಮಾಣವಾದದ ತಾತ್ತ್ವಿಕ ನಿಲುವಿನ ಸ್ಥೂಲ ಪರಿಚಯ ಇಲ್ಲಿ ಅಗತ್ಯವೆನಿಸುತ್ತದೆ.

ಬುದ್ಧಿಪ್ರಮಾಣವಾದದ ಮುಖ್ಯವಾದ ತಾತ್ತ್ವಿಕ ನಿಲುವೇನೆಂದರೆ, ಕೇವಲ ಮಾನವನ ಬುದ್ಧಿ (rational element in man) ಮಾತ್ರವೇ ವಸ್ತುಸತ್ಯವನ್ನು ಗ್ರಹಿಸಲು ಸಮರ್ಥವಾದುದು ಎಂಬುದು. ಇಲ್ಲಿ 'ಬುದ್ಧಿ' ಎಂಬುದನ್ನು ಇಂದ್ರಿಯಾನುಭವಕ್ಕೆ ವ್ಯತಿರಿಕ್ತವಾದ ನೆಲೆ ಎಂಬ ಅರ್ಥದಲ್ಲಿ ಉಪಯೋಗಿಸಿದೆ. ಎಂದರೆ, ಇಂದ್ರಿಯಾನುಭವನ್ನು ಅವಲಂಬಿಸದೆಯೇ ಬುದ್ಧಿ ತನ್ನಷ್ಟಕ್ಕೆ ತಾನೇ ವಸ್ತುಸತ್ಯದ ಬಗೆಗಿನ ಸಂಪೂರ್ಣ ಗ್ರಹಿಕೆಯನ್ನು ಪಡೆಯಬಲ್ಲುದು ಎಂಬುದೇ ಈ ವಾದದ ತಿರುಳು. ಈ ಬಗೆಯ ಗ್ರಹಿಕೆಯನ್ನು ನೀಡುವ ಬುದ್ಧಿಯನ್ನು 'ಶುದ್ಧಬುದ್ಧಿ, ('pure reason') ಅಥವಾ 'reason indepndent of sens-experience) ಎಂದು ಕರೆಯಲಾಗಿದೆ. ಈ ಶುದ್ಧಬುದ್ಧಿಯ ಮೂಲಕ ಗ್ರಹಿಸಿದ ಸಾಮಾನ್ಯ ತತ್ತ್ವಗಳು (universal principles) ಸ್ವಯಂಸಿದ್ಧವಾದವುಗಳು. ಅಲ್ಲದೆ ಈ ಸಾಮಾನ್ಯತತ್ತ್ವಗಳು ಇಂದ್ರಿಯಾನುಭವ ಪೂರ್ವವಾದುದಷ್ಟೇ ಅಲ್ಲ, ಇಂದ್ರಿಯಾನುಭವವನ್ನು ಮೀರಿದವು ಕೂಡ. ಆದ್ದರಿಂದ ಈ ಶುದ್ಧಬುದ್ಧಿಯಿಂದ ಗ್ರಹಿಸಿದ ತಾತ್ತ್ವಿಕ ನಿರ್ಣಯಗಳನ್ನು ಅನಂತರದ ಯಾವ ಇಂದ್ರಿಯಾನುಭವವೂ

---

tive)ವಲ್ಲ ; ಆದರೆ ತತ್ತ್ವಶಾಸ್ತ್ರಜ್ಞ ವಾಕ್ಯದ ಬೇರೆ ಬೇರೆ ನಿಯೋಗಗಳನ್ನು ಅಧ್ಯಯನ ಮಾಡುವುದರ ಮೂಲಕ, ತಾತ್ತ್ವಿಕ ಚಿಂತನೆಯ ಸಂದರ್ಭದಲ್ಲಿ ವಾಕ್ಯ ತನ್ನ ಅರ್ಥವಂತಿಕೆಯನ್ನು ಪಡೆದುಕೊಂಡು ಸಮರ್ಪಕವಾಗಿ ಬಳಕೆಯಾಗಬೇಕಾದರೆ ಯಾವ ಲಕ್ಷಣಗಳನ್ನು ಹೊಂದಿರಬೇಕು ಎಂಬುದರ ಬಗೆಗೆ ಕೆಲವು ನಿಯಮಗಳನ್ನು ರೂಪಿಸುತ್ತಾರೆ. ಈ ದೃಷ್ಟಿಯಿಂದ ತತ್ತ್ವಶಾಸ್ತ್ರನ ಕೆಲಸ ಕೆಲಮಟ್ಟಿಗೆ ವಿಧಾಯಕವೆನ್ನಬಹುದು.

ಸುಳ್ಳಾಗಿಸಲಾರದು ಎಂಬುದು ಈ ಪಂಥದವರ ನಿಲುವು. ಇವರು, ಮನುಷ್ಯ ಜ್ಞಾನಕ್ಕೆ ಬೇಕಾದ ವಸ್ತುವಿಷಯವನ್ನು ಇಂದ್ರಿಯಾನುಭವದಿಂದ ಪಡೆಯುತ್ತಾನೆ ಮತ್ತು ಹೀಗೆ ಪಡೆದ ವಸ್ತುವನ್ನು ವಿಭಜಿಸಿ ವಿಶ್ಲೇಷಿಸಿ ಅದನ್ನು ಗ್ರಹಿಕೆಗೆ ಒಳಪಡಿಸುವ ಕೆಲಸ ಬುದ್ಧಿಯಿಂದ ನಡೆಯುತ್ತದೆ ಎಂಬುದನ್ನು ಒಪ್ಪದೆ, ಜ್ಞಾನಗ್ರಹಿಕೆಗೆ ಬೇಕಾದ ವಸ್ತುವಿಷಯವನ್ನೂ ಬುದ್ಧಿಯೇ ಒದಗಿಸಿಕೊಡಬಲ್ಲದು ಎಂದು ನಂಬುತ್ತಾರೆ. ಎಂದರೆ, ಇವರ ಪ್ರಕಾರ ಜ್ಞಾನದ ಗ್ರಹಿಕೆಯಲ್ಲಿ ಇಂದ್ರಿಯಾನುಭವದ ಪಾತ್ರ ಕೇವಲ ಪ್ರಾಸಂಗಿಕ; ಅದು ಇಲ್ಲದೆ ಇದ್ದರೂ ನಡೆಯುತ್ತದೆ. ಅಲ್ಲದೆ ಇಂದ್ರಿಯಾನುಭವಕ್ಕೆ ಇಲ್ಲದಿರುವ ಹೆಚ್ಚಿನ ಸಾಮರ್ಥ್ಯ ಬುದ್ಧಿಗಿದೆ. ಏಕೆಂದರೆ, ಬುದ್ಧಿಯು ಇಂದ್ರಿಯಾನುಭವಕ್ಕೆ ಒದಗಿಸಲು ಸಾಧ್ಯವಿಲ್ಲದಿರುವ 'ಅನುಭವಪೂರ್ವ ವಸ್ತುಜ್ಞಾನ' (a priori knowledge of things) ವನ್ನು ನೀಡಬಲ್ಲದು. ಹೀಗೆ ಬರುವ ತಿಳುವಳಿಕೆ ವಸ್ತುವಿನ ಬಗೆಗೆ ಕೂಡಿಬರಬಹುದಾದರೂ, ಅದು ಇಂದ್ರಿಯಾನುಭವದಿಂದ ಅಲ್ಲದೆ ಕೇವಲ ಶುದ್ಧಬುದ್ಧಿಯಿಂದ ಬಂದವಾಗಿರುವ ಕಾರಣ, ಅದು ರೂಪಾತ್ಮಕ ಗಣಿತ (Formal Mathematics)ದ ನಿರ್ಣಯಗಳಂತೆ ನೂರಕ್ಕೆ ನೂರರಷ್ಟು ಸತ್ಯವಾದವು ಅಥವಾ ಖಾಚಿತ್ಯವನ್ನು ಪಡೆದವು (they are necessary truths).

ಈ ಬುದ್ಧಿಪ್ರಮಾಣವಾದದ ನಿಲುವನ್ನು ಸಮರ್ಥಿಸಿರುವವರಲ್ಲಿ ಮುಖ್ಯರಾದವರೆಂದರೆ ಪ್ಲೇಟೋ, ದೇಕಾರ್ತ್, ಸ್ಪಿನೋಜಾ, ಲ್ಯಾಬ್ನಿಜ್ ಮತ್ತು ಕಾಂಟ್. ಈ ತಾತ್ತ್ವಿಕ ನಿಲುವಿಗೆ ಒತ್ತುಕೊಟ್ಟದ್ದರ ಪರಿಣಾಮವಾಗಿ ಮೂಡಿದ್ದೇ ಅತೀಂದ್ರಿಯ ತತ್ತ್ವಶಾಸ್ತ್ರದ ಚಿಂತನೆಗಳು (Metaphysical speculations). ಇದರ ನಿರ್ಣಯಗಳು ಶುದ್ಧ-ಬುದ್ಧಿಯ ಬೆಳಕಿನಲ್ಲಿ ಕಂಡುಹಿಡಿದಂಥವು (found in the light of pure reason). ಆದರೆ ಅವು ಯಥೋಚಿತವಾಗಿ ವಸ್ತುಜ್ಞಾನ ಸೂಚಕ ಅಥವಾ ಅನುಭವೋತ್ತರ ವಾಕ್ಯಗಳ (a posteriori propositions) ಗುಂಪಿನಲ್ಲೂ ಸಿಲ್ಲಬಲ್ಲ ಲಕ್ಷಣಗಳನ್ನು ಹೊಂದಿರುವಂಥವು. ಇಂಥವಕ್ಕೆ ಉದಾಹರಣೆಯಾಗಿ ಈ ಕೆಲವು ವಾಕ್ಯಗಳನ್ನು ಕೊಡುವುದುಂಟು :

1. ಭೌತಿಕ ಜಗತ್ತು ಅಭೌತಿಕವಾದ ಸತ್ಯ ಜಗತ್ತಿನ ಛಾಯೆ.
2. ಪದಾರ್ಥಗಳಲ್ಲಿ ಗುಣಗಳು ಮಾತ್ರವಲ್ಲದೆ, ಆ ಗುಣಗಳಿಗೆ ಆಶ್ರಯದಾಯಕವಾಗಿರುವ ಮತ್ತು ಆ ಗುಣಗಳಿಗಿಂತ ಪ್ರತ್ಯೇಕವಾದ ಅಸ್ತಿತ್ವವನ್ನು ಹೊಂದಿರುವ 'ವಸ್ತು' (substance) ಎಂಬುದೊಂದಿರುತ್ತದೆ.
3. ವಿಶೇಷಗಳು ಅವುಗಳಿಗಿಂತ ಸತ್ಯವಾದ ಸಾಮಾನ್ಯಗಳ ಪ್ರತಿಬಿಂಬ.
4. ನೈತಿಕ ಮಾನದಂಡಗಳು ವಾಸ್ತವಿಕ ಅಸ್ತಿತ್ವವನ್ನು ಹೊಂದಿವೆ. ಇತ್ಯಾದಿ.

ಈ ಬುದ್ಧಿ ಪ್ರಮಾಣವಾದದ ಖಂಡನೆಗಾಗಿ ಹುಟ್ಟಿಕೊಂಡದ್ದು ಅನುಭವ ಪ್ರಮಾಣವಾದ (Empiricism). ಇವರು ಬುದ್ಧಿಪ್ರಮಾಣವಾದಿಗಳು ಮುಂದಿಟ್ಟಿದ, ಶುದ್ಧ ಬುದ್ಧಿ ಅನುಭವಪೂರ್ವ ವಸ್ತುಗ್ರಹಿಕೆಯನ್ನು ಪಡೆಯಬಲ್ಲುದು ಎಂಬುದನ್ನು ನಿರಾಕರಿಸಿ, ಅದರ ಸ್ಥಾನದಲ್ಲಿ ಇಂದ್ರಿಯಾನುಭವದ ಮಹತ್ವ ಮತ್ತು ಪ್ರಾಮುಖ್ಯವನ್ನು ಎತ್ತಿಹಿಡಿದರು. ಇವರ ಪ್ರಕಾರ, ಮನುಷ್ಯನಿಗೆ ಇಂದ್ರಿಯಾನುಭವದಿಂದ ಬಂದ ಕಲ್ಪನೆಗಳ ಹೊರತಾಗಿ ಬೇರಾವ ಕಲ್ಪನೆಯೂ ಇರಲು ಸಾಧ್ಯವಿಲ್ಲ; ಎಂದರೆ ಮನುಷ್ಯನ ಎಲ್ಲ ಜ್ಞಾನವೂ ಒಂದಲ್ಲ ಒಂದು ರೀತಿಯಲ್ಲಿ ಇಂದ್ರಿಯಾನುಭವದಿಂದ ಬಂದದ್ದೇ. ಇಲ್ಲಿ ಸ್ಪಷ್ಟಪಡಿಸಬೇಕಾದ ಇನ್ನೊಂದು ಸಂಗತಿಯೇನೆಂದರೆ, ಅನುಭವ ಪ್ರಮಾಣವಾದಿಗಳು ಜ್ಞಾನಗ್ರಹಿಕೆಯಲ್ಲಿ ಇಂದ್ರಿಯಾನುಭವದಿಂದ ದೊರೆತ ವಸ್ತುವಿಷಯವನ್ನು ವಿಭಜಿಸಿ ವಿಶ್ಲೇಷಿಸುವುದರಲ್ಲಿ ಬುದ್ಧಿಯ ಸಹಕಾರವನ್ನು ಒಪ್ಪಿದರೂ ಕೂಡ, ಹೀಗೆ ಪಡೆದ ಜ್ಞಾನದ ಸತ್ಯಾಸತ್ಯತೆಯನ್ನು ನಿರ್ಣಯಿಸುವುದು ಅನಂತರದ ಮತ್ತಷ್ಟು ಅನುಭವದ ಬೆಳಕಿನಲ್ಲಿ ಅದನ್ನು ಪುನರ್ ಪರಿಶೀಲಿಸುವುದರಿಂದ ಮಾತ್ರ ಸಾಧ್ಯ ಎಂದು ಅಭಿಪ್ರಾಯಪಡುತ್ತಾರೆ. ಜ್ಞಾನಗ್ರಹಿಕೆ ಎಷ್ಟೇ ಅನುಭವೇತರ ನೆಲೆಗಳಲ್ಲಿ ನಡೆದರೂ, ಅದು ಮೊದಲು ಪ್ರಾರಂಭವಾಗಬೇಕಾಗುವುದು ಮತ್ತು ಅನಂತರ ಮುಕ್ತಾಯಗೊಳ್ಳಬೇಕಾಗುವುದು ಇಂದ್ರಿಯಾನುಭವದಲ್ಲಿಯೇ ಎಂಬುದು ಇವರ ನಿಲುವು. ಆದ್ದರಿಂದ ರೂಪಾತ್ಮಕ ತರ್ಕಶಾಸ್ತ್ರದ ಮತ್ತು ಶುದ್ಧ ಗಣಿತದ ವಾಕ್ಯಗಳ ಹೊರತಾಗಿ ಬೇರೆಲ್ಲ ವಾಕ್ಯಗಳ ಸತ್ಯಾಸತ್ಯತೆಯನ್ನು ಮತ್ತಷ್ಟು ಇಂದ್ರಿಯಾನುಭವದ ಬೆಳಕಿನಲ್ಲಿ ಪರಿಶೀಲಿಸುವುದರಿಂದ ಮಾತ್ರ ನಿರ್ಣಯಿಸಲು ಸಾಧ್ಯ.

ಈ ಅನುಭವ ಪ್ರಮಾಣವಾದ ಪ್ರತಿಪಾದಕರಲ್ಲಿ ಮುಖ್ಯವಾದವರು ಲಾಕ್, ಬರ್ಕ್ಲಿ, ಹ್ಯೂಮ್ ಮುಂತಾದವರು. ಈಗ ನಾವು ಪರಿಶೀಲಿಸಿ ಹೊರಟಿರುವ Linguistic philosophy ಕೂಡಾ ಒಂದು ರೀತಿಯಲ್ಲಿ ಈ ಅನುಭವ ಪ್ರಮಾಣವಾದದ ಮುಂದುವರೆದ ರೂಪವೇ ಆಗಿದೆ. ಈ ಪಂಥವನ್ನು Logical positivism, Analytical philosophy, Logical Empiricism– ಇವೇ ಮುಂತಾದ ಹೆಸರುಗಳಿಂದ ಕರೆಯುವುದುಂಟು. ಈ ಪಂಥದಲ್ಲಿ ಮುಖ್ಯರಾದ ಕೆಲವರೆಂದರೆ ರುಡಾಲ್ಫ್ ಕಾರ್ನಾಪ್, ಲುಡ್ವಿಗ್ ವಿಟ್‌ಗೆನ್‌ಸ್ಟೈನ್, ಜಿ. ಇ. ಮೂರ್ ಎ. ಜೆ. ಏಯರ್ ಮುಂತಾದವರು[2].

---

2. ಇದರಲ್ಲಿ ಪ್ರತಿಯೊಬ್ಬರಿಗೂ ಕೆಲವೊಂದು ವಿಶಿಷ್ಟ ಅಭಿಪ್ರಾಯಗಳಿದ್ದು ಒಳಪಂಗಡಗಳಾಗಿರುವುದುಂಟು. ಆದರೆ ಇವರೆಲ್ಲರ ಸಾಮಾನ್ಯ ಧರ್ಮವನ್ನು ಅನುಲಕ್ಷಿಸಿ ಇಲ್ಲಿ ಎಲ್ಲರನ್ನೂ ಒಂದೇ ಗುಂಪಿಗೆ ಸೇರಿಸಿದೆ.

ಹಿಂದಿನ ತಾತ್ತ್ವಿಕ ಸಮಸ್ಯೆಗಳನ್ನು ವಿಶ್ಲೇಷಿಸ ಹೊರಟ ಈ ತಾತ್ತ್ವಿಕ ಪಂಥದವರು ತಮಗೆ ತಾವೇ ಹಾಕಿಕೊಂಡ ಮೊದಲ ಪ್ರಶ್ನೆ ಎಂದರೆ, ಯಾವುದೇ ಒಂದು ವಾಕ್ಯ ಅರ್ಥಸಹಿತ (meaningful) ಎಂದಾಗುವುದು ಹೇಗೆ? ವಾಕ್ಯ ಅರ್ಥಸಹಿತವೋ ಅಲ್ಲವೋ ಎಂಬುದನ್ನು ನಿರ್ಧರಿಸುವುದು ಮಾಪ್ರಗೋಲು ಯಾವುದು? ಅರ್ಥಸಹಿತ ವಾಕ್ಯಗಳ ಸತ್ಯಾಸತ್ಯತೆಯನ್ನು ನಿರ್ಧರಿಸುವುದು ಹೇಗೆ?–ಎಂದು.

ಒಂದು ವಾಕ್ಯ ಅಸತ್ಯವಾಗುವುದಕ್ಕೂ ಅರ್ಥರಹಿತವಾಗುವುದಕ್ಕೂ ಇರುವ ವ್ಯತ್ಯಾಸವನ್ನು ನಾವಿಲ್ಲಿ ಗಮನಿಸಬೇಕು. ಒಂದು ವಾಕ್ಯ ಸತ್ಯ ಅಥವಾ ಅಸತ್ಯ ಎಂದಾಗಬೇಕಾದರೆ ಅದು ಮೊದಲು ಅರ್ಥಸಹಿತವಾಗಿರಬೇಕು; ಎಂದರೆ, ಅರ್ಥಸಹಿತ ವಾಕ್ಯಗಳು ಮಾತ್ರವೇ ಸತ್ಯ ಅಥವಾ ಅಸತ್ಯವಾಗಿರಬಲ್ಲವು. ಯಾರಾದರೊಬ್ಬರ ಮಾತನ್ನು ನಾವು 'ಸುಳ್ಳು' ಎಂದಾಗ, ಅವರ ಮಾತು ನಮಗೆ 'ಅರ್ಥ' ವಾಗಿದೆ ಮತ್ತು ಹಾಗೆ ಅರ್ಥವಾದ ವಾಕ್ಯ ವಸ್ತುಸಂಗತಿಯೊಡನೆ ತಾಳೆ ಹೊಂದುತ್ತಿಲ್ಲವಾದ್ದರಿಂದ ಅದು ಸತ್ಯವಲ್ಲ ಎಂಬ ನಿರ್ಣಯಕ್ಕೆ ನಾವು ಬಂದಿದ್ದೇವೆ ಎಂದಾಗುತ್ತದೆ. ಹಾಗಲ್ಲದೆ, ಯಾವುದಾದರೊಂದು ವಾಕ್ಯ ಅರ್ಥರಹಿತ ಎಂದಾದರೆ, ಆಗ ಅದರ ಸತ್ಯಾಸತ್ಯತೆಯನ್ನು ತೀರ್ಮಾನಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ[3]. ಉದಾಹರಣೆಗೆ, 'ಬೇರೆ ಗ್ರಹಗಳಲ್ಲಿ ಬುದ್ಧಿವಂತ ಜೀವಿಗಳಿದ್ದಾರೆ' ಎಂಬ ವಾಕ್ಯ ಅಸತ್ಯವಾಗಿರಬಹುದು, ಆದರೆ ಖಂಡಿತವಾಗಿಯೂ ಅರ್ಥಸಹಿತವಾಗಿದೆ. ಆದರೆ, 'ಮೇಜು ಪೋಗು ನಡುವೆ ಮತ್ತು ಇಲ್ಲ' ಎಂಬುದಾಗಲೀ, ಅಥವಾ 'ಹಸಿರು ಕಲ್ಪನೆಗಳು ಗೊರಕೆ ಹೊಡೆಯುತ್ತ ನಿದ್ರಿಸುತ್ತವೆ' ಎಂಬುದಾಗಲೀ ಸತ್ಯವೂ ಅಲ್ಲ, ಅಸತ್ಯವೂ ಅಲ್ಲ, ಕೇವಲ ಅರ್ಥರಹಿತ (meaningless), ನಮ್ಮ ದಿನಬಳಕೆಯ ಮಾತಿನಲ್ಲಿ ಅರ್ಥಸಹಿತವಾದ ಅನೇಕ ವಾಕ್ಯಗಳನ್ನು ನಾವು ಬಳಸುತ್ತೇವೆ. ಉದಾಹರಣೆಗೆ,

1. ಅವನು ಕುರ್ಚಿಯ ಮೇಲೆ ಕುಳಿತಿದ್ದಾನೆ.
2. ಕೆಲವರು ದಪ್ಪಗಿರುತ್ತಾರೆ.
3. ನಾಯಿ ಬಾಲ ಡೊಂಕು, ಇತ್ಯಾದಿ.

ಆದರೆ ಇನ್ನು ಕೆಲವು ವಾಕ್ಯಗಳಿರುತ್ತವೆ. ಅವು ವ್ಯಾಕರಣಾತ್ಮಕವಾಗಿ ಯಾವ ದೋಷವನ್ನೂ ಹೊಂದಿರುವುದಿಲ್ಲ. ಅವು ಏನನ್ನೋ ಹೇಳಲು ಉದ್ದೇ

3. A. J. Ayer, Language, Truth and Logic, Penguin Books (Pelican Series), 1971, p. 20: "... it is only if it is literally meaningful... that a statement can properly be said to be either true or false".

ಶಿಸುತ್ತಿರುವಂತೆಯೂ ತೋರುತ್ತದೆ, ಆದರೆ ಅಂಥ ವಾಕ್ಯಗಳನ್ನು ಯಾರಾದರೂ ಹೇಳಿದರೆಂದರೆ ನಾವೆನ್ನುತ್ತೇವೆ : 'ನಿನ್ನ ಮಾತಿಗೆ ಯಾವ ಅರ್ಥವೂ ಇಲ್ಲ' ಎಂದು.[4] ಉದಾಹರಣೆಗೆ,

1. ಜನವರಿ ಕೆಂಪಗಿದೆ
2. ಈ ಚೌಕ (Square) ಗುಂಡಗಿನ ತ್ರಿಕೋನವಾಗಿದೆ.
3. ಕೆಂಪಗಿನ ಹಸಿರು ಬಿಳಿಯು ನೀಲಿಯನ್ನು ಕಪ್ಪಾಗಿಸಿದೆ.
4. ರಾಮನು ಶೂನ್ಯದಲ್ಲಿ ಕಾಲಿಲ್ಲದ ದೊಡ್ಡ ಕುದುರೆಯ ಮೊಟ್ಟೆಯನ್ನು ಗಟಗಟನೆ ತಿಂದನು.

ಈಗ ಗಮನಿಸಿ : 'ಜನವರಿ ಕೆಂಪಗಿದೆ' ಎಂಬ ವಾಕ್ಯ ಸತ್ಯ ಎಂದು ಒಬ್ಬನು ಹೇಳುತ್ತಾನೆ ಎಂದಿಟ್ಟುಕೊಳ್ಳೋಣ. ಆಗ ಅವನನ್ನು ವಿರೋಧಿಸುವವನು ಹೇಳಬಹುದು : 'ಇಲ್ಲ, ಇಲ್ಲ ; ಜನವರಿ ಎಲ್ಲಾದರೂ ಕೆಂಪಗಿರುತ್ತದೆಯೇ ? ಅದು ಯಾವಾಗಲೂ ನೀಲಿ' ಎಂದು. ಇವರಿಬ್ಬರ ವಾಗ್ವಾದದ ನಡುವೆ ತಲೆಹಾಕಿದ ಮತ್ತೊಬ್ಬ ಹೇಳಬಹುದು : " ಜನವರಿ ಅಲ್ಲ ಕೆಂಪಗಿರುವುದು ; ಕೆಂಪಗಿರುವುದು ಸೆಪ್ಟೆಂಬರ್" ಎಂದು. ಆದರೆ ಈ ಎಲ್ಲ ವಾಕ್ಯಗಳಿಗೂ ಅರ್ಥ ಏನು ?—ಎಂಬುದನ್ನು ಗಮನಿಸಿದರೆ ಹೇಳಬೇಕಾಗುತ್ತದೆ, ಇಲ್ಲಿನ ಯಾವ ವಾಕ್ಯಕ್ಕೂ ಯಾವುದೇ ಅರ್ಥವೂ ಇಲ್ಲ ಎಂದು. ಹಾಗಾದರೆ ವಾಕ್ಯಕ್ಕೆ ಅರ್ಥತ್ವ ಎನ್ನುವುದು ಹೇಗೆ ಉಂಟಾಗುತ್ತದೆ ?

ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವಲ್ಲಿ ಈ ತತ್ತ್ವಶಾಸ್ತ್ರಜ್ಞರು ಕೈಕೊಂಡ ಮುಂದಿನ ಹಂತವೆಂದರೆ ವಾಕ್ಯಗಳ ವರ್ಗೀಕರಣ. ಇವರ ಪ್ರಕಾರ ವಾಕ್ಯಗಳಲ್ಲಿ ಎರಡು ವಿಧ :

1. ಅನುಭವ ಪೂರ್ಣ ವಾಕ್ಯಗಳು ಅಥವಾ ವಿಶ್ಲೇಷಣಾತ್ಮಕ ವಾಕ್ಯಗಳು (a priori propositions or Analytic propositions)
2. ಅನುಭವಪೋತ್ತರ ವಾಕ್ಯಗಳು ಅಥವಾ ಸಂಯೋಜನಾತ್ಮಕ ವಾಕ್ಯಗಳು (a posteriori propositions or Synthetic propositions)

ಈ ವಾಕ್ಯವರ್ಗೀಕರಣದ ಸ್ಥೂಲ ವಿವರಣೆ ಹೀಗಿದೆ :

---

4. John Hospers, An Introduction to Philosophical Analysis, Routledge and Kegan Paul Ltd., 1967, pp. 81–22

1. ಅನುಭವಪೂರ್ವ ವಾಕ್ಯಗಳು ಅಥವಾ ವಿಶ್ಲೇಷಣಾತ್ಮಕ ವಾಕ್ಯಗಳು

ಕೆಲವು ವಾಕ್ಯಗಳಿರುತ್ತವೆ. ಅವನ್ನು ನೋಡಿದಾಗ ನಮಗೆ, ಇವು ನಿಶ್ಚಿತವಾಗಿ ಸತ್ಯ ಎನ್ನಿಸುತ್ತದೆ. ಹಾಗೆಯೇ ಇನ್ನು ಕೆಲವು ವಾಕ್ಯಗಳನ್ನು ನೋಡಿದಾಗ, ಇವು ನಿಶ್ಚಿತವಾಗಿ ಅಸತ್ಯ ಎನ್ನಿಸುತ್ತದೆ. ಉದಾಹರಣೆಗೆ,

1. ಒಬ್ಬನೇ ವ್ಯಕ್ತಿ ಏಕಕಾಲದಲ್ಲಿ ಎರಡು ಸ್ಥಳಗಳಲ್ಲಿರಲು ಸಾಧ್ಯವಿಲ್ಲ.
2. ಆಕಾರವಿರುವ ವಸ್ತುಗಳಿಗೆಲ್ಲ ಗಾತ್ರವೂ ಇರುತ್ತದೆ.
3. 'A' ನಂತರ 'B' ಸಂಭವಿಸಿ, 'B' ನಂತರ 'C' ಸಂಭವಿಸಿದರೆ, ಆಗ 'A'ನ ನಂತರ 'C' ಸಂಭವಿಸಿರಂತ್ತದೆ.
4. ಅಪ್ಪಂದಿರೆಲ್ಲ ಗಂಡಸರು.
5. $2+2=4$

ಇಂಥವುಗಳನ್ನು ಮತ್ತೆ ಪರೀಕ್ಷೆಗೆ ಒಳಪಡಿಸಬೇಕಾದ ಆವಶ್ಯಕತೆಯೇ ಏಳದೆ, ಇವು ನಿಶ್ಚಿತ ಸತ್ಯ (necessary truth) ಎಂದು ಬಿಡುತ್ತೇವೆ. ಅಲ್ಲದೆ, ಇವನ್ನು ಅಲ್ಲಗಳೆದರೆ, ಅದನ್ನು ನಿಶ್ಚಿತವಾಗಿ ಅಸತ್ಯ ಎನ್ನುತ್ತೇವೆ. ಹಾಗಾದರೆ ಇಂಥ ವಾಕ್ಯಗಳ ಸತ್ಯಾಸತ್ಯತೆಯನ್ನು ಇಷ್ಟು ದೃಢವಾಗಿ ಹೇಳುವಂತಾದದ್ದು ಹೇಗೆ ? ಇದಕ್ಕೆ ಉತ್ತರ ಇವು ಅನುಭವ ಪೂರ್ವ ವಾಕ್ಯಗಳು (a priori propositions) ಎಂಬುದು. ಇವು ಏಕೆ ಅನುಭವ ಪೂರ್ವ ವಾಕ್ಯಗಳೆಂದರೆ, ಇವುಗಳ ಸತ್ಯಾ ಸತ್ಯತೆಯನ್ನು ನಿರ್ಣಯಿಸಲು ನಾವು ಯಾವ ಅನುಭವಕ್ಕೂ ಮೊರೆ ಹೋಗಬೇಕಾಗಿಲ್ಲ. ಯಾವನಾದರೊಬ್ಬ ಈಗ ಮನೆಯಲ್ಲಿ ನಿದ್ರೆ ಮಾಡುತ್ತಿದ್ದರೆ, ಅವನು ಈಗ ಕಛೇರಿಯಲ್ಲಿ ಕೆಲಸವನ್ನೂ ಮಾಡುತ್ತಿದ್ದಾನೆಯೇ ಹೇಗೆ ಎಂದೇನೂ ನಾವು ಪರೀಕ್ಷಿಸಬೇಕಾಗಿ ಬರುವುದಿಲ್ಲ. ಇಂಥ ವಾಕ್ಯಗಳು ಇಂದಿಗೂ ಸತ್ಯ, ನಾಳೆಗೂ ಸತ್ಯ, ಇನ್ನು ಸಾವಿರ ವರ್ಷಗಳಿಗೂ ಸತ್ಯ.[5] ಹಾಗಾದರೆ ಈ ಅನುಭವ ಪೂರ್ವ ವಾಕ್ಯಗಳಿಗೆ ಇಂತಹ ಖಚಿತತೆ ಹೇಗೆ ಬಂತು ?

ಇದಕ್ಕೆ ಉತ್ತರವಾಗಿ ಗಮನಿಸಬೇಕಾದದ್ದು ಈ ವಾಕ್ಯಗಳ ರಚನೆ. ಈ ದಿಸೆಯಲ್ಲಿ ಗಮನಿಸಿದಾಗ ಕಂಡು ಬರುವುದೇನೆಂದರೆ, ಈ ಅನುಭವ ಪೂರ್ವ ವಾಕ್ಯಗಳೆಲ್ಲ ಕೇವಲ ಪುನರುಕ್ತಿಗಳು (tautologies) ಎಂಬುದು. ಎಂದರೆ, ಈ ಬಗೆಯ ವಾಕ್ಯಗಳಲ್ಲಿ ಆಖ್ಯಾತ ಭಾಗ (predicate) ಆಖ್ಯೇಯ ಭಾಗ (subject)ದ ಬಗೆಗೆ ಏನನ್ನೂ ಹೊಸದಾಗಿ ಹೇಳಿರುವುದಿಲ್ಲ. ಅದು ಈಗಾಗಲೇ ಹೇಳಿರುವುದನ್ನು ಮತ್ತಷ್ಟು ವಿಶದಪಡಿಸುತ್ತದೆ ಅಷ್ಟೆ. ಉದಾಹರಣೆಗೆ, 'A triangle is a

---

5. John Hospers, op. cit., pp. 179–180.

rectelinear figure bounded by three straight lines' ಎಂಬ ವಾಕ್ಯವನ್ನು ಗಮನಿಸಿ. ಇಲ್ಲಿ ಯಾವ ಕಲ್ಪನೆ ಅಂತರ್ಗತವಾಗಿದೆಯೋ ಅವನ್ನೇ ಮತ್ತಷ್ಟು ವಿವರಿಸಿ ಹೇಳಲಾಗಿದೆ ; ಎಂದರೆ ಇಂಥ ವಾಕ್ಯಗಳು ಕೇವಲ ಪುನರುಕ್ತಿಗಳು.[6]

ಅನುಭವಪೂರ್ವ ವಾಕ್ಯಗಳ ಸತ್ಯಾಸತ್ಯತೆಯನ್ನು ನಿರ್ಣಯಿಸಲು ಯಾವ ಅನುಭವದ ನೆರವೂ ಬೇಕಾಗಿಲ್ಲ ಎಂದು ಹೇಳುವುದು ಇದೇ ಕಾರಣಕ್ಕಾಗಿ. ಅವು ಕೇವಲ ಪುನರುಕ್ತಿಗಳಾದ್ದರಿಂದ, ಆ ವಾಕ್ಯಗಳಲ್ಲಿರುವ ಪದಗಳ ಅರ್ಥ ವಿಶ್ಲೇಷಣೆಯನ್ನು ಮಾಡುವುದರಿಂದ ಮಾತ್ರವೇ ಅವುಗಳ ಸತ್ಯಾಸತ್ಯತೆಯನ್ನು ನಿರ್ಧರಿಸಬಹುದು. ಆ ವಾಕ್ಯದ ಪದಗಳ ಅರ್ಥ ವಿಶ್ಲೇಷಣೆಯ ಹೊರತಾಗಿ, ಅವು ವಸ್ತು ಜಗತ್ತಿನ ಸಂಗತಿಗಳೊಂದಿಗೆ ತಾಳೆಯಾಗುತ್ತವೆಯೋ ಹೇಗೆ ಎಂಬುದನ್ನು ನೋಡಬೇಕಾಗಿ ಬರುವುದಿಲ್ಲ. 'ಅಪ್ಪ' ಮತ್ತು 'ಗಂಡಸು' ಎಂಬ ಪದಗಳ ಅರ್ಥ ವಿಶ್ಲೇಷಣೆಯಿಂದ ಮಾತ್ರವೇ 'ಅಪ್ಪಂದಿರೆಲ್ಲ ಗಂಡಸರು' ಎಂಬ ವಾಕ್ಯದ ಸತ್ಯಾಸತ್ಯತೆಯನ್ನು ನಿರ್ಧರಿಸಬಹುದು. ಅಲ್ಲದೆ, ಯಾವ ಬಾಹ್ಯ ಪರಿಶೀಲನೆಯ ನೆರವೂ ಅನುಭವಪೂರ್ವ ವಾಕ್ಯಕ್ಕೆ ಬೇಡದಿರುವುದು ಅದು ಕೇವಲ ವಿಶ್ಲೇಷಣಾತ್ಮಕ ಎನ್ನುವ ಕಾರಣಕ್ಕಾಗಿ, ಅನುಭವ ಪೂರ್ವ ವಾಕ್ಯದ ರಚನೆಯಲ್ಲಿ ಯಾವ ಪದವನ್ನು ಹಾಕಿದರೂ ಅದು ಸತ್ಯವಾಗಿಯೇ ಇರುತ್ತದೆ. ಉದಾಹರಣೆಗೆ,

(i) P is P = 'A man is a man.'

(ii) If P, then P. : 'If a man is a horse, then he is a horse.'

(iii) Not both P and not-P. : 'A man is not both man and not-man'.

ಇದಕ್ಕೆ ಕಾರಣ ಅನುಭವಪೂರ್ವವಾಕ್ಯಗಳು ಕೇವಲ ವಿಶ್ಲೇಷಣಾತ್ಮಕವಾಗಿರುವುದರಿಂದ ಅವು ವಸ್ತುಜಗತ್ತಿನ ಬಗೆಗೆ ಯಾವ ಗ್ರಹಿಕೆಯನ್ನೂ ನೀಡುವು

---

6. A. J. Ayer, op. cit., p. 21 : "In saying that the certainty of a priori propositions depends upon the fact that they are tautologies. I use the word 'tautology' in such a way that a proposition can be said to be a tautology if it is analytic ; and I hold that a proposition is analytic if it is true solely in virtue of the meaning of its constituent symbols, and cannot therefore be either confirmed or refuted by any fact of experience". ಮತ್ತು, ಅಲ್ಲೇ., P. 103.

ದಿಲ್ಲ ; ಮತ್ತು ವಸ್ತುಜಗತ್ತಿನ ಘಟನೆಗಳು ಇಂಥ ವಾಕ್ಯಗಳ ಸತ್ಯಾಸತ್ಯತೆಗೆ ಯಾವ ಧಕ್ಕೆಯನ್ನೂ ತರುವುದಿಲ್ಲ. ಏಕೆಂದರೆ, ಈ ವಾಕ್ಯಗಳಿಗೂ ವಸ್ತುಜಗತ್ತಿಗೂ ಯಾವ ಸಂಬಂಧವೂ ಇಲ್ಲ. ಈ ವಾಕ್ಯಗಳು ಕೇವಲ ರಾಚನಿಕವಾದುವು (structural).

ಇದರಂತೆಯೇ ಅನುಭವಪೂರ್ವವಾಕ್ಯಗಳು ಸ್ವವಿರೋಧಾತ್ಮಕ (self-contiacdictory) ವಾಗಿದ್ದಾಗ ಅಸತ್ಯ ಎನ್ನಿಸಿಕೊಳ್ಳುತ್ತವೆ; (ಅಥವಾ ಅವು ಕೇವಲ ಸ್ವವಿರೋಧಾತ್ಮಕ ಎನ್ನುವುದೇ ಸಾಕಾಗುತ್ತದೆ.) ಉದಾಹರಣೆಗೆ,

(i) P is not–P. : 'A man is not a man.'

(ii) If P, then not–P. : 'If a man is a horse, then he is not a horse.'

(iii) Both P and not-P : 'A man is both man and not a man.'

2. ಅನುಭವೋತ್ತರ ವಾಕ್ಯಗಳು ಅಥವಾ ಸಂಯೋಜನಾತ್ಮಕ ವಾಕ್ಯಗಳು

ವಸ್ತುಜಗತ್ತಿನ ಸಂಗತಿಗಳನ್ನು ಕುರಿತ ಮತ್ತು ವಸ್ತುಜಗತ್ತಿನ ಘಟನೆಗಳನ್ನು ಅವಲಂಬಿಸುವ ವಾಕ್ಯಗಳೇ ಅನುಭವೋತ್ತರ ವಾಕ್ಯಗಳು. ಇವನ್ನು ಘಟನಾವಲಂಬಿ ವಾಕ್ಯಗಳು (contingent propositions) ಎಂದೂ ಕರೆಯುವುದುಂಟು. ಈ ವಾಕ್ಯಗಳು ಅನುಭವಪೂರ್ವ ವಾಕ್ಯಗಳಂತೆ ತಮಗೆ ತಾವೇ ಸತ್ಯವೂ ಅಲ್ಲ, ಅಸತ್ಯವೂ ಅಲ್ಲ. ಕೇವಲ ವಾಕ್ಯರಚನೆಯ ದೃಷ್ಟಿಯಿಂದಾಗಲೀ, ವಾಕ್ಯದಲ್ಲಿರುವ ಪದಗಳ ಅರ್ಥವಿಶ್ಲೇಷಣೆಯಿಂದಾಗಲೀ ಇವುಗಳ ಸತ್ಯಾಸತ್ಯತೆಯನ್ನು ನಿರ್ಧರಿಸಲಾಗುವುದಿಲ್ಲ. ಅನುಭವೋತ್ತರ ವಾಕ್ಯ ಅನುಭವಪೂರ್ವ ವಾಕ್ಯದಂತಲ್ಲದೆ ವಸ್ತುಜಗತ್ತಿನ ಬಗೆಗೆ ಕೂಡಿರುವುದರಿಂದ, ವಸ್ತುಜಗತ್ತಿನ ಸಂಗತಿಯೊಂದಿಗೆ ಹೊಂದಿಕೆಯಾದರೆ ಅದು ಸತ್ಯವಾಕ್ಯ ; ಹೊಂದಿಕೆಯಾಗದಿದ್ದರೆ ಅದು ಅಸತ್ಯವಾಕ್ಯ.[7]

ಅನುಭವೋತ್ತರ ವಾಕ್ಯ ತನ್ನ ಸತ್ಯಾಸತ್ಯತೆಗಾಗಿ ಘಟನೆಗಳನ್ನು ಅವಲಂಬಿಸಿರುವುದರಿಂದ, ಯಾವುದಾದರೊಂದು ಹೊಸ ಘಟನೆ ಆ ವಾಕ್ಯದಲ್ಲಿ ಹೇಳಿರುವುದಕ್ಕೆ ವಿರುದ್ಧವಾಗಿ ಸಂಭವಿಸಿ ಅದನ್ನು ಸುಳ್ಳಾಗಿಸಬಹುದು. ಆದ್ದರಿಂದ ಯಾವ ಅನುಭವೋತ್ತರ ವಾಕ್ಯವೂ ಅನುಭವಪೂರ್ವ ವಾಕ್ಯದಂತೆ ಆತ್ಯಂತಿಕ ಸತ್ಯತೆಯನ್ನು

---

7 ಅಲ್ಲೇ., ಪುಟ 120

ಅಥವಾ ಖಾಚಿತ್ಯವನ್ನು ಪಡೆದಿರುವುದಿಲ್ಲ.[8] ಅಲ್ಲದೆ ಘಟನೆಗಳನ್ನು ಪರಿಶೀಲಿಸುವ ನಮ್ಮ ಪರಿವೀಕ್ಷಣೆ ದೋಷಯುಕ್ತವಾಗಿರಬಹುದಾದ ಕಾರಣ, ಮೊದಲು ಗ್ರಹಿತ ವಾಕ್ಯಕ್ಕೆ ವಿರುದ್ಧವೆಂದು ಕಂಡುಬಂದ ಘಟನೆ ಅನಂತರ ವಾಕ್ಯದೊಂದಿಗೆ ಸಂಪೂರ್ಣ ವಾಗಿ ತಾಳೆಯಾಗಬಹುದು. ಆದ್ದರಿಂದ ಯಾವ ಅನುಭವೋತ್ತರ ವಾಕ್ಯವೂ ಅನುಭವಪೂರ್ವ ವಾಕ್ಯದಂತೆ ಆತ್ಯಂತಿಕವಾಗಿ ಅಸತ್ಯ ಅಥವಾ ಖಚಿತವಲ್ಲ ಎನ್ನಲು ಬರುವುದಿಲ್ಲ.

ಈ ಅನುಭವೋತ್ತರ ವಾಕ್ಯಗಳು ವಸ್ತುಜಗತ್ತಿನ ಬಗೆಗೆ ಕೂಡಿರುವುದರಿಂದ, ಕೇವಲ ವಿಶ್ಲೇಷಣಾತ್ಮಕವಾದ ಅನುಭವಪೂರ್ವವಾಕ್ಯಗಳಂತೆ ಅಲ್ಲದೆ ಇವು ಹೊಸದಾಗಿ ವಿಷಯಗ್ರಹಿಕೆಯನ್ನು ನೀಡಬಲ್ಲವು. ಈ ವಾಕ್ಯಗಳ ಆಖ್ಯಾತಭಾಗ ಇತ್ಯಾತ್ಮಕವಾಗಿಯೋ ಅಥವಾ ನೇತ್ಯಾತ್ಮಕವಾಗಿಯೋ ಹೊಸ ವಿಚಾರವೊಂದನ್ನು ತಂದು ಆಖ್ಯೇಯ ಭಾಗಕ್ಕೆ ಸೇರಿಸಿರುತ್ತದೆ. ಆದ್ದರಿಂದ ಇವನ್ನು 'ಸಂಯೋಜನಾತ್ಮಕ ವಾಕ್ಯಗಳು' (synthetic propositions) ಎನ್ನುತ್ತಾರೆ.[9] ನಮ್ಮ ದಿನಬಳಕೆಯ ಬಹುತೇಕ ವಾಕ್ಯಗಳು ಅನುಭವೋತ್ತರ ವಾಕ್ಯಗಳು. ಉದಾಹರಣೆಗೆ, 'ನೀರು ಮೇಲಿನಿಂದ ಕೆಳಗೆ ಹರಿಯುತ್ತದೆ', 'ಈ ಸಲದ ಬೇಸಿಗೆ ತೀಕ್ಷ್ಣ ಎಂದು ಹಲವರ ನಂಬಿಕೆ', 'ಕೆಲವು ರಾಜಕಾರಣಿಗಳು ನೀತಿವಂತರಾಗಿರುವುದಿಲ್ಲ' ಇತ್ಯಾದಿ.

ಈವರೆಗಿನ ವಾಕ್ಯವರ್ಗೀಕರಣದಿಂದ ತಿಳಿದುಬರುವುದೇನೆಂದರೆ, ಎಲ್ಲ ಬಗೆಯ ಅರ್ಥಸಹಿತ ವಾಕ್ಯಗಳು ಅನುಭವ ಪೂರ್ವ ವಾಕ್ಯಗಳಾಗಿರಬೇಕು ಇಲ್ಲವೆ ಅನುಭವೋತ್ತರ ವಾಕ್ಯಗಳಾಗಿರಬೇಕು ; ಈ ಎರಡರಲ್ಲೊಂದು ಗುಂಪಿಗೆ ಸೇರಿರಲೇ ಬೇಕು ಎಂಬುದು.

---

8 ಅಲ್ಲೇ., pp. 96-97, "......no general proposition reffering to a matter of fact can ever be shown to be necessarily and universally true. It can at best be a probable hypothesis. And this......applies not only to general propositions, but to all propositions which have a factual content". ಮತ್ತು ಪುಟ 39 : "No empirical propositions are certain not even those which refer to immediate experience." (ಇದರ ವಿವರ p. 125).

9 ಅಲ್ಲೇ., ಪುಟ 103 : "Synthetic judgements......'add to the concept of the subject a predicate which has not been in any wise thought in it, and which no analysis could possibly extract from it.' " (ಕಾಂಟ್‌ನಿಂದ ಉದಾಹೃತ)

ಈಗ ನಾವು ಈ ಹಿಂದೆ ನೋಡಿದ ಬುದ್ಧಿಪ್ರಮಾಣವಾದಿಗಳ ನಿಲುವನ್ನಿಲ್ಲಿ ಸ್ವಲ್ಪ ನೆನಪಿಗೆ ತಂದುಕೊಳ್ಳಬೇಕು. ಅವರ ಪ್ರಕಾರ ಶುದ್ಧ ಬುದ್ಧಿ ಇಂದ್ರಿಯಾನುಭವ ದಿಂದ ಹೊರತಾಗಿ ವಸ್ತುಗ್ರಹಿಕೆಯನ್ನು ಪಡೆಯಬಲ್ಲದು. ಎಂದರೆ ಶುದ್ಧಬುದ್ಧಿ ಇಂದ್ರಿಯಾನುಭವವನ್ನು ಅವಲಂಬಿಸದೆಯೇ ವಾಕ್ಯಗಳನ್ನು ರಚಿಸುವುದರಿಂದ ಅವು ಅನುಭವಪೂರ್ವ ವಾಕ್ಯಗಳಾಗಿರಬೇಕು ಎಂದಂತಾಯಿತು. ಆದರೆ ನಾವು ಗಮನಿಸಿ ದಂತೆ ಅನುಭವಪೂರ್ವ ವಾಕ್ಯಗಳು ವಸ್ತುಜಗತ್ತಿನ ಬಗೆಗೆ ಯಾವುದೇ ಗ್ರಹಿಕೆಯನ್ನೂ ನೀಡುವುದಿಲ್ಲ; ಕೇವಲ ವಿಶ್ಲೇಷಣಾತ್ಮಕವಾದ ಕಾರಣ ಅವು ಯಾರ ಜ್ಞಾನಭಂಡಾರ ವನ್ನೂ ಹೆಚ್ಚಿಸುವುದಿಲ್ಲ. ಆದರೆ ಬುದ್ಧಿಪ್ರಮಾಣವಾದಿಗಳ ಪ್ರಕಾರ, ಶುದ್ಧಬುದ್ಧಿ ಯಿಂದ ರಚಿತವಾದ ವಾಕ್ಯಗಳು ಇಂದ್ರಿಯಾನುಭವವನ್ನು ಅವಲಂಬಿಸದಿದ್ದರೂ ನಮ್ಮ ತಿಳುವಳಿಕೆಯನ್ನು ಹೆಚ್ಚಿಸಿ ಹೊಸ ಗ್ರಹಿಕೆಯೊಂದನ್ನು ನೀಡಬಲ್ಲಂಥವು. ಆದರೆ ಹೊಸ ಗ್ರಹಿಕೆಯನ್ನು ನೀಡಬಲ್ಲ ಸಾಮರ್ಥ್ಯವಿರುವುದು ಅನುಭವೋತ್ತರ ವಾಕ್ಯಗಳಿಗೆ ಮಾತ್ರ ಎಂಬುದನ್ನು ನಾವಾಗಲೇ ಗಮನಿಸಿದ್ದೇವೆ. ಈಗ ಉದ್ಭವ ವಾಗುವ ಪರಿಸ್ಥಿತಿಯನ್ನು ಗಮನಿಸಿ: ಶುದ್ಧಬುದ್ಧಿಯಿಂದ ಬಂದ ವಾಕ್ಯಗಳು ಅನುಭವಾವಲಂಬಿಗಳಲ್ಲವಾದ್ದರಿಂದ ಅವು ಅವು ಅನುಭವಪೂರ್ವ; ಮತ್ತು ಹೊಸ ಗ್ರಹಿಕೆಯೊಂದನ್ನು ನೀಡುವುದರಿಂದ ಅನುಭವೋತ್ತರ; ಅವು ಏಕಕಾಲದಲ್ಲಿ ಅನುಭವಪೂರ್ವ ಮತ್ತು ಅನುಭವೋತ್ತರ–ವಿಶ್ಲೇಷಣಾತ್ಮಕ ಮತ್ತು ಸಂಯೋಜ ನಾತ್ಮಕ ಎಂದರೆ, ಅವು Synthetic a priore propositions.

ಆದರೆ ಆಧುನಿಕ ತತ್ತ್ವಶಾಸ್ತ್ರಜ್ಞರು ಈ ನಿಲುವನ್ನು ನಿರಾಕರಿಸುತ್ತಾರೆ. ಅವರ ಪ್ರಕಾರ, ಅನುಭವೋತ್ತರವಲ್ಲದ್ದಾಗಿಯೂ ವಸ್ತುಜ್ಞಾನವನ್ನು ನೀಡುವ ವಾಕ್ಯ ಎನ್ನುವಂಥದು ಏನಾದರೂ ಇದ್ದರೆ, ಆಗ ಅದು ವಾಕ್ಯವಾಗಿರುವುದಿಲ್ಲ, ವಾಕ್ಯಾಭಾಸ (pseudo–sentence) ಆಗಿರುತ್ತದೆ ಅಷ್ಟೆ. ಅವು ಕೇವಲ ವಾಕ್ಯಾಭಾಸ ವಾಗಿರುವುದರಿಂದ, ಸತ್ಯವೂ ಅಲ್ಲ, ಅಸತ್ಯವೂ ಅಲ್ಲ, ಕೇವಲ ಅರ್ಥ ರಹಿತ (meaningless). ಆದರೆ ಹಿಂದಿನ ಬುದ್ಧಿಪ್ರಮಾಣವಾದಿಗಳಿಗೆ ಏಕಕಾಲದಲ್ಲಿ ಅನುಭವಪೂರ್ವವೂ ಅನುಭವೋತ್ತರವೂ ಆಗಿರುವ ವಾಕ್ಯಗಳಿಗೆ ಯಾವ ಅರ್ಥವೂ ಇರುವುದಿಲ್ಲ ಎಂದು ತಿಳಿಯದೆ, ಅವರು ಕೇವಲ ಶುದ್ಧಬುದ್ಧಿಯಿಂದ ಹೊಸ ಹೊಸ ಗ್ರಹಿಕೆಯನ್ನು ನೀಡುವ ಚಿಂತನಾ ವ್ಯಾಯಾಮದಲ್ಲಿ ನಿರತರಾಗುವಂತಾದದ್ದು ಏಕೆ? ಇದಕ್ಕೆ ಇವರ ಉತ್ತರ ಹೀಗಿದೆ: 'ತತ್ತ್ವಶಾಸ್ತ್ರಜ್ಞರಿಗೆ ವ್ಯಾಕರಣ ಕೈಕೊಟ್ಟಾಗ ಅವರು ಅಡಿಪಾಯವಿಲ್ಲದ ಊಹಾಪೋಹಗಳಲ್ಲಿ ಸಂಚರಿಸಲು ಮನಗೊಡುತ್ತಾರೆ.[10]

10. A. J. Ayer, op. cit., p. 61 : "metaphysics...is produced by a philosopher who has been duped by grammar..." "...the utterances of the metaphysician...comes from a failure to understand the workings of our language."

ಮತ್ತು "ಭಾಷೆ ರಜೆಯ ಮೇಲೆ ಹೋದಾಗ 'ತಾತ್ತ್ವಿಕ' ಸಮಸ್ಯೆಗಳು ಉದ್ಭವವಾಗುತ್ತವೆ"[11] ಈ ಅಭಿಪ್ರಾಯದ ಪ್ರಕಾರ, ಹಿಂದಿನ ತತ್ತ್ವಶಾಸ್ತ್ರದ ಭಿನ್ನಾಭಿಪ್ರಾಯಗಳೆಲ್ಲ ಯಾವ ವಸ್ತುವನ್ನು ಹೇಗೆ ವಿವರಿಸಬೇಕು ಎನ್ನುವುದರ ಬಗೆಗೆ ಉಂಟಾದ ಭಿನ್ನಾಭಿಪ್ರಾಯಗಳಲ್ಲ; ಭಾಷೆಯ ವ್ಯಾಪ್ತಿ ಏನು ಎನ್ನುವುದನ್ನು ಅರಿಯದೆ ಹೋದದ್ದಕ್ಕಾಗಿ ಕಾಣಿಸಿಕೊಂಡ ಭಿನ್ನಾಭಿಪ್ರಾಯಗಳು.[12] ಬುದ್ಧಿಪ್ರಮಾಣವಾದಿ ತಾನು ಶುದ್ಧಬುದ್ಧಿಯಿಂದ ಅನುಭವಕ್ಕೆ ನಿಲುಕದ ವಸ್ತುಜ್ಞಾನವನ್ನು ಪಡೆಯುತ್ತೇನೆ ಎಂದು ಹೇಳಿಕೊಳ್ಳುವುದರಿಂದ, ಮತ್ತು ಎಲ್ಲ ಬಗೆಯ ಅನುಭವ ಸಾಧ್ಯತೆಗಳನ್ನು ಮೀರಿದ ಯಾವುದೇ ವಾಕ್ಯ ಯಾವ ಅರ್ಥಸಾಧ್ಯತೆಗೂ ಒಳಪಡದಿರುವುದರಿಂದ, ಕೇವಲ ಬುದ್ಧಿಯ ಕಸರತ್ತಿನಿಂದಾಗಿ ಮೂಡಿದ ಚಿಂತನೆಗಳಿಗೆ ಯಾವ ಅರ್ಥವೂ ಇಲ್ಲ ಎಂಬುದು ಇವರ ನಿಲುವು.[13] ಅನುಭವೋತ್ತರ ವಾಕ್ಯಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಇರುವ ಒಂದೇ ದಾರಿಯೆಂದರೆ ಅದಕ್ಕೆ ಸಂವಾದಿಯಾದ ವಾಸ್ತವಿಕ ಅನುಭವವನ್ನು ಮಂಡಿಸುವುದು. ಯಾವುದೇ ಅನುಭವೋತ್ತರ ವಾಕ್ಯಕ್ಕಾದರೂ ಅರ್ಥತ್ವ ಒದಗಬೇಕಾದರೆ ಅದು ಕಡೆಯ ಪಕ್ಷ ತತ್ತ್ವದ ಹಂತದಲ್ಲಾದರೂ ಪರಿಶೀಲನಾ ಸಾಧ್ಯತೆಯನ್ನು ಹೊಂದಿರಬೇಕು. ಎಂದರೆ, ಯಾವ ಬಗೆಯ ಅನುಭವವನ್ನು ಪಡೆದರೆ ಈ ವಾಕ್ಯಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುವುದಕ್ಕೆ ಸಾಧ್ಯ ಎಂಬುದನ್ನಾದರೂ ಸೂಚಿಸುವಂತಿರಬೇಕು. ಇದನ್ನು ವಾಕ್ಯಗಳ ಪರಿಶೀಲನಾ ಸಾಧ್ಯತೆಯ ಮಾಪುಗೋಲು' (criterion of verifiability) ಎನ್ನುತ್ತಾರೆ. ಇದರ ಪ್ರಕಾರ, ಒಂದು ವಾಕ್ಯದ ಸತ್ಯಾಸತ್ಯತೆಯನ್ನು ಪರಿಶೀಲಿಸುವುದೆಂದರೆ, ಆ ವಾಕ್ಯದಿಂದ ಸೂಚಿತವಾಗುವ ವಸ್ತುಸಂಗತಿಯ ಪರಿವೀಕ್ಷಣಾಕ್ರಿಯೆಯನ್ನು ಕೈಗೊಳ್ಳುವುದು.

ಈಗ ಒಬ್ಬರು ನಮಗೆ ಈವರೆಗೂ ಗೊತ್ತಿಲ್ಲದಿದ್ದ ಒಂದು ವಾಕ್ಯವನ್ನು ಹೇಳಿದರೆಂದಿಟ್ಟುಕೊಳ್ಳೋಣ. ಅದು ನಮಗೆ ಅರ್ಥವಾಗದಿದ್ದಾಗ ನಾವು ಕೇಳಬಹುದು: 'ಏನು ಹಾಗೆಂದರೆ?' ಎಂದು. ಈ ತತ್ತ್ವಶಾಸ್ತ್ರಜ್ಞರ ಪ್ರಕಾರ, ಇಂಥ ಪ್ರಶ್ನೆಗಳ ಅಭಿಪ್ರಾಯವೇನೆಂದರೆ, 'ನಿಮ್ಮ ಈ ವಾಕ್ಯದ ಸತ್ಯಾಸತ್ಯತೆಯನ್ನು ಯಾವ ವಿಧಾನದಿಂದ ಪತ್ತೆಹಚ್ಚಬಹುದು ಎಂಬುದನ್ನು ತಿಳಿಸಿ' ಎಂದು. ಇದೇ ವಾಕ್ಯಗಳ ಅರ್ಥಸಹಿತತೆಯನ್ನು ಪರಿಶೀಲಿಸಬಹುದಾದ ಮಾನದಂಡ. ಇದು

---

11. J. J. Katz, The Philosophy of Langauge. Harper & Row: NewYork & London, 1966, p. 76: "...'Philosophical problems arise when language goes on a holiday.'" (quoted from Wittgenstein.)
12. ಅಲ್ಲೇ., ಪುಟ 29.
13. A. J. Ayer, op. cit., p. 46.

ಈಗಾಗಲೇ ಪರಿಶೀಲಿಸಲಾಗಿರುವ ವಾಕ್ಯಗಳು ಮಾತ್ರ ಅರ್ಥಸಹಿತ ಎಂದೇನೂ ಹೇಳುವುದಿಲ್ಲ. ಉದಾಹರಣೆಗೆ, ಚಂದ್ರನ ಇನ್ನೊಂದು ಬದಿಯಲ್ಲಿ ಎಷ್ಟು ಬೆಟ್ಟಗಳಿವೆ ಎಂಬುದನ್ನು ಯಾರೂ ಪರಿಶೀಲಿಸಿಲ್ಲ. ಆದರೆ 'ಚಂದ್ರನ ಇನ್ನೊಂದು ಬದಿಯಲ್ಲಿ 2,000 ಬೆಟ್ಟಗಳಿವೆ' ಎಂಬ ವಾಕ್ಯ ಖಂಡಿತ ಅರ್ಥಸಹಿತವಾಗಿದೆ ಹಾಗೆ ನೋಡಿದರೆ, ವಾಕ್ಯ ಏನನ್ನು ಸೂಚಿಸುತ್ತದೆ ಎಂಬುದು 'ಅರ್ಥವಾಗುವವರೆಗೆ ಅದನ್ನು ಪರಿಶೀಲಿಸಲು ಸಾಧ್ಯವಿಲ್ಲ. ಆದರೆ ವಾಕ್ಯದ ಅರ್ಥಸಹಿತತೆಯ ಪರಿಶೀಲನಾ ಸಾಧ್ಯತೆಯ ಮಾನದಂಡ ಹೇಳುವುದೇನೆಂದರೆ, ವಾಕ್ಯವನ್ನು ಹೇಗೆ ಪರಿಶೀಲಿಸ ಬಹುದು ಎನ್ನುವುದು ಗೊತ್ತಾದಾಗಲೇ ವಾಕ್ಯಾರ್ಥ ತಿಳಿಯುವುದು ಎಂದು. ಎಂದರೆ, ವಾಕ್ಯಾರ್ಥ ಅವಲಂಬಿಸುವುದು ಸಾಕ್ಷಾತ್ ಪರಿಶೀಲನೆಯನ್ನಲ್ಲ, ಪರಿಶೀಲನಾಸಾಧ್ಯತೆ ಯನ್ನು. ಈ ಮಾನದಂಡವನ್ನು ಅವಲಂಬಿಸಿದರೆ, 'ಜನವರಿ ಕೆಂಪಗಿದೆ', 'ಶನಿವಾರ ಚೆನ್ನಾಗಿ ನಿದ್ದೆ ಮಾಡುತ್ತಿದೆ' ಮುಂತಾದ ವಾಕ್ಯಗಳೆಲ್ಲ ತಕ್ಷಣ ಅರ್ಥರಹಿತವೆಂದು ತಿರಸ್ಕೃತವಾಗುತ್ತದೆ; ಮತ್ತು ನಮ್ಮ ದಿನ ಬಳಕೆಯ ಬಹುಪಾಲು ವಾಕ್ಯಗಳು–'ಈಗ ನಾನು ಪುಸ್ತಕ ಓದುತ್ತಿದ್ದೇನೆ', 'ಕಾಯಿಸಿದಾಗ ನೀರು ಬಿಸಿಯಾಗುತ್ತದೆ' ಮುಂತಾದುವು–ಅರ್ಥಸಹಿತವೆಂದು ಪರಿಗಣಿತವಾಗುತ್ತವೆ. ಏಕೆಂದರೆ, ಈ ವಾಕ್ಯಗಳ ಸತ್ಯಾಸತ್ಯತೆಯನ್ನು ಹೇಗೆ ಎನ್ನುವುದು ನಮಗೆ ತಿಳಿದಿದೆ.[14]

ಈ ಮಾನದಂಡದಿಂದಾಗಿ ಆಧುನಿಕ ತತ್ತ್ವಶಾಸ್ತ್ರಜ್ಞರು ತತ್ತ್ವಶಾಸ್ತ್ರದ ನಿಯೋಗ, (function) ಏನಾಗಿರಬೇಕು ಎಂಬುದನ್ನು ನಿರ್ಣಯಿಸುತ್ತಾರೆ. ಇದರಂತೆ, ತತ್ತ್ವಶಾಸ್ತ್ರ ಒಂದು ಸಹಜ ಜ್ಞಾನಾಂಗವಾಗಬೇಕಾದರೆ, ಅದು ಸಂಪೂರ್ಣವಾಗಿ ಅನುಭವಪೂರ್ವ ವಾಕ್ಯಗಳೊಂದಿಗೆ ವ್ಯವಹರಿಸಬೇಕೇ ಹೊರತು ಅನುಭವೋತ್ತರ ವಾಕ್ಯಗಳ ಗೊಡವೆಗೆ ಹೋಗಬಾರದು. ವಸ್ತು ನಿರ್ದೇಶಕ ವಾಕ್ಯಗಳು ವಸ್ತುಪ್ರಪಂಚದ ಬಗೆಗೆ ಗ್ರಹಿಕೆ ನೀಡುವುದರಿಂದ ಅವುಗಳೊಡನೆ ವ್ಯವಹರಿಸಬಹುದಾದ ಹಕ್ಕಿರುವುದು ಭೌತವಿಜ್ಞಾನಗಳಿಗೆ ಮಾತ್ರ. ಅನುಭವ ಪೂರ್ವ ವಾಕ್ಯಗಳು ವಸ್ತುಸತ್ಯದ ಬಗೆಗೆ ಯಾವ ಗ್ರಹಿಕೆಯನ್ನೂ ನೀಡುವುದಿಲ್ಲ ವಾದ್ದರಿಂದ ಬುದ್ಧಿ ಏನಿದ್ದರೂ ಇಂಥ ವಾಕ್ಯಗಳನ್ನು ಮಾತ್ರ ರಚಿಸಬಲ್ಲುದು. ಆದ್ದರಿಂದ ತತ್ತ್ವಶಾಸ್ತ್ರ ಸಂಪೂರ್ಣವಾಗಿ ಅನುಭವಪೂರ್ವ ವಾಕ್ಯಗಳ ಕಡೆಗೆ ಗಮನ ಕೊಡಬೇಕು. ಎಂದರೆ, ನಮ್ಮ ಕಲ್ಪನೆ (concept)ಗಳನ್ನು ವಿಶ್ಲೇಷಿಸು ವುದು, ಚಿಂತನಾಕ್ರಿಯೆಯಲ್ಲಿನ ದೋಷಗಳನ್ನು ನಿವಾರಿಸುವುದು ಮಾತ್ರ ಅದರ ಕೆಲಸವಾಗಿರಬೇಕೇ ಹೊರತು, ಅದು ತನ್ನ ಕೈಯಲ್ಲಿ ಸಾಧ್ಯವಿಲ್ಲದ ನಮ್ಮ ವಸ್ತು ಜ್ಞಾನವನ್ನು ವಿಸ್ತರಿಸುವ ಕೆಲಸಕ್ಕೆ ಕೈಹಾಕಬಾರದು. ಇದನ್ನೇ ಬೇರೆ ಮಾತುಗಳಲ್ಲಿ

14 John Hospers, op. cit., p. 261.

ಹೇಳುವುದಾದರೆ, ತತ್ತ್ವಶಾಸ್ತ್ರದ ನಿಯೋಗ ಕಲ್ಪನೆಗಳ ವಿಶ್ಲೇಷಣೆ (conceptuel analysis) ಮತ್ತು ಭಾಷಾ ವಿಶ್ಲೇಷಣೆ (linguistic analysis). "ತತ್ತ್ವ ಶಾಸ್ತ್ರದ ಕೆಲಸ 'ತಾತ್ವಿಕ' ವಾಕ್ಯಗಳನ್ನು ನಿರ್ಮಿಸುವುದಲ್ಲ, ಇತರ ವಾಕ್ಯಗಳನ್ನು ಸ್ಪಷ್ಟಗೊಳಿಸುವುದು."[15] ಏಕೆಂದರೆ, "ಎಲ್ಲಿ ಮಾತನಾಡಲು ಸಾಧ್ಯವಿಲ್ಲವೋ, ಅಲ್ಲಿ ಮೌನವೇ ಲೇಸು" (Where of one cannot speak, there of one must be silent—Wittgenstein).

---

15 A. J. Ayer, op cit., p. 34.

ಮಹಾಕವಿ ಸುಬ್ರಹ್ಮಣ್ಯ ಭಾರತಿ

ಚೆ. ರಾಮಸ್ವಾಮಿ

'ಮಹಾಕವಿ' ಯೆಂಬ ಪದವನ್ನು ನಾವು ಇವತ್ತಿನ ಪರಿಸ್ಥಿತಿಯಲ್ಲಿ ಪುನರ್ವಿಮರ್ಶಿಸಬೇಕಾಗಿದೆ. ಮಹಾಕಾವ್ಯ ಮತ್ತು ಮಹಾಕವಿ – ಈ ಪದಗಳ ಬಗ್ಗೆ ಪ್ರಾಚೀನ ಕಲ್ಪನೆಯೇನೇ ಇರಲಿ ಇಂದು ಅವುಗಳನ್ನನುಸರಿಸಿ ನಾವು ಕವಿ ಹಾಗೂ ಕಾವ್ಯದ ಮೌಲ್ಯಮಾಪನ ಮಾಡಲಾಗುವುದಿಲ್ಲ.

ಮಹಾಕವಿಯನ್ನು ಗುರುತಿಸಬೇಕಾದವರು ಜನ. ಮಹಾಕವಿಯೆಂಬುವನು ಜನರ ಮಧ್ಯೆ ಹುಟ್ಟಿ, ಬೆಳೆದು, ಜನರಿಂದಲೇ ಕಲಿತು, ತನ್ನ ಪ್ರತಿಭಾಜನ್ಯ 'ಕಾಣ್ಕೆ'ಯನ್ನು, ಜನರ ಹೃದಯಕ್ಕೆ ವೇದ್ಯವಾಗುವಂತೆ ಹೇಳುವವನು. ಒಂದು ಇಡೀ ಜನಾಂಗದ ಮೇಲೆ ಪ್ರಭಾವ ಬೀರುವವನು, ಒಂದು ಜನಾಂಗದ ಕಣ್ಣು ತೆರೆಸುವವನು; ಜಡ್ಡುಗಟ್ಟಿದ ಸಾಹಿತ್ಯದ ಪಥವನ್ನೇ ಬದಲಿಸಿ ಅದಕ್ಕೆ ಚೈತನ್ಯ ನೀಡುವವನು. ಈ ಅರ್ಥದಲ್ಲಿ ಸುಬ್ರಹ್ಮಣ್ಯ ಭಾರತಿಯೊಬ್ಬ ಮಹಾಕವಿ.

ತಮಿಳುನಾಡಿನ ಇಂದಿನ ತಿರುನಲ್ವೇಲಿ ಜಿಲ್ಲೆಯ ಎಟ್ಟಯಪುರಂನಲ್ಲಿ 1882 ಡಿಸೆಂಬರ್ 11ನೇ ತಾರೀಖು, ಶ್ರೀಚಿನ್ನಸ್ವಾಮಿ ಅಯ್ಯರ್ ಲಕ್ಷ್ಮಿಅಮ್ಮಾಳ್ ದಂಪತಿಗಳಿಗೆ ಸುಬ್ರಹ್ಮಣ್ಯ ಜನಿಸಿದ. 'ಸುಬ್ಬಯ್ಯ' ಎಂದೇ ಎಲ್ಲರೂ ಪ್ರೀತಿಯಿಂದ ಕರೆದರು. 'ಸುಬ್ರಮಣಿ'ಗೆ ಐದು ವರ್ಷವಾಗಿದ್ದಾಗ ತಾಯಿ ತೀರಿಕೊಂಡರು. ತಂದೆ ಮರು ವಿವಾಹವಾದರು. ಸುಬ್ರಮಣಿಗೆ ಏಳು ವರ್ಷದವನಾಗಿದ್ದಾಗಲೇ ಆಶುಕವಿತ್ವ ಸಾಧಿಸಿತ್ತು. ಎಟ್ಟಯಪುರ ಸಂಸ್ಥಾನದಲ್ಲಿ ವಿದ್ವದ್ಗೋಷ್ಠಿ. ಈ ಬಾಲಕವಿಯ ವಿದ್ವತ್ತಿಗೆ ತಲೆ ತೂಗಿತು. ಆಗ ಅರಸ ಸುಬ್ರಮಣಿಗೆ 'ಭಾರತಿ' ಎಂಬ ಬಿರುದನ್ನು (ಪದವಿ) ಕೊಟ್ಟು ಸಂತೋಷ ಪಟ್ಟನು. 1894ರಲ್ಲಿ ತಿರುನಲ್ವೇಲಿಯ ಹಿಂದೂ ಪ್ರೌಢಶಾಲೆಯಲ್ಲಿ ಕಲಿಯುತ್ತಿರುವಾಗಲೇ ತಮಿಳು ಪಂಡಿತರೊಡನೆ ವಾಗ್ಸಮರದಲ್ಲಿ ತೊಡಗಿ ಎಲ್ಲರ ಮೆಚ್ಚುಗೆ ಪಡೆದನು. ಕಲಿಯುತ್ತಿರುವಾಗಲೇ, 1897ರಲ್ಲಿ ಚೆಲ್ಲಮಾಳ್ ಎಂಬ ಏಳು ವರ್ಷದ ಬಾಲಕಿಯೊಡನೆ ಭಾರತಿಗೆ ವಿವಾಹವಾಯಿತು. ಆಗ ಆತನಿಗೆ ಸುಮಾರು 14 ವರ್ಷ ವಯಸ್ಸು. 1898ರಲ್ಲಿ ತಂದೆಯ ಮರಣಾನಂತರ ಸುಬ್ರಮಣಿಗೆ ಅವರ ಅತ್ತೆ ಕುಪ್ಪಮ್ಮಾಳ್ ಅವರ ಆಶ್ರಯ ದೊರೆಯಿತು. ಆಕೆಯ ಪುರಸ್ಕಾರದಿಂದ ಭಾರತಿ ಕಾಶಿಯ ಹಿಂದೂ ಕಾಲೇಜಿನಲ್ಲಿ ಮೆಟ್ರಿಕ್ಯುಲೇಶನ್ ತೇರ್ಗಡೆಯಾದರು. ಆನಂತರ 1902ರಲ್ಲಿ

ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಪದವಿ ಪೂರ್ವ ತರಗತಿಯನ್ನು ಪ್ರಥಮ ದರ್ಜೆಯಲ್ಲಿ ಪಾಸಾದರು. ಇಲ್ಲಿ ಸಂಸ್ಕೃತದೊಂದಿಗೆ ಹಿಂದಿಯನ್ನೂ ಕಲಿತರು.

ಎಟ್ಟಯಪುರದರಸನ ಅಪೇಕ್ಷೆಮೇರೆಗೆ ಅಲಹಾಬಾದಿನಿಂದ ಹಿಂದೆ ಬಂದ ಭಾರತಿ ಅಲ್ಲಿ ಆಸ್ಥಾನ ಕವಿಯಾಗಿ (ತಮ್ಮ ಇಪ್ಪತ್ತನೇ ವರ್ಷದಲ್ಲಿ) ನೇಮಕ ಗೊಂಡರು. ಭಾರತಿಯಂತಹ ಸ್ವತಂತ್ರ ಹಕ್ಕಿಗೆ ಆ ಕಸಂಬು ಶರಪಂಜರವಾಗಿ ಕಂಡಿತು. 1904ರಲ್ಲಿ ಆ ಕೆಲಸವನ್ನು ತೊರೆದು, ಸ್ವಲ್ಪ ಕಾಲ ಮಧುರೈ ಸೇತು ಪತಿ ಕಾಲೇಜಿನಲ್ಲಿ ತಮಿಳು ಅಧ್ಯಾಪಕರಾಗಿ ದುಡಿದರು. ಅದೂ ಸರಿಬರದೆ ಮದರಾಸಿಗೆ ಬಂದು ಪತ್ರಿಕೋದ್ಯಮದಲ್ಲಿ ತೊಡಗಿದರು. 'ಸುದೇಶಮಿತ್ರನ್' ದಿನ ಪತ್ರಿಕೆಯ ಉಪಸಂಪಾದಕರಾಗಿಯೂ, 'ಚಕ್ರವರ್ತಿನಿ' ಮಾಸಪತ್ರಿಕೆಯ ಗೌರವ ಸಂಪಾದಕರಾಗಿಯೂ ದುಡಿದರು. 1905ರಲ್ಲಿ ತೀವ್ರ ರಾಜಕೀಯಕ್ಕೆ ಇಳಿದರು ಅಂದಿನ ವಿಖ್ಯಾತ ಸ್ವಾತಂತ್ರ್ಯ ಹೋರಾಟಗಾರರಾದ ವ. ಉ. ಚಿದಂಬರಂ ಪಿಳ್ಳೈ, ಸುಬ್ರಹ್ಮಣ್ಯ ಶಿವ ಮುಂತಾದವರೊಂದಿಗೆ ಸಂಬಂಧ ಬೆಳೆಸಿದರು. ದಾದಾಬಾಯಿ ನವರೋಜಿಯವರ ನೇತೃತ್ವದಲ್ಲಿ ಕಲ್ಕತ್ತೆಯಲ್ಲಿ ನಡೆದ ಕಾಂಗ್ರೆಸ್ ಮಹಾಸಭೆಯಲ್ಲಿ ಭಾಗವಹಿಸಿದರು. ಅಲ್ಲಿಯೇ ವಿವೇಕಾನಂದರ ಶಿಷ್ಯೆಯಾದ ಸಹೋದರಿ ನಿವೇದಿತ ಅವರನ್ನು ಭೇಟಿಯಾದರು. ಅವರನ್ನೇ ತಮ್ಮ ಜ್ಞಾನಗುರುವನ್ನಾಗಿ ಸ್ವೀಕರಿಸಿ ಅವರ ಆಶೀರ್ವಾದ ಪಡೆದು ಹಿಂದಿರುಗಿ 1907ರಲ್ಲಿ 'ಇಂಡಿಯಾ' ಎಂಬ ತಮಿಳು ವಾರಪತ್ರಿಕೆ ಹಾಗೂ 'ಬಾಲಭಾರತಂ' ಎಂಬ ಆಂಗ್ಲ ಪತ್ರಿಕೆಗಳನ್ನು ಪ್ರಾರಂಭಿಸಿ ನಡೆಸಿದರು. ಈ ಪತ್ರಿಕೆಗಳ ಮೂಲಕ ತಮ್ಮ ಹೋರಾಟ ಪ್ರಾರಂಭಿಸಿದರು. 1907ರಲ್ಲಿಯೇ ಸೂರತ್ ಕಾಂಗ್ರೆಸ್ ಮಹಾಸಭೆಯಲ್ಲಿ ಭಾಗವಹಿಸಿ, ಲೋಕ ಮಾನ್ಯರ ತೀವ್ರವಾದಿ ಶಿಬಿರಕ್ಕೆ ತಮ್ಮ ಬೆಂಬಲ ಕೊಟ್ಟರು. ಅಲ್ಲಿ ಲೋಕಮಾನ್ಯ ಅರವಿಂದ, ಲಾಲಲಜಪತರಾಯ್ ಮುಂತಾದವರನ್ನೆಲ್ಲಾ ಭೇಟಿ ಮಾಡಿದರು. 1908ರಲ್ಲಿ ಅವರ ಮೊದಲ ಕವನ ಸಂಕಲನ 'ಸ್ವದೇಶ ಗೀತಂಗಳ್' ಅನ್ನು ಪ್ರಕಟಿಸಿದರು. ಇದೇ ವರ್ಷ ದೇಶದಾದ್ಯಂತ ಸ್ವರಾಜ್ಯ ದಿನಾಚರಣೆಯನ್ನು ಆಚರಿಸಲಾಯಿತು. ದೇಶದ ನೇತಾರರೆಲ್ಲರ ಕೈದು. 'ಇಂಡಿಯಾ' ಪತ್ರಿಕೆ ತೀವ್ರ ವಾದೀ ಪತ್ರಿಕೆಯಾಯಿತು. ಅದರ ಬಿಸಿ ಬ್ರಿಟಿಷರಿಗೂ ತಗುಲಿತು. ಪತ್ರಿಕೆಯ ವ್ಯವಸ್ಥಾಪಕರ ಕೈದು. ಭಾರತಿಯ ಮೇಲೆ ವಾರಂಟ್. ಸ್ನೇಹಿತರ ಅಪೇಕ್ಷೆ ಮೇರೆಗೆ ಭಾರತಿ ಪಾಂಡಿಚೇರಿಗೆ ಪಯಣವಾದರು. ಅಲ್ಲಿಂದಲೇ ಇಂಡಿಯಾ ಪತ್ರಿಕೆ ಹೊರಬಂದಿತು. ಈಗ ಇಂಡಿಯಾ ಪತ್ರಿಕೆಯನ್ನು ಬ್ರಿಟಿಷ್ ಭಾರತದಲ್ಲಿ ಸರಕಾರ ಬಹಿಷ್ಕರಿಸಿತು. ಪತ್ರಿಕೆ ನಿಂತುಹೋಯಿತು. 1909ರಲ್ಲಿ ಭಾರತಿಯ ಎರಡನೆಯ ಕವನ ಸಂಕಲನ 'ಜನ್ಮ ಭೂಮಿ' ಹೊರಬಂದಿತು. ಅವರು ನಡೆಸುತ್ತಿದ್ದ 'ವಿಜಯ ಎಂಬ ದಿನಪತ್ರಿಕೆ, 'ಸೂರ್ಯೋದಯ' ವಾರ ಪತ್ರಿಕೆ, ಮತ್ತು 'ಬಾಲ ಭಾರತಂ' 'ಕರ್ಮ ಯೋಗಿ' ಯೆಂಬ ಆಂಗ್ಲ ಪತ್ರಿಕೆಗಳು ಎಲ್ಲ ನಿಂತು ಹೋದವು.

1910ರಲ್ಲಿ ಭಾರತಿಯ ಏರ್ಪಾಡಿನಿಂದ ಅರವಿಂದರು ಪಾಂಡಿಚೆರಿಗೆ ಬಂದರು. ಅರವಿಂದರಿಗೆ ವೇದ ಪರಿಚಯವಿರಲಿಲ್ಲ. ಅರವಿಂದರಿಗೆ ವೇದ ಪರಿಚಯ ಮಾಡಿ ಕೊಟ್ಟರು. ಅನಂತರ ಇಬ್ಬರೂ ಸಂಶೋಧನೆಯಲ್ಲಿ ತೊಡಗಿದರು. ಈ ಕಾಲ ದಲ್ಲಿಯೇ ಭಗವದ್ಗೀತೆಯನ್ನು ತಮಿಳಿಗೆ ಭಾಷಾಂತರಿಸಿದರು. 'ಕಣ್ಣನ್ ಪಾಟ್ಟು' 'ಕುಯಿಲ್ ಪಾಟ್ಟು' 'ಪಾಂಚಾಲಿ ಶಪಥಂ' ಮುಂತಾದ ಭಾರತೀಯ ಕೃತಿಗಳು ಹೊರಬಂದವು. ಸುಬ್ರಹ್ಮಣ್ಯ ಶಿವಾ ನಡೆಸುತ್ತಿದ್ದ 'ಜ್ಞಾನ ಭಾನು' ಪತ್ರಿಕೆ ಯಲ್ಲಿಯೂ ಬರೆಯುತ್ತಿದ್ದರು. ಇವರ ದೇಶಭಕ್ತಿ ಗೀತೆಗಳ ಸಂಕಲನ 'ಮಾತಾ ಮಣಿ ವಾಚಕಂ' ದಕ್ಷಿಣ ಆಫ್ರಿಕಾದ ನೇಟಾಲಿನಲ್ಲಿ ಪ್ರಕಟವಾಯಿತು. 1918ರಲ್ಲಿ ಪಾಂಡಿಚೇರಿಯ ಜೀವನಕ್ಕೆ ಬೇಸರಿಸಿ ಭಾರತದ ಗಡಿಯಲ್ಲಿ ಕಾಲಿಟ್ಟರು. ಕೈದಾಗಿ ಕಡಲೂರಿನ ಜೈಲಿನಲ್ಲಿ ವಾಸ, ಬಿಡುಗಡೆಯನಂತರ 2 ವರ್ಷ ಅವರ ಹೆಂಡತಿಯ ಊರಾದ ಕಡೈಯಂನಲ್ಲಿ ಉಳಿದರು. ಕಡುಬಡತನ ಇದರಿಂದ ನೊಂದ ಭಾರತಿ ಮದರಾಸಿಗೆ ಬಂದರು. ಈ ಮಧ್ಯೆ ಭಾರತಿ ಮಹಾತ್ಮ ಗಾಂಧಿ, ರಾಜಾಜಿ ಮುಂತಾದ ರಾಜಕೀಯ ನಾಯಕರನ್ನು ಭೇಟಿಯಾಗಿದ್ದರು. 'ಈತ ಒಂದು ಬೊಕ್ಕಸ, ಕಾಪಾಡಿಕೊಳ್ಳಿ' ಎಂದು ಗಾಂಧಿ ಭಾರತಿ ಬಗ್ಗೆ ಹೇಳಿದ್ದರು.

1920 ರಲ್ಲಿ ಮತ್ತೆ 'ಸುದೇಶ ಮಿತ್ರನ್' ಪತ್ರಿಕೆಯಲ್ಲಿ ಉಪಸಂಪಾದಕರಾಗಿ ಸೇರಿದರು. 1921 ಜುಲೈನಲ್ಲಿ ಮದರಾಸಿನ ತಿರುವಲ್ಲಿಕ್ಕೇಣಿ ಪಾರ್ಥಸಾರಥಿ ದೇವಸ್ಥಾನದ ಮದಿಸಿದ ಆನೆಯ ಒಡೆತಕ್ಕೆ ಸಿಕ್ಕ ಭಾರತಿ ತೀವ್ರಾಘಾತಕ್ಕೆ ಒಳಗಾದರು. ಚೇತರಿಸಿಕೊಂಡಂತೆ ಕಂಡರೂ ಕರುಳು ಬೇನೆಗೆ ತುತ್ತಾಗಿ 1921 ಸೆಪ್ಟೆಂಬರ್ 12ನೇ ತಾರೀಖು ರಾತ್ರಿ 1–30ಕ್ಕೆ ಭಾರತಿ ತಮ್ಮ ಕೊನೆಯುಸಿರೆಳೆ ದರು. ಇದೇ ಮೆರಿನಾ ಸಮುದ್ರ ದಂಡೆಯ ಚಿನ್ನದ ಮರಳ ಮೇಲೆ ಅವರ ಪಾರ್ಥಿವ ಶರೀರವನ್ನು ಅಗ್ನಿ ಸ್ವೀಕರಿಸಿದ. ತಮ್ಮ ಇಬ್ಬರು ಹೆಣ್ಣುಮಕ್ಕಳು ತಂಗಮ್ಮಾಳ್, ಶಕುಂತಲೆ ಮತ್ತು 31 ವರ್ಷದ ತರುಣ ಪತ್ನಿ ಚೆಲ್ಲಮ್ಮಾಳ್ ಮತ್ತು ಎಲ್ಲಕ್ಕೂ ಹೆಚ್ಚಾಗಿ ಅವರು ಪ್ರೀತಿಸುತ್ತಿದ್ದ ಈ ಭಾರತವನ್ನು ಅಗಲಿ 38 ವರ್ಷ ವಯಸ್ಸಿನಲ್ಲಿಯೇ ಭಾರತಿ ಅಕಾಲ ಮರಣವನ್ನಪ್ಪಿದರು.

ತಮಿಳು ಸಾಹಿಸತ್ಯಾಕ್ತರ ಸಂಪ್ರದಾಯಪ್ರಿಯತೆ ಸಾಹಿತ್ಯ ಕ್ಷೇತ್ರದಲ್ಲಿ ಯಾವ ಬದಲಾವಣೆಗೂ ಅವಕಾಶ ಕೊಟ್ಟಿರಲಿಲ್ಲ. ಹಳೆಯ, ಕ್ಲಿಷ್ಟ ಭಾಷಾಶೈಲಿ ಯಲ್ಲಿ ಪಂಡಿತರ ಸ್ವತ್ತಾಗಿ, ಹೊತ್ತು ಹೋಗದ ಪುಂಡರ ನಾಲಿಗೆಯ ತೀಟೆ ತೀರಿಸುವ ಸರಕಾಗಿ ತಮಿಳು ಕಾವ್ಯ 'ಮೆರೆ'ಯುತಿದ್ದ ಕಾಲದಲ್ಲಿ ಭಾರತಿ ಹುಟ್ಟಿ ಬಂದು ಸಾಮಾನ್ಯನ ಭಾಷೆಯಲ್ಲಿ, ಜನಪದದಲ್ಲಿ ಪ್ರಸಿದ್ಧವಾಗಿದ್ದ, ನೊಂಡಿಚ್ಚಿಂದು, ಕಾವಡಿಚ್ಚಿಂದು ಮುಂತಾದ ಸರಳ ಛಂದೋರೂಪಗಳಲ್ಲಿ ಕಾವ್ಯವನ್ನು ಪಾಮರನ ಸ್ವತ್ತಾಗಿಸಿದ. ಭಾರತಿ ಕಾವ್ಯವನ್ನು ಬೀದಿಗಿಳಿಸಿದನೆಂದರೆ ವಾಚ್ಯಾರ್ಥದಲ್ಲಿಯೂ

ಅದು ಸತ್ಯ; ಬುಡುಬುಡುಕೆಯುವನ ಹಾಡಿನ ಮಟ್ಟಿನಲ್ಲಿಯೂ ಕಾವ್ಯ ರಚಿಸಿದ್ದಾನೆ. ಆ ಮೂಲಕ ಭವ್ಯ ಭಾರತದ ಭವಿಷ್ಯತ್ತಿನ ಕಣಿ ಹೇಳಿದ್ದಾನೆ. ಅವನು 'ಪಾಂಚಾಲಿ ಶಪಥಂ' ಕಾವ್ಯದ ಮುನ್ನುಡಿಯಲ್ಲಿ ಹೇಳಿರುವ "ಸರಳ ಪದಗಳು, ಸರಳ ಶೈಲಿ ಸರಳವಾಗಿ ಅರ್ಥೈಸಿಕೊಳ್ಳಬಹುದಾದ ಛಂದ, ಪಾಮರ ಜನ ಬಯಸುವ ಮಟ್ಟು-ಇವುಗಳನ್ನು ಹೊಂದಿರುವ ಕಾವ್ಯವೊಂದನ್ನು ಈ ಕಾಲದಲ್ಲಿರಚಿಸಿ ಕೊಡುವವನೇ ನಮ್ಮ ತಾಯಿ ನುಡಿಗೆ ಹೊಸ ಉಸಿರು ತಂದುಕೊಡುವವನಾಗುತ್ತಾನೆ. ಒಂದೆರಡು ವರುಷಗಳ ಅಕ್ಷರ ಪರಿಚಯುವಿರುವ ತಮಿಳು ಜನರಿಗೂ ಅರ್ಥವಾಗುವಂತೆ ಬರೆಯುವುದರ ಜೊತೆಗೆ, ಕಾವ್ಯ ನಯ ಕೆಡದಂತೆ ರಚಿಸಲೂಬೇಕು" ಎಂಬ ಅವರ ಮಾತುಗಳು, ಅವರು ಸಾಮಾನ್ಯನ ಬಗ್ಗೆ ಎಷ್ಟು ಕಾಳಜಿ ವಹಿಸಿದ್ದರೆಂಬುದನ್ನು ತೋರಿಸುತ್ತದೆ. ಮುಂದುವರಿದು "ಕಾರ್ಯ ದೊಡ್ಡದು; ನನ್ನ ಸಾಮರ್ಥ್ಯ ಚಿಕ್ಕದು. 'ಆಸೆ'ಯಿಂದ ಇದನ್ನು ಬರೆದು ಪ್ರಚುರ ಪಡಿಸುತ್ತಿದ್ದೇನೆ. ಇತರರಿಗೆ ಆದರ್ಶವಾಗಿ ಅಲ್ಲ, ಮಾರ್ಗದರ್ಶಿಯಾಗಿ" ಎನ್ನುತ್ತಾರೆ. ಆದರೆ, ಆಸೆ ನಡೆದುದೇ ಮಾರ್ಗವೆಂಬಂತೆ, ಭಾರತಿಯ ದರ್ಶನಗಳು ಅನಂತರದವರಿಗೆ ಆದರ್ಶವಾಯಿತು, ಅವನು ಹಾಕಿದ ಮಾರ್ಗ ಕವಿರಾಜಮಾರ್ಗವಾಯಿತು.

ಭಾರತಿಯನ್ನು ಅವನ ಕಾಲದ ದೃಷ್ಟಿಯಿಂದ ಮಾತ್ರ ಅಳೆದರೆ ಸಾಲದು. ಇಂದಿನವರೆಗೆ ತಮಿಳು ಸಾಹಿತ್ಯದ ಮೇಲೆ ಆತನ ಪ್ರಭಾವವೆಷ್ಟಾಗಿದೆಂಬುದನ್ನು ಗಮನಿಸಿದರೆ ಅವನ ಕವಿತಾಸಾಮರ್ಥ್ಯದ ಅಳವು ಅರಿವಾಗುತ್ತದೆ. ಭಾರತಿಯಿಂದ ಒಂದಿಲ್ಲ ಒಂದು ರೀತಿಯಲ್ಲಿ ಪ್ರಭಾವಿತವಾಗದ ಒಬ್ಬ ಕವಿಯನ್ನು ಇವತ್ತಿನವರೆಗೆ ತಮಿಳಿನಲ್ಲಿ ಗುರುತಿಸಲು ಸಾಧ್ಯವಿಲ್ಲ. ಹೀಗೆ ಭಾರತಿ ಇಡೀ ತಮಿಳು ಸಾಹಿತ್ಯಕ್ಕೆ ತಿರುವನ್ನು ತಂದುಕೊಟ್ಟ, ಒಂದು ಇಡೀ ಜನಾಂಗದ ಮೇಲೆ ಪ್ರಭಾವ ಬೀರಿದ, ಒಂದು ಪರಂಪರೆಯನ್ನೇ ನಿರ್ಮಿಸಿದ 'ಮಹಾಕವಿ'.

ಭಾರತಿ ಬಾಳಿದ್ದೂ ಅಲ್ಪ ಕಾಲವೇ. ಆತ ತನ್ನ 38 ವರ್ಷದ ಜೀವನದಲ್ಲಿ ಬರೆದದ್ದೂ ಸ್ವಲ್ಪವೇ. ಆದರೆ ಅವನ ಪ್ರತಿ ಪದ್ಯವೂ, ಪ್ರತಿ ಸಾಲೂ ಅಕ್ಷರಬಲ್ಲ ತಮಿಳರೆಲ್ಲರಿಗೆ ಕಂಠಪಾಠ.

ಭಾರತಿಯದು ಬಹುಮುಖ ಪ್ರತಿಭೆ. ತನ್ನ ಜೀವನವನ್ನೆಲ್ಲ ಸಾಹಿತ್ಯ ರಚನೆಯಲ್ಲಿ ತೊಡಗಿಸಿರಲಿಲ್ಲ. ಸ್ವಾತಂತ್ರ್ಯ ಹೋರಾಟ ಅವನ ಕಸುಬಾಗಿತ್ತು. ಪಾಮರರೆದೆಯಲ್ಲಿ ಬಿಡುಗಡೆಯ ಕಿಚ್ಚು ಹಚ್ಚಲು ಸಾಹಿತ್ಯವನ್ನು ಆತ ಸಾಧನವನ್ನಾಗಿಸಿಕೊಂಡ. ಅವನ ರಚನೆಗಳಲ್ಲಿ ಸಿಂಹಪಾಲು ದೇಶಭಕ್ತಿ ಗೀತಗಳಾಗಿವೆ. ಭಾರತಿ ಸ್ವಾತಂತ್ರ್ಯ ಹೋರಾಟಗಾರ, ಪತ್ರಿಕೋದ್ಯಮಿ, ಸಮಾಜ ಸುಧಾರಕ ಮತ್ತು ಸಾಹಿತಿ.

ಸ್ವಾತಂತ್ರ್ಯ ಹೋರಾಟದಲ್ಲಿ ಅವನು ಅನುಭವಿಸಿದ ಕಷ್ಟನಷ್ಟಗಳು ಅನಂತವಾದವು. ಬ್ರಿಟಿಷ್ ಸರ್ಕಾರದ ವಾರಂಟಿನಿಂದ ಸದಾ ತಲೆಮರೆಸಿಕೊಂಡು ಜೀವಿಸಿದ ಭಾರತಿಯ ಜೀವನದುದ್ದಕ್ಕೂ ಉಳಿದ ಸಹಚರನೆಂದರೆ ಕಡುಬಡತನ. ಆದರೂ ಅವನು ಎದೆಗುಂದದೆ ಹೋರಾಡಿದೆ. ಪತ್ರಿಕೋದ್ಯಮಿಯಾಗಿ ಇವನು ತಮಿಳು ಮತ್ತು ಆಂಗ್ಲಭಾಷಾ ಪತ್ರಿಕೆಗಳನ್ನು ಹೊರತಂದಿದ್ದನು. ಈತನ ಸಂಪಾದಕತ್ವದಲ್ಲಿ ಹೊರಬಂದ ತಮಿಳು ದಿನಪತ್ರಿಕೆ 'ಸುದೇಶ ಮಿತ್ರನ್' ಮತ್ತು 'ವಿಜಯಾ' ; ವಾರಪತ್ರಿಕೆಗಳು 'ಇಂಡಿಯಾ' ಮತ್ತು 'ಸೂರ್ಯೋದಯ' ಈತನ ಜವಾಬ್ದಾರಿಯಲ್ಲಿ ಹೊರಬಂದ ಆಂಗ್ಲ ವಾರಪತ್ರಿಕೆ 'ಬಾಲಭಾರತಂ', ಚಿತ್ರಾವಳಿ' ಎಂಬ ದ್ವಿಭಾಷಾ (ತಮಿಳು-ಆಂಗ್ಲ) ಕಾರ್ಟೂನ್ ಪತ್ರಿಕೆಯನ್ನು ಹೊರತರಲು ಪ್ರಯತ್ನಿಸಿದ್ದರು. ಆದರೆ ಅದು ಕೈಗೂಡಿರಲಿಲ್ಲ.

ಸಮಾಜ ಸುಧಾರಕನಾಗಿ ಭಾರತಿಯ ಸೇವೆ ಅಪಾರ. ಪಾಶ್ಚಾತ್ಯರಲ್ಲಿಯಂತೆಯೇ ಇಲ್ಲಿಯೂ ಜಾತಿಮತ ಭೇದವಿಲ್ಲದ ಸಾಮಾಜಿಕ ವ್ಯವಸ್ಥೆಯ ಕನಸು ಕಂಡಿದ್ದನು. ಮೇಲು-ಕೀಳು. ಹೆಣ್ಣು-ಗಂಡು ಭೇದವಿಲ್ಲದೆ ಎಲ್ಲರಿಗೂ ಉನ್ನತ ವಿದ್ಯೆ ದೊರಕಬೇಕೆಂದು ಒತ್ತಾಯಿಸಿದ್ದಾನೆ. 'ಎಲ್ಲರಿಗೂ ಎಲ್ಲವೂ' ಎಂಬ ಸಮಾಜವಾದವನ್ನು ಪ್ರತಿಪಾದಿಸಿದ್ದಾನೆ. 'ವ್ಯಕ್ತಿಯೊಬ್ಬನಿಗೆ ಆಹಾರ ದೊರಕದಿರೆ ಜಗತ್ತನ್ನೇ ನಾಶಗೈವ' ಕ್ರಾಂತಿಯ ಕಿಚ್ಚು ಹಚ್ಚುವ ಭಾರತಿ 'ಎಲ್ಲರೂ ಈ ದೇಶದ ರಾಜರೆಂಬ' 'ಪ್ರಜೆಗಳು ಹೇಳಿದಂತೆ ಬಾಳು-ಬದುಕು' ಎಂಬ ಪ್ರಜಾಪ್ರಭುತ್ವದ ಕನಸೂ ಕಂಡಿದ್ದಾನೆ. 'ಜಾತಿ ಎರಡಲ್ಲದೆ ಬೇರಿಲ್ಲ'ವೆಂಬ ಪ್ರಾಚೀನ ಕವಿಯಿತ್ರಿ ಅವ್ವಯಾರ್‌ರ ನುಡಿಯನ್ನು ಅಮೃತಮಯವೆಂದೂ ಸಮರ್ಥಿಸಿದ್ದಾನೆ. ಸಮಾಜದಲ್ಲಿ ಆಗುತ್ತಿದ್ದ ರಚನಾತ್ಮಕ ಬದಲಾವಣೆಗಳನ್ನು ಸಂತೋಷದಿಂದ ಕೊಂಡಾಡಿದ್ದಾನೆ. 'ಬ್ರಾಹ್ಮಣನನ್ನು ಅಯ್ಯರೆಂಬ ಕಾಲ ಹೋಯಿತು, ಎಲ್ಲರೂ ಒಂದೆಂಬ ಕಾಲ ಬಂದಿತೆ'ಂದು ಕುಣಿದಾಡಿದ್ದಾನೆ. 'ಜಾತಿಗಳಿಲ್ಲ ಕಣೆ ಪಾಪು' ಎಂದು ತನ್ನ ಪಾಪನ ಹಾಡಿನಲ್ಲಿ, ಎಳವೆಯಲ್ಲಿಯೇ ಉನ್ನತ ಅಭಿಪ್ರಾಯಗಳಲ್ಲಿ ಬಿತ್ತಬೇಕೆಂಬುದಕ್ಕೆ ಒತ್ತುಕೊಟ್ಟಿದ್ದಾನೆ.

ಸ್ತ್ರೀಯರ ಬಗ್ಗೆ ಭಾರತಿ ಆಡಿರುವ ಮಾತುಗಳು ಗಹನವಾದವು ; ಇವತ್ತಿಗೂ ಬೆಲೆಯುಳ್ಳವಂತಹವು. 'ಸ್ತ್ರೀಯರು, ಅಭಿಪ್ರಾಯ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯವೆಲ್ಲವನ್ನೂ ಪಡೆಯುವುದರಲ್ಲಿ ಗಂಡಸು ತಡೆಯಾಗಿರಬಾರದೆ'ಂದು ಹೇಳುತ್ತಾನೆ. ಸ್ತ್ರೀಯರನ್ನು ಪಶುವನ್ನಾಗಿಸಿ ನೀವು ಮಾತ್ರ ಮಹರ್ಷಿಗಳಾಗುವುದರಲ್ಲಿ ಯಾವ ಪುರುಷಾರ್ಥವೂ ಇಲ್ಲ'ವೆಂದು ಗಂಡಸರನ್ನು ಮೂದಲಿಸಿದ್ದಾನೆ. ಅರ್ಹತೆಯಿದ್ದ ಸ್ತ್ರೀಯರು ರಾಜಕೀಯವಾಗಿ ಯಾವ ಉದ್ಯೋಗವನ್ನೂ ಪಡೆಯುವುದಕ್ಕೆ ತಡೆಯಿರಬಾರದೆಂದು ಹೇಳಿದ್ದಾನೆ.

ಸ್ವಾತಂತ್ರ್ಯ ಹೋರಾಟಗಾರ ಭಾರತಿ, ಪತ್ರಿಕೋದ್ಯಮಿ ಭಾರತಿ, ಸಮಾಜ ಸುಧಾರಕ ಭಾರತಿ—ಆತನ ಈ ಅವತಾರಗಳೆಲ್ಲ ಕಾಲ ಬದಲಾದಂತೆ ಜನರ ಮನಸ್ಸಿನಿಂದ ಅಳಿಯುಬಹುದು. ಆದರೆ ಕವಿ ಭಾರತಿ 'ಅಮರಾವತಾರ'. ಆತನಿಗೆ ಸಾವಿಲ್ಲ. ಜನರ ಮನಸ್ಸಿನಿಂದ ಎಂದೂ ಅವನು ಅಗಲುವುದಿಲ್ಲ. ಆತ ರಾಷ್ಟ್ರಕವಿ ಮಾತ್ರವಲ್ಲ, ಪ್ರಪಂಚಕವಿ. ಏಕೆಂದರೆ ಆತ ರಾಷ್ಟ್ರವಾದಿ ಮಾತ್ರವಲ್ಲ ಪ್ರಪಂಚವಾದಿಯೂ ಕೂಡ. ಆತನ ಮಾನವ ಪ್ರೇಮ ಅಗಾಧವಾದದ್ದು. 'ಭಾರತಕ್ಕೆ ಮಾತ್ರ ಸ್ವಾತಂತ್ರ್ಯ ದೊರಕಿದರೆ ಸಾಲದು, ದಾಸ್ಯವೆಂಬ ಮಾತು ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ಹೊಡೆದೋಡಿಸಬೇಕೆಂದು ಸಾರಿದ್ದಾನೆ. ಆತನ ದೇಶಭಕ್ತಿಯಂತೆಯೇ ಭಾಷಾಭಿಮಾನವೂ ಅಪಾರವಾದದ್ದು. 'ತಮಿಳಿನಂತಹ ಇನಿದಾದ ಭಾಷೆ ಪ್ರಪಂಚದಲ್ಲೆಲ್ಲಾದರೂ ಇದೆಯೇ ?' ಎಂದು ಸೋಜಿಗಪಡುತ್ತಾನೆ. ಪ್ರಪಂಚದಲ್ಲಿರುವ ಎಲ್ಲ ಜ್ಞಾನವೂ ತಮಿಳಿಗೆ ಹರಿದು ಬರಬೇಕು. ಅದಕ್ಕೆ ಎಲ್ಲ ತಮಿಳರೂ ದುಡಿಯಬೇಕು. ತಮಿಳನ್ನು ಶ್ರೀಮಂತವಾಗಿಸುವುದರ ಮೂಲಕ ಮೇಧಾವಿ ಪರಂಪರೆಯನ್ನು ನಿರ್ಮಿಸಬೇಕೆಂದು ಒತ್ತಾಯಿಸಿ ವಿದ್ಯಾಭ್ಯಾಸದಲ್ಲಿ ಮಾತೃಭಾಷೆಯ ಪ್ರಾಮುಖ್ಯತೆಯನ್ನು ಎತ್ತಿ ಹೇಳಿದ್ದಾನೆ. ಭಾರತಿಯ ಅಭಿಪ್ರಾಯಗಳಲ್ಲಿ 'ತಮಿಳು' ಎಂಬ ಪದವನ್ನು ತೆಗೆದುಹಾಕಿ ಅವರವರ ಭಾಷೆಯ ಹೆಸರನ್ನು ಹಾಕಿ ಕೊಂಡಾಗ ಭಾರತಿಯ ಅಭಿಪ್ರಾಯದ ಮಹತ್ವ ತಿಳಿಯುತ್ತದೆ.

ತಮಿಳಿನ ಮಟ್ಟಿಗೆ ಹೇಳುವುದಾದರೆ ಮಹಾಕವಿ ಮಾತ್ರವಲ್ಲ ಯುಗ ಪ್ರವರ್ತಕ. ತಮಿಳು ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟಕ್ಕೇರಿಸಿದ ಪ್ರತಿಭಾಶಾಲಿ ಈ ಮಣ್ಣಲ್ಲಿ ತಮಿಳಿನ ಉಸಿರಿರುವವರೆಗೆ ಭಾರತಿಯ ಹೆಸರೂ ಹಸಿರಾಗಿ ಉಳಿಯುತ್ತದೆ.

ಗ್ರಹಾಮ್ ಗ್ರೀನ್ ಅವರ ಕಾದಂಬರಿ: ಅಪಾರ ಪ್ರೀತಿ ಮತ್ತು ಪ್ರೇರಣೆ

ಬಸವರಾಜ ನಾಯ್ಕರ

ಗ್ರಹಾಮ್ ಗ್ರೀನ್ ಅವರು ಇಪ್ಪತ್ತನೆಯ ಶತಮಾನದ ಪ್ರಮುಖ ಬ್ರಿಟಿಷ್ ಕಾದಂಬರಿಕಾರರಲ್ಲಿ ಒಬ್ಬರಾಗಿದ್ದಾರೆ. ಹತ್ತೊಂಭತ್ತುನೂರನಾಲ್ಕನೆಯ ಇಸ್ವಿ ಅಕ್ಟೋಬರ್ ಎರಡನೆಯ ತಾರೀಖಿನಂದು ಬ್ರಿಟನಿನಲ್ಲಿ ಜನ್ಮತಾಳಿದ ಅವರು ಸುಮಾರು ಇಪ್ಪತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದು ಜನಪ್ರಿಯರಾಗಿದ್ದಾರಲ್ಲದೆ ಇನ್ನೂ ಅವಿರತವಾಗಿ ಬರೆಯುತ್ತಲೇ ಇದ್ದಾರೆ. ಅವರ ಕಾದಂಬರಿಗಳು ಎಷ್ಟು ಜನಪ್ರಿಯವಾಗಿವೆಯೆಂದರೆ ಈಗ ಅವು ಬ್ರಿಟನ್ನಿನ ಗಡಿದಾಟಿ ಇತರ ದೇಶಗಳಲ್ಲೂ ಜನರ ಮನಸ್ಸನ್ನು ಸೆರೆಹಿಡಿದಿವೆ ಎನ್ನಬಹುದು ಆದ್ದರಿಂದಲೇ ಒಂದು ಅಮೇರಿಕನ್ ಪತ್ರಿಕೆಯು ಗ್ರಹಾಮ್‌ಗ್ರೀನ್ ಅವರ ಸಾಹಿತ್ಯ ''ಬ್ರಿಟನ್ನಿನಿಂದ ಬೇರೆ ದೇಶಗಳಿಗೆ ರಫ್ತಾಗುವ ಪ್ರಮುಖ ಸರಕು'' ಎಂದು ವರ್ಣಿಸಿದೆ. ಅವರ ಕಾದಂಬರಿಗಳು ಅಮೇರಿಕೆ, ಕೆನಡಾ ಮುಂತಾದ ದೇಶಗಳಲ್ಲಿ ಜನರ ಮೆಚ್ಚುಗೆಗೆ ಪಾತ್ರವಾಗಿದ್ದು, ಇತ್ತಿತ್ತಲಾಗಿ ಭಾರತದೇಶದಲ್ಲಿಯೂ ಜನಪ್ರಿಯವಾಗುತ್ತಿವೆ.

ಹಾಗಿದ್ದರೆ ಅವರ ಕಾದಂಬರಿಗಳ ವೈಶಿಷ್ಟ್ಯವೇನು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಗ್ರಹಾಮ್‌ಗ್ರೀನ್ ಅವರು ಬ್ರಿಟನ್ನಿನ ಸುಪ್ರಸಿದ್ಧ ಧಾರ್ಮಿಕ ಕಾದಂಬರಿಕಾರರೆಂದು ಹೇಳಬಹುದು. ಏಕೆಂದರೆ ಅವರ ಕಾದಂಬರಿಗಳಲ್ಲಿ ಸರ್ವಸಾಮಾನ್ಯವಾಗಿ ಬರುವ ವಸ್ತುವೆಂದರೆ ಕ್ಯಾಥೋಲಿಕ್ ಧರ್ಮ. ಅಂದರೆ ಕ್ಯಾಥೋಲಿಕ್ ಧರ್ಮದ ಅಂಶಗಳಾದ ಮನುಷ್ಯ, ದೇವರು, ಪಾಪ, ಮೂಲಪಾಪ, ಪುಣ್ಯ, ಸ್ವರ್ಗ, ನರಕ, ದೇವರ ದಯೆ, ಶಕ್ತಿ ಮತ್ತು ಮಹಿಮೆ ಇತ್ಯಾದಿ ವಿಷಯಗಳು ಅವರ ಕಾದಂಬರಿಗಳಲ್ಲಿ ಚಿತ್ರಿತವಾಗಿವೆ. ಈ ವಿಷಯಗಳಿಗೆ ಸಂಬಂಧಿಸಿದ ಸಮಸ್ಯೆಗಳು, ತೊಡಕುಗಳು, ಒಳಹಾದಿಗಳು, ಪರಿಹಾರಗಳು, ಹಾನಿಗಳು ಮತ್ತು ಪ್ರತಿಫಲಗಳು ಮುಂತಾದವೆಲ್ಲ ಓದುಗರ ಅವಗಾಹನೆಗೆ ಬರುತ್ತವೆ. ಇಂಥ ಧಾರ್ಮಿಕ ಆದ್ದರಿಂದ ಮೂಲಭೂತ ಪ್ರಶ್ನೆಗಳನ್ನೆ ಚಿತ್ರಿಸಿರುವುದರಿಂದ ಅವರ ಕಾದಂಬರಿಗಳು ಸ್ವಾಭಾವಿಕವಾಗಿಯೆ ಅತ್ಯಂತ ಗಂಭೀರ ಸ್ವರೂಪವನ್ನು ತಾಳುತ್ತವೆ. ಮೇಲುನೋಟಕ್ಕೆ ಸರಳವಾದ ಕಥೆಗಳಂತೆ ಕಂಡರೂ ಕಾದಂಬರಿಯೆನ್ನೋದಿದ ನಂತರವೂ ಓದುಗರನ್ನು ವಿಚಾರಿಸ ಹಚ್ಚಿಸುವ ಕೃತಿಗಳಾಗಿವೆ. ಅವರು ಅನೇಕ ಕಾದಂಬರಿಗಳನ್ನು ಬರೆದಿದ್ದರೂ ಅವು

ಗಳಲ್ಲಿ ಕೆಲವು ಅಂದರೆ The Heart of the Matter, The Power and the Glory, The Brighton Rock ಅತ್ಯಂತ ಪ್ರಮುಖವಾದವುಗಳಾಗಿವೆ. ಇವೆಲ್ಲ ಕಾದಂಬರಿಗಳಲ್ಲಿ ಅಭಿವ್ಯಕ್ತವಾದ ಒಂದು ಸಾಮಾನ್ಯವಾದ ವಿಚಾರಧಾರೆಯೇನೆಂದರೆ ಮನುಷ್ಯ ಅದೆಷ್ಟು ಪಾಪಗಳನ್ನು ಮಾಡಿದರೂ ಪಶ್ಚಾತ್ತಾಪ ಪಡುವುದರ ಮೂಲಕ ಆತ ದೇವರಿಗೆ ಸನ್ಯಾಸಿಗಿಂತ ಹೆಚ್ಚು ಪ್ರಿಯನಾಗುತ್ತಾನೆ, ಮತ್ತು ದೇವರ ಕರುಣೆ ಮಾನವನಿಗೆ ಭಯಹುಟ್ಟಿಸುವಷ್ಟು ವಿಶಾಲವೂ ಮಹಿಮಾಪೂರ್ಣವೂ ಆಗಿದೆ ಎಂಬುದು.

ಇಂಥ ಧಾರ್ಮಿಕ ಕಾದಂಬರಿಗಳನ್ನು ಬರೆಯುವಾಗ ಸಾಹಿತ್ಯ ಮತ್ತು ಧರ್ಮ ಇವುಗಳೆರಡರ ಮಧ್ಯದಲ್ಲಿರುವ ಸಂಬಂಧದ ಬಗೆಗೆ ಕೆಲವು ಸಮಸ್ಯೆಗಳು ಏಳುತ್ತವೆ. ಉದಾಹರಣೆಗೆ ಕೆಲವು ಧರ್ಮಗಳು ಅಥವಾ ಧಾರ್ಮಿಕ ಗುಂಪುಗಳು ಕಾದಂಬರಿ ರಚನೆಯನ್ನು ಉತ್ತೇಜಿಸುತ್ತವೆ. ಇನ್ನು ಕೆಲವು ಧರ್ಮಗಳು ಅಥವಾ ಧಾರ್ಮಿಕ ಗುಂಪುಗಳು ಅದನ್ನು ಖಂಡಿಸುತ್ತವೆ. ಗ್ರಹಮ್ ಗ್ರೀನ್ ಅವರು ರಚಿಸಿದ ಕಾದಂಬರಿಗಳನ್ನು ಕುರಿತು ಇದೇ ತರಹದ ಸಮಸ್ಯೆಗಳು ಉದ್ಭವಿಸಿವೆ. ಇಂಥ ಸಮಸ್ಯೆಗಳನ್ನು ಎತ್ತಿಕೊಂಡೆ ಜಾರ್ಜ್ ಆರ್ವೆಲ್ (ಇಪ್ಪತ್ತನೆಯ ಶತಮಾನದ ಸುಪ್ರಸಿದ್ಧ ವಿಡಂಬನಕಾರರು) ಅವರು ಹಗುರಾಗಿ ವರ್ಣಿಸುತ್ತಾರೆ: ಕಾದಂಬರಿ ಎಂಬುವುದು ಮನಸ್ಸಿನ ಮುಕ್ತ ಲಹರಿಯನ್ನೊಳಗೊಂಡ ಪ್ರೊಟೆಸ್ಟಂಟ್ ಸಾಹಿತ್ಯ ಪ್ರಕಾರವಾಗಿರುತ್ತದೆ. ಕ್ಯಾಥೊಲಿಕ್ ಕಾದಂಬರಿಕಾರರಲ್ಲಿ ಕೆಲವರು ಒಳ್ಳೆಯವರಿದ್ದಾರೆ. ಆದರೆ ಬಹಳಷ್ಟು ಜನ ಕೆಟ್ಟ ಕ್ಯಾಥೊಲಿಕ್‌ರೆ ಆಗಿದ್ದಾರೆ" ಎಂದು ಸಾಮಾನ್ಯೀಕರಿಸಿ ಅನಂತರ ಗ್ರಹಮ್ ಗ್ರೀನರೂ ಒಬ್ಬ ಕೆಟ್ಟ ಕ್ಯಾಥೊಲಿಕ್‌ರೆಂದು ಹೇಳುತ್ತಾರೆ. ಈ ವಿಷಯವನ್ನು ಓದುಗರೆ ನಿರ್ಧರಿಸಬೇಕು.

ಗ್ರಹಾಮ್ ಗ್ರೀನ್ ಅವರ ಧಾರ್ಮಿಕ ಕಾದಂಬರಿಗಳ ವೈಶಿಷ್ಟ್ಯವೇನೆಂದರೆ ಅವರು ಧಾರ್ಮಿಕ ಕಥಾವಸ್ತುವನ್ನು ಸಾಂಪ್ರದಾಯಕವಾದ ರೀತಿಯಲ್ಲಿ ಬರೆಯದೆ ಅದನ್ನು ಪತ್ತೆದಾರಿ ತಂತ್ರಕ್ಕೆ ಅಳವಡಿಸುತ್ತಾರೆ. ಕ್ಯಾಥೋಲಿಕ್ ಧರ್ಮದ ವಿಚಾರಗಳನ್ನು ಕಾದಂಬರಿಯ ಮೂಲಕ, ಅದರಲ್ಲಿಯೂ ಪತ್ತೇದಾರಿ ತಂತ್ರದ ಮೂಲಕ ಅಭಿವ್ಯಕ್ತಿಸುವುದು ಒಂದು ಅತ್ಯಂತ ಹೊಸರೀತಿಯ ಪ್ರಯೋಗವೆ ಆಗಿರುತ್ತದೆ. ಪತ್ತೇದಾರಿಯಂಥ ತೀರಸಾಮಾನ್ಯವೂ ಅಗ್ಗವೂ ಆದ ತಂತ್ರವನ್ನು ಜಟಿಲವಾದ ಕ್ಯಾಥೊಲಿಕ್ ದೇವಶಾಸ್ತ್ರದ (Theology) ಸಮಸ್ಯೆಗಳನ್ನು ಚಿತ್ರಿಸುವುದಕ್ಕಾಗಿ ಉಪಯೋಗಿಸುವುದು ಎಷ್ಟು ಹಾಸ್ಯಾಸ್ಪದವೊ ಅಷ್ಟೇ ಕಠಿಣವೂ ಆದ ಆಹ್ವಾನವಾಗಿರುತ್ತದೆ. ಆಶ್ಚರ್ಯದ ಸಂಗತಿಯೆಂದರೆ ಗ್ರಹಾಮ್‌ಗ್ರೀನ್ ಅವರು ಇಂಥ ಆಹ್ವಾನವನ್ನು ಸ್ವೀಕರಿಸಿ ಅದರಲ್ಲಿಯೆ ಯಶಸ್ಸು ಸಾಧಿಸಿ ತೋರಿಸಿರುವುದು ಅವರ

ಪ್ರತಿಭೆಗೆ ಸಾಕ್ಷಿಯಾಗಿದೆ, ಈ ಲೇಖನದಲ್ಲಿ ಅವರ The power and the Glory ಎಂಬ ಕಾದಂಬರಿಯನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡಲಾಗಿದೆ.

ಈ ಕಾದಂಬರಿಯನ್ನು ವಿಮರ್ಶಿಸುವುದಕ್ಕಿಂತ ಮೊದಲು ಅದರ ಕಥಾವಸ್ತುವನ್ನು ಸ್ಥೂಲವಾಗಿ ಹೀಗೆ ಸಂಗ್ರಹಿಸಬಹುದು. ಮೆಕ್ಸಿಕೊ ಪ್ರದೇಶದ ಸರಕಾರವು ತಲೆಮರೆಸಿಕೊಂಡ ವ್ಹಿಸ್ಕಿ ಪಾದ್ರಿಯನ್ನು ಅವಿರತವಾಗಿ ಹುಡುಕುತ್ತಲಿದೆ. ಸರಕಾರದ ಸೈನ್ಯಾಧಿಕಾರಿಗಳು ಈ ಪಾದ್ರಿಯನ್ನು ಹುಡುಕಲಿಕ್ಕೆ ಸರ್ವಪ್ರಯತ್ನ ಮಾಡುತ್ತಿರುತ್ತಾರೆ. ಈ ಪಾದ್ರಿ ವೇಷ ಬದಲಿಸಿಕೊಂಡು ಆ ಪ್ರದೇಶದ ಒಳನಾಡಿನಲ್ಲಿ ತಿರುಗುತ್ತಿದ್ದಾನೆಂದು ತಿಳಿದುಕೊಂಡಿರುತ್ತಾರೆ. ದೇವರಲ್ಲಿ ನಂಬುಗೆಯಿಟ್ಟಿರುವ ಜನರು ಇನ್ನೂ ಆ ಪ್ರದೇಶದಲ್ಲಿದ್ದುದು ಅಲ್ಲಿಯ ಸರಕಾರಕ್ಕೆ ತೀವ್ರವಾದ ಅಸಮಾಧಾನವನ್ನುಂಟುಮಾಡಿದೆ. ದಂಡಾಧಿಕಾರಿ ಫೆಲೊಸ್‌ನನ್ನೂ ಸೈನಿಕರು ಬಂದು ವ್ಹಿಸ್ಕಿಪಾದ್ರಿಯ ಚಲನವಲನಗಳ ಬಗೆಗೆ ಕೇಳುತ್ತಾರೆ. ಆದರೆ ವ್ಹಿಸ್ಕಿ ಪಾದ್ರಿಯು ಫೆಲೊಸ್‌ನ ಮನೆಯಲ್ಲಿಯೇ ಆಶ್ರಯ ಪಡೆದಿದ್ದಾನೆ. ಫೆಲೊಸ್‌ನ ಮಗಳಾದ ತೋರಲ್ ಅವಳು ಆಸ್ಥೆವಹಿಸಿ ಆ ಪಾದ್ರಿಗೆ ಆಶ್ರಯ ಕೊಟ್ಟಿದ್ದಾಳೆ. ಅಲ್ಲಿಂದ ಪಾದ್ರಿ ಒಂದು ಸನಿಹದ ಹಳ್ಳಿಗೆ ಹೋದಾಗ ಅಲ್ಲಿಯ ಜನರು ಆತನ ದಣಿವು ಬಾಯಾರಿಕೆಯನ್ನು ಅರ್ಥಮಾಡಿಕೊಳ್ಳದೆ ತಮ್ಮ ಪಾಪಗಳನ್ನು ಒಪ್ಪಿಸಿಕೊಳ್ಳಬೇಕೆಂದು ಒತ್ತಾಯಿಸುತ್ತಾರೆ. ಅಲ್ಲಿಂದ ಮತ್ತೊಂದು ಹಳ್ಳಿಗೆ ಹೋಗಿ ಪಾದ್ರಿ ತನ್ನ ಪ್ರೇಯಸಿಯಾದ ಮೇರಿಯಾ ಮತ್ತು ಚಿಕ್ಕಮಗಳಾದ ಬ್ರಿಜಿತಾ ಅವರನ್ನು ಭೇಟಿಯಾಗುತ್ತಾನೆ. ಮೇರಿಯಾ ತನ್ನ ಪ್ರಿಯತಮನನ್ನು ಚಿಕ್ಕಕೋಣೆಯಲ್ಲಿ ಬಚ್ಚಿಡುತ್ತಾಳೆ. ಅಲ್ಲಿ ಅವನಿಗೆ ಹಾಸಿಗೆ ಹಾಸಿ, ರಹಸ್ಯವಾಗಿ ವ್ಹಿಸ್ಕಿಯನ್ನು ತಂದುಕೊಡುತ್ತಾಳೆ. ಆಗ ವ್ಹಿಸ್ಕಿಪಾದ್ರಿಗೆ ತಾನು ಹಿಂದೆ ಅವಳೊಂದಿಗೆ ಮಾಡಿದ ವ್ಯಭಿಚಾರ ನೆನಪಾಗಿ ಪಾಪಪ್ರಜ್ಞೆಯಿಂದ ಮುದುಡಿಹೋಗುತ್ತಾನೆ. ಅಂದು ನಸುಕಿನಲ್ಲಿಯೆ ಎದ್ದು ಅಲ್ಲಿಯ ಹಳ್ಳಿಗರಿಗಾಗಿ ಸಾಮೂಹಿಕ ಪ್ರಾರ್ಥನಾ (Mass) ಕಾರ್ಯಕ್ರಮವನ್ನು ನಡೆಯಿಸಿಕೊಡುತ್ತಾನೆ. ಇನ್ನು ಅಲ್ಲಿಂದ ಪಾರಾಗಬೇಕೆನ್ನುವಷ್ಟರಲ್ಲಿ ಸೈನ್ಯಾಧಿಕಾರಿಯೊಬ್ಬ ಬಂದು ತಲೆಮರೆಸಿಕೊಂಡಿರುವ ವ್ಹಿಸ್ಕಿಪಾದ್ರಿಯ ಬಗೆಗೆ ಜನರನ್ನು ವಿಚಾರಿಸುತ್ತಾನೆ. ಆ ಹಳ್ಳಿಗರು ಗುಟ್ಟನ್ನು ಬಿಟ್ಟುಕೊಡುವುದಿಲ್ಲ. ಆಗ ಸೈನ್ಯಾಧಿಕಾರಿ ಅವರ ಪೈಕಿ ಒಬ್ಬನನ್ನು ಒತ್ತೆಯಾಳೆಂದು ಒಯ್ಯಬಯಸುತ್ತಾನೆ. ಇದೆಲ್ಲ ಗದ್ದಲಕ್ಕೆ ಮೂಲಕಾರಣನಾದ ವೇಷಧಾರಿ ಪಾದ್ರಿ ತನ್ನನ್ನೆ ಒತ್ತೆಯಾಳೆಂದು ಒಯ್ಯಲು ಸೈನ್ಯಾಧಿಕಾರಿಗೆ ಕೇಳಿಕೊಳ್ಳುತ್ತಾನೆ. ಆದರೆ ಸೈನ್ಯಾಧಿಕಾರಿ ಅದಕ್ಕೊಪ್ಪದೆ ಮತ್ತೊಬ್ಬ ತರುಣನನ್ನು ಒತ್ತೆಯಾಳೆಂದು ಬಂಧಿಸಿ ಕರೆದೊಯ್ಯುತ್ತಾನೆ. ತದನಂತರ ವ್ಹಿಸ್ಕಿಪಾದ್ರಿ ಆ ಹಳ್ಳಿಯನ್ನು ಬಿಟ್ಟು ದಕ್ಷಿಣ ದಿಕ್ಕಿಗೆ ಪ್ರಯಾಣ ಬೆಳೆಯಿಸುತ್ತಾನೆ. ದಾರಿಯಲ್ಲಿ ಒಬ್ಬ ನೀಚಕುಲದವನಾದ ವ್ಯಕ್ತಿ

(mestizo) ಭೇಟಿಯಾಗುತ್ತಾನೆ. ಆತ ವ್ಹಿಸ್ಕಿಪಾದ್ರಿಯನ್ನು ಬೆನ್ನುಬಿಡದೆ ಹಿಂಬಾಲಿಸುತ್ತಾನೆ. ತೀರ ಸಾಮಾನ್ಯನಂತೆ ಕಾಣುವ ವೇಷಧಾರಿಯು ಪಾದ್ರಿ ಇರಬಹುದೆಂದು ಮನಸ್ಸಿಗೆ ಹೊಳೆದೊಡನೆಯೆ ಆತ ಪಾದ್ರಿಗೆ ತನ್ನ ಪಾಪಗಳನ್ನು ಒಪ್ಪಿಸಿಕೊಳ್ಳಲು ಒತ್ತಾಯಿಸುತ್ತಾನೆ. ವಿಧಿಯಿಲ್ಲದೆ ಪಾದ್ರಿ ಆತನ ಪಾಪಗಳನ್ನೆಲ್ಲ ಒಪ್ಪಿಸಿಕೊಳ್ಳುತ್ತಾನೆ. ಅನಂತರ ಪಾದ್ರಿ ಕತ್ತಲಲ್ಲಿ ನಡೆದು ನಗರವನ್ನು ಮುಟ್ಟಿದಾಗ ಅಲ್ಲಿ ಒಬ್ಬ ಭಿಕ್ಷುಕನನ್ನು ಸಂಧಿಸುತ್ತಾನೆ. ಅವನಿಗೆ ಹದಿನೈದು ಪೆಸೊಗಳನ್ನು ಕೊಟ್ಟು ವ್ಹಿಸ್ಕಿಯನ್ನು ದೊರಕಿಸಲು ಹೇಳುತ್ತಾನೆ. ಆ ಭಿಕ್ಷುಕ ತನಗೆ ರಾಜ್ಯಪಾಲನ ಅಳಿಯನ (cousin) ಪರಿಚಯವಿದ್ದುದರ ಬಗೆಗೆ ಭಡಾಯಿ ಕೊಚ್ಚುತ್ತಾನಲ್ಲದೆ ಪಾದ್ರಿಯ ಸಲುವಾಗಿ ಬೀರು ಮತ್ತು ವ್ಹಿಸ್ಕಿ ಪೇಯಗಳನ್ನೂ ದೊರಕಿಸುತ್ತಾನೆ. ಅದೇ ವೇಳೆಗೆ ಸೈನ್ಯಾಧಿಕಾರಿ ಅವರ ಸಂಗಡ ಮಾತನಾಡುತ್ತ ತಲೆಮರೆಸಿಕೊಂಡ ವ್ಹಿಸ್ಕಿಪಾದ್ರಿಯ ಬಗೆಗೂ ಮತ್ತು ಆತನನ್ನು ಪತ್ತೆಹಚ್ಚುವುದಕ್ಕಾಗಿ ನಾಲ್ಕು ಜನರನ್ನು ಒತ್ತೆಯಾಳುಗಳಾಗಿ ತೆಗೆದುಕೊಂಡು ಗುಂಡಿಕ್ಕಿ ಕೊಂದುದನ್ನೂ ವಿಶದ ಪಡಿಸುತ್ತಾನೆ. ವೇಷಧಾರಿಯಾಗಿದ್ದ ವಿಸ್ಕಿಪಾದ್ರಿ ತನ್ನ ಗುರುತನ್ನು ಅವರಿಗೆ ಹಚ್ಚಗೊಡುವುದಿಲ್ಲ. ಆತ ಅಲ್ಲಿಂದ ಪಾರಾಗಿ ಹೋಗುವುದಕ್ಕಾಗಿ ಹವಣಿಸುತ್ತಿರು ತ್ತಾನೆ. ಆಗ ಅನಿರೀಕ್ಷಿತವಾಗಿ ಭೇಟಿಯಾದ ಜೋಸೆಪಾದ್ರಿಯ ಸಹಾಯ ಯಾಚಿಸಿ ದಾಗ ಆತ ಸರಕಾರದ ಭಯದಿಂದ ಯಾವ ತೊಂದರೆಯಲ್ಲಿಯೂ ಸಿಲುಕಿಕೊಳ್ಳದೆ ವ್ಹಿಸ್ಕಿಪಾದ್ರಿಗೆ ದೂರ ಎಲ್ಲಿಗಾದರೂ ಹೋಗಲು ಹೇಳುತ್ತಾನೆ. ಹೀಗೆ ಅವಸರದಲ್ಲಿ ಹೋಗುತ್ತಿರುವಾಗ ವ್ಹಿಸ್ಕಿಪಾದ್ರಿಯ ಅಂಗಿಯ ಒಳಗಿಟ್ಟಿದ್ದ ಬಾಟಲಿ ಬಾಗಿಲಿಗೆ ಬಡಿದ ಸದ್ದಾದಾಗ ಸೈನಿಕರು ಬಂದು ಆತನನ್ನು ಕತ್ತಲು ಕೋಣೆಯಲ್ಲಿ ಬಂಧಿಸಿಡು ತ್ತಾರೆ. ಅಲ್ಲಿ ಆತ ನಾನಾ ನಮೂನೆಯ ತೊಂದರೆಗಳನ್ನು ಅನುಭವಿಸುತ್ತಾನೆ. ಬೆಳಗಾದಮೇಲೆ ಅಲ್ಲಿಯ ಸೈನ್ಯಾಧಿಕಾರಿಯ ಆಜ್ಞೆಯಮೇರೆಗೆ ಆತ ಪಾಯಿಖಾನೆಯ ಮಲಮೂತ್ರಗಳ ಬಕೆಟ್ಟನ್ನು ದೂರದ ಜಾಗೆಯಲ್ಲಿ ಖಾಲಿಮಾಡಿಬರುವ ಕಾರ್ಯ ವನ್ನೂ ಅತ್ಯಂತ ಕಷ್ಟದಿಂದಲೆ ನಿರ್ವಹಿಸುತ್ತಾನೆ. ಅನಂತರ ಅಲ್ಲಿಂದ ಬಿಡುಗಡೆ ಹೊಂದಿ ಕೋರಲ್‌ಳ ಮನೆಗೆ ಹೋಗಬಯಸುತ್ತಾನೆ. ದಾರಿಯಲ್ಲಿ ಹೆಣ್ಣು ಮಗಳೊಬ್ಬಳ ಮಗುವು ಸತ್ತಾಗ ಅವಳ ಒತ್ತಾಯಕ್ಕೆ ಮಣಿದು ಅದರ ಅಂತ್ಯಕ್ರಿಯೆ ಯನ್ನು ನೆರವೇರಿಸುತ್ತಾನೆ. ಆಮೇಲೆ ಒಂದು ಸುಣ್ಣಬಳಿದ ಕಟ್ಟದ (ಚರ್ಚು)ದಲ್ಲಿ ವಿಶ್ರಮಿಸಿಕೊಳ್ಳುತ್ತಾನೆ. ಆಗ ಆ ಹಳ್ಳಿಯ ಜನರೆಲ್ಲ ತಮ್ಮ ಮಕ್ಕಳುಮರಿಗಳಿಗೆಲ್ಲ ಪಾದ್ರಿಯಿಂದ ದೀಕ್ಷೆ ಕೊಡಿಸುತ್ತಾರೆ. ಅದರಿಂದಾಗಿ ಆತ ಒಟ್ಟು ನಾಲವತ್ತೈದು ಪೆಸೊಗಳಷ್ಟು ದಕ್ಷಿಣೆ ಪಡೆದು ಸಂತೋಷಗೊಳ್ಳುತ್ತಾನೆ. ಅದೇ ಹಣದ ಸಹಾಯ ದಿಂದ ಆತ ಲಾಸ್‌ಕೆಸಾಸ್ ನಗರಕ್ಕೆ ಹೋಗಿ ಒಂದು ವಸತಿಗೃಹದಲ್ಲಿ ಹಾಯಾಗಿ ಇರಬಯಸುತ್ತಾನೆ. ಆ ಪ್ರಕಾರ ಆತ ಆ ನಗರಕ್ಕೆ ಹೋಗುತ್ತಿರಲಾಗಿ ದಾರಿಯಲ್ಲಿ ಕೆಳಜಾತಿಯ ತರುಣ ಆತನನ್ನು ಹಿಂಬಾಲಿಸುತ್ತಾನೆ. ಆದರೆ ವ್ಹಿಸ್ಕಿಪಾದ್ರಿ ಆತನನ್ನು

ತಪ್ಪಿಸಲಿಕ್ಕೆ ಬಹಳ ಪ್ರಯತ್ನಿಸಿದರೂ ಆ ತರುಣ ಅತನ ಬೆನ್ನು ಬಿಡುವುದೇ ಇಲ್ಲ. ಸ್ವಲ್ಪ ದೂರ ಹೋಗುವುದರಲ್ಲಿ ಒಬ್ಬ ಸಾಯುತ್ತಿರುವ ಅಮೇರಿಕನ್ ಆತನನ್ನು ಎದುರ್ಗೊಂಡು ತಾನು ಅನೇಕ ವ್ಯಕ್ತಿಗಳನ್ನು ಕೊಂದುದರಿಂದ ಈಗ ತಾನು ಬೇರೆ ಯವರ ಗುಂಡಿಗೆ ಆಹುತಿಯಾಗಿರುವುದಾಗಿ ಹೇಳಿ ತನ್ನ ಪಿಸ್ತೂಲನ್ನು ಪಾದ್ರಿಗೆ ಆತ್ಮರಕ್ಷಣೆಗಾಗಿ ಕೊಡುತ್ತಾನೆ. ವ್ಹಿಸ್ಕಿಪಾದ್ರಿಯು ಆ ಸಾಯುತ್ತಿರುವ ಅಮೇರಿಕನ್‌ನಿಗಾಗಿ ದೇವರಲ್ಲಿ ಪ್ರಾರ್ಥಿಸುತ್ತಾನೆ. ಅನಂತರ ಆ ಅಮೇರಿಕನ್ ಅಲ್ಲಿಯೇ ಕೊನೆಯುಸಿರೆಳೆಯುತ್ತಾನೆ. ಆ ರಾತ್ರಿ ವ್ಹಿಸ್ಕಿಪಾದ್ರಿ ಗುಡಿಸಲೊಂದರಲ್ಲಿ ವಿಶ್ರಮಿಸಿಕೊಳ್ಳುತ್ತಾನೆ. ಬೆಳಗಾದೊಡನೆ ಸೈನ್ಯಾಧಿಕಾರಿಯೊಬ್ಬ ಅನೇಕ ಸಶಸ್ತ್ರಧಾರಿಗಳೊಂದಿಗೆ ಬಂದು ವ್ಹಿಸ್ಕಿಪಾದ್ರಿಯನ್ನು ರಾಜದ್ರೋಹದ ಕಾರಣಕ್ಕಾಗಿ ಬಂಧಿಸುತ್ತಾನೆ. ಆ ಸೈನ್ಯಾಧಿಕಾರಿ ಈ ಹಿಂದೆ ಸೆರೆಮನೆಯಲ್ಲಿ ತನಗೆ ಹಣ ಕೊಟ್ಟವನೇ ಆಗಿರುತ್ತಾನೆ. ಆಗ ವ್ಹಿಸ್ಕಿಪಾದ್ರಿಗೆ ಅಸ್ಪೃಶ್ಯ ತರುಣನೇ ತನಗೆ ಮೋಸ ಮಾಡಿದ್ದಾನೆಂಬುದು ಖಚಿತವಾಗುತ್ತದೆ. ಸೈನ್ಯಾಧಿಕಾರಿ ವ್ಹಿಸ್ಕಿಪಾದ್ರಿಯನ್ನು ಗುಂಡಿಕ್ಕಿ ಕೊಲ್ಲಲಾಗುತ್ತದೆಯೆಂದು ಹೇಳಿದೊಡನೆಯೇ ಆತ ಭಯದಿಂದ ತತ್ತರಿಸು ತ್ತಾನೆ. ಗುಂಡಿಕ್ಕಿದಾಗ ಬಹಳ ನೋವಾಗುತ್ತದೆಯೇ ಎಂದು ಆತ ಪದೇಪದೆ ಆ ಅಧಿಕಾರಿಯನ್ನು ಕೇಳುತ್ತಾನೆ. ಸಾಯುವ ಮೊದಲು ಏನಾದರೂ ಇಚ್ಛೆಯಿದ್ದರೆ ಹೇಳು ಎಂದು ಕೇಳಿದಾಗ ವ್ಹಿಸ್ಕಿಪಾದ್ರಿಯು ತನ್ನ ಪಾಪಗಳನ್ನೆಲ್ಲ ಜೋಸೆಪಾದ್ರಿಯ ಎದುರಿಗೆ ಒಪ್ಪಿಕೊಳ್ಳಬೇಕೆಂದು ಹೇಳುತ್ತಾನೆ. ಅದು ಕಾಯಿದೆಯ ವಿರುದ್ಧ ವಾಗಿದ್ದರೂ ಸೈನ್ಯಾಧಿಕಾರಿ ಸ್ವತಃ ಜೋಸೆಪಾದ್ರಿಯ ಮನೆಗೆ ಹೋಗಿ ವಿನಂತಿಸಿ ಕೊಂಡಾಗ ಜೋಸೆಪಾದ್ರಿ ಹೆಂಡತಿಯ ಮಾತಿಗೆ ಅಂಜಿ ಬರಲೊಪ್ಪುವುದಿಲ್ಲ. ಹೀಗಾಗಿ ವ್ಹಿಸ್ಕಿಪಾದ್ರಿ ತನ್ನ ಪಾಪಗಳನ್ನು ತನ್ನಷ್ಟಕ್ಕೆ ತಾನೇ ಒಪ್ಪಿಕೊಳ್ಳುತ್ತಾನೆ. ಮರುದಿನ ವ್ಹಿಸ್ಕಿಪಾದ್ರಿಯನ್ನು ಗುಂಡಿಕ್ಕಿಕೊಂದ ಸುದ್ದಿ ಮೆಕ್ಸಿಕೊ ಪ್ರದೇಶದಲ್ಲೆಲ್ಲ ಹಬ್ಬಿರುತ್ತದೆ.

o o o o

ಈ ಕಾದಂಬರಿಯಲ್ಲಿ ಚರ್ಚಿತವಾಗಿರುವ ಮುಖ್ಯವಿಷಯ ಲೌಕಿಕವಾದ ಮತ್ತು ಆಧ್ಯಾತ್ಮವಾದಗಳ ನಡುವಿನ ಸಂಘರ್ಷವೇ ಆಗಿದೆ. ಇದರಲ್ಲಿ ಬರುವ ಇನ್ನಿತರ ಸಮಸ್ಯೆಗಳು ಈ ವಿಸ್ತೃತವಾದ ಸಮಸ್ಯೆಯ ಅಂಗಗಳಾಗಿ ಮಾತ್ರ ಬರುತ್ತವೆ. ಈ ಸಾರ್ವಕಾಲಿಕ ಸಮಸ್ಯೆಯನ್ನು ಚಿತ್ರಿಸುವುದರ ಸಲುವಾಗಿ ಗ್ರಹಾಮ್‌ಗ್ರೀನ್ ಅವರು ಮೆಕ್ಸಿಕೊ ಪ್ರದೇಶವನ್ನೇ ಹಿನ್ನೆಲೆಯಾಗಿ ಆರಿಸಿಕೊಂಡಿದ್ದಾರೆ. ಲೌಕಿಕ ಮೌಲ್ಯಗಳು ಮತ್ತು ಆಧ್ಯಾತ್ಮಿಕ ಮೌಲ್ಯಗಳು ಇವೆರಡರ ನಡುವಿನ ಘರ್ಷಣೆಯನ್ನು ಚಿತ್ರಿಸು ವುದಕ್ಕಾಗಿ ಎರಡು ಪಾತ್ರಗಳನ್ನು ಅಥವಾ ಪಾತ್ರನಿಕರಗಳನ್ನು ಅವರು ಸೃಷ್ಟಿಸಿ ದ್ದಾರೆ. ಮೆಕ್ಸಿಕೊ ದೇಶದ ದಕ್ಷಿಣರಾಜ್ಯವೊಂದರಲ್ಲಿ ಕ್ಯಾಥೊಲಿಕ್ ಧರ್ಮದ

ನಿರ್ಮೂಲನೆಗಾಗಿ ಅಲ್ಲಿಯ ಸರಕಾರ ಉಗ್ರಕ್ರಮ ಕೈಕೊಂಡು ಆ ನಾಡಿನಲ್ಲಿದ್ದ ಪ್ರತಿಯೊಂದೂ ಕ್ಯಾಥೊಲಿಕ್ ಪಾದ್ರಿಯನ್ನೂ ಬಂಧಿಸಿ ಅನಂತರ ಅವರಿಗೆ ಗೃಹಸ್ಥ ಜೀವನ ನಡೆಯಿಸುವ ಆಜ್ಞೆಯನ್ನೀಯುತ್ತದೆ. ಅದನ್ನು ಪಾಲಿಸಿದ ಪಾದ್ರಿಗಳೆಲ್ಲ ಸರಕಾರದ ಮಾಶಾಸನವನ್ನು ಪಡೆದುಕೊಂಡು ಹಾಯಾಗಿ ಜೀವನವನ್ನು ಸಾಗಿಸ ಬಹುದು. ಸರಕಾರದ ಆಜ್ಞೆಯನ್ನು ಪಾಲಿಸಲು ನಿರಾಕರಿಸಿದ ಪಾದ್ರಿಗಳನ್ನು ಗುಂಡಿಕ್ಕಿ ಕೊಲ್ಲುವುದು ಆ ಸರಕಾರದ ಗುರಿಯಾಗಿರುತ್ತದೆ. ಇಂಥ ನಾಸ್ತಿಕ ಚಳುವಳಿಯ ಬಿರುಗಾಳಿಯಲ್ಲಿ ಸಿಕ್ಕಿಕೊಂಡ ಕೊನೆಯ ಒಬ್ಬನೇ ಒಬ್ಬ ಪಾದ್ರಿ (ಈ ಕಾದಂಬರಿಯ ಕಥಾನಾಯಕ) ಅನೇಕ ಕಷ್ಟನಷ್ಟಗಳನ್ನು ಅನುಭವಿಸುತ್ತಾನೆ. ಮೆಕ್ಸಿಕೊ ದೇಶದ ಸರಕಾರ ಭೌತಿಕ ಮೌಲ್ಯಗಳನ್ನು ಎತ್ತಿಹಿಡಿದರೆ, ವ್ಹಿಸ್ಕಿಪಾದ್ರಿ ಆಧ್ಯಾತ್ಮಿಕ ಮೌಲ್ಯಗಳನ್ನು ಸಂಕೇತಿಸುತ್ತಾನೆ. ಸರಕಾರದ ದೃಷ್ಟಿಯಲ್ಲಿ ದೇವರು, ಧರ್ಮ, ಪಾಪ, ಸ್ವರ್ಗ, ನರಕ ಮುಂತಾದ ಕಲ್ಪನೆಗಳೆಲ್ಲ ನಿರುಪಯುಕ್ತವಾದ ವಿಷಯಗಳಾಗಿರುತ್ತವೆ. ಮನುಷ್ಯ ತನ್ನ ದೈನಂದಿಕ ಜೀವನಕ್ಕೆ ಬೇಕಾದ ಅವಶ್ಯಕತೆ ಗಳಿಲ್ಲದೆ ಸಾಯುತ್ತಿರುವ ಸಮಯದಲ್ಲಿ ಧರ್ಮ, ದೇವರು ಮುಂತಾದವುಗಳೆಲ್ಲ ಯಾರಿಗೆ ಬೇಕಾಗಿರುತ್ತವೆ ? ಅದಲ್ಲದೆ ಇಂಥ ನಿರುಪಯುಕ್ತ ಆಧ್ಯಾತ್ಮಿಕ ಮೌಲ್ಯ ಗಳನ್ನು ತಮ್ಮ ಸ್ವತಃ ಜೀವನದಲ್ಲಿಯೆ ಆಚರಣೆಗೆ ತರದೆ ಅವುಗಳನ್ನು ಬೋಧಿಸುತ್ತ ಸಮಾಜವನ್ನೇ ಮೋಸಗೊಳಿಸುವಂಥ ಧಾರ್ಮಿಕ ದಳ್ಳಾಳಿಗಳಾಗಿದ್ದ ಪಾದ್ರಿಗಳನ್ನು ನಿರ್ಮೂಲಗೊಳಿಸುವುದೇ ಮೆಕ್ಸಿಕೊ ಸರಕಾರದ ಉದ್ದೇಶ. ಈ ಕಾರಣಕ್ಕಾಗಿಯೆ ಮೆಕ್ಸಿಕೊ ಸರಕಾರದ ಸೈನಿಕರು ಕುದುರೆಸವಾರಿ ಮಾಡುತ್ತ ಹಳ್ಳಿಯಿಂದ ಹಳ್ಳಿಗೆ ತಿರುಗುತ್ತ ತಲೆಮರೆಸಿಕೊಂಡಿದ್ದ ವ್ಹಿಸ್ಕಿಪಾದ್ರಿಯನ್ನು ಶೋಧಿಸುತ್ತಿದ್ದಾರೆ. ವಿಸ್ಕಿ ಪಾದ್ರಿ ಕ್ಯಾಥೊಲಿಕ್ ಧರ್ಮದ ಮೌಲ್ಯಗಳನ್ನು ಸಂಕೇತಿಸುತ್ತಾನೆ. ಆತ ತಾನೊಬ್ಬ 'ಪಾಪಿ' ಎಂಬುದು ತನಗೆ ಗೊತ್ತಿದ್ದರೂ ತನ್ನ ಧರ್ಮದಲ್ಲಿಟ್ಟಿದ್ದ ಅಚಲಶ್ರದ್ಧೆ ಯನ್ನು ಹಿಂತೆಗೆದುಕೊಳ್ಳುವುದಿಲ್ಲ. ಕ್ಯಾಥೊಲಿಕ್ ಧರ್ಮದ ಪ್ರಕಾರ ತಾನೊಬ್ಬ ಪಾದ್ರಿಯಾಗಿದ್ದರೂ ತನ್ನಲ್ಲಿ ಪಾದ್ರಿಯಲ್ಲಿರಬೇಕಾಗಿದ್ದ ಆದರ್ಶ ಗುಣಗಳು ಇಲ್ಲದುದರ ಅರಿವೂ ಆತನಿಗಿದೆ. ಉದಾಹರಣೆಗೆ ಆತ ತನ್ನ ಜೀವನದಲ್ಲಿ ಅನೇಕ ತರಹದ ಪಾಪಗಳನ್ನೆಸಗಿದ್ದಾನೆ. ಕ್ಯಾಥೊಲಿಕ್ ಧರ್ಮದಲ್ಲಿ ಹೇಳಿದ ಎರಡು ತೆರನಾದ ಪಾಪಗಳನ್ನೂ ಆತ ಮಾಡಿದ್ದಾನೆ. ಮೇರಿಯಾ ಎಂಬ ತರುಣಿಯೊಂದಿಗೆ ವ್ಯಭಿಚಾರ ಮಾಡಿ ಬ್ರಿಜಿತಾ ಎಂಬ ಒಬ್ಬ ಮಗಳನ್ನೂ ಪಡೆದಿದ್ದಾನೆ. ಇದರೊಂದಿಗೆ ಅನೇಕ ಸಲ ವಿಸ್ಕಿ ಕುಡಿಯುವ ಚಟವನ್ನೂ ಅಂಟಿಸಿಕೊಂಡಿದ್ದಾನೆ. ಅಲ್ಲದೆ ದೇವರನ್ನು ನಿಜವಾದ ವಿನಯದಿಂದ ಪೂಜಿಸದೆ ಒಂದು ತೆರನಾದ ಅಹಂಕಾರವನ್ನೂ ಹೊಂದಿದ್ದಾನೆ. ತಾನು ಹೋದಲ್ಲೆಲ್ಲ ತನ್ನ ಪ್ರೇಯಸಿ, ಮತ್ತಿತರ ಜನಜಂಗುಳಿ, ಅಪರಿಚಿತರು, ಅಧಿಕಾರಿಗಳು, ಇತರ ಪಾದ್ರಿಗಳು ಮುಂತಾದವರೆಲ್ಲ ತನ್ನನ್ನು ಒಬ್ಬ ನಿರುಪಯೋಗಿ ಮನುಷ್ಯನೆಂದೂ, ಪಾಪಿಯೆಂದೂ ತಿರಸ್ಕರಿಸುವುದರಿಂದ, ಮತ್ತೂ

ತನ್ನ ಪಾಪಗಳ ಪ್ರಜ್ಞೆಯಿಂದ ತನ್ನೊಂದಿಗೆ ತಾನೇ ಜಿಗುಪ್ಸೆಪೊಂದಿ ಜೀವನದ ಬಗೆಗೆ ಅನೇಕಸಾರಿ ನಿರಾಶೆಪಟ್ಟುಕೊಳ್ಳುತ್ತಾನೆ. ಹೀಗೆ ವ್ಯಭಿಚಾರ, ಕುಡಿತ, ಅಹಂಕಾರ ಮತ್ತು ನಿರಾಶೆ ಮುಂತಾದ ಘೋರಪಾಪ (mortal sins) ಗಳನ್ನೆಸಗಿದ್ದಾನೆ. ಇವುಗಳೊಂದಿಗೆ ಸುಳ್ಳುಹೇಳುವುದು, ವೇಷ ಮರೆಸಿಕೊಂಡು ಅಲೆದಾಡುವುದು ಇವೇ ಮುಂತಾದ ಕ್ಷುದ್ರಪಾಪ (venial sins) ಗಳನ್ನೂ ಮಾಡಿದ್ದಾನೆ. ಇವೆಲ್ಲ ಪಾಪಗಳಿಂದಾಗಿ ಆತ ನಿಜವಾದ ಕ್ಯಾಥೊಲಿಕ್ ಸನ್ಯಾಸಿ (saint) ಯಾಗಿರದಿದ್ದರೂ ಒಬ್ಬ ಅನರ್ಹನಾದ ಪಾದ್ರಿಯಾಗಿಯಾದರೂ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾನೆ. ಆತನೊಬ್ಬ ಪಾಪಿಯಾಗಿದ್ದರೂ ಆತನಲ್ಲಿ ಕೆಲವು ಸದ್ಗುಣಗಳೂ ಕಂಡುಬರುತ್ತವೆ. ಉದಾಹರಣೆಗೆ ತಾನು ಕ್ಯಾಥೊಲಿಕ್ ಧರ್ಮದ ಆದರ್ಶಗಳೆಲ್ಲವನ್ನೂ ಆಚರಣೆಯಲ್ಲಿ ತರಲಿಕ್ಕೆ ಅಸಮರ್ಥನಾಗಿದ್ದರೂ ತಾನು ಪಾದ್ರಿಯಾಗಿ ತನ್ನ ಕರ್ತವ್ಯವನ್ನು ಮಾಡಲೇಬೇಕೆಂಬ ಛಲವನ್ನು ನಾವು ಗಮನಿಸಲೇಬೇಕು. ತಾನು ಪತಿತನಾಗಿದ್ದರೂ ಮತ್ತಿತರರೆಲ್ಲರೂ ಮುಕ್ತಿ (salvation) ಯನ್ನು ಹೊಂದಲೆಂದು ಆಶಿಸಿ, ದೇವರಲ್ಲಿ ಅನೇಕಸಾರಿ ಪ್ರಾರ್ಥಿಸುತ್ತಾನೆ. ಇಡೀ ಮೆಕ್ಸಿಕೊ ಸರಕಾರದ ಸೈನಿಕರೆಲ್ಲ ಆತನ ಬೆನ್ನಟ್ಟಿ ಶೋಧಿಸುತ್ತಿದ್ದರೂ ಆತ ತನ್ನ ಧರ್ಮವನ್ನು ತ್ಯಜಿಸಲಾರ. ಆತ ಮನಸ್ಸು ಮಾಡಿದ್ದರೆ ಜೋಸೆಪಾದ್ರಿಯಂತೆ ತಾನೂ ತನ್ನ ಧರ್ಮವನ್ನು ತ್ಯಜಿಸಿ ಮದುವೆ ಮಾಡಿಕೊಂಡು ಸರಕಾರದ ಮಾಸಾಶನ ಪಡೆದುಕೊಂಡು ಹಾಯಾಗಿ ಗೃಹಸ್ಥ ಜೀವನವನ್ನು ಸಾಗಿಸಬಹುದಾಗಿತ್ತು. ಆದರೆ ಆತ ಹಾಗೆ ಮಾಡದೆ ತಾನು ಹೋದಹೋದಲ್ಲೆಲ್ಲ ಜನರ ಪಾಪಗಳನ್ನು ಒಪ್ಪಿಸಿಕೊಳ್ಳುತ್ತ, ಅವರ ಮಕ್ಕಳಿಗೆ ಧರ್ಮದೀಕ್ಷೆಯನ್ನೀಯುತ್ತ, ಅವರ ಮರಣ ಸಂಸ್ಕಾರಗಳನ್ನು ನೆರವೇರಿಸುತ್ತ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾನೆ. ತನ್ನ ಧರ್ಮನಿಷ್ಠೆಯಿಂದಾಗಿ ತಾನು ಏನೆಲ್ಲ ತೊಂದರೆಗಳನ್ನನುಭವಿಸಿದರೂ ಚಿಂತೆಯಿಲ್ಲ, ಅದಕ್ಕಾಗಿ ಸಾವನ್ನಪ್ಪಬೇಕಾಗಿಬಂದರೂ ಚಿಂತೆಯಿಲ್ಲ. ಆದರೆ ಜೋಸೆಪಾದ್ರಿಯಂತೆ ನಾಸ್ತಿಕ ಜೀವನವನ್ನು ಸಾಗಿಸಲು ಆತ ಸಿದ್ಧನಿಲ್ಲ. ಕೊನೆಗೆ ಸರಕಾರ ತನ್ನನ್ನು ಗುಂಡಿಕ್ಕಿ ಕೊಲ್ಲುವವರೆಗೂ ತನ್ನ ಧರ್ಮಾದರ್ಶವನ್ನು ಆತ ಬಿಟ್ಟುಕೊಡುವುದಿಲ್ಲ. ಹೀಗೆ ವಿಸ್ಕಿಪಾದ್ರಿ ಕ್ಯಾಥೊಲಿಕ್ ಧರ್ಮವನ್ನೂ ಅದರೊಂದಿಗೆ ಸಾರ್ವಕಾಲಿಕ ಆಧ್ಯಾತ್ಮಿಕ ಮೌಲ್ಯಗಳನ್ನೂ ಪ್ರತಿನಿಧಿಸುತ್ತಾನೆ. ಈ ಕಾದಂಬರಿಯು ಈ ರೀತಿಯಲ್ಲಿ ಲೌಕಿಕವಾದ ಮತ್ತು ಆಧ್ಯಾತ್ಮವಾದಗಳ ನಡುವಿನ ಸಂಘರ್ಷವನ್ನು ಚಿತ್ರಿಸುತ್ತದೆ.

* * * *

ದೇವರು, ಧರ್ಮ, ಸ್ವರ್ಗ, ನರಕ, ಪಾಪ, ಸದ್ಗುಣ, ಪತನ, ಮುಕ್ತಿ ಮುಂತಾದ ಮೂಲಭೂತ ಪ್ರಶ್ನೆಗಳನ್ನೊಳಗೊಂಡ ದೇವಶಾಸ್ತ್ರದ ಕಥಾವಸ್ತು ಗ್ರಹಾಮ್ ಗ್ರೀನ್ ಅವರ ಅನೇಕ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಕಂಡು

ಬರುತ್ತದೆ. ಅಪಾರ ಪ್ರೀತಿ ಮತ್ತು ಪ್ರೇರಣೆ ಕಾದಂಬರಿಗಳಲ್ಲಿಯೂ ಇದೇ ವಸ್ತು ಪ್ರಮುಖವಾಗಿರುತ್ತದೆ. ಆದರೆ ಇಂಥ ಗಂಭೀರವೂ ಜಟಿಲವೂ ಆದ ಪ್ರಶ್ನೆಯನ್ನು ಸಾಂಪ್ರದಾಯಿಕವಾದ ರೀತಿಯಲ್ಲಿ ಅಂದರೆ ವೈಭವೀಕರಿಸುವುದರ ಮೂಲಕವಾಗಲಿ ಇಲ್ಲವೆ ಖಂಡಿಸುವುದರ ಮೂಲಕವಾಗಲಿ ಚಿತ್ರಿಸದೆ ಹೊಸದೊಂದು ಮಾರ್ಗವನ್ನನು ಸರಿಸುವುದು ಗ್ರಹಾಮ್ ಗ್ರೀನರ ಅತ್ಯಂತ ಪ್ರಮುಖವಾದ ವೈಶಿಷ್ಟ್ಯವಾಗಿದೆ. ಅದೇನೆಂದರೆ ದೇವಶಾಸ್ತ್ರೀಯ ಕಥಾವಸ್ತುವನ್ನು ಪತ್ತೇದಾರಿ ತಂತ್ರದ ಮೂಲಕ ಚಿತ್ರಿಸುವುದು. ಅತ್ಯಂತ ಗಂಭೀರವಾದ ಕಥಾವಸ್ತುವನ್ನು ಶೀರಸಾಮಾನ್ಯವಾದಂಥ ಹಾಗೂ ಎಲ್ಲ ಸಾಹಿತಿಗಳೂ ನಿರ್ಲಕ್ಷಿಸಬಹುದಾದಂಥ ಪತ್ತೇದಾರಿ ತಂತ್ರಕ್ಕೆ ಅಳವಡಿಸುವುದು ಎಷ್ಟು ನವೀನವೊ ಅಷ್ಟೇ ಕಠಿಣವೂ ಮನೋರಂಜಕವೂ ಆಗಿದೆ. ಅದು ಹೇಗೆಂದು ಓದುಗರು ತಟ್ಟನೆ ಕೇಳಬಹುದು. ಅದನ್ನು ಈ ಕೆಳಗೆ ಚರ್ಚಿಸ ಲಾಗಿದೆ. ಪತ್ತೇದಾರಿ ಕಾದಂಬರಿಯಲ್ಲಿ ಯಾವುದಾದರೊಂದು ಅಪರಾಧ ಕೇಂದ್ರ ವಸ್ತುವಾಗಿರುತ್ತದೆ. ಅದು ಕೊಲೆ ಅಥವಾ ದರೋಡೆ ಅಥವಾ ಹಟಸಂಭೋಗ ಅಥವಾ ಸುಂದರಿಯೊಬ್ಬಳ ಅಪಹರಣ ಅಥವಾ ಇನ್ನಾವುದೊ ಕಾಯಿದೆಬಾಹಿರ ಕೃತಿಯಾಗಿರಬಹುದು. ಅಪರಾಧವೆನ್ನಸಗಿದ ವೀರ ಅಪರಾಧಿಯನ್ನು ಅವಿರತವಾಗಿ ಶೋಧಿಸುವ ರಹಸ್ಯ ಅಥವಾ ಬಹಿರಂಗ ಪತ್ತೇದಾರಿ ಅಧಿಕಾರಿಗಳ ತಂಡವೊಂದು ಸಿದ್ಧವಾಗಿರುತ್ತದೆ. ಹೀಗೆ ಶೋಧಿಸುವುದು ಅಥವಾ ಬೆನ್ನಟ್ಟುವುದು ಅಧಿಕಾರಿಗಳ ಕರ್ತವ್ಯವಾದರೆ ಪ್ರಾಣವನ್ನುಳಿಸಿಕೊಳ್ಳಬೇಕೆಂಬ ಅಪರಾಧಿ ಅತ್ಯಂತ ಚಾಣಾಕ್ಷತನ ದಿಂದ ವೇಷ ಮರೆಸಿಕೊಂಡು ಪಾರಾಗುತ್ತಿರುತ್ತಾನೆ. ಈ ಬೇಟೆ ಮತ್ತು ಪಲಾಯನ ಕೆಲವು ದಿನ ಹಾಗೆಯೇ ಸಾಗುತ್ತಿದೆ. ಕೊನೆಗೊಂದು ದಿನ ಅಪರಾಧಿಯ ಸಮೀಪ ವರ್ತಿಯಾದ ವ್ಯಕ್ತಿಯ (ಆತ ಸಂಬಂಧಿಕನಾಗಿರಲಿ, ಇಲ್ಲವೆ ಪರಿಚಿತನಾಗಿರಲಿ ಇಲ್ಲವೆ ಅಪರಿಚಿತನಾಗಿರಲಿ) ನೆರವಿನಿಂದ ಅಧಿಕಾರಿಗಳು ಅಪರಾಧಿಯನ್ನು ಪತ್ತೆಹಚ್ಚಿ ಬಂಧಿಸುತ್ತಾರೆ. ಆಗ ನಿಸ್ಸಹಾಯಕನಾದ ಅಪರಾಧಿ ತನ್ನ ಅಪರಾಧವನ್ನೊಪ್ಪಿ ಕೊಳ್ಳುತ್ತಾನೆ. ಅನಂತರ ಕಾಯಿದೆಯ ಪ್ರಕಾರ ಅಪರಾಧಿಯನ್ನು ನೇಣುಹಾಕಿ, ಇಲ್ಲವೆ ಗುಂಡಿಕ್ಕಿ ಇಲ್ಲವೆ ವಿದ್ಯುತ್ತಿನ ಖುರ್ಚಿಯ ಮೇಲೆ ಕೂಡ್ರಿಸಿ ಕೊಲ್ಲುತ್ತಾರೆ. ಹೀಗೆ ಪತ್ತೇದಾರಿ ಕಾದಂಬರಿಯ ಕೊನೆಯಲ್ಲಿ ಅಪರಾಧಿ ಸೋಲುತ್ತಾನೆ ಮತ್ತು ಅಧಿಕಾರಿಗಳು ವಿಜಯಿಯಾಗುತ್ತಾರೆ. ಈ ತರಹದ ಘಟನಾವಳಿ ಪತ್ತೇದಾರಿ ತಂತ್ರದ ಅವಿಭಾಜ್ಯ ಅಂಗವಾಗಿರುತ್ತದೆ. ಚಾಣಾಕ್ಷಮತಿಗಳಾದ ಗ್ರಹಾಮ್‌ಗ್ರೀನ್ ಅವರು ತಮ್ಮ ಕಾದಂಬರಿಯಲ್ಲಿ ಬರುವ ದೇವಶಾಸ್ತ್ರೀಯ ಕಥಾವಸ್ತುವನ್ನು ಚಿತ್ರಿಸಲು ಇಂಥದೆ ಪತ್ತೇದಾರಿ ತಂತ್ರವನ್ನುಪಯೋಗಿಸುತ್ತಾರೆ. ಅಪಾರ ಪ್ರೀತಿ ಮತ್ತು ಪ್ರೇರಣೆ ಕಾದಂಬರಿಯಲ್ಲಿ ಇದೇ ಹಂದರವನ್ನು ನೋಡಬಹುದು, ಧರ್ಮ ವಿರೋಧಿಯಾದ ಮೆಕ್ಸಿಕೊ ದೇಶದಲ್ಲಿ ಕ್ಯಾಥೊಲಿಕ್ ಧರ್ಮದ ಅನುಯಾಯಿಯಾಗಿ ಇನ್ನೂ ಉಳಿದುಕೊಂಡ ವ್ಹಿಸ್ಕಿಪಾದ್ರಿಯು ಸರಕಾರದ ದೃಷ್ಟಿಯಲ್ಲಿ ಒಬ್ಬ

ರಾಜದ್ರೋಹಿ ಮತ್ತು ಅಪರಾಧಿಯಾಗಿರುತ್ತಾನೆ. ಆದ್ದರಿಂದ ಸರಕಾರವು ಆತನನ್ನು ನಾಸ್ತಿಕನನ್ನಾಗಿ ಪರಿವರ್ತಿಸಲು ಇಲ್ಲವೆ ಗುಂಡಿಕ್ಕಿ ಕೊಲ್ಲಲು ಪಣತೊಟ್ಟು ನಿಂತಿರುತ್ತದೆ. ನಾಸ್ತಿಕನಾಗಿರಲು ಒಪ್ಪದ ವ್ಹಿಸ್ಕಿಪಾದ್ರಿ ವೇಷ ಬದಲಾಯಿಸಿಕೊಂಡು ಸರಕಾರದ ಪತ್ತೇದಾರಿ ಸೈನಿಕರ ಕಣ್ಣು ತಪ್ಪಿಸಿ ಹಳ್ಳಿಯಿಂದ ಹಳ್ಳಿಗೆ ಅಲೆಯುತ್ತಿರುತ್ತಾನೆ. ಹೀಗೆ ಐದಾರು ಬಾರಿ ಆತ ಸೈನಿಕರೆದುರಿಗಿದ್ದರೂ ಅವರಿಗೆ ಆತನ ಗುರುತು ಹಚ್ಚುವುದು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಆತ ತನ್ನ ಪ್ರೇಯಸಿಯಾದ ಮೇರಿಯಾಳ ಮನೆಯಲ್ಲಿ ತಂಗಿದ್ದಾಗ ಸೈನಿಕರು ಬಂದು ಆತನನ್ನು ಹುಡುಕಾಡುತ್ತಿರುತ್ತಾರೆ. ಆ ಹಳ್ಳಿಯ ಜನರಾರೂ ಆತನ ಬಗೆಗೆ ಯಾವ ಸುಳಿವನ್ನೂ ಕೊಡದಿದ್ದಾಗ ಸೈನಿಕ ಅವರಲ್ಲಿಯ ಒಬ್ಬನನ್ನು ಒತ್ತೆಯಾಳೆಂದು ಕರೆದೊಯ್ಯಬಯಸುತ್ತಾನೆ. ಆಗ ಬೇರೆ ವೇಷದಲ್ಲಿದ್ದ ವ್ಹಿಸ್ಕಿಪಾದ್ರಿ ತನ್ನ ಹೆಸರು 'ಮಾಂಟೆ' ಎಂದೂ, ತಾನೂ ಈ ಪ್ರಪಂಚದಲ್ಲಿ ಯಾರಿಗೂ ಉಪಯುಕ್ತವಿಲ್ಲದಿರುವುದರಿಂದ ತನ್ನನ್ನು ಒತ್ತೆಯಾಳೆಂದು ಒಯ್ಯಬೇಕೆಂದು ಮುಂದೆ ಬಂದು ನಿಲ್ಲುತ್ತಾನೆ. ಆಗ ಸೈನಿಕರು ಪ್ರಪಂಚದಲ್ಲಿ ನಿರುಪಯುಕ್ತನಾದ ವ್ಯಕ್ತಿ ನಮಗೂ ನಿರುಪಯುಕ್ತನಾಗಿರುತ್ತಾನೆಂದು ಹೇಳಿ ಮತ್ತೊಬ್ಬ ನಿರಪರಾಧಿ ತರುಣನನ್ನು ಒತ್ತೆಯಾಳೆಂದು ಕರೆದೊಯ್ಯುತ್ತಾರೆ. ಅನಂತರ ವ್ಹಿಸ್ಕಿಪಾದ್ರಿ ಆ ಹಳ್ಳಿಯನ್ನು ಬಿಟ್ಟು ಮುಂದಿನ ನಗರಕ್ಕೆ ನಡೆಯುತ್ತಾನೆ. ಅಲ್ಲಿಗೆ ಹೋಗುವುದರೊಳಗಾಗಿ ಕತ್ತಲಾಗುತ್ತಿದೆ. ಅಲ್ಲಿ ಒಬ್ಬ ವ್ಯಕ್ತಿಯನ್ನು ಆಕಸ್ಮಾತ್ತಾಗಿ ಭೇಟಿಯಾಗಿ ವ್ಹಿಸ್ಕಿಯನ್ನು ತಂದುಕೊಡು ಎಂದು ಆತನಿಗೆ ಸ್ವಲ್ಪ ಹಣ ಕೊಡುತ್ತಾನೆ. ಆತ ತನಗೆ ರಾಜ್ಯಪಾಲನ ಸೋದರಳಿಯನ ಪರಿಚಯವಿದೆಯೆಂದು ಭಡಾಯಿ ಕೊಚ್ಚಿ, ಅನಂತರ ಪಾದ್ರಿಗೆ ವ್ಹಿಸ್ಕಿಯನ್ನು ತಂದುಕೊಡುತ್ತಾನೆ. ಅಲ್ಲಿಯೂ ಸರಕಾರಿ ಸೈನಿಕರಿದ್ದರೂ ಯಾರಿಗೂ ಆ ಪಾದ್ರಿಯ ಗುರುತು ಹಿಡಿಯುವುದಾಗುವುದಿಲ್ಲ. ಅಂತೂ ಪಾದ್ರಿ ವ್ಹಿಸ್ಕಿಯನ್ನು ಕದ್ದು ಕುಡಿದು ಇನ್ನೇನು ಮುಂದಿನ ಹಳ್ಳಿಗೆ ಹೋಗಬೇಕೆಂದು ಗಡಿಬಿಡಿಯಿಂದ ನಡೆದಾಗ ಆತನ ಕಿಸೆಯಲ್ಲಿಯ ಬಾಟಲಿ ಬಾಗಿಲೊಂದಕ್ಕೆ ಬಡಿದು ಕಾಜಿನ ಸದ್ದಾಗುತ್ತದೆ. ಕೂಡಲೆ ಅಲ್ಲಿದ್ದ ಸೈನಿಕನೊಬ್ಬ ಆತನನ್ನು ಪಾನಪ್ರತಿಬಂಧವನ್ನು ಉಲ್ಲಂಘಿಸಿದ್ದಕ್ಕಾಗಿ ಬಂಧಿಸಿ ಸೆರೆಮನೆಯಲ್ಲಿ ನೂಕುತ್ತಾನೆ. ಆತ ಆ ರಾತ್ರಿ ಕತ್ತಲಾದ ಸೆರೆಮನೆಯಲ್ಲಿಯೆ ಕಳೆಯುತ್ತಾನೆ. ಅಲ್ಲಿ ನಿಜವಾಗಿಯೂ ನರಕ ಸದೃಶವಾದ ಯಾತನೆಯನ್ನನುಭವಿಸುತ್ತಾನೆ. ಆ ಸೆರೆಮನೆಗೆ ಹತ್ತಿರದಲ್ಲಿಯೆ ಶೌಚಕೂಪವಿರುವುದರಿಂದ ಅಲ್ಲೆಲ್ಲ ಮಲಮೂತ್ರಗಳ ನಾತ ಗೊಮ್ಮೆಂದು ನಾರುತ್ತಿರುತ್ತದೆ. ರಾತ್ರಿ ಆಗಾಗ್ಗೆ ಒಬ್ಬೊಬ್ಬರು ಕೈದಿಗಳು ಎದ್ದು ಮೂಲೆಯಲ್ಲಿದ್ದ ತಗಡಿನ ಡಬ್ಬಿಯ ಮೇಲೆ ಪಡಪಡಪಡ ಎಂದು ಉಚ್ಚೆ ಹೊಯ್ಯುತ್ತಾರೆ. ಆ ಕಟ್ಟಡದ ತುಂಬೆಲ್ಲ ಸೊಳ್ಳೆಗಳ ಸದ್ದು ಗೊಂಯೆಂದು ಕೇಳಿಸುತ್ತಿರುತ್ತದೆ. ಒಬ್ಬ ಕೈದಿ ತನ್ನ ಜಾರಪುತ್ರಿಯ ಬಗೆಗೆ

ಹೇಳಿಕೊಳ್ಳುತ್ತಿರುತ್ತಾನೆ. ಇನ್ನೊಬ್ಬ ಕೈದಿ ತಾನು ಮಾಡಿದ ಕೊಲೆ ಪ್ರಕರಣಗಳನ್ನು ವಿವರಿಸುತ್ತಿರುತ್ತಾನೆ. ವ್ಹಿಸ್ಕಿ ಪಾದ್ರಿ ತನ್ನ ಜೀವಹಿಡಿದ ಕಾಲುಗಳನ್ನು ಅಲುಗಾಡಿಸಲಾಗದೆ ಹಾಗೆಯೆ ಅದನ್ನು ಸಹಿಸಿಕೊಂಡು ತನ್ನ ಸುತ್ತಲಿನ ವ್ಯಾಪಾರವನ್ನೆಲ್ಲ ಕೇಳುತ್ತಿರುತ್ತಾನೆ. ಮತ್ತೊಬ್ಬ ಕೈದಿ ಆಸ್ತಿಕರನ್ನೆಲ್ಲ ಹೇಡಿಗಳೆಂದು ಬಯ್ದು ತನ್ನ ನಾಸ್ತಿಕತೆಯನ್ನು ಪ್ರತಿಪಾದಿಸುತ್ತಾನೆ. ಸೆರೆಮನೆಯ ಮೂಲೆಯಲ್ಲಿ ಇಬ್ಬರು ಪ್ರಣಯಿಗಳು ಇತರ ಕೈದಿಗಳ ಪರಿವೆಯಿಲ್ಲದೆ ಆಗಾಗ ರತಿಕ್ರೀಡೆಯಲ್ಲಿ ತೊಡಗುತ್ತ ನರಳುವುದು, ಚೀತ್ಕರಿಸುವುದು ಮತ್ತು ತೇಕುವುದು ಇವೇ ಮುಂತಾದ ಸದ್ದುಗಳನ್ನು ಮಾಡುತ್ತಿರುತ್ತಾರೆ. ಅದನ್ನು ಕೇಳಿ ಧಾರ್ಮಿಕ ಮನಸ್ಸಿನ ಹೆಣ್ಣುಮಗಳೊಬ್ಬಳು ಇಷ್ಟು ಜನರ ನಡುವೆ ಇಬ್ಬರಿಗೆ ಹೀಗೆ ಅಸಹ್ಯಮಾಡಲು ನಾಚಿಕೆ ಬರುದಿಲ್ಲವೆ ಎಂದು ಶಪಿಸುತ್ತಿರುತ್ತಾಳೆ. ಇವೆಲ್ಲದರ ಮಧ್ಯದಲ್ಲಿ ವ್ಹಿಸ್ಕಿಪಾದ್ರಿಯು ತನ್ನ ಪಾಪಗಳನ್ನು ತನ್ನ ಮನಸ್ಸಿನಲ್ಲಿಯೆ ಒಪ್ಪಿಕೊಳ್ಳುತ್ತ ಪಶ್ಚಾತ್ತಾಪ ಪಡುತ್ತಿರುತ್ತಾನೆ. ಈ ಸೆರೆಮನೆಯಲ್ಲಿರುವ ವಿವಿಧ ತರಹದ ಪಾಪಗಳ ಮಧ್ಯದಲ್ಲಿ ವ್ಹಿಸ್ಕಿ ಪಾದ್ರಿಯು ಅತ್ಯಂತ ಸಮಾಧಾನಪಟ್ಟುಕೊಳ್ಳುತ್ತಾನೆ. ಏಕೆಂದರೆ ತನ್ನಂಥವರು ಜಗತ್ತಿನಲ್ಲಿ ಸಾಕಷ್ಟು ಜನರಿದ್ದಾರೆಂಬುದು ಆತನ ಪಾಪ ಪ್ರಜ್ಞೆಯನ್ನು ಸ್ವಲ್ಪ ಕಡಿಮೆ ಮಾಡುತ್ತದೆ. ಆ ರಾತ್ರಿ ಹೇಗೊ ಅಲ್ಲಿ ಕಳೆದಮೇಲೆ ಮುಂಜಾನೆ ವ್ಹಿಸ್ಕಿ ಪಾದ್ರಿ ಅಲ್ಲಿಯ ಅಧಿಕಾರಿಯ ಆಜ್ಞೆಯ ಮೇರೆಗೆ ಪಾಯಖಾನೆಯ ಮಲಮೂತ್ರಗಳ ಬಕೆಟ್ಟುಗಳನ್ನು ದೂರದಲ್ಲಿ ಖಾಲಿಮಾಡಿ ಬರುತ್ತಾನೆ. ಇಂಥ ಕೆಲಸಕ್ಕೆ ಹೇಸಿಗೆಪಟ್ಟುಕೊಂಡು ಅನೇಕ ಸಾರಿ ವಾಂತಿ ಮಾಡಿಕೊಳ್ಳುತ್ತಾನೆ. ಈ ಹಿಂದೆ ಆತನಿಗೆ ಭೇಟಿಯಾಗಿದ್ದ ಅಸ್ಪೃಶ್ಯ (mestizo) ಅಲ್ಲಿ ಬಂದು ಪಾದ್ರಿಯ ಮೇಲೆ ಅಧಿಕಾರ ಚಲಾಯಿಸುತ್ತಿದ್ದುದು ನೋಡಿ ಪಾದ್ರಿಗೆ ಆಶ್ಚರ್ಯವಾಗುತ್ತದೆ. ಕೊನೆಗೆ ಅಲ್ಲಿಂದ ಬಿಡುಗಡೆ ಹೊಂದಿ ಮುಂದೆ ಹಳ್ಳಿಯಿಂದ ಹಳ್ಳಿಗೆ ಪ್ರಯಾಣ ಬೆಳೆಸುತ್ತಾನೆ. ದಾರಿಯಲ್ಲಿ ಅಸ್ಪೃಶ್ಯ ಮತ್ತೆ ಆತನ ಬೆನ್ನುಹತ್ತಿ ತನ್ನ ಪಾಪಗಳನ್ನು ಒಪ್ಪಿಸಿಕೊಳ್ಳಬೇಕೆಂದು ಪೀಡಿಸುತ್ತಿರುತ್ತಾನೆ. ಪಾದ್ರಿಯು ಆತನನ್ನು ಕೊನೆಗೆ ತಪ್ಪಿಸಿ ಮುಂದುವರಿದಾಗ ಒಬ್ಬ ಅಪರಿಚಿತ ಹೆಣ್ಣುಮಗಳೊಬ್ಬಳ ಸಾಯುತ್ತಿರುವ ಮಗುವಿನ ಮರಣ ಸಂಸ್ಕಾರವನ್ನು ಮಾಡಿ ಒಂದು ಕ್ರೈಸ್ತ ಮಂದಿರದಲ್ಲಿ ವಿಶ್ರಮಿಸಿಕೊಳ್ಳುತ್ತಾನೆ. ಅಲ್ಲಿಂದ ಮುಂದೆ ಸಾಗಿ ಲಾಸ್ ಕೆಸಾಸ್ ನಗರವನ್ನು ಮುಟ್ಟಿದಾಗ ಅಲ್ಲಿ ಅನಿರೀಕ್ಷಿತವಾಗಿ ಸೈನಿಕನೊಬ್ಬ ಬಂದು ಪಾದ್ರಿಯನ್ನು 'ರಾಜದ್ರೋಹ'ಕ್ಕಾಗಿ ಬಂಧಿಸುತ್ತಾನೆ. ಮರುದಿನ ಪಾದ್ರಿಯನ್ನು ಗುಂಡಿಕ್ಕಿ ಕೊಲ್ಲಲಾಗುತ್ತದೆ.

ಈ ರೀತಿಯಲ್ಲಿ ಕೊನೆಗೆ ಮೆಕ್ಸಿಕೊ ಸರಕಾರವು ಸಾಕಷ್ಟು ಪರಿಶ್ರಮದಿಂದ ವ್ಹಿಸ್ಕಿಪಾದ್ರಿಯನ್ನು ಬೆನ್ನಟ್ಟಿ, ಗುಂಡಿಕ್ಕಿ ಕೊಂದು ಕ್ಯಾಥೊಲಿಕ್ ಪಾದ್ರಿಗಳೆಲ್ಲರನ್ನು ನಿರ್ಮೂಲಗೊಳಿಸಿ ತನ್ನ ವಿಜಯವನ್ನು ಸಾಧಿಸುತ್ತದೆ. ಇದು ಲೌಕಿಕವಾದದ

ವಿಜಯವೆಂದೆ ಹೇಳಬಹುದು. ಸರಕಾರದ ದೃಷ್ಟಿಯಲ್ಲಿ ವ್ಹಿಸ್ಕಿಪಾದ್ರಿ ಸೋತು ಕೊಲೆಗೀಡಾದ ವ್ಯಕ್ತಿಯಾಗುತ್ತಾನೆ. ಆದರೆ ಕ್ಯಾಥೊಲಿಕ್ ಧರ್ಮದ ದೃಷ್ಟಿಯಲ್ಲಿ ವ್ಹಿಸ್ಕಿಪಾದ್ರಿ ಸೋಲಿಗೀಡಾದ ವ್ಯಕ್ತಿಯಾಗಿರದೆ ಆತನೂ ವಿಜಯಿಯೆ ಆಗಿರುತ್ತಾನೆ. ಅದು ಹೇಗೆಂದರೆ ವ್ಹಿಸ್ಕಿಪಾದ್ರಿಯು ಅನೇಕ ಪಾಪಗಳನ್ನೆಸಗಿದ್ದರೂ, ಆತನಲ್ಲಿ ದೈಹಿಕ ಅಥವಾ ಭೌತಿಕ ಶೌರ್ಯವಿರದಿದ್ದರೂ, ಆತ ತನ್ನ ಧರ್ಮವನ್ನು ತ್ಯಜಿಸುವುದಿಲ್ಲ. ಆತ ಮನಸ್ಸು ಮಾಡಿದ್ದರೆ ಜೋಸೆಪಾದ್ರಿಯಂತೆ ತನ್ನ ಧರ್ಮವನ್ನು ಬಿಟ್ಟು ಸಂಸಾರಿಯಾಗಿ ಮಾಸಾಶನ ಪಡೆಯುತ್ತ ಸುಖವಾಗಿರಬಹುದಾಗಿತ್ತು. ಆತ 'ಸನ್ಯಾಸಿ'ಯ ಉನ್ನತ ಮಟ್ಟಕ್ಕೇರದಿದ್ದರೂ, 'ಪಾದ್ರಿ'ಯ ಕರ್ತವ್ಯವನ್ನು ನಿರ್ವಹಿಸಿ ಜನರಿಗೆ ದೇವವಾಣಿಯನ್ನು ಮುಟ್ಟಿಸುತ್ತಾನೆ. ಅಲ್ಲದೆ ಅವರ ಧಾರ್ಮಿಕತೆಯನ್ನು ಸಜೀವವಾಗಿಡಿಸುತ್ತಾನೆ. ಆತ ತಾನು ಮಾಡಿದ ಪಾಪಗಳನ್ನೆಲ್ಲ ನೆನೆದು ಅನೇಕಸಾರೆ ಪಶ್ಚಾತ್ತಾಪ ಪಡುತ್ತಾನೆ. ಈ ಪಶ್ಚಾತ್ತಾಪದ ಮೂಲಕ ಆತ ದೇವರ ಬಗೆಗೆ ಹೆಚ್ಚೆಚ್ಚು ವಿಚಾರಿಸುತ್ತಾನೆ. ಗ್ರಹಾಮ್ ಗ್ರೀನ್ ಅವರ ನಂಬುಗೆಯ ಪ್ರಕಾರ ವ್ಹಿಸ್ಕಿಪಾದ್ರಿ ತನ್ನ ಪಾಪಗಳಿಂದಾಗಿಯೆ ದೇವರಿಗೆ 'ಸನ್ಯಾಸಿ' ಗಿಂತ ನಿಕಟವಾಗಿದ್ದಾನೆ. ಪಾದ್ರಿ ತನ್ನ ಪತನ (damnation) ದ ಮೂಲಕವೆ ಮುಕ್ತಿ (salvation)ಯನ್ನು ಹೊಂದಬಲ್ಲವನೆಂಬುದು ಗ್ರಹಾಮ್ ಗ್ರೀನ್ ಅವರ ವಾದ. ಹೀಗಾಗಿ ಸರಕಾರದ ದೃಷ್ಟಿಯಲ್ಲಿ ಪಾದ್ರಿ ಒಬ್ಬ ಸೋತ ವ್ಯಕ್ತಿಯಾಗಿದ್ದರೂ ಆತ ತನ್ನ ಕ್ಯಾಥೊಲಿಕ್ ಧರ್ಮಾದರ್ಶಗಳಿಗಾಗಿಯೆ ತನ್ನ ಬಲಿದಾನಗೈದುದರಿಂದ ಆತನೊಬ್ಬ ಹುತಾತ್ಮನಾಗುತ್ತಾನೆ. ಹುತಾತ್ಮನಾಗುವುದು ಧರ್ಮದಲ್ಲಿ ಅತ್ಯುಚ್ಚ ವಾದ ವಿಜಯವೆಂದೆ ಹೇಳಬೇಕು. ಹೀಗಾಗಿ ಮೆಕ್ಸಿಕೊ ಸರಕಾರ ಮತ್ತು ವ್ಹಿಸ್ಕಿ ಪಾದ್ರಿ ಇವರಿಬ್ಬರೂ ತಮ್ಮತಮ್ಮ ದೃಷ್ಟಿಯಲ್ಲಿ ತಮ್ಮದೆ ಆದ ವಿಜಯವನ್ನು ಸಾಧಿಸಿದ್ದಾರೆಂದು ಹೇಳಬಹುದು. ಈ ಕಾದಂಬರಿಯಲ್ಲಿ ಎರಡೂ ವಿಚಾರಧಾರೆ ಗಳನ್ನು ಪರಸ್ಪರವಾಗಿ ಖಂಡಿಸಿದ್ದರೂ ಕಾದಂಬರಿಕಾರರು ಒಟ್ಟಿನ ಮೇಲೆ ಕ್ಯಾಥೊ ಲಿಕ್ ಧರ್ಮವನ್ನೆ ಎತ್ತಿಹಿಡಿಯುತ್ತಾರೆಂಬುದು ಗಮನಾರ್ಹವಾದ ಸಂಗತಿಯಾಗಿದೆ. ಪತ್ತೇದಾರಿ ತಂತ್ರದ ಮೂಲಕ ದೇವಶಾಸ್ತ್ರೀಯ ಸಮಸ್ಯೆಯನ್ನು ಅತ್ಯಂತ ಯಶಸ್ವಿ ಯಾಗಿ ಚಿತ್ರಿಸಿದ್ದಾರೆಂದು ನಿಸ್ಸಂದೇಹವಾಗಿ ಹೇಳಬಹುದು.

* * * *

ಇನ್ನು ಈ ಕಾದಂಬರಿಯನ್ನೋದಿದಾಗ ಕನ್ನಡ ಸಾಹಿತ್ಯ ವಿಚಾರವಂತರಲ್ಲಿ ಒಂದು ಪ್ರಶ್ನೆ ಉದ್ಭವಿಸಬಹುದು. ಅದು ಕನ್ನಡನಾಡಿನ ಮತ್ತು ಭಾರತೀಯ ಸಾಹಿತ್ಯಕ್ಕೆ ಸಂಬಂಧಿಸಿದ ಪ್ರಶ್ನೆ. ಅನಾದಿ ಕಾಲದಿಂದ ಅನೇಕ ಧರ್ಮಗಳ ತವ ರೂರಾದ ಭಾರತ ದೇಶದಲ್ಲಿ, ಹಾಗೆಯೆ ಕನ್ನಡನಾಡಿನಲ್ಲಿ, ಅದರಲ್ಲಿಯೂ ಇಪ್ಪತ್ತ ನೆಯ ಶತಮಾನದಲ್ಲಿ ಸಾಕಷ್ಟು ಧಾರ್ಮಿಕ ಕಾದಂಬರಿಗಳು ಬಂದಿಲ್ಲವೆಂಬುದು

ಎಲ್ಲರಿಗೂ ಗೊತ್ತಿದ್ದ ವಿಷಯ. ಹಾಗಿದ್ದರೆ ಅದಕ್ಕೆ ಕಾರಣವೇನು ಎಂಬುದನ್ನು ವಿಮರ್ಶಕರಾದವರು ತಿಳಿಯಬಾರದೆ ? ಕನ್ನಡದಲ್ಲಿ ಹೆಚ್. ತಿಪ್ಪೇರುದ್ರಸ್ವಾಮಿಯವರು ಮಧ್ಯಕಾಲೀನ ಶರಣರನ್ನು ಕುರಿತು ಅನೇಕ ಧಾರ್ಮಿಕ ಕಾದಂಬರಿಗಳನ್ನು ಬರೆದಿದ್ದಾರೆ. ಅದರಂತೆ ಬಸವರಾಜ ಕಟ್ಟೀಮನಿಯವರೂ ಕೆಲವು ಧಾರ್ಮಿಕ ವಿಡಂಬನೆಗಳನ್ನು ಬರೆದಿದಾರೆ. ಇತ್ತಿತ್ತಲಾಗಿ ಜಡಭರತ ಮತ್ತು ಜಿ. ಹೆಚ್. ಹನ್ನೆರಡುಮಠ ಅವರೆಲ್ಲ ಕೆಲವು ಧಾರ್ಮಿಕ ನಾಟಕ ಮತ್ತು ಕಾದಂಬರಿಗಳನ್ನು ಬರೆದಿದ್ದಾರೆ. ಇವೆಲ್ಲ ಕೃತಿಗಳಲ್ಲಿರುವ ಸಾಮ್ಯ ವೈಷಮ್ಯಗಳು ಮತ್ತು ತಾಂತ್ರಿಕ ಭೇದಗಳನ್ನು ಅಭ್ಯಸಿಸುವುದು ಅತ್ಯಂತ ಅವಶ್ಯವಾದ ಕೆಲಸವಾಗಿದೆ. ಅದರಂತೆ ಆಧುನಿಕ ಕನ್ನಡ (ಮತ್ತು ಭಾರತೀಯ) ಧಾರ್ಮಿಕ ಕೃತಿಗಳು ಹಾಗೂ ಬ್ರಿಟಿಷ್ ಅಥವಾ ಪಾಶ್ಚಾತ್ಯ ಧಾರ್ಮಿಕ ಕೃತಿಗಳು – ಇವೆರಡರಲ್ಲಿರಬಹುದಾದ ತಾಂತ್ರಿಕ ಸಾಮ್ಯವೈಷಮ್ಯಗಳನ್ನು ಮತಾಂಧತೆಯನ್ನು ಮೀರಿದ ನಿರ್ಮಲ ಮನಸ್ಸಿನಿಂದ ಅಭ್ಯಸಿಸುವುದು ಸಂಶೋಧಕರ ಪ್ರಮುಖ ಹೊಣೆಗಾರಿಕೆಯಾಗಿದೆ.

ಅಂಬಿಗರ ಚೌಡಯ್ಯನ ವಚನವೊಂದರ ಪಾಠನಿರ್ಣಯ

ಎಂ. ಚಿದಾನಂದಮೂರ್ತಿ

ಅಂಬಿಗರ ಚೌಡಯ್ಯನ ವಚನವೊಂದು[1] (ಸಂ: ಬಸವರಾಜ ಸಿದ್ಧಾಶ್ರಮ ಮತ್ತು ಎಸ್. ವಿದ್ಯಾಶಂಕರ್, ನಂ. 40) ಹೀಗಿದೆ.

> ಅಡವಿಯ ಹೊಗಿಸಿತ್ತು[1] ನೀರಲದ್ದಿತ್ತು
> ಜಡೆಗಟ್ಟಿ ಭಸ್ಮವ ತೊಡಿಸಿತ್ತು
> [2]ಹಿಡಿ[3]ದೊತ್ತಿ ಕೇಶವ ಕೀ[4]ಳಿ[4]ಸಿತ್ತು
> ಹುಡಿಹುಚ್ಚುಗೊಳಿಸಿತ್ತು ಊರೊಳಗೆಲ್ಲ
> ಈ ಬೆಡಗಿನ ಮಾಯೆಗೆ ನಾನಂಜುವೆನೆಂದನಂಬಿಗರ ಚೌಡಯ್ಯ

ಪಾಠಾಂತರಗಳು :

1. + ಹುಡುಕು (ವಶಾಸಾ I.ಪೂ)
2. + ಎಡೆಪುಚ್ಚುಗೊಳಿಸಿತ್ತು (ಅದೇ)
3. ದೆ(ವಸಾಸಂ)
4. × (ಸುರ)
5. × (-ಹ, ವಸಾಸಂ, ಸುರ)

ಈ ವಚನದಲ್ಲಿ ಚೌಡಯ್ಯ ಎರಡುವರ್ಗದ ಸನ್ಯಾಸಿಗಳನ್ನು ಹೆಸರಿಸಿದ್ದಾನೆ. ಮೊದಲ ಸಾಲಲ್ಲಿ "ಹುಡುಕು'' ಎಂಬುದು ಹೊಸದಾಗಿ ಸೇರಬೇಕು. "ಹುಡುಕು ನೀರು" ಎಂದರೆ ಸುಡುನೀರು : ಕ್ಲಿಷ್ಟಪಾಠವಾದ್ದರಿಂದ ಅದೇ ಸರಿ. "ತೊಡಿಸಿತ್ತು" ಬಹುಶಃ "ತೊಡೆಸಿತ್ತು" ಎಂದಿರಬೇಕು. ''ತೊಡೆ" ಎಂದರೆ ಲೇಪಿಸು, ಬಳಿ, ಹಚ್ಚು ಎಂದರ್ಥ. ಎರಡನೆಯ ಪಾಠ ''ಎಡೆಪುಚ್ಚುಗೊಳಿಸಿತ್ತು" ಸ್ವಲ್ಪವೂ ಅರ್ಥವಾಗದು. ಮೂರನೆಯ ಸಾಲಿನ "ಕೀಳಿಸಿತ್ತು" ಸುಲಭಪಾಠ. ಆದರೆ "ಕೀಸಿತ್ತು" ಎಂಬ ಪಾಠ ಗಮನಾರ್ಹ. "ಕೀಸು" ಎಂದರೆ ತೆಳ್ಳಗೆ ಮಾಡು, ಹೊರಕ್ಕೆ ಕಿತ್ತು ತೆಗೆ, ಕೆರೆ, ಕೆತ್ತು, ಬೋಳಿಸು ಎಂಬರ್ಥಗಳಿವೆ. ''ಕೀಸುಮುಂಡೆ" ಎಂದರೆ ಬೋಳಿಸಿದ ತಲೆ ಎಂದೇ ಅರ್ಥ (ಕನ್ನಡ ಸಾಹಿತ್ಯ ಪರಿಷತ್ತಿನ "ಕನ್ನಡ ನಿಘಂಟು", II ನೋಡಿ) "ಕೀಳಿಸಿತ್ತು" ಎಂಬುದು ಸುಲಭ ಪಾಠವಾದರೂ ಅದೇ ಸ್ವೀಕಾರಾರ್ಹ.

---

1. (ಸಂ) ಬಸವರಾಜ ಸಿದ್ಧಾಶ್ರಮ ಮತ್ತು ವಿದ್ಯಾಶಂಕರ್ ಎಸ್ : ಅಂಬಿಗರ ಚೌಡಯ್ಯನ ವಚನಗಳು. ಬೆಂಗಳೂರು. 1980. ವಚನ. 40.

ಕಾರಣವೇನೆಂದರೆ ಅದೊಂದು ಜೈನರಲ್ಲಿ ವಿಶೇಷ ರೂಢಿಯಲ್ಲಿರುವ ಪದ್ಧತಿಯನ್ನು ಹೇಳುತ್ತದೆ. ಜೈನಮುನಿಗಳು ತಮ್ಮ ಕೈಯಿಂದಲೇ ಕೂದಲನ್ನು ಕಿತ್ತುಕೊಳ್ಳಬೇಕು. ಇದು ಅರ್ಥವಾಗದೆ ಪ್ರತಿಕಾರನೊಬ್ಬ ಅದನ್ನು 'ಕೀಸಿತ್ತು' ಎಂದು ಮಾಡಿರಬೇಕು. ಅಥವಾ ಪ್ರತಿ ಮಾಡುವಾಗ"ಳಿ" ಬಿಟ್ಟುಹೋಗಿರಬೇಕು. ''ಕೀಳಿಸಿತ್ತು" ಎಂಬ ಪದದ ಸಾಮಾನ್ಯಾರ್ಥವು ಸುಲಭವಾದರೂ ಪಾರಿಭಾಷಿಕಾರ್ಥವು ಮಾತ್ರ ಅಪರಿಚಿತವೆಂಬುದನ್ನು ಗಮನಿಸಬೇಕು. ವಿಶೇಷಾರ್ಥದ ಸುಲಭ ಪದದ ಜಾಗದಲ್ಲಿ ಸಾಮಾನ್ಯಾರ್ಥದ ಕ್ಲಿಷ್ಟಪದದ ಪ್ರತಿಸಿಧಾನಕ್ಕೆ ಇದು ನಿದರ್ಶನ.

ಮೂರನೆಯ ಸಾಲಿಗೆ ಮುನ್ನ ಇರುವ ಅಧಿಕ ಪಾಠ "ಎಡೆಪುಚ್ಚುಗೊಳಿಸಿತ್ತು" ಎಂಬುದನ್ನು ಈಗ ಗಮನಿಸಬೇಕು. "ಹಿಡಿದೊತ್ತಿ ಕೇಶವ ಕೀಳಿಸಿತ್ತು" ಎಂಬುದು ನಿಶ್ಚಿತವಾಗಿ ಜೈನ ಮುನಿಗಳಿಗೆ ಸಂಬಂಧಿಸಿರುವುದರಿಂದ ಅದರ ಹಿಂದಿನ ಸಾಲಲ್ಲಿ ಬರುವ "ಎಡೆಪುಚ್ಚುಗೊಳಿಸಿತ್ತು" ಎಂಬುದೂ ಅದೇ ಮುನಿಗಳಿಗೆ ಸಂಬಂಧಿಸಿರುವ ಸಾಧ್ಯತೆ ಇದೆ. ''ಉಡೆವುಚ್ಚು" ಎಂಬ ಮಾತು ಹನ್ನೊಂದು ಹನ್ನೆರಡನೇ ಶತಮಾನಗಳ ಹಲವು ಶಾಸನಗಳಲ್ಲಿ ವಿವಸ್ತ್ರಗೊಳಿಸು, ಬೆತ್ತಲೆ ಮಾಡು ಎಂಬರ್ಥದಲ್ಲಿ ಒಂದು ನುಡಿಗಟ್ಟಾಗಿ (idiom) ಕಾಣಿಸಿಕೊಳ್ಳುತ್ತದೆ. ದುಷ್ಟರು ಸ್ತ್ರೀಯರನ್ನು ಅಪಮಾನಗೊಳಿಸುವುದಕ್ಕಾಗಿ ಅವರ ವಸ್ತ್ರಗಳನ್ನು ಸೆಳೆಯುವುದೇ "ಉಡೆವುಚ್ಚು" ಅಥವಾ "ಉಡೆಯುಚ್ಚು"[2]. (ಆ ಸಮಯದಲ್ಲಿ ಕೂಗಿಕೊಂಡ ನಿಸ್ಸಹಾಯಕ ಹೆಣ್ಣುಗಳ ಮಾನ ಸಂರಕ್ಷಣೆಗಾಗಿ ಹೋರಾಡಿ ಮಡಿದ ವೀರರ ಸ್ಮಾರಕಗಳಾದ ಹಲವು ವೀರಗಲ್ಲುಗಳುಂಟು.) ಆ ನುಡಿಗಟ್ಟು ಇಲ್ಲಿ ಮುನಿಗಳು ತಮ್ಮ ವಸ್ತ್ರಗಳನ್ನು ತ್ಯಜಿಸುವ ಕ್ರಿಯೆಯ ಸೂಚಕವಾಗಿ ಬಂದಿರುವ ಸಾಧ್ಯತೆ ಇದೆ. "ಎಡೆಪುಚ್ಚುಗೊಳಿಸಿತ್ತು" ಎಂಬುದನ್ನು "ಉಡೆವುಚ್ಚುಗೊಳಿಸಿತ್ತು" ಎಂಬುದಾಗಿ ಊಹೆಯ ಮೇಲೆ ತಿದ್ದಿದರೆ ಆಗ ಮಾಯೆಯು ಹಲವರನ್ನು ಬೆತ್ತಲೆಗೊಳಿಸುತ್ತದೆ ಎಂದು ಅರ್ಥವಾಗುತ್ತದೆ. ವಸ್ತ್ರಗಳನ್ನು ತ್ಯಜಿಸಿ ಬೆತ್ತಲೆಯಾದ ದಿಗಂಬರ ಮುನಿಗಳು ತಮ್ಮ ಕೂದಲನ್ನು ತಾವೇ ಕಿತ್ತುಕೊಳ್ಳುವ ಕ್ರಿಯೆಯನ್ನು ಮುಂದಿನ "ಹಿಡಿದೊತ್ತಿ ಕೇಶವ ಕೀಳಿಸಿತ್ತು" ಎಂಬ ಸಾಲಲ್ಲಿ ಹೇಳಲಾಗಿದೆ.

''ಹುಡಿಹುಚ್ಚುಗೊಳಿಸುತ್ತು ಊರೊಳಗೆಲ್ಲ" ಎಂಬ ಸಾಲಿಗೆ ಯಾವುದೇ ಪಾಠಾಂತರವಿಲ್ಲದಿದ್ದರೂ, ಇಲ್ಲಿ ವಿಚಾರ ಮಾಡಬೇಕಾದ ಸಂಗತಿಗಳಿವೆ. "ಹುಡಿಹುಚ್ಚು" ಎಂದರೇನು ಅರ್ಥವಾಗುವುದಿಲ್ಲ. ಹೊಡೆಹುಲ್ಲ ಬಂಕಣ್ಣಗಳ ವಚನವೊಂದು ಹೀಗಿದೆ (ಸಕಲ ಪುರಾತನರ ವಚನಗಳು III ಧಾರವಾಡ. 1978, ಪು. 348).

---

2. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಮೈಸೂರು. 1979. ಪು. 284.

ಕಾಷ್ಠವಗ್ನಿಯೊಳಡಗಲಿಕ್ಕಾಗಿ ಆ ಕಾಷ್ಠದೊಳಿದ್ದಗ್ನಿ
ನಾನಿದ್ದೇನೆ ನೀ ಬೇಡಾ ಎಂದಿತ್ತೇ ?
ತಾನಡಗಿ ಇದಿರಿಟ್ಟು ಅಗ್ನಿಗೆ ಒಡಲಾಯಿತ್ತು
ಇಂತು ಇದಿರಿಂಗೆ ಒಡಲೆದೆಗೊಡದ ಅಗಮ್ಯಂಗೆ ಪುಡಿಪುಚ್ಚವಿಲ್ಲ
ಕುಂಭೇಶ್ವರ ಲಿಂಗದಲ್ಲಿದ್ದ ಜಗನ್ನಾಥನನಟಿದವನಂತೆ.

ಈ ವಚನದ ಆಧಾರದ ಮೇಲೆ "ಪುಡಿಪುಚ್ಚ" ಎಂಬುದು ಅರ್ಥವಾಗದಿದ್ದರೂ, ಅದನ್ನು 'ಪ'ಕಾರವು 'ಹ'ಕಾರವಾಗಿದೆ ಎಂಬ ವಿವರಣೆಯೊಂದಿಗೆ ಒಪ್ಪಿಕೊಳ್ಳಬೇಕೆಂದೆನ್ನಿಸುತ್ತದೆ. "ಹುಡಿಹುಚ್ಚ"ವಿಗೆ ಮೂಲ ಪುಡಿಪುಚ್ಚ(ಜ್ಜ) ವಾದರೂ ಸಮಕಾಲೀನ ವಚನಕಾರರಲ್ಲಿ ಮತ್ತು ಮುಂದಿನ ಕೃತಿಕಾರರಲ್ಲಿ ಹತ್ತಾರು ಕಡೆ ಇರುವ ರೂಪ "ಪುಡಿಪುಚ್ಚ" ಅಲ್ಲ, "ಪಡಿಪುಚ್ಚ(ಜ್ಜ)". ಉದಾಹರಣೆಗೆ, ಬಿಬ್ಬಿಬಾಚಯ್ಯ - "ಸೋಮೇಶ್ವರ ಲಿಂಗಕ್ಕೆ ಪಡಿಪುಚ್ಚವಿಲ್ಲ"[3]; ಮನುಮುನಿ ಗೊಮ್ಮಟದೇವ – "ನಡೆನುಡಿ ಸಿದ್ಧಾಂತವಾದ ಶರಣಂಗೆ ಪಡಿಪುಚ್ಚ(ಜ್ಜ) ವಿಲ್ಲ ಗುಡಿಯೊಡೆಯ ಗುಮ್ಮಟನಾಥನ ಅಗಮೇಶ್ವರಲಿಂಗದಲ್ಲಿ ಐಕ್ಯವಾದ ಶರಣಂಗೆ"; ಏಲೇಶ್ವರದ ಕೇತಯ್ಯ – ಸರ್ವವ್ಯವಧಾನವ ತಿಳಿದು ತಾ ಹಿಡಿದ ಕ್ರಿಯೆಗೆ ಪಡಿಪುಚ್ಚವಿಲ್ಲ"; ಮೋಳಿಗೆಯ ಮಾರಯ್ಯ – "ಕ್ರೀವಂತಂಗೆ ಪಡಿಪುಚ್ಚಕ್ಕೆ ಬಂದಾಗಲೇ ಆಚಾರಕ್ಕೆ ಭಂಗ"[5]; "ಮುಚ್ಚುಮಱೆಯಿದೇಕೆನಗೀ ವಿರಹದ ಕಿಚ್ಚು ನಿರೀಕ್ಷಿಸಿ ನೋಡೆ ಆಚ್ಚೊತ್ತಿದಂತಿದೆ ನಿನ್ನ ಮೈಯೊಳು ಪಡಿಪುಚ್ಚವೇಕಿದನುಸುರಬಲೆ" (—ನೇಮಿ ಜಿನೇಶ ಸಂಗತಿ, 19-35)[6]; "ನಿನ್ನ ದುರಾಗ್ರಹದಿಂದ ಪೊಚ್ಚತಂ ನಿನ್ನರಸುತನಕ್ಕೆ ಕೇಡಹುದು ಪಡಿ [ಂ] ಪುಚ್ಚವೇಕಿದಕೆಯುದಟಿಂದ ನೃಪನೀತಿಯುಂ ಮೀಱಿಬೇಡವ ನಿಪಾಲ" (—"ಸಮ್ಯಕ್ತ್ವಕೌಮುದಿ". 1-45)[7]. ಕುಮಾರವ್ಯಾಸನಲ್ಲಿನ (ಆದಿ ಪರ್ವ, 20-32)[8] "ಪಡಿಪಚ್ಚ" ವೆಂಬುದು ನ್ಯಾಯವಾಗಿ "ಪಡಿಪುಚ್ಚ" ವೆಂದಿರಬೇಕು. ಮೇಲಿನವು ಆರಿಸಿದ ಕೆಲವು ಪ್ರಯೋಗಗಳು ಮಾತ್ರ. ಚತುರಾಸ್ಯ ನಿಘಂಟಿನಲ್ಲಿ "ಪಡಿಪುಚ್ಚ"ವೆಂಬ ರೂಪವನ್ನು ಕೊಟ್ಟು ಅದಕ್ಕೆ "ಸಂಶಯ"ವೆಂದು

3. ಸಕಲಪುರಾತನರ ವಚನಗಳು I. ಸಂ: ಆರ್. ಸಿ. ಹಿರೇಮಠ, ಧಾರವಾಡ, 1972, ಪು. 53
4. ಅದೇ, ಪು. 264.
5. ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳು, ಸಂ: ಚೆನ್ನಪ್ಪ ಉತ್ತಂಗಿ ಮತ್ತು ಎಸ್. ಎಸ್. ಭೂಸನೂರಮಠ, ಧಾರವಾಡ, 1950, ಪು. 63.
6. ಸಂ : ಶಾಂತಿರಾಜಶಾಸ್ತ್ರಿ, ಮೈಸೂರು, 1981.
7. ಸಂ : ಆರ್. ತಾತಾಚಾರ್ಯ, ಬೆಳಗಾವಿ, 1923.
8. ಪ್ರ : ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, 1958.

ಅರ್ಥವನ್ನೂ ಹೇಳಿದೆ. ('ಪಡಿಪುಚ್ಚಮೆನಲು ಸಂಶಯು')[9]. "ಪಡಿಪೃಚ್ಛ"[10] ಎಂಬ ಪ್ರಾಕೃತ ರೂಪವೇ (ಸಂಸ್ಕೃತ. ಪ್ರತಿ ಪ್ರಚ್ಛ) ಕನ್ನಡಕ್ಕೆ ಬಂದು "ಪಡಿ ಪುಚ್ಛ (ಚ್ಚ)" ಆಗಿದೆ ಎಂಬಲ್ಲಿ ಅನುಮಾನವಿಲ್ಲ. "ಪಡಿಪೃಚ್ಛ" (ಪ್ರತಿಪ್ರಚ್ಛ) ಎಂದರೆ ಪ್ರತಿಯಾಗಿ ಪ್ರಶ್ನಿಸುವುದು, ಸಂದೇಹಿಸು ಎಂದರ್ಥ (ನಮ್ಮ ಮಾತನ್ನು ಒಪ್ಪದೆ ಯಾರಾದರೂ ಪ್ರತಿಯಾಗಿ ಪ್ರಶ್ನಿಸಿದರೆ ಅವರು ಸಂದೇಹಪಟ್ಟರೆಂದೇ ಅರ್ಥ).

ಆದ್ದರಿಂದ ಹೊಡೆಹುಲ್ಲ ಬಂಕಣ್ಣನ ವಚನದ 'ಪುಡಿ ಪುಚ್ಚ'ವನ್ನು 'ಪಡಿ ಪುಚ್ಚ'ವೆಂದು ಯಾವುದೇ ಸಂದೇಹವೂ ಇಲ್ಲದೆ ತಿದ್ದಬಹುದು. ಹಾಗೆಯೇ ಅಂಬಿಗರ ಚೌಡಯ್ಯನ ವಚನದ ಪಾಠವನ್ನು 'ಪಡಿಪುಚ್ಚ ಗೊಳಿಸಿತ್ತು' ಎಂದು ತಿದ್ದಬಹುದು; ಅಥವಾ 'ಹಡಿಹುಚ್ಚಗೊಳಿಸಿತ್ತು' ಎಂಬ ಅಲ್ಪ ಮಾರ್ಪಾಟುಗಳೊಡನೆ ಅಂಗೀಕರಿಸ ಬಹುದು. ಪ ಕಾರ ಸಮೇತವಾದ ರೂಪ ಅಂದು ಪ್ರಚುರವಾಗಿದ್ದ ಗ್ರಾಂಥಿಕರೂಪ. ಹ ಕಾರ ಸಮೇತವಾದ ರೂಪ ಅಂದು ಕೆಲವೆಡೆಯಾದರೂ ಆಡುಭಾಷೆಯಲ್ಲಿದ್ದ ರೂಪವಾಗಿದ್ದು ಅದನ್ನು ಅಂಬಿಗರ ಚೌಡಯ್ಯ ಬಳಸಿರಬಹುದು. ('ಪಂಜರ' ವನ್ನು ಹಂಜರ''ವೆಂದು ಬಸವಣ್ಣ ಪ್ರಯೋಗಿಸಿರುವುದನ್ನು ನೋಡಬಹುದು) ಮಾಯೆಯು ದಿಗಂಬರ ಸನ್ಯಾಸಿಗಳನ್ನು ಊರಿನಲ್ಲಿ ಎಲ್ಲೆಲ್ಲೂ ಜನರ ಪ್ರತಿಪ್ರಶ್ನೆಗೆ, ಸಂಶಯಕ್ಕೆ, ಸವಾಲಿಗೆ ಈಡು ಮಾಡಿತ್ತು ಎಂದು ಆ ಸಾಲಿಗೆ ಅರ್ಥವಾಗುತ್ತದೆ. ವಚನದ ಪೂರ್ವಾರ್ಧದಲ್ಲಿ ಅಡವಿಯು ಶೈವ ಸನ್ಯಾಸಿಗಳನ್ನು ಕುರಿತ ಉಲ್ಲೇಖವಿದ್ದರೆ ಉತ್ತರಾರ್ಧದಲ್ಲಿ ಜೈನ ದಿಗಂಬರ ಸನ್ಯಾಸಿಗಳ ಉಲ್ಲೇಖವಿದೆ. ವಚನದ ಸಮರ್ಪಕ ಪಾಠ ಹೀಗಿದೆ :

ಅಡವಿಯ ಹೊಗಿಸಿತ್ತು, ಹುಡುಕು ನೀರಲದ್ದಿತ್ತು,
ಜಡೆಗಟ್ಟಿ ಭಸ್ಮವ ತೊಡೆಸಿತ್ತು ;
ಉಡೆವುಚ್ಚುಗೊಳಿಸಿತ್ತು,
ಹಿಡಿದೊತ್ತಿ ಕೇಶವ ಕೀಳಿಸಿತ್ತು,
ಹಡಿಹುಚ್ಚಗೊಳಿಸಿತ್ತು ಊರೊಳಗೆಲ್ಲ
[ಪಡಿಪುಚ್ಚಗೊಳಿಸಿತ್ತು ಊರೊಳಗೆಲ್ಲ] ;
ಈ ಬೆಡಗಿನ ಮಾಯೆಗೆ ನಾನಂಜುವೆನೆಂದ ನಂಬಿಗರ ಚೌಡಯ್ಯ

ಈ ವಚನ ಮಹಾದೇವಿಯಕ್ಕನ "ಬಿಟ್ಟೆನೆಂದರೆ ಬಿಡದೀ ಮಾಯೆ ಬಿಡದಿದ್ದರೆ ಬೆಂಬತ್ತಿತ್ತು ಮಾಯೆ..." ಎಂಬ ಸುಪ್ರಸಿದ್ಧ ವಚನವನ್ನು ಜ್ಞಾಪಕಕ್ಕೆ ತರುತ್ತದೆ.

---

9. ಹಳಗನ್ನಡ ನಿಘಂಟು, ಸಂ : ಎನ್. ಬಸವಾರಾಧ್ಯ, ಮೈಸೂರು, 1976.
10. "ಪಡಿಪುಚ್ಚ(ಚ್ಛ)" ಪ್ರಯೋಗಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಕಚೇರಿಯಿಂದ ಒದಗಿಸಿದ ಶ್ರೀಮತಿ ಉಮಾದೇವಿಯವರಿಗೆ ನಾನು ಕೃತಜ್ಞ.

ಮಾಯೆಯು ಕೆಲವು ಸನ್ಯಾಸಿಗಳು ಅಡವಿಗೆ ಹೋಗಿ ಸುಡು ನೀರಲ್ಲಿ ಸ್ನಾನ ಮಾಡುವಂತೆಯೂ ಜಡೆ ಬಿಟ್ಟುಕೊಂಡು ಭಸ್ಮವನ್ನು ಧರಿಸಿಕೊಳ್ಳುವಂತೆಯೂ ಮಾಡುತ್ತದೆ. ಅದೇ ಮಾಯೆ ಇನ್ನು ಕೆಲವು ಸನ್ಯಾಸಿಗಳು ವಸ್ತ್ರತ್ಯಾಗವನ್ನು ಮಾಡಿ ಕೈಯಲ್ಲಿ ಕೂದಲನ್ನು ಕಿತ್ತುಕೊಳ್ಳುವಂತೆ ಮಾಡುತ್ತದೆ ; ಅವರು ಊರಿನ ಜನರ ಸಂಶಯಕ್ಕೆ ನಗೆಪಾಟಲಿಗೆ ಗುರಿಯಾಗುವಂತೆ ಮಾಡುತ್ತದೆ; ಇದು ಈ ವಚನದ ಸ್ಥೂಲ ಸಾರಾಂಶ. ಸ್ವಲ್ಪ ಶ್ರಮ ವಹಿಸಿದರೆ ಎಷ್ಟೋ ವಚನಗಳ ಪಾಠವನ್ನು ಇದ್ದುದರಲ್ಲಿ ಸಮರ್ಪಕವಾಗಿ ನಿರ್ಣಯಿಸಬಹುದೆಂಬುದಕ್ಕೆ ಮೇಲಿನದು ಒಂದು ಉದಾಹರಣೆ.

ಅನುಬಂಧ

ಈ ಲೇಖನವನ್ನು ಮುಗಿಸಿಯಾದಮೇಲೆ, ಮಿತ್ರರಾದ ಡಾ. ಎಸ್. ವಿದ್ಯಾಶಂಕರ ಅವರು ''ಬ್ರಹ್ಮದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ' ಎಂಬ ವಚನ ಸಂಕಲನ ಗ್ರಂಥದಲ್ಲಿ[11] ಸೇರ್ಪಡೆಯಾಗಿರುವ ಅಂಬಿಗರ ಚೌಡಯ್ಯನ ಅದೇ ವಚನದ ಪಾಠದತ್ತ ನನ್ನ ಗಮನವನ್ನು ಸೆಳೆದಿದ್ದಾರೆ. ಅದು ಹೀಗಿದೆ:

ಅಡವಿಯ ಹೊಗಿಸಿತ್ತು ; ಹುಡುಕು – ನೀರಲದ್ದಿತ್ತು
ಜಡೆಗಟ್ಟಿ ಭಸ್ಮವ ತೊಡಿಸಿತ್ತು ; ಉಡೆ ಉಚ್ಚುಗೊಳಿಸಿತ್ತು
ಹಿಡಿದೊತ್ತಿ ಕೇಶವ ಕೀಳಿಸಿತ್ತು ; ಹುಡಿ ಹುಚ್ಚುಗೊಳಿಸಿತ್ತು
ಊರೊಳಗೆಲ್ಲ ಈ ಬೆಡಗಿನ ಮಾಯೆಯ
ಬಡಿಹಾರಿ (ಬಡಿವಾರ ?) ಸಮಯಿಗಳ ನುಡಿಗೆ
ನಾಚುವೆನೆಂದನಂಬಿಗರ ಚೌಡಯ್ಯ.

ಈ ಪಾಠಕ್ಕೂ ಮೇಲೆ ಪುನಾರಚಿಸಿರುವ ಪಾಠಕ್ಕೂ ಇರುವ ದಟ್ಟವಾದ ಸಾಮ್ಯ ಎದ್ದು ಕಾಣುವಂತಹುದಾಗಿದೆ. "ಬಡಿಹಾರಿ (ಬಡಿವಾರ?) ಸಮಯಿಗಳ ನುಡಿಗೆ" ಎಂಬ ಮಾತು ಯಾವನೋ ಪ್ರತಿಕಾರ ಹೊಸದಾಗಿ ಸೇರಿಸಿರುವಂತೆ ಕಾಣುತ್ತದೆ. ವಚನದಲ್ಲಿ ಬೇರೆ ಬೇರೆ ವರ್ಗದ ಸನ್ಯಾಸಿಗಳ ಬಗ್ಗೆ ಟೀಕೆ ಇಂಗಿತ ರೂಪದಲ್ಲಿದೆ. ಅದನ್ನು ಪ್ರತಿಕಾರ ''ಸಮಯಿ" (=ಮತಾನುಯಾಯಿ) ಎಂಬ ಮಾತಿನಿಂದ ವಾಚ್ಯಗೊಳಿಸಲು ಯತ್ನಿಸಿದ್ದಾನೆ ಎಂಬುದು ಸ್ವಯಂ ವೇದ್ಯವಾಗಿರುವುದರಿಂದ, ''ಬಡಿಹಾರಿ ಸಮಯಿಗಳ ನುಡಿಗೆ" ಎಂಬ ಪಾಠವನ್ನು ಕೈಬಿಡಬಹುದು. ''ನಾಚುವೆನೆಂದ......" ಎಂಬ ಪಾಠಕ್ಕಿಂತ, ಮೇಲೆ ಪುನಾರಚಿಸಿರುವ ''ನಾನಂಜುವೆ ......" ಎಂಬ ಪಾಠವೇ ಯೋಗ್ಯ. (ನೋಡಿ–ಮಹಾದೇವಿಯಕ್ಕನ "ಬಿಟ್ಟೆನೆಂದಡೆ ಬಿಡದೀ ಮಾಯೆ......ನಿನ್ನ ಮಾಯೆಗೆ ನಾನಂಜುವಳಲ್ಲ"). "ಪಡಪುಚ್ಚಿ,

---

11. (ಸಂ.) ಆರ್. ಸಿ. ಹಿರೇಮಠ, ಧಾರವಾಡ, 1973, ಪು. 42.

ಗೊಳಿಸಿತ್ತು" ಎಂಬ ಅಪಪಾಠಕ್ಕೆ "ಉಡೆ ಉಚ್ಚ, ಗೊಳಿಸಿತ್ತು" ಎಂಬ ಶುದ್ಧ ಪಾಠಕ್ಕೆ ತೀರ ಸಮೀಪ ಪಾಠ ದೊರಕುವುದು ಇಲ್ಲಿಯ ವಿಶೇಷ.

ಪಾಠಾಂತರಗಳನ್ನು ಸರಿಯಾಗಿ ಬಳಸಿಕೊಂಡು ಗ್ರಂಥ ಸಂಪಾದನೆಯ ತತ್ವಗಳನ್ನು ಅನ್ವಯಿಸಿ ಎಷ್ಟೋ ವಚನಗಳ ಮೂಲಪಾಠವನ್ನು ಸರಿಯಾಗಿ ಪುನಾರಚಿಸಬಹುದೆಂಬುದಕ್ಕೆ ಇದೊಂದು ಉತ್ತಮ ನಿದರ್ಶನವಾಗಿದೆ. ಮೇಲಿನ ಪುನಾರಚನೆಯ ಯಾವುದೇ ಭಾಗವನ್ನೂ ಮಾರ್ಪಡಿಸುವ ಅಗತ್ಯ ನನಗೆ ಕಂಡುಬಂದಿಲ್ಲ.

ಸೂಕ್ಷ್ಮಗಳಾಚೆ

ರಾಮಗಿರಿ ರವೀಂದ್ರ

ಒಂದು ರಾತ್ರಿ ಪಳಪಳನೆ
ಹೊಳೆವ ಚಂದ್ರ ಬೆಳಕಿನ ನಗೆಯನ್ನು
ಮಿನುಗುವ ಸೀಸೆಯಲ್ಲಿಟ್ಟು
ಕುಲುಕಿದರೆ ಲಕಲಕನೆ
ಸಂಖ್ಯವಾಗಿ ಅರಳುವ
ಅನೇಕ ಸುಕೋಮಲೆಯರ
ಮಧುರ ಕಂಠದರಗಿಣಿಗಳ ಭಾವ–
ಚಿತ್ರಗಳು ನನ್ನ
ಕನಸ ತುಂಬ.

ಅದೆಂಥ ಅದ್ಭುತ ಲೋಕವದು
ನೆರಳು ಅಲುಗಾಡಿದರೆ ಸಾಕು ನೂರಾರು
ಭವ್ಯ ಅರಮನೆಗಳು ರಾಜಕುಮಾರಿಯರು
ರಥ–ತುತ್ತೂರಿ, ಆನೆ-ಕುದುರೆ ಸೈನಿಕರು
ಇರಬಹುದಿರಬಹುದು ನಡೆದರೆ
ದಾರಿ ತುಂಬ ಮುತ್ತು–ರತ್ನಗಳು.

ಆಗೋ ಬಂದೇ ಬಿಟ್ಟರು
ಕಣ್ಣಬಿಟ್ಟರೆ ಸಾಕು ಕನ್ನಡಿಯ ಹಾಗೆ-
ಮೈತುಂಬ ಬಿಂಬಗಳು; ನನ್ನ ಕತ್ತಲೆಯ
ದಾರಿಗೆ ಪಂಜುಗಳ ಹಿಡಿದು ಬೆತ್ತಲೆಯ
ಕುಣಿವ ಹೆಣ್ಣಗಳು, ಹೊಳೆವ ಕಣ್ಣಗಳು
ತೆರೆವ ಬಣ್ಣ ತುಟಿಗಳ ತುದಿಗೆ
ಮೂಕ ಮಾತುಗಳು;
ಶಬ್ದವಿಲ್ಲದೆ ನಿಧಾನವಾಗಿ ಮುಗಿಯುವ
ಕ್ರಿಯೆ-ಪ್ರಕ್ರಿಯೆಗಳು.

ನನಗೆ ನಾನೇ ಎಳೆಗಾಳಿ
ಹಿಡಿದು ಅಲ್ಲಾಡಿಸಿ ಜೀಕಿದಂತಾಗಿ
ಬಾಯಿ ಬಿಟ್ಟರು ಮಾತು ಬರದೆ
ತಡವರಿಸಿದರೆ ಸಿಂಗಾರಿಯುರ
ಕುಹಕ ನಗೆಯು ಕಾಮಕೇಳಿಯು
ದೃಶ್ಯಗಳು.

ಹತ್ತಿರದ ಕಾಡೊಳಗೆ
ನದಿಯೊಂದು ಬಂತು ಮರದ
ತುಂಬೆಲ್ಲ ಹೂವುಗಳು-
ಬಿದ್ದರೆ ತೇಲುವ ದೋಣಿಗಳು
ತೆಳ್ಳಗೆ ಗಾಳಿ ಬೀಸಿ
ಬೆಳ್ಳನೆಯ ಬೆಳಕು ಮೂಡಿ ನದಿಯಾಚೆ
ಕೋಳಿ ಕೂಗಿದರೆ ಅಲ್ಲಿ ರಾಕ್ಷಸರ ಊರು.

ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕ ಅಭಿವೃದ್ಧಿ ಮತ್ತು ಪ್ರಾದೇಶಿಕ ಅಸಮಾನತೆ

ಎಂ. ಆರ್. ನಾರಾಯಣ

ನಮ್ಮ ದೇಶದಲ್ಲಿ, ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾದಾಗಿನಿಂದ ಬಹಳ ಕಾಲದವರೆಗೆ ಆರ್ಥಿಕ ಧೋರಣೆಗಳ ಮುಖ್ಯ ಉದ್ದೇಶ ರಾಷ್ಟ್ರೀಯ ಆದಾಯ ಹೆಚ್ಚಿಸುವುದೊಂದೇ ಆಗಿತ್ತು. ಹಾಗೆಯೇ, ಆರ್ಥಿಕ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಕೇವಲ ರಾಷ್ಟ್ರೀಯ ಮಟ್ಟದಲ್ಲೇ ರೂಪಿಸಲಾಗುತ್ತಿತ್ತು. ಇದರಿಂದಾಗಿ, ಪ್ರಾದೇಶಿಕ ಸಮಸ್ಯೆಗಳಿಗೆ ರಾಷ್ಟ್ರೀಯ ಮಟ್ಟದಲ್ಲಿ ಮುಖ್ಯ ಸ್ಥಾನ ಇರಲಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ಬೆಳಕಿಗೆ ಬಂದ ಮತ್ತು ಹೆಚ್ಚುತ್ತಿರುವ ಪ್ರಾದೇಶಿಕ ನಿರುದ್ಯೋಗ, ಬಡತನ, ಮತ್ತು ಆದಾಯದ ಅಂತರ ಮುಂತಾದ ಸಮಸ್ಯೆಗಳು ರಾಷ್ಟ್ರೀಯ ಯೋಜನೆಯ ವಿಫಲತೆಯನ್ನು ಸೂಚಿಸುತ್ತಿವೆ. ಪ್ರಾದೇಶಿಕ ಸಮಸ್ಯೆಗಳನ್ನು ಪ್ರಾದೇಶಿಕ ಯೋಜನೆಯಲ್ಲೇ ನಿವಾರಿಸಬಹುದು ಎಂಬುದನ್ನು ಇತ್ತೀಚಿನ ವರ್ಷಗಳಲ್ಲಿ ಬೆಳಕಿಗೆ ಬಂದ ಪ್ರಾದೇಶಿಕ ಅರ್ಥಶಾಸ್ತ್ರವೂ ಕೂಡಾ ರಾಷ್ಟ್ರೀಯ ಯೋಜನಾಕಾರರಿಗೆ ಸ್ಪಷ್ಟ ಮಾಡಿಕೊಡುತ್ತಿದೆ. ಈ ಕಾರಣಗಳಿಂದಾಗಿ, ಪ್ರಾದೇಶಿಕ ಸಮಸ್ಯೆಗಳು ರಾಷ್ಟ್ರೀಯ ಅಭಿವೃದ್ಧಿಯ ಯೋಜನೆಗಳಲ್ಲಿ ವಿಚಾರಗೋಷ್ಠಿ ಮತ್ತು ಸಂಕೀರ್ಣಗಳಲ್ಲಿ ಪ್ರಮುಖ ಸ್ಥಾನ ಪಡೆಯುತ್ತಿವೆ.

ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಕಂಡುಬರುವ ಹಲವಾರು ಪ್ರಾದೇಶಿಕ ಸಮಸ್ಯೆಗಳಲ್ಲಿ ಪ್ರಾದೇಶಿಕ ಅಸಮಾನತೆ ಬಹು ಮುಖ್ಯವಾದುದು. ಈ ಪ್ರಾದೇಶಿಕ ಅಸಮಾನತೆಯ ಸಮಸ್ಯೆಯನ್ನು ವಿವರವಾಗಿ ಪರಿಶೀಲಿಸುವ ಮೊದಲು, ಪ್ರಾದೇಶಿಕ ಅಸಮಾನತೆ ಎಂದರೇನು ಎಂಬುದನ್ನು ತಿಳಿಯುವುದು ಸೂಕ್ತ. ಈ ಲೇಖನದಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಆರ್ಥಿಕ ಅಭಿವೃದ್ಧಿಯಲ್ಲಿ ಕಂಡುಬರುವ ಪ್ರದೇಶಗಳ ಬೆಳವಣಿಗೆಯ ವ್ಯತ್ಯಾಸ ಎಂದು ವಿಶ್ಲೇಷಿಸಲಾಗಿದೆ. ಉದಾಹರಣೆಗೆ, ಒಂದು ಅಭಿವೃದ್ಧಿ ಘಟಕದಲ್ಲಿ A ಮತ್ತು B ಎಂಬ ಪ್ರದೇಶಗಳಿದ್ದರೆ, ಒಂದು ನಿರ್ದಿಷ್ಟ ಸಮಯದಲ್ಲಿ ಅವುಗಳ ಬೆಳವಣಿಗೆಯ ಮಟ್ಟದಲ್ಲಿ ವ್ಯತ್ಯಾಸ ಕಂಡುಬಂದರೆ, ಅದನ್ನು ನಾವು ಪ್ರಾದೇಶಿಕ ಅಸಮಾನತೆ ಎಂದು ಕರೆಯಬಹುದು.

ಒಂದು ದೃಷ್ಟಿಯಲ್ಲಿ ಪ್ರಾದೇಶಿಕ ಅಸಮಾನತೆ ಸಾಮಾನ್ಯವಾಗಿ ಎಲ್ಲಾ ದೇಶಗಳ ಆರ್ಥಿಕ ಅಭಿವೃದ್ಧಿಯ ಹಾದಿಯಲ್ಲಿ ಕಂಡುಬರುವ ಅನಿವಾರ್ಯ ಅಂಶ. [ಹರ್ಷ್ಮನ್

(1958)]. ಅಭಿವೃದ್ಧಿ ಹೊಂದಿದ ಮತ್ತು ಹೊಂದುತ್ತಿರುವ ದೇಶಗಳೆಂಬ ಭೇದ ಈ ಸಮಸ್ಯೆಗಿಲ್ಲ. ಹಲವಾರು ದೇಶಗಳಲ್ಲಿ ನಡೆಸಿರುವ ಸಂಶೋಧನಾ ಅಧ್ಯಯನಗಳು ಈ ಅಂಶವನ್ನು ಹಲವಾರು ರೀತಿಯಲ್ಲಿ ಸ್ಪಷ್ಟ ಪಡಿಸುತ್ತದೆ. ಉದಾಹರಣೆಗೆ, ಅಮೇರಿಕಾ [ಉಲ್‌ಮನ್ (1972)], ಇಟಲಿ [ಯುಕಾಸ್ (1961)], ಪಾಕೀಸ್ತಾನ [ಅರ್ಜುನ್ ಸೇನ್‌ಗುಪ್ತ (1972)] ಇವೇ ಮುಂತಾದುವುಗಳು. ನಮ್ಮ ದೇಶದಲ್ಲೂ ಸಹಾ ಹಲವಾರು ಅರ್ಥಶಾಸ್ತ್ರಜ್ಞರು ಆರ್ಥಿಕ ಅಭಿವೃದ್ಧಿಯಲ್ಲಿ ಕಂಡು ಬರುವ ಪ್ರಾದೇಶಿಕ ಅಸಮಾನತೆಯನ್ನು ವಿಶ್ಲೇಷಿಸಿದ್ದಾರೆ. [ಅಶೋಕ್ ಮಿತ್ರ (1961) ; ಎ. ಜೆ. ಸಿಂಗ್ ಮತ್ತು ಎಂ. ವಿ. ಜಾರ್ಜ (1969) ; ವಿ. ನಾಥ್ (1970) ; ಎಸ್. ಕೆ. ರಾವ್ (1973) ; ಎಂ, ಎಸ್. ಪಾಲ್ (1975) ; ಹೇಮಲತಾ ರಾವ್ (1977) ; ಅಜಿತ್ ಕುಮಾರ್ ಸಿಂಗ್ (1979) ; ಮಹೇಶ್ ಚಂದ್ ಮತ್ತು ವಿ. ಕೆ. ಪುರಿ (1981)]. ಬಹು ಮುಖ್ಯವಾಗಿ, ನಮ್ಮ ದೇಶದಲ್ಲಿ ಪ್ರಾದೇಶಿಕ ಅಭಿವೃದ್ಧಿ ಸಂಶೋಧನೆಗಳು ಅಂತರರಾಜ್ಯ ಮತ್ತು ಅಂತರ ಜಿಲ್ಲಾ ಆರ್ಥಿಕ ಅಸಮಾನತೆಯನ್ನು ಕಂಡುಹಿಡಿಯುವುದರಲ್ಲಿ ಯಶಸ್ವಿಯಾಗಿವೆಯೇ ಹೊರತು, ಜಿಲ್ಲೆಯ ಆಂತರಿಕ ಬೆಳವಣಿಗೆಯ ಅಸಮಾನತೆಯನ್ನು ಕಂಡುಹಿಡಿಯುವುದರಲ್ಲಲ್ಲ. ಒಂದು ದೃಷ್ಟಿಯಲ್ಲಿ ಜಿಲ್ಲೆಯ ಆಂತರಿಕ (ಪ್ರಾದೇಶಿಕ) ಬೆಳವಣಿಗೆಯ ಅಸಮಾನತೆಯನ್ನು ಕುರಿತು ಕೇವಲ ಕೆಲವೇ ಅಧ್ಯಯನಗಳು ನಡೆದಿವೆ [ಕುಲಕರ್ಣಿ (1978)]. ಇದು ಇಂದಿನ ಸಂಶೋಧನೆಯ ಮುಖ್ಯ ಕೊರತೆ. ಈ ಕೊರತೆಯನ್ನು ತುಂಬುವುದು ಈ ಲೇಖನದ ಮುಖ್ಯ ಉದ್ದೇಶಗಳಲ್ಲೊಂದು.

ಈ ಲೇಖನದಲ್ಲಿ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕ ಅಭಿವೃದ್ಧಿಯಲ್ಲಿ ಕಂಡುಬಂದಿರುವ ಪ್ರಾದೇಶಿಕ* ಅಸಮಾನತೆಯ ಸಮಸ್ಯೆಯನ್ನು ಸ್ಥೂಲವಾಗಿ ಪರಿಶೀಲಿಸುವ ಮುಖ್ಯ ಪ್ರಯತ್ನ ಮಾಡಲಾಗಿದೆ. ಸಮಸ್ಯೆಯನ್ನು ನಿವಾರಿಸಲು ರೂಪಿಸುವ ಆರ್ಥಿಕ ಧೋರಣೆಗಳಿಗೆ ಕೆಲವು ಸಲಹೆಗಳನ್ನು ನೀಡಿರುವ ಈ ಲೇಖನ ಜಿಲ್ಲಾ ಯೋಜನಗಾರರಿಗೆ ಉಪಯೋಗವಾಗಬಹುದೆಂಬ ಭರವಸೆಯಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕ ಅಭಿವೃದ್ಧಿ

ದಕ್ಷಿಣ ಕನ್ನಡ ಜಿಲ್ಲೆ ನಮ್ಮ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಒಂದು. ಇದರ ವಿಸ್ತೀರ್ಣ 8441 ಚ. ಕಿ. ಮೀಟರಿನಷ್ಟು ಇದ್ದು ರಾಜ್ಯದಲ್ಲಿ 12 ನೇ ಸ್ಥಾನ ಗಳಿಸಿದೆ. 1971 ನೇ ಜನಗಣತಿ ಪ್ರಕಾರ 19,39,315 ಜನಸಂಖ್ಯೆಯನ್ನು

---

* ಈ ಲೇಖನದಲ್ಲಿ ಜಿಲ್ಲೆಯಲ್ಲಿನ ಹಲವಾರು ತಾಲೂಕುಗಳನ್ನು ಪ್ರದೇಶಗಳೆಂದು ಒಂದೇ ಅರ್ಥದಲ್ಲಿ ಉಪಯೋಗಿಸಲಾಗಿದೆ.

ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದಲ್ಲಿ 6 ನೇ ಸ್ಥಾನ ಗಳಿಸಿದೆ. ಜಿಲ್ಲೆಯ ಜನಸಾಂದ್ರತೆ ಒಂದು ಚ. ಕಿ. 230. ಆಡಳಿತ ಅನುಕೂಲತೆಯ ದೃಷ್ಟಿಯಿಂದ ಜಿಲ್ಲೆಯನ್ನು 8 ತಾಲೂಕುಗಳಾಗಿ ವಿಂಗಡಿಸಲಾಗಿದೆ. ಅವುಗಳು ಯಾವುವೆಂದರೆ, ಮಂಗಳೂರು, ಉಡುಪಿ, ಕಾರ್ಕಳ, ಬೆಳ್ತಂಗಡಿ, ಬಂಟ್ವಾಲ, ಸುಳ್ಯ, ಕುಂದಾಪುರ ಮತ್ತು ಪುತ್ತೂರು.

ಜಿಲ್ಲೆಯಲ್ಲಿ ಪ್ರಕೃತಿ ಸಂಪತ್ತು ಹೇರಳವಾಗಿದೆ. ಒಂದೆಡೆ ವಿಶಾಲವಾದ ಅರಬ್ಬೀ ಸಮುದ್ರ ಮತ್ತು ಉಳಿದೆಡೆಗಳಲ್ಲಿ ಪಶ್ಚಿಮ ಘಟ್ಟಗಳ ಹಚ್ಚ ಹಸುರಿನ ಕಾಡುಗಳಿಂದ ಆವೃತವಾದ ಜಿಲ್ಲೆ ನಿಸರ್ಗದ ಹೃದಯದಲ್ಲಿ ನೆಲೆಸಿದೆ. ಇಲ್ಲಿ ಮಳೆ ಹೆಚ್ಚು. ನೈರುತ್ಯ ದಿಕ್ಕಿನ ಮಾರುತಗಳಿಂದ ಬೀಸುವ ಮಳೆ ಜಿಲ್ಲೆಯಲ್ಲಿ ವರ್ಷಂ ಪ್ರತಿ ಸರಾಸರಿ 3900 ಮಿ.ಮೀ. ಮಳೆಯಾಗುತ್ತದೆ. ಜಿಲ್ಲೆಯಲ್ಲಿ 141 ಕಿ.ಮೀ. ಉದ್ದದ ಕರಾವಳೀ ತೀರವಿದೆ ಮತ್ತು 2, 42, 619 ಹೆಕ್ಟೇರಿನಷ್ಟು ಅರಣ್ಯ ಪ್ರದೇಶವಿದೆ. ಶಿಕ್ಷಣ, ಬ್ಯಾಂಕಿಂಗ್, ಜೀವವಿಮೆ, ಸಂಚಾರ, ಸಂಪರ್ಕ ಮುಂತಾದ ಕ್ಷೇತ್ರಗಳಲ್ಲಿ ಜಿಲ್ಲೆ ಗಣನೀಯ ಸಾಧನೆಯನ್ನು ಹಾಗೂ ಸ್ಥಾನವನ್ನು ಕರ್ನಾಟಕ ರಾಜ್ಯದಲ್ಲಿ ಪಡೆದಿದೆ.

ಒಂದು ಜಿಲ್ಲೆಯ ಆರ್ಥಿಕ ಅಭಿವೃದ್ಧಿಯನ್ನು ಪರಿಶೀಲಿಸುವಾಗ, ಮೊತ್ತ ಮೊದಲು ಆರ್ಥಿಕ ಅಭಿವೃದ್ಧಿ ಎಂದರೇನು ಎಂಬುದನ್ನು ನಾವು ಸ್ಪಷ್ಟವಾಗಿ ತಿಳಿಯಬೇಕು. ಯಾವುದೇ ಒಂದು ನಿರ್ದಿಷ್ಟ ಸಮಯದಲ್ಲಿ ಜಿಲ್ಲೆಯ ಆದಾಯ ಅಥವ ಉತ್ಪನ್ನ ಏರಿಕೆಯಾದರೆ ಅಂತಹ ಬೆಳವಣಿಗೆಯನ್ನು ನಾವು ಆರ್ಥಿಕ ಅಭಿವೃದ್ಧಿ ಎಂದು ಕರೆಯಬಹುದು. ಸಾಮಾನ್ಯವಾಗಿ, ನಮಗೆಲ್ಲ ತಿಳಿದಂತೆ, ಜಿಲ್ಲೆಯ ಹಲವಾರು ಕ್ಷೇತ್ರಗಳ, ಉದಾ : ಕೈಗಾರಿಕೆ, ಕೃಷಿ, ಸಾರಿಗೆ ಮುಂತಾದುವುಗಳ, ಸಮಗ್ರ ಅಭಿವೃದ್ಧಿಯನ್ನು ನಾವು ಜಿಲ್ಲಾ ಆದಾಯದಲ್ಲಿ ಕಾಣಬಹುದು.

ಜಿಲ್ಲಾ ಆದಾಯವನ್ನು ಆರ್ಥಿಕ ಅಭಿವೃದ್ಧಿಯ ಸೂಚಕವನ್ನಾಗಿ ತೆಗೆದು ಕೊಂಡಾಗ, ನಾವು ಎರಡು ಅಂಶಗಳನ್ನು ಗಮನಿಸಬಹುದು. ಮೊದಲನೆಯದಾಗಿ, ಜಿಲ್ಲೆಯ ತಲಾ ಆದಾಯ. ಒಂದು ವರ್ಷದಿಂದ ಮತ್ತೊಂದು ವರ್ಷಕ್ಕೆ ಈ ಸೂಚಕಗಳಲ್ಲಿ ಏರಿಕೆ ಕಂಡುಬಂದರೆ ಅಲ್ಲಿ ಆರ್ಥಿಕ ಅಭಿವೃದ್ಧಿ ಪ್ರಗತಿಯಲ್ಲಿದೆ ಎಂದು ಕಂಡುಬರುತ್ತದೆ. ಈ ಸೂಚಕವನ್ನು ಆಧರಿಸಿ, ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕ ಅಭಿವೃದ್ಧಿಯನ್ನು ರಾಜ್ಯ ಅಭಿವೃದ್ಧಿಯೊಂದಿಗೆ ಪಟ್ಟಿ I ರಲ್ಲಿ ಕೊಡಲಾಗಿದೆ. (ಪು. 5).

ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಎರಡು ಮುಖ್ಯ ಸೂಚಕಗಳಾದ ಜಿಲ್ಲಾ ಆದಾಯ ಮತ್ತು ತಲಾ ಆದಾಯದ ಗಣನೀಯ ಏರಿಕೆಯನ್ನು ಈ

ಮೇಲಿನ ಪಟ್ಟಿಯಲ್ಲಿ ನೋಡಬಹುದು. ಜಿಲ್ಲಾ ಆದಾಯದ ಬೆಳವಣಿಗೆಯನ್ನು ಪ್ರತ್ಯೇಕವಾಗಿ ನೋಡಿದರೆ ಎರಡು ಮುಖ್ಯ ಅಂಶಗಳನ್ನು ಗಮನಿಸಬಹುದು. ಮೊದಲನೆಯದಾಗಿ, ಜಿಲ್ಲಾ ಆದಾಯ ರಾಜ್ಯ ಆದಾಯದೊಂದಿಗೆ 1960-61 ರಿಂದ 1977-78 ರವರಗೆ

ಪಟ್ಟಿ 1

ರಾಜ್ಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಆದಾಯ ಮತ್ತು ತಲಾ ಆದಾಯದ ಬೆಳವಣಿಗೆ : (ಇಂದಿನ ಬೆಲೆಗಳಲ್ಲಿ)

1960-61—1977-78

ವರ್ಷ	ಆದಾಯ (ಲಕ್ಷ ರೂಪಾಯಿಗಳಲ್ಲಿ)			ತಲಾ ಆದಾಯ (ರೂಪಾಯಿಗಳಲ್ಲಿ)	
	ರಾಜ್ಯದ ಒಟ್ಟು ಆದಾಯ	ದಕ್ಷಿಣ ಕನ್ನಡ ಜಿಲ್ಲೆಯ ಆದಾಯ	ರಾಜ್ಯದ ಆದಾಯದಲ್ಲಿ ಜಿಲ್ಲೆಯ ಶೇಕಡಾ ಪಾಲು	ರಾಜ್ಯದ ತಲಾ ಆದಾಯ	ದಕ್ಷಿಣ ಕನ್ನಡ ಜಿಲ್ಲೆಯ ತಲಾ ಆದಾಯ
1960-61	66,742	5243	7.86	286	341
1970-71	1,56,623	11,680	7.46	530	611
1974-75	2,54,433	20,611	8.10	784	965
1977-78	3,77,995	29,827	7.89	1132	1350

SOURCE : (1) Statistical Abstract of Karnataka 1976-77, Bureau of Economics and Statistics, Government of Karnataka, Bangalore, 1978, p. 279.

(2) Economic Survey 1980-81, Planning Department, Government of Karnataka, 1981, p. 9.

ಕ್ರಮವಾಗಿ ಏರಿಕೆಯಾದರೂ, ರಾಜ್ಯದ ಒಟ್ಟು ಆದಾಯದಲ್ಲಿ ಜಿಲ್ಲೆಯ ಶೇಕಡಾ ವಾರಿನ ಪಾಲು ಬಹಳ ಏರಿಳಿತವನ್ನು ತೋರುತ್ತದೆ. ಉದಾ. 1960-61 ರಲ್ಲಿ ಜಿಲ್ಲೆಯ ಶೇಕಡಾ ಪಾಲು ರಾಜ್ಯ ಆದಾಯದಲ್ಲಿ 7.86 ರಷ್ಟಾಗಿತ್ತು. ಇದು 1970-71 ರಲ್ಲಿ ಶೇ. 7.46 ಕ್ಕೆ ಇಳಿದಿದೆ. ಆದರೆ 1974-75 ರಲ್ಲಿ ಈ ಶೇಕಡ

ವಾರು 8.10ಕ್ಕೆ ಏರಿದೆ. ಮತ್ತೆ, 1977-78ರಲ್ಲಿ ಜಿಲ್ಲೆಯ ಪಾಲು ರಾಜ್ಯ ಆದಾಯದಲ್ಲಿ ಶೇ. 7.89ಕ್ಕೆ ಇಳಿದಿರುವುದನ್ನು ಸ್ಪಷ್ಟವಾಗಿ ಗಮನಿಸಬಹುದು. ಎರಡನೆಯದಾಗಿ, 1960-61 ರಿಂದ 1977-78ರವರೆಗೆ, ಜಿಲ್ಲಾ ಆದಾಯದಲ್ಲಿ ಸುಮಾರು ಆರುಪಟ್ಟು ಹೆಚ್ಚುವರಿಯಾದರೆ, ಅದೇ ಸಮಯದಲ್ಲಿ ರಾಜ್ಯದ ಆದಾಯ ಕೇವಲ ನಾಲ್ಕುಪಟ್ಟು ಏರಿರುವುದನ್ನು ನಾವು ನೋಡಬಹುದು. ಇದು ಜಿಲ್ಲಾ ಅಭಿವೃದ್ಧಿಯ ಮುಖ್ಯ ಸಾಧನೆ. ಬಹು ಮುಖ್ಯವಾಗಿ, 1977-78ರಲ್ಲಿ ರಾಜ್ಯದ 19 ಜಿಲ್ಲೆಗಳ ಆದಾಯದ ಪಟ್ಟಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಎರಡನೆ ಸ್ಥಾನ ಪಡೆದಿದೆ.

ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಮತ್ತೊಂದು ಸೂಚಕವಾದ ತಲಾ ಆದಾಯದ ಏರಿಕೆಯೂ ಬಹಳ ಗಣನೀಯವಾಗಿದೆ. 1960-61 ರಿಂದ 1977-78ರ ವರಗೆ ಜಿಲ್ಲೆಯ ತಲಾ ಆದಾಯ ಮೂರು ಪಟ್ಟಿಗಿಂತಲೂ ಹೆಚ್ಚಾದುದನ್ನು ನಾವು ನೋಡಬಹುದು. ಅದೇ ರೀತಿ, ಜಿಲ್ಲಾ ತಲಾ ಆದಾಯ ವರ್ಷಗಳಲ್ಲೂ ರಾಜ್ಯದ ತಲಾ ಆದಾಯವನ್ನು ಮೀರಿಸಿದೆ. ಇದು ಜಿಲ್ಲಾ ಅಭಿವೃದ್ಧಿಯ ಮತ್ತೊಂದು ಮುಖ್ಯ ಸಾಧನೆ.

ಜಿಲ್ಲಾ ಆರ್ಥಿಕ ಅಭಿವೃದ್ಧಿ ಮತ್ತು ಪ್ರಾದೇಶಿಕ ಅಸಮಾನತೆ

ಆದಾಯ ಮತ್ತು ತಲಾ ಆದಾಯದ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕ ಅಭಿವೃದ್ಧಿಯಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚುವರಿ ಹಾಗೂ ಪ್ರಗತಿ ಕಂಡು ಬಂದರೂ, ಜಿಲ್ಲೆಯ ಆಂತರಿಕ ಪ್ರದೇಶಗಳ ಬೆಳವಣಿಗೆಯಲ್ಲಿ ಬಹಳ ಅಸಮಾನತೆ ಇದೆ. ಈ ಅಸಮಾನತೆಯನ್ನು ಸಮರ್ಪಕ ರೀತಿಯಲ್ಲಿ ವಿಶ್ಲೇಷಿಸುವುದು ಜಿಲ್ಲಾ ಯೋಜನಾಗಾರರ ಮುಖ್ಯ ಕಾರ್ಯ. ಪ್ರಾದೇಶಿಕ ಅಸಮಾನತೆಯನ್ನು ಜಿಲ್ಲಾ ಆರ್ಥಿಕ ಅಭಿವೃದ್ಧಿಯಲ್ಲಿ ಕಂಡುಹಿಡಿಯುವಲ್ಲಿ ಎರಡು ಮುಖ್ಯ ಅಂಶಗಳನ್ನು ನಾವು ನಿರ್ಧರಿಸಬೇಕು. ಮೊದಲನೆಯದಾಗಿ ಆರ್ಥಿಕ ಸೂಚಕಗಳ ಆಯ್ಕೆ ಮತ್ತು ಎರಡನೆಯದಾಗಿ ಅಧ್ಯಯನ ವಿಧಾನದ ಆಯ್ಕೆ.

ಆರ್ಥಿಕ ಸೂಚಕಗಳ ಆಯ್ಕೆ : ಪ್ರಾದೇಶಿಕ ಅಸಮಾನತೆಯನ್ನು ಜಿಲ್ಲಾಭಿವೃದ್ಧಿಯಲ್ಲಿ ಕಂಡುಹಿಡಿಯಲು ಸಮಗ್ರ ಆರ್ಥಿಕ ಅಭಿವೃದ್ಧಿಯನ್ನು ನಿರ್ಧರಿಸುವ ಸೂಚಕವೊಂದನ್ನು ಅಥವ ಸೂಚಕಗಳನ್ನು ಆಯ್ದುಕೊಳ್ಳಬೇಕು. ಈ ದಿಸೆಯಲ್ಲಿ ಹಲವಾರು ಸಂಶೋಧನಾ ಅಧ್ಯಯನಗಳು ಕೇವಲ ಆದಾಯವೊಂದನ್ನೇ ಆರ್ಥಿಕ ಅಭಿವೃದ್ಧಿಯ ಸೂಚಕವನ್ನಾಗಿ ಆಯ್ದುಕೊಂಡಿವೆ. [ಸಂಪತ್ (1977); ಅಜಿತ್ ಕುಮಾರ್ ಸಿಂಗ್ (1979)]. ಆದರೆ ಈ "ಏಕಸೂಚಕ" ಅಭಿವೃದ್ಧಿ ಅಧ್ಯಯನ

ಗಳನ್ನು ಬಹಳವಾಗಿ ವಿಮರ್ಶಿಸಲಾಗಿವೆ. [ಊರ್ಮಿಳಾ ಸಾಧು (1977)]. ನಮ್ಮ ಅಧ್ಯಯನದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಬಹುಮುಖ ಪ್ರಕ್ರಿಯೆ ಎಂದು ಪರಿಗಣಿಸಲಾಗಿದೆ. ಈ ವಿಶ್ಲೇಷಣೆಯಲ್ಲಿ ಜಿಲ್ಲೆಯ ಹಲವಾರು ಪ್ರದೇಶಗಳ (ತಾಲೂಕುಗಳ) ಅಭಿವೃದ್ಧಿಯ ಮಟ್ಟವನ್ನು ನಿರ್ಧರಿಸಲು ಕೆಳಗಿನ 12 ಆರ್ಥಿಕ ಸೂಚಕಗಳನ್ನು ಕೃಷಿ, ಕೈಗಾರಿಕೆ ಮುಂತಾದ ಕ್ಷೇತ್ರಗಳಿಂದ ಆಯ್ದುಕೊಳ್ಳಲಾಗಿದೆ.

1. ಜನ ಸಾಂದ್ರತೆ ಪ್ರತಿ ಚ. ಕಿ. ಮೀ. ಪ್ರದೇಶದಲ್ಲಿ.
2. ಒಟ್ಟು ಭೂ ವಿಸ್ತೀರ್ಣದಲ್ಲಿ ಶೇಕಡಾವಾರು ಬಿತ್ತನೆಯಾದ ನಿವ್ವಳಕ್ಷೇತ್ರ.
3. ಬಿತ್ತನೆಯಾದ ನಿವ್ವಳ ಕ್ಷೇತ್ರದಲ್ಲಿ ಶೇಕಡಾವಾರು ನೀರಾವರಿಯಾದ ನಿವ್ವಳಕ್ಷೇತ್ರ.
4. ಬಿತ್ತನೆಯಾದ ನಿವ್ವಳ ಕ್ಷೇತ್ರದಲ್ಲಿ ಶೇಕಡಾವಾರು ಹೆಚ್ಚುವರಿ ಇಳುವರಿ ತಳಿಗಳ ಕಾರ್ಯಕ್ರಮಕ್ಕೆ ಒಳಪಟ್ಟ ಕ್ಷೇತ್ರ.
5. ನೊಂದಣಿ ಹೊಂದಿದ ಸಣ್ಣ ಕೈಗಾರಿಕಾ ಘಟಕಗಳ ಒಟ್ಟು ಸಂಖ್ಯೆ.
6. ಸಣ್ಣ ಕೈಗಾರಿಕಾ ಘಟಕಗಳಲ್ಲಿನ ಒಟ್ಟು ಉದ್ಯೋಗಿಗಳ ಸಂಖ್ಯೆ.
7. ವಿದ್ಯುಚ್ಛಕ್ತಿ ಒದಗಿಸಲ್ಪಟ್ಟ ನಗರ ಮತ್ತು ಹಳ್ಳಿಗಳ ಒಟ್ಟು ಸಂಖ್ಯೆ.
8. ಪ್ರತಿ ಚ.ಕಿ. ಮೀಟರ್ ಪ್ರದೇಶದಲ್ಲಿನ ರಸ್ತೆಯ ವಿಸ್ತೀರ್ಣ.
9. ಆಸ್ಪತ್ರೆ ಮತ್ತು ಔಷಧಾಲಯಗಳ ಒಟ್ಟು ಸಂಖ್ಯೆ.
10. ಒಟ್ಟು ಜನಸಂಖ್ಯೆಯಲ್ಲಿನ ಶೇಕಡಾವಾರು ಸಾಕ್ಷರತೆ.
11. ಶಾಲೆಗಳ (ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ) ಒಟ್ಟು ಸಂಖ್ಯೆ.
12. ವಾಣಿಜ್ಯ ಬ್ಯಾಂಕುಗಳ ಒಟ್ಟು ಶಾಖೆಗಳ ಸಂಖ್ಯೆ.

ಅಧ್ಯಯನದ ವಿಧಾನ : ಜಿಲ್ಲೆಯ ಆಂತರಿಕ ಪ್ರದೇಶಗಳ ಬೆಳವಣಿಗೆಯಲ್ಲಿನ ಅಸಮಾನತೆಯನ್ನು ಕಂಡುಹಿಡಿಯುವಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ "ಆರ್ಥಿಕ ಅಭಿವೃದ್ಧಿಯ ಸಂಘಟಿತ ಸೂಚಿ''ಯನ್ನು ತಯಾರಿಸುವುದು ಈ ಸಂಘಟಿತ ಸೂಚಿಯು ಹಲವಾರು ತಾಲೂಕುಗಳ ಬೆಳವಣಿಗೆಯ ಮಟ್ಟವನ್ನು ನಿರ್ಧರಿಸಲು ಸಹಕಾರಿಯಾಗುತ್ತದೆ. ಈ ಅಧ್ಯಯನದಲ್ಲಿ ಮೇಲೆ ತಿಳಿಸಿದ ಎಲ್ಲ 12 ಸೂಚಕಗಳಿಗೆ ಒಂದೇ ತರಹನಾದ ಪ್ರಾಮುಖ್ಯತೆಯನ್ನು ಸಂಘಟನಾ ಸೂಚಿ ತಯಾರಿಸುವಲ್ಲಿ ಕೊಡಲಾಗಿದೆ. ಈ ಸಂಘಟನಾಸೂಚಿಯನ್ನು ತಯಾರಿಸುವಲ್ಲಿ ಸ್ಥಾನಗಳಿಕೆ ವಿಧಾನವನ್ನು" (Rank Score Method) ಉಪಯೋಗಿಸಲಾಗಿದ. ಈ ವಿಧಾನದ ಪ್ರಕಾರ, ಮೊದಲು ಪ್ರತಿಯೊಂದು ತಾಲೂಕನ್ನು ಅದರ ಸೂಚಕ ಸ್ಥಾನದ ಮೇಲೆ

ಅಣಿ ಮಾಡಲಾಯಿತು. ನಂತರ ಪ್ರತಿಯೊಂದು ತಾಲೂಕಿನ ಪ್ರತಿ ಸೂಚಕ ಸ್ಥಾನವನ್ನು ಕೂಡಿಸಲಾಯಿತು. ಇದರಿಂದ ಪ್ರತಿ ತಾಲೂಕಿನ ಒಟ್ಟು ಸ್ಥಾನಗಳಿಕೆ ನಿರ್ಧಾರವಾಯಿತು. ಈ ವಿಧಾನದಲ್ಲಿ ಯಾವ ತಾಲೂಕು ಅತಿಕಡಿಮೆ ಸ್ಥಾನಗಳಿಸುತ್ತಿದೆಯೋ ಅದು ಹೆಚ್ಚು ಅಭಿವೃದ್ಧಿ ಹೊಂದಿದೆ ಎಂದು ನಿರ್ಧಾರವಾಗುತ್ತದೆ. ಈ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕುಗಳನ್ನು ಅವುಗಳ ಒಟ್ಟು ಸ್ಥಾನಗಳಿಕೆಯ ಆಧಾರದ ಮೇಲೆ ಪಟ್ಟಿ 2ರಲ್ಲಿ ಕ್ರಮವಾಗಿ ವಿರ್ಪಡಿಸಲಾಗಿದೆ.(ಪಟ್ಟಿ 2ನ್ನು ನೋಡಿ)

ಈ ಮೇಲಿನ ಪಟ್ಟಿಯಲ್ಲಿ ಜಿಲ್ಲೆಯ ತಾಲ್ಲೂಕುಗಳ ನಡುವಿನ ಆರ್ಥಿಕ ಅಭಿವೃದ್ಧಿಯ ವ್ಯತ್ಯಾಸವನ್ನು ಕಾಣಬಹುದು. ಮಂಗಳೂರು ಮತ್ತು ಉಡುಪಿ ತಾಲೂಕುಗಳು ಅಭಿವೃದ್ಧಿಯ ಓಟದಲ್ಲಿ ಬಹಳ ಮುಂದುವರೆದಿರುವುದನ್ನು ಮತ್ತು ಉಳಿದ ತಾಲೂಕುಗಳು ಹಿಂದುಳಿದಿರುವುದನ್ನು ಸ್ಪಷ್ಟವಾಗಿ ನಾವು ಕಾಣಬಹುದು. ಮತ್ತು ಮುಖ್ಯವಾಗಿ, ಹಿಂದುಳಿದ ತಾಲೂಕುಗಳ ಪೈಕಿ ಸುಳ್ಯ ಮತ್ತು ಬೆಳ್ತಂಗಡಿ ತೀವ್ರವಾಗಿ ಹಿಂದುಳಿದಿರುವುದನ್ನು ಸಹಾ ಗಮನಿಸಬಹುದು. ಆದರೆ ಇದಕೆ ಕಾರಣವೇನು ? ಒಂದು ದೃಷ್ಟಿಯಲ್ಲಿ ಜಿಲ್ಲೆಯ ಆಂತರಿಕ ಪ್ರದೇಶಗಳ, ಬೆಳವಣಿಗೆಯ ಅಸಮಾನತೆಯ ಮೂಲ ಕಾರಣ ಆರ್ಥಿಕ ಚಟುವಟಿಕೆಗಳ ಪ್ರಾದೇಶಿಕ ಕೇಂದ್ರೀಕರಣ, ಯಾವುದೇ ಆರ್ಥಿಕ ಸೂಚಕವನ್ನು ತೆಗೆದುಕೊಂಡರೂ, ಅದು ಹೆಚ್ಚಾಗಿ ಉಡುಪಿ ಮತ್ತು ಮಂಗಳೂರು ತಾಲೂಕುಗಳಲ್ಲಿ ಕೇಂದ್ರೀಕೃತವಾಗಿರುವುದನ್ನು ನೋಡಬಹುದು. ಉದಾ : ಕೈಗಾರಿಕಾ ಘಟಕಗಳು, ವಾಣಿಜ್ಯ ಬ್ಯಾಂಕುಗಳ ಶಾಖೆಗಳು, ರಸ್ತೆ ಸೌಕರ್ಯ ಮುಂತಾದವುಗಳು. ಈ ಸೂಚಕಗಳು ಒಂದು ಪ್ರದೇಶದ ಆರ್ಥಿಕ ಅಭಿವೃದ್ಧಿಯನ್ನು ನಿರ್ಧರಿಸುವ ಮತ್ತು ಉತ್ತೇಜಿಸುವ ಮುಖ್ಯ ಅಂಶಗಳು, ಯಾವುದೇ ಒಂದು ಪ್ರದೇಶದಲ್ಲಿ ಈ ಸೂಚಕಗಳ ಕೊರತೆ ಕಂಡು ಬಂದರೆ, ಅಲ್ಲಿ ಆರ್ಥಿಕ ಪ್ರಗತಿ ಕುಂಟಿತಗೊಳ್ಳುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ತಾಲೂಕುಗಳಲ್ಲಿ ಉದಾ : ಸುಳ್ಯ, ಬೆಳ್ತಂಗಡಿ ಮುಂತಾದವುಗಳಲ್ಲಿ, ಆರ್ಥಿಕ ಪ್ರಗತಿ ಕುಂಟಿತಗೊಂಡಿರುವುದಕ್ಕೆ ಮೇಲೆ ತಿಳಿಸಿದ ಸೂಚಕಗಳ ಕೊರತೆಯೇ ಮೂಲ ಕಾರಣ.

ಜಿಲ್ಲೆಯ ಮುಂದಿನ ವರ್ಷಗಳ ಆರ್ಥಿಕ ಧೋರಣೆಗಳು ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವ ಚಟುವಟಿಕೆಗಳ ಕೊರತೆಯನ್ನು ಹಿಂದುಳಿದ ಪ್ರದೇಶಗಳಲ್ಲಿ ನಿವಾರಿಸುವಲ್ಲಿ ಯಶಸ್ವಿಯಾಗಬೇಕು ಈ ಆರ್ಥಿಕ ಧೋರಣೆ ತಯಾರಿಸುವಲ್ಲಿ ಮೊತ್ತ ಮೊದಲು ಜಿಲ್ಲೆಯ ತಾಲೂಕುಗಳನ್ನು ಅವುಗಳ ಬೆಳವಣಿಗೆಯ ಮಟ್ಟದ ಮೇಲೆ ವಿಂಗಡಿಸಬೇಕು. ಈ ವಿಂಗಡನೆ ಪ್ರತಿ ತಾಲೂಕಿನ ಸಮಗ್ರ ಅಭಿವೃದ್ಧಿ ಮಟ್ಟವನ್ನು ಸೂಚಿಸಬೇಕು. ಈ ದಿಸೆಯಲ್ಲಿ ಪಟ್ಟಿ 2ರ ಸಹಾಯದಿಂದ, ಜಿಲ್ಲಾ ತಾಲೂಕುಗಳನ್ನು ಅವುಗಳ ಬೆಳವಣಿಗೆಯ ಮಟ್ಟದ ಮೇಲೆ ಈ ಕೆಳಗಿನ ರೀತಿಯಲ್ಲಿ ವಿಂಗಡಿಸಲಾಗಿದೆ.

ಪಟ್ಟಿ 3

ಆರ್ಥಿಕ ಅಭಿವೃದ್ಧಿಯ ಮಟ್ಟದ ಮೇಲೆ ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕುಗಳ ವಿಂಗಡನೆ.

ವಿಂಗಡನೆ	ತಾಲೂಕು
1) ಮುಂದುವರೆದ ತಾಲೂಕು	ಎ) ಮಂಗಳೂರು
	ಬಿ) ಉಡುಪಿ
2) ಸಾಧಾರಣವಾಗಿ ಮುಂದುವರೆಯುತ್ತಿರುವ ತಾಲೂಕು	ಎ) ಬಂಟ್ವಾಳ
	ಬಿ) ಕಾರ್ಕಳ
	ಸಿ) ಪುತ್ತೂರು
	ಡಿ) ಕುಂದಾಪುರ
3) ತೀವ್ರವಾಗಿ ಹಿಂದುಳಿದಿರುವ ತಾಲೂಕು.	ಎ) ಬೆಳ್ತಂಗಡಿ
	ಬಿ) ಸುಳ್ಯ.

ಆರ್ಥಿಕ ಅಭಿವೃದ್ಧಿಯ ಮಟ್ಟದ ಮೇಲೆ ನಿರ್ಧರಿಸಿರುವ ಈ ಮೇಲಿನ ತಾಲ್ಲೂಕುಗಳ ವಿಂಗಡನೆ, ಜಿಲ್ಲೆಯ ಆಂತರಿಕ ಪ್ರದೇಶಗಳ ಬೆಳವಣಿಗೆಯ ವ್ಯತ್ಯಾಸವನ್ನು ತೊಡೆದುಹಾಕುವಲ್ಲಿ ರೂಪಿಸುವ ಆರ್ಥಿಕ ಕಾರ್ಯಕ್ರಮಗಳನ್ನು ತಯಾರಿಸುವಲ್ಲಿ ಸಹಾಯಕವಾಗುತ್ತದೆ. ಜಿಲ್ಲೆಯಲ್ಲಿ ಶೇ. 25 ರಷ್ಟು ತಾಲೂಕುಗಳು ತೀವ್ರವಾಗಿ ಹಿಂದುಳಿದಿವೆ ಮತ್ತು ಶೇ. 50 ರಷ್ಟು ತಾಲೂಕುಗಳು ಸಾಧಾರಣವಾಗಿ ಮುಂದುವರೆಯುತ್ತಿವೆ. ಆದ್ದರಿಂದ, ಮುಂದಿನ ವರ್ಷಗಳ ಆರ್ಥಿಕ ಧೋರಣೆಗಳು, ಈ ಮೇಲಿನ ತಾಲ್ಲೂಕಗಳ ಬೆಳವಣಿಗೆಗೆ ವಿಶೇಷ ಆದ್ಯತೆಯನ್ನು ಕೊಡುವುದು ಅತ್ಯವಶ್ಯಕ.

ಕೆಲವು ಸಲಹೆಗಳು

ಅಭಿವೃದ್ಧಿ ಹೊಂದುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಮುಂದುವರೆದ ಮತ್ತು ಹಿಂದುಳಿದ ಪ್ರದೇಶಗಳು ಆರ್ಥಿಕ ಅಭಿವೃದ್ಧಿಯ ವಿಪರ್ಯಾಸವನ್ನು ಸೂಚಿಸುತ್ತದೆ. ಅದೇ ರೀತಿ, ದಿನೇ ದಿನೇ ಹಿಂದುಳಿದ ಮತ್ತು ಮುಂದುವರೆದ ಪ್ರದೇಶಗಳ ಅಂತರ ಹೆಚ್ಚುತ್ತಿರುವುದರಿಂದ, ಜಿಲ್ಲಾ ಆಂತರಿಕ ಬೆಳವಣಿಗೆಯ ಪ್ರಾದೇಶಿಕ ಅಸಮಾನತೆ ಇಂದು ಬರೀ ಸಮಸ್ಯೆಯಾಗಿಯೇ ಉಳಿಯದೆ, ಕಾಳಜಿ

ಯಾಗಿ ಪರಿಣಮಿಸುತ್ತಿದೆ. ಈ ಸಮಸ್ಯೆಯನ್ನು ನಿವಾರಿಸುವಲ್ಲಿ ಸಹಾಯಕವಾಗುವ ಕೆಲವು ಮುಖ್ಯ ಸಲಹೆಗಳನ್ನು ಕೆಳಗೆ ಕೊಡಲಾಗಿದೆ.

(1) ಜಿಲ್ಲೆಯ ಆಂತರಿಕ ಬೆಳವಣಿಗೆಯ ಪ್ರಾದೇಶಿಕ ಅಂತರಕ್ಕೆ ಆರ್ಥಿಕ ಚಟುವಟಿಕೆಗಳ ಪ್ರಾದೇಶಿಕ ಕೇಂದ್ರೀಕರಣ ಮೂಲ ಕಾರಣ. ಆರ್ಥಿಕ ಚಟುವಟಿಕೆಗಳು ಕೇವಲ ಅಭಿವೃದ್ಧಿ ಹೊಂದದೆ ಕೆಲವೇ ತಾಲೂಕುಗಳಲ್ಲಿ ಕೇಂದ್ರೀಕೃತವಾಗುತ್ತಿರುವುದರಿಂದ ಮುಂದುವರೆದ ತಾಲೂಕುಗಳು ಮುಂದುವರೆಯುತ್ತಲೇ ಇವೆ. ಇದರಿಂದಾಗಿ, ಮುಂದುವರೆದ ಮತ್ತು ಹಿಂದುಳಿದ ತಾಲೂಕುಗಳ ಅಂತರ ಹೆಚ್ಚುತ್ತಿದೆ. ಈ ಅಂತರವನ್ನೂ ಕಡಿಮೆಗೊಳಿಸಲು ಆರ್ಥಿಕ ಚಟುವಟಿಕೆಗಳ ಕೇಂದ್ರೀಕರಣವನ್ನೂ ವಿಕೇಂದ್ರೀಗೊಳಿಸಬೇಕು. ಅದೇ ರೀತಿಯಲ್ಲಿ, ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವ ಹಲವಾರು ಆರ್ಥಿಕ ಚಟುವಟಿಕೆಗಳನ್ನು ಹಿಂದುಳಿದ ತಾಲೂಕುಗಳಲ್ಲಿ ಸ್ಥಾಪಿಸಬೇಕು. ಇದರಿಂದ ಆರ್ಥಿಕ ಅಭಿವೃದ್ಧಿ ಹಿಂದುಳಿದ ತಾಲೂಕುಗಳಲ್ಲಿ ಪ್ರಗತಿ ಹೊಂದಲು ಸಾಧ್ಯ. ಈ ಕ್ರಮದಿಂದಾಗಿ, ಆರ್ಥಿಕ ಚಟುವಟಿಕೆಗಳ ವಿಕೇಂದ್ರೀಕರಣ ಹಾಗೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಒಟ್ಟಿಗೆ ನಡೆಯಲು ಸಾಧ್ಯ.

(2) ಜಿಲ್ಲೆಯ ಹಿಂದುಳಿದ ತಾಲೂಕುಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳು ಅಸಮರ್ಪಕ ರೀತಿಯಲ್ಲಿ ಬಳಕೆಯಾಗುತ್ತಿವೆ. ಉದಾ : ಕುಂದಾಪುರ ತಾಲೂಕಿನ ಕರಾವಳಿ ಮೀನುಗಾರಿಕೆ, ಸುಳ್ಯ ತಾಲೂಕಿನ ಅರಣ್ಯ ಸಂಪತ್ತು ಮುಂತಾದವುಗಳು. ಇದು ಜಿಲ್ಲೆಯ ಆಂತರಿಕ ಬೆಳವಣಿಗೆಯ ಪ್ರಾದೇಶಿಕ ಅಸಮಾನತೆಯ ಮತ್ತೊಂದು ಮೂಲ. ಈ ಸಮಸ್ಯೆಯನ್ನು ನಿವಾರಿಸಬೇಕಾದರೆ, ಸ್ಥಳೀಯ ಸಂಪನ್ಮೂಲಗಳನ್ನಾಧರಿಸುವ ಕೈಗಾರಿಕೆ ಮತ್ತು ಇತರ ಚಟುವಟಿಕೆಗಳು ಬೆಳೆಯಬೇಕು. ಮುಖ್ಯವಾಗಿ, ದಕ್ಷಿಣ ಕನ್ನಡ ಜಿಲ್ಲೆಯನ್ನು ಕೈಗಾರಿಯಲ್ಲಿ ಹಿಂದುಳಿದ ಜಿಲ್ಲೆಯೆಂದು ಘೋಷಿಸಲಾಗಿದೆ. ಇಲ್ಲಿ ಕೈಗಾರಿಕೆ ಸ್ಥಾಪಿಸುವವರಿಗೆ ಹಲವಾರು ಹಣಕಾಸಿನ ನೆರವನ್ನು, ತೆರಿಗೆ ವಿನಾಯಿತಿಯನ್ನು, ಅನೇಕ ಉತ್ತೇಜನಗಳನ್ನು ಮತ್ತು ಸೌಕರ್ಯಗಳನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದವರು ನೀಡುತ್ತಿದ್ದಾರೆ. ಈ ಎಲ್ಲವನ್ನು ಜಿಲ್ಲೆಯ ಎಲ್ಲ ತಾಲೂಕುಗಳಿಗೆ ಸಮನಾಗಿ ನೀಡುವುದಕ್ಕಿಂತ ತೀವ್ರವಾಗಿ ಹಿಂದುಳಿದ ತಾಲೂಕುಗಳಿಗೆ ವಿಶೇಷವಾಗಿ ಆದ್ಯತೆ ನೀಡುವುದು ಇಂದಿನ ಅತಿ ಮುಖ್ಯ ಅವಶ್ಯಕತೆ. ಇದರಿಂದಾಗಿ, ಹಿಂದುಳಿದ ಪ್ರದೇಶಗಳಲ್ಲಿ ಹೆಚ್ಚಿನ ಕೈಗಾರಿಕೆ ಬೆಳೆಯಲು ಸಾಧ್ಯ. ಅದೇ ರೀತಿ, ಯಾವ ಕೈಗಾರಿಕೆ ಹಿಂದುಳಿದ ತಾಲೂಕಿನ ಸ್ಥಳೀಯ ಸಂಪನ್ಮೂಲಗಳನ್ನೂ ಬಳಸುವ ಮೂಲ ಉದ್ದೇಶದಿಂದ ಸ್ಥಾಪನೆಯಾಗುತ್ತಿದೆಯೋ, ಅಂತಹ ಕೈಗಾರಿಕೆಗೆ ವಿಶೇಷ ಹಣಕಾಸಿನ ನೆರವು ಮತ್ತಿತರ ಉತ್ತೇಜನಗಳನ್ನು ಕೊಡುವುದನ್ನು ಸರ್ಕಾರ ಮುಂದಿನ ವರ್ಷಗಳಲ್ಲಿ ಗಮನಿಸಬಹುದು. ಇದರಿಂದ ಸ್ಥಳೀಯ ಸಂಪನ್ಮೂಲಗಳ ಬಳಕೆ ಸಮರ್ಪಕ ರೀತಿಯಲ್ಲಿ ಬಳಕೆಯಾಗುವುದರ

ಜೊತೆಗೆ ಆರ್ಥಿಕ ಅಭಿವೃದ್ಧಿಯೂ ಸಹಾ ಮುಂದುವರೆಯುತ್ತದೆ. ಈ ಮೂಲಕ ಹಿಂದುಳಿದ ಮತ್ತು ಮುಂದುವರೆದ ತಾಲೂಕುಗಳ ಅಂತರ ಕಡಿಮೆಯಾಗಿ, ಜಿಲ್ಲೆಯ ಆಂತರಿಕ ಪ್ರಾದೇಶಿಕ ಅಸಮಾನತೆ ಕಡಿಮೆಗೊಳ್ಳುತ್ತದೆ.

(3) ಒಂದು ದೃಷ್ಟಿಯಲ್ಲಿ ಜಿಲ್ಲೆಯ ಆಂತರಿಕ ಬೆಳವಣಿಗೆಯ ಪ್ರಾದೇಶಿಕ ಅಸಮಾನತೆಯಿಂದಾಗಿ, ಜನಗಳು ಆರ್ಥಿಕ ಅಭಿವೃದ್ಧಿಯ ಫಲವನ್ನು ಸಮರ್ಪಕ ರೀತಿಯಲ್ಲಿ ಪಡೆಯಲು ವಿಫಲರಾಗಿದ್ದಾರೆ. ವರ್ಷದಿಂದ ವರ್ಷಕ್ಕೆ ಆರ್ಥಿಕ ಅಭಿವೃದ್ಧಿ ಮತ್ತು ಕೇಂದ್ರೀಕರಣ ಕೆಲವೇಪ್ರದೇಶಗಳಲ್ಲಿ ಹೆಚ್ಚುತ್ತಾ ಬಂದಿರುವುದರಿಂದ, ಮುಂದುವರೆದ ಮತ್ತು ಹಿಂದುಳಿದ ತಾಲೂಕುಗಳ ಅಂತರ ಹೆಚ್ಚುತ್ತಾ ಬಂದಿದೆ. ಈ ಅಂತರದಿಂದಾಗಿ, ಜಿಲ್ಲಾ ಅಭಿವೃದ್ಧಿಯ ಫಲ ಎಲ್ಲ ಜನಗಳಿಗೆ ಸಮನಾಗಿ ಹಂಚಲ್ಪಟ್ಟಿಲ್ಲ. ಬಹು ಮುಖ್ಯವಾಗಿ, ಜಿಲ್ಲೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಬಡತನ, ನಿರುದ್ಯೋಗ ಮತ್ತು ಬಡವ ಶ್ರೀಮಂತರ ನಡುವಿನ ಅಂತರ ಮತ್ತಿತ್ತರ ಸಮಸ್ಯೆಗಳಿಗೆ ಜಿಲ್ಲೆಯ ಅಭಿವೃದ್ಧಿ ಫಲದ ಅಸಮರ್ಪಕ ಹಂಚಿಕೆಯೇ ಮೂಲ ಕಾರರಣವೆಂದರೆ ತಪ್ಪಾಗಲಾರದು. ಮೂಲಭೂತವಾಗಿ, ನಿರುದ್ಯೋಗ, ಬಡತನ ಮತ್ತು ಆದಾಯದ ಅಂತರಕ್ಕೆ ಪರಸ್ಪರ ಸಂಬಂಧವಿದೆ. ನಾವು ಯಾವುದಾದರೊಂದನ್ನು ನಿವಾರಿಸಿದರೆ, ಉಳಿದ ಎರಡು ಸಮಸ್ಯಗಳು ತಾವಾಗಿಯೇ ನಿವಾರಣೆಗೊಳ್ಳುತ್ತವೆ. ಉದಾ: ಒಂದು ತಾಲೂಕಿನಲ್ಲಿ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಿದರೆ ಅವರ ಆದಾಯ ಹೆಚ್ಚುತ್ತದೆ. ಆದಾಯ ಹೆಚ್ಚಿದಂತೆ ಬಡತನ ಕಡಿಮೆಗೊಳ್ಳುತ್ತದೆ. ಬಡತನ ಕಡಿಮೆಗೊಂಡರೆ, ಬಡವ ಶ್ರೀಮಂತರ ನಡುವಿನ ಅಂತರ ಕಡಿಮೆಗೊಳ್ಳುತ್ತದೆ. ಇದರಿಂದ ವ್ಯಕ್ತವಾಗುವ ಮುಖ್ಯ ಅಂಶವೆಂದರೆ, ಜಿಲ್ಲೆಯ ಆಂತರಿಕ ಪ್ರದೇಶಗಳ ಬೆಳವಣಿಗೆಯ ಅಸಮಾನತೆ ನಮ್ಮಲ್ಲಿರುವ ಹಲವಾರು ಸಮಸ್ಯೆಗಳಿಗೆ ಮುಖ್ಯ ಕಾರಣವಾಗಿದೆ. ಆದ್ದರಿಂದ, ಜಿಲ್ಲೆಯ ಮುಂದಿನ ವರ್ಷಗಳ ಆರ್ಥಿಕ ಧೋರಣೆಗಳು ಈ ಮುಖ್ಯ ಸಮಸ್ಯೆಯನ್ನು ನಿವಾರಿಸುವಲ್ಲಿ ಫಲಕಾರಿಯಾಗಲೇಬೇಕು.

ಉಪಸಂಹಾರ

ಜಿಲ್ಲೆಯನ್ನು ಯೋಜನಾ ಘಟಕವನ್ನಾಗಿ ನಮ್ಮ ರಾಜ್ಯದಲ್ಲಿ 1978-79 ರಿಂದ ಕಾರ್ಯರೂಪಕ್ಕೆ ತರಲಾಗಿದೆ. ಇದರಿಂದಾಗಿ, ಹಲವಾರು ಕಾರ್ಯಕ್ರಮಗಳು ಜಿಲ್ಲಾ ಮಟ್ಟದಲ್ಲೇ ತಯಾರಾಗುತ್ತಿವೆ. ಇದು ರಾಜ್ಯ ಯೋಜನೆಯನ್ನು ವಿಕೇಂದ್ರೀಗೊಳಿಸುವಲ್ಲಿ ಮತ್ತು ಯೋಜನೆಯನ್ನೂ ಪ್ರಾದೇಶಿಕ ಮಟ್ಟದಲ್ಲಿ ತಯಾರಿಸುವಲ್ಲಿ ಇಟ್ಟ ದಿಟ್ಟ ಹೆಜ್ಜೆ. ಒಂದು ರೀತಿಯಲ್ಲಿ ಜಿಲ್ಲೆಯ ಆಂತರಿಕ ಬೆಳವಣಿಗೆಯ ಹಲವಾರು ಸಮಸ್ಯಗಳನ್ನೂ ಜಿಲ್ಲಾ ಮಟ್ಟದಲ್ಲಿ ಆಳವಾಗಿ ನೋಡಬಹುದೇ ವಿನಃ ರಾಜ್ಯ ಮಟ್ಟದಲ್ಲಲ್ಲ. ಇದು ಜಿಲ್ಲಾ ಯೋಜನೆಯ ಬಹು ಮುಖ್ಯ ಅಂಶ. ಆದರೆ

1981–82ರ ದಕ್ಷಿಣ ಕನ್ನಡಜಿಲ್ಲಾ ಯೋಜನೆಯ ಕರಡಿನಲ್ಲಿ ಜಿಲ್ಲೆಯ ಆಂತರಿಕ ಪ್ರದೇಶಗಳ ಬೆಳವಣಿಗೆಯಲ್ಲಿನ ಅಸಮಾನತೆ ಕುರಿತು ಗಮನಹರಿಸದಿರುವುದು ಒಂದು ಆಶ್ಚರ್ಯ ಮತ್ತು ವಿಷಾದದ ಸಂಗತಿ. ಮುಂದಿನ ವರ್ಷದ ಜಿಲ್ಲಾ ಯೋಜನೆಯ ಕರಡಿನಲ್ಲಿ ಮತ್ತೊಮ್ಮೆ ಈ ಮೇಲಿನ ಆಶ್ಚರ್ಯ ಮತ್ತು ವಿಷಾದಕ್ಕೆ ಅವಕಾಶವಿಲ್ಲದಂತಾಗಲಿ ಎಂದು ಆಶಿಸೋಣ.

ಕೃತಜ್ಞತೆಗಳು

ಈ ಲೇಖನಕ್ಕೆ ಬೇಕಾದ ಅಂಕಿಸಂಖ್ಯೆಗಳನ್ನು ಒದಗಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಅಂಕಿಸಂಖ್ಯಾಧಿಕಾರಿ ಶ್ರೀ ಬೈರಪ್ಪನವರಿಗೆ, ಜಿಲ್ಲಾ ಯೋಜನಾಧಿಕಾರಿ ಶ್ರೀ ರೇವಣ್ಣ ಸಿದ್ದಯ್ಯ ಮತ್ತು ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯ ಸಂಶೋಧನಾಧಿಕಾರಿ ಶ್ರೀ ಶಂಕರರಾವ್ ರವರಿಗೆ ಲೇಖಕನು ಕೃತಜ್ಞನಾಗಿದ್ದಾನೆ. ಅದೇ ರೀತಿ, ಈ ಲೇಖನವನ್ನು ಬರೆಯಲು ಪ್ರೋತ್ಸಾಹಿಸಿದ ಮಂಗಳೂರು ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಅಧ್ಯಾಪಕ ಶ್ರೀ ದಾಮೋದರ ಕೃಷ್ಣಪೊತುವಾಲ್ ರವರಿಗೂ ಸಹಾ ಲೇಖಕನು ಬಹಳ ಕೃತಜ್ಞನಾಗಿದ್ದಾನೆ.

ಗ್ರಂಥ ಋಣ

1) Ashok Mitra, "Levels of Regional Development in India", Part I-A (ii), Vol. I, *Census af India*, 1961.

2) Ajit Kumar Singh, Regional Inequalities in a Backward Economy : A Study of trends in inter-regional and Inter-district income disparities in U.P" *Indian Journal of Reginal Science*, Vol. XI, No. 1, 1949, pp. 36–47.

3) Arjun Sengupta, "Regional disparities and Economic growth of Pakistan", in V. K. R. V. Rao (Ed), *Bangla Desh Economy : Problems ana Prospects* Vikas, New Delhi, 1942.

4) Eckaus, "The North-South Differentials in Italian Economic Development", *The Journal of Econom c History*, Vol. XXI, No. 3, Sept. 1961, pp. 285-317.

5) Hem Lata Rao, "Identification of Backward Regional and Trends in Regional Disparities",

Artha Vignana, Vol. XIX, No. 2. June 1977, pp. 93-112.

6) Hirsehman, A.O., *The Strategy of Economic Development*, Yale University Press, New Haven, 1958.

7) Kulkarni K. M., "Micro-regianal Vaniations in Economic Development of Rajastan", *Indian Journal of Regional Science*, Vol. IX, No. 2, 1977, pp. 117-123,

8) Mahesh Chandra and V. K. Puri, "Regional Development and Planning in India", *The Indian Journal of Economics*, Vol. LXI, No. 242. Jan. 1981. pp. 259–292.

9) Nath, V., "Regional Development in Indian Planning", *Economic and Political Weekly*, Annual Number, Jan. 1970, pp. 247-260.

10) Pal M. N. "Regional Disparities in the levels of Development in India", *Indian Journal of Regional Science*, Vol. VII, No. 1, 1975.

11) Rao, S. K., "A Note on measuring Economic Distance between Regione in Indial", *Economic and Political Weekly*, April 28, 1973.

13) Sampath, R. K. "Inter-State inequalites in Income in India-1951–71", *Indian Journal of Regional Science*, Vol. I, No. I, 1977.

13) Ullman, "Regional Development and the Geograply of concentration" in John Fwodmann, (Ed.) *Regional Development and Planing : A Reader*, MIT Press, Mass, 1972.

14) Urmila Sadhu, "Identification of Backward Regions A Brief Reviev", MARGIN (NCAER) Vol. 9, No. 2, Jan. 1977, pp. 50-58.

ಶ್ರೀವೈಷ್ಣವ ಧರ್ಮ ಪರಂಪರೆ ಹಾಗೂ ಕಾಂಚಿ ವರದರಾಜ ಸ್ವಾಮಿ ದೇವಾಲಯ

ಜಿ. ಆರ್. ಕುಪ್ಪುಸ್ವಾಮಿ

ಅನಾದಿಕಾಲದಿಂದಲೂ ವಿಷ್ಣು ಪೂಜೆಯು ತಮಿಳುನಾಡಿನಲ್ಲಿ ಜನಪ್ರಿಯವಾಗಿತ್ತೆಂದು ಸಂಗಮ್ ಕಾಲದ ಪ್ರಾಚೀನ ತಮಿಳು ಸಾಹಿತ್ಯದಿಂದ ಕಂಡು ಬರುತ್ತದೆ. ತೊಳ್ಕಾಪ್ಪಿಯಂ ಎಂಬ ಗ್ರಂಥವು ತಮಿಳುನಾಡಿನ ರಕ್ಷಾಕವಚಗಳೆಂದು ಕೆಳಗಿನ ನಾಲ್ಕು ದೇವತೆಗಳನ್ನು ಸ್ಮರಿಸಿದೆ : ಅರಣ್ಯ ಪ್ರದೇಶ–ಮಾಯೋನ್ (ವಿಷ್ಣು) ; ಗುಡ್ಡಗಾಡು ಪ್ರದೇಶ : ಸೇಯೋನ್ (ಮುರುಗನ್) ; ಬೇಸಾಯ ಪ್ರದೇಶ-ವೇಂದನ್ (ಇಂದ್ರ) ಮತ್ತು ಕರಾವಳಿ ಪ್ರದೇಶ–ವರುಣನ್. ಪರಿಪ್ಪಾಡಲ್ ಕಾವ್ಯದಲ್ಲಿ ವಿಷ್ಣುವಿನ ಅವತಾರವಾದ ಬಲರಾಮ ಕೃಷ್ಣನನ್ನು ಕೂಡ ಉಲ್ಲೇಖಿಸಲಾಗಿದೆ. ವೇಂಗಡಂ, ಅರಂಗಂ, ಮತ್ತು ತಿರುಮಾಳ್ ಇರುಮ್ ಸೋಳೈ ಎಂಬಲ್ಲಿರುವ ವಿಷ್ಣು ದೇವಾಲಯಗಳು ವಿಷ್ಣು ಪೂಜೆಯ ಪ್ರಮುಖ ಕೇಂದ್ರಗಳಾಗಿದ್ದವೆಂದು ವೈಷ್ಣವ ಆಳ್ವಾರರುಗಳು ಕೊಟ್ಟಿರುವ ಮಹತ್ವದಿಂದ ಕಂಡುಬರುತ್ತದೆ. ಕಾಂಚೀಪುರವು ಅನಾದಿಕಾಲದಿಂದಲೂ ವಿವಿಧ ಧರ್ಮಗಳ ಕೇಂದ್ರವಾಗಿತ್ತು. ಅಲ್ಲಿಯ ವೇಖದಲ್ಲಿಯ ವಿಷ್ಣು ದೇವಾಲಯವು ಸಂಗಮ್‌ರ ಕಾಲದಲ್ಲಿ ಪ್ರಮುಖ ದೇವಾಲಯವಾಗಿತ್ತು. ವೇಖ ಅಥವಾ ವೇಟ್ಕೈಯಲ್ಲಿಯ ವಿಷ್ಣುಶಯನವನ್ನು ಪತ್ತುಪಾಟ್ಟು ಗ್ರಂಥದಲ್ಲಿ ನಿರೂಪಿಸಲಾಗಿದೆ. ಕ್ರಿ.ಶ. 6 ಹಾಗೂ 8ನೇ ಶತಮಾನಗಳ ಅವಧಿಯಲ್ಲಿ ಸಂಭವಿಸಿದ ಭಕ್ತಿ ಆಂದೋಲನದ ಅಂಗವಾಗಿ ವೈಷ್ಣವ ಆಳ್ವಾರರುಗಳು ಪ್ರೇರೇಪಿಸಿದ ಕಾಂಚಿಯ ಇತರ ದೇವಸ್ಥಾನಗಳು ಊರ್ಜಿತಗೊಂಡವು, ಶೈವ ನಾಯನಾರರಂತೆ ವೈಷ್ಣವ ಆಳ್ವಾರರುಗಳು ಕೂಡ ದಕ್ಷಿಣ ಭಾರತದಲ್ಲಿ ಸುತ್ತಾಡಿ ವಿಷ್ಣುವನ್ನು ಕುರಿತು ಅನೇಕ ಹಾಡುಗಳನ್ನು ಹಾಡಿದರು. ಅವರುಗಳು ಹಾಡಿ ಹರಸಿದ ದಿವ್ಯ ದೇಶಗಳು 108. ಅವುಗಳಲ್ಲಿ ಕಾಂಚಿಯಲ್ಲಿಯೇ 18 ಕ್ಷೇತ್ರಗಳಿದ್ದು ಅವುಗಳ ಪೈಕಿ ವರದರಾಜಸ್ವಾಮಿ ದೇವಾಲಯವು ಒಂದಾಗಿತ್ತೆಂದು ಕಂಡುಬರುತ್ತದೆ. ಇದೇ ಅವಧಿಯಲ್ಲಿ ವಿಷ್ಣು ಪೂಜೆಗೆ ಕೂಡ ಅನೇಕ ರೀತಿಯಿಂದ ವಿಶೇಷ ಪ್ರೋತ್ಸಾಹ ದೊರೆಯಿತು. ವರದರಾಜಸ್ವಾಮಿಯನ್ನು ಹಾಡಿ ಹರಸಿದವರಲ್ಲಿ ಮೊದಲಿಗರಾಗಿದ್ದ ಪೂದತ್ತಾಳ್ವಾರ್ ತಮ್ಮ ಸ್ವಾಮಿಯನ್ನು ಅತ್ತಿಯೂರಾನ್ ಎಂದು ಸ್ಮರಿಸಿದ್ದಾರೆ. ಮತ್ತು ಈ ಸ್ಥಳವು ತಿರುವತ್ತಿಯೂರೆಂದು ಪ್ರಸಿದ್ಧಿಗೆ

ಬಂದಿತ್ತು. ಆದರೆ ಮೂಲದಲ್ಲಿ ಕಾಂಚಿಯ ವೇಖ ದೇವಾಲಯವು ವರದರಾಜ ಸ್ವಾಮಿ ದೇವಾಲಯಕ್ಕಿಂತ ಅಧಿಕ ಪ್ರಾಮುಖ್ಯತೆಯನ್ನು ಪಡೆದಿತ್ತೆಂದು ಇತರ ಆಳ್ವಾರರುಗಳ ಪಾಡಲ್‌ಗಳಿಂದ ವ್ಯಕ್ತವಾಗುತ್ತದೆ. ಅಲ್ಲದೆ, ಪೊಯ್ಗೈ ಮತ್ತು ಪೇಯ್ ಆಳ್ವರರುಗಳು ಪದೇ ಪದೇ ಈ ದೇವಸ್ಥಾನವನ್ನು ಉಲ್ಲೇಖಿಸಿರುವುದಲ್ಲದೆ, ಶ್ರೀರಂಗಂ ಹಾಗೂ ವೇಂಗಡಂ ದೇವಾಲಯಗಳಿಗೆ ಸರಿಸಮಾನವಾಗಿತ್ತೆಂದು ಕೂಡ ಎಣಿಸಿದ್ದರು. ವಿಷ್ಣುವಿನ ವಿವಿಧ ಭಂಗಿಗಳನ್ನು ವರ್ಣಿಸುವಾಗ ಪೊಯ್ ಆಳ್ವಾರರು ಉಲ್ಲೇಖಿಸಿರುವ ನಾಲ್ಕು ಕ್ಷೇತ್ರಗಳ ಪೈಕಿ, ವೆಂಗಡಂ ಅಲ್ಲಿ ಊರ್ಧ್ವ, ವಿನ್ನಗರದಲ್ಲಿ ಆಸೀನರಾಗಿಯೂ ವೇಖೆಯಲ್ಲಿ ಪವಡಿಸಿದ್ದಾರೆ. ಕೋವಲೂರಲ್ಲಿ ನಡೆಯುವ ಭಂಗಿಯಲ್ಲಿದ್ದಾರೆ. ಪೆಯ್ ಆಳ್ವಾರರು ಕೂಡ ವೇಖೆಯನ್ನು ಅನೇಕ ಸಲ ಉಲ್ಲೇಖಿಸಿರುವುದಲ್ಲದೆ, ವೇಂಗಡಂ, ಶ್ರೀರಂಗಂ, ಕುಡಂದೈ (ಕುಂಬಕೋಣಂ) ಹಾಗೂ ವಿನ್ನಗರಂ, ಈ ಕ್ಷೇತ್ರಗಳಿಗೆ ಹೋಲಿಸಿದ್ದಾರೆ. ತಿರುಮಲಶಿ ಆಳ್ವಾರರು ಕೂಡ ವೇಖ ದೇವಸ್ಥಾನದಲ್ಲಿ ಆಸಕ್ತಿ ವಹಿಸಿದ್ದರು ಮತ್ತು ಸ್ಫೂರ್ತಿದಾಯಕವಾಗಿ ಈ ದೇವಸ್ಥಾನವನ್ನು ಹೊಗಳಿದ್ದಾರೆ. ಅರ್ಥಾತ್ ಸಂಗಮ್ ಯುಗದಲ್ಲಿ ವೇಖ ದೇವಸ್ಥಾನವು ಪ್ರಾಮುಖ್ಯತೆಯಲ್ಲಿತ್ತೆಂದು ಪೆರುಂ ಪಾಣಾಟ್ರು ಪಡೈ ಮತ್ತು ಆಳ್ವಾರರುಗಳ ಪಾಡಲ್‌ಗಳಿಂದ ವ್ಯಕ್ತವಾಗುತ್ತದೆ. ಆದರೆ ಆಚಾರ್ಯರ ಯುಗದಲ್ಲಿ ಇಲ್ಲಿಯವರೆಗೂ ಸಾಮಾನ್ಯ ಸ್ಥಿತಿಯಲ್ಲಿದ್ದ ಅತ್ತಿಯೂರು ದೇವಾಲಯವು ಒಂದು ಪ್ರಮುಖ ಸಂಸ್ಥೆಯಾಗಿ ಪರಿವರ್ತನೆಗೊಂಡಿತಲ್ಲದೆ ಇತರ ದೇವಾಲಯಗಳನ್ನು ಹಿಂದೆ ಹಾಕಿತು. ಅತ್ತಿಗಿರಿ ದೇವಾಲಯವು ಪೆರುಮಾಳ್ ಕೋವಿಲ್ ಅಥವಾ ಹಸ್ತಿಗಿರಿ ಎಂದು ಉಲ್ಲೇಖಿಸಲ್ಪಟ್ಟ ಶ್ರೀ ವೈಷ್ಣವರ ಮೂರು ಅತಿ ಶ್ರೇಷ್ಠ ದಿವ್ಯ ಕ್ಷೇತ್ರಗಳಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿಕೊಂಡಿತು. ಕೋವಿಲ್ (ಶ್ರೀರಂಗ) ಹಾಗೂ ತಿರುಮಲೈ (ವೇಂಗಡಂ) ಇತರ ಎರಡು ದಿವ್ಯ ಕ್ಷೇತ್ರಗಳಾಗಿದ್ದವು. ಹಸ್ತಗಿರಿಯು ವಿಶಿಷ್ಟಾದ್ವೈತ ವೇದಾಂತ ಸಂಸ್ಥಾಪಕರು ಹಾಗೂ ಪ್ರಚಾರಕರೂ ಆಗಿದ್ದ ರಾಮಾನುಜಾಚಾರ್ಯರ ಜೀವನಕ್ಕೆ ಸಂಬಂಧಿಸಿದ್ದ ಕಾರಣ, ಅತ್ಯುತ್ತಮ ಸ್ಥಾನವನ್ನು ಗಳಿಸಿತು. ಆಚಾರ್ಯ ಪರಂಪರೆಗೆ ಸೇರಿದ್ದ ಅನೇಕ ಆಚಾರ್ಯರಲ್ಲಿ ಕೆಲವರು ರಾಮಾನುಜಾಚಾರ್ಯರ ಸಹಪಾಠಿಗಳಾಗಿದ್ದರು ಮತ್ತು ವರದರಾಜ ಸ್ವಾಮಿಯ ಮಹಿಮೆಯಿಂದ ಪ್ರಭಾವಿತರಾಗಿದ್ದರು. ಅವರ ಪೈಕಿ ತಿರುಕ್ಕಾಚ್ಚಿ ನಂಬಿ ಮತ್ತು ಕೂರತ್ತಾಳ್ವಾರ್ ಕ್ರಮವಾಗಿ ರಾಮಾನುಜರ ಹಿರಿಯ ಹಾಗೂ ಕಿರಿಯ ಸಹೋದ್ಯೋಗಿಗಳಾಗಿದ್ದರು. ರಾಮಾನುಜರು ತಮ್ಮ ಜೀವನದ ಮಹತ್ವಪೂರ್ಣವಾದ ಕಾಲವನ್ನು ಕಾಂಚಿಯಲ್ಲಿ ಕಳೆದರು ತಿರುಕ್ಕಾಚ್ಚಿ ನಂಬಿಯ ಮೂಲಕ ವರದರಾಜಸ್ವಾಮಿಯ ಅನುಗ್ರಹ ಹಾಗೂ ಪ್ರೇರಣೆಗೆ ಪಾತ್ರರಾಗಿ ಅವರ ಮುಂದಿನ ವಿಶಿಷ್ಟಾದ್ವೈತ ಪ್ರಚಾರ ಕಾರ್ಯವನ್ನು ರೂಪಿಸಲು ಅನುವು ಮಾಡಿಕೊಟ್ಟಿತು. ನಿತ್ಯವೂ ಪ್ರತಿಯೊಬ್ಬ ಶ್ರೀವೈಷ್ಣವನು ಸಂಧ್ಯಾವಂದನೆಯನ್ನು ಮಾಡುವಾಗ

ಕಾಂಚಿ, ಶ್ರೀರಂಗ, ತಿರುಪತಿ ಹಾಗೂ ಯದುಶೈಲ ಅಥವಾ ತಿರುನಾರಾಯಣಪುರ ಈ ನಾಲ್ಕು ದಿವ್ಯ ಕ್ಷೇತ್ರಗಳನ್ನು ಸ್ಮರಿಸಬೇಕೆಂದು ರಾಮಾನುಜರು ವಿಧಿಸಿದರು. ಇವೆಲ್ಲ ಕಾರಣಗಳಿಂದ ವರದರಾಜಸ್ವಾಮಿಯ ಪ್ರಭಾವವು ಪ್ರತಿಯೊಬ್ಬ ಶ್ರೀವೈಷ್ಣವನ ಮನಸ್ಸಿನಲ್ಲಿಯೂ ಮೂಡಿ ಬಂತು. ಅಲ್ಲದೆ, ಇದೇ ವರದರಾಜಸ್ವಾಮಿ ದೇವಸ್ಥಾನದಲ್ಲಿ ಮೊಟ್ಟಮೊದಲಿಗೆ ರಾಮಾನುಜರ ಬೋಧನೆಗಳು, ಪೂಜಾ ವಿಧಿಗಳ ಸುಧಾರಣೆ, ಹಬ್ಬ ಹರಿದಿನಗಳ ಆಚರಣೆ, ಧಾರ್ಮಿಕ ವಿಧಿಗಳು, ಇವುಗಳನ್ನು ಅನುಷ್ಠಾನಕ್ಕೆ ತರಲಾಯಿತು. ವರದರಾಜಸ್ವಾಮಿ ದೇವಾಲಯವನ್ನು ಮಾದರಿಯಾಗಿಟ್ಟುಕೊಂಡು ಇನ್ನಿತರ ಸಣ್ಣ ಪುಟ್ಟ ದೇವಾಲಯಗಳಲ್ಲಿ ಅದೇ ಕ್ರಮವನ್ನು ಅನುಸರಿಸಲಾಯ್ತು. ರಾಮಾನುಜರ ನಂತರವೂ ಕೂಡ ಈ ದೇವಸ್ಥಾನವು ತನ್ನ ಉತ್ತಮ ಸ್ಥಾನವನ್ನು ಕಾಯ್ದುಕೊಂಡು ಬಂದುದಲ್ಲದೆ ಮತ್ತಷ್ಟು ಪ್ರಗತಿಯನ್ನು ಕೂಡ ಸಾಧಿಸಿ ವಿಜಯನಗರದ ಕಾಲದಲ್ಲಿ ಅತ್ಯುನ್ನತ ಮಟ್ಟವನ್ನು ಮುಟ್ಟಿತು. ಹಿರಿಯ ಪಂಗ್ತಿಗೆ ಸೇರಿದ್ದ ಆಚಾರ್ಯರುಗಳಾದ ನಡದೂರು ಅಮ್ಮಾಳ್, ವೇದಾಂತ ದೇಶಿಕರು ಹಾಗೂ ಮನವಾಳ ಮಹಾಮುನಿಗಳು ವರದರಾಜಸ್ವಾಮಿಗೆ ಅನೂಚಾನವಾಗಿ ತಮ್ಮ ಸೇವೆಯನ್ನು ಸಲ್ಲಿಸಿದರು. ಆಚಾರ್ಯಪುರುಷರ ವಂಶಜರು ಹಾಗೂ ಜೀಯರು ಈ ದೇವಸ್ಥಾನಕ್ಕೆ ಸಂಬಂಧ ಕಲ್ಪಿಸಿಕೊಂಡರು. ರಾಮಾನುಜ ದರ್ಶನದ ಪ್ರಚಾರಕ್ಕೆ ಶ್ರೀವೈಷ್ಣವ ಮಠಗಳು ಟೊಂಕ ಕಟ್ಟಿ ನಿಂತವು.

ಆಚಾರ್ಯ ಯುಗ

ಶ್ರೀ ವೈಷ್ಣವ ಧರ್ಮಗುರುಗಳು ಕಾಂಚಿವರದರಾಜಸ್ವಾಮಿ ದೇವಾಲಯದೊಡನೆ ಇಟ್ಟುಕೊಂಡಿದ್ದ ಸಂಪರ್ಕವನ್ನು ಮೂರು ಹಂತಗಳಲ್ಲಿ ಕಾಣಬಹುದು. ಮೂಲ ಆಚಾರ್ಯ ಯುಗಕ್ಕೆ ಅಥವಾ ಪರಂಪರೆಗೆ ಸೇರಿದ್ದ ತಿರುಕ್ಕಚ್ಚಿ ನಂಬಿ, ಕೂರತ್ತಾಳ್ವಾರ್ ಅರ್ಥಾತ್ ರಾಮಾನುಜರು ಹಾಗೂ ಅವರ ಸಹಪಾಠಿಗಳ ಜೀವನ ಚರಿತ್ರೆಯನ್ನರಿಯಲು ವರದರಾಜಸ್ವಾಮಿ ದೇವಾಲಯದ ಆವಾರದಲ್ಲಿರುವ ಶಾಸನಗಳು ನೆರವು ನೀಡುವುದಿಲ್ಲ. ಇದೊಂದು ಚಿದಂಬರ ರಹಸ್ಯವಾಗಿಯೇ ಉಳಿದಿದೆ. ಅನೇಕ ಅರಸರುಗಳನ್ನು ಹಾಡಿಹರಿಸಿರುವ ಶಿಲಾಶಾಸನಗಳು ಶ್ರೀವೈಷ್ಣವ ಧರ್ಮಕ್ಕೆ ತಮ್ಮ ಜೀವನವನ್ನೇ ಮುಡುಪಾಗಿಟ್ಟು ಸ್ವಾಮಿಗೆ ನಿರಂತರವಾಗಿ ಸೇವೆಸಲ್ಲಿಸಿಕೊಂಡು ಬಂದಿರುವ ಆಚಾರ್ಯರುಗಳ ಜೀವನ ಚರಿತ್ರೆಗೆ ಪ್ರಾಧಾನ್ಯತೆ ಕೊಡದೆ ಇರುವುದು ಸೋಜಿಗ ಸಂಗತಿ. 15ನೇ ಶತಮಾನದ ನಂತರ ಶಿಲಾಶಾಸನಗಳು ಈ ದಿಶೆಯಲ್ಲಿ ಹೆಚ್ಚು ಉಪಯುಕ್ತವಾಗಿವೆ. ಆಚಾರ್ಯಯುಗದ ಪೂರ್ವೇತಿಹಾಸವನ್ನು ತಿಳಿಯಲು ವೈಷ್ಣವ ಗುರುಪರಂಪರೆ ಮತ್ತು ಆಚಾರ್ಯರ ಗ್ರಂಥಗಳನ್ನು ಅವಲಂಬಿಸಬೇಕು.

ಚೆಟ್ಟಿಯಾರ್ ಅಥವಾ ವೈಶ್ಯಕುಲದಲ್ಲಿ ತಿರುಕ್ಕಚ್ಚಿನಂಬಿಯರು ಕಾಂಚಿಗೆ 70 ಮೈಲುದೂರದ ಪುಂಡಮಲ್ಲಿ ಗ್ರಾಮದಲ್ಲಿ ಜನ್ಮವೆತ್ತಿದರು. ರಾಮಾನುಜರ ಹಿರಿಯ ಸಹಪಾಠಿಗಳಾಗಿದ್ದರು. ಪ್ರತಿನಿತ್ಯವೂ ವರದರಾಜಸ್ವಾಮಿಗೆ ಪುಷ್ಪವನ್ನು ಒಯ್ಯು ತ್ತಿದ್ದರು ಮತ್ತು ಆಳವಟ್ಟ ಕೈಂಕರ್ಯ ಸೇವೆಯನ್ನು ಸಲ್ಲಿಸುತ್ತಿದ್ದರು. ಈ ಸೇವೆಗೆ ವಿಶೇಷವಾಗಿ ಒಗ್ಗಿಕೊಂಡಿದ್ದರು. ಕ್ರಮೇಣ ಅವರೊಬ್ಬರೇ ದೇವ ಪೆರು ಮಾಳರ ನಿಕಟ ಸಂಬಂಧವನ್ನು ಪಡೆಯುವ ಅರ್ಹತೆಯನ್ನು ಹೊಂದಿದವರೆಂಬ ಕೀರ್ತಿಯನ್ನು ಗಳಿಸಿದರು. ಎಲ್ಲರ ಗೌರವಕ್ಕೂ ಪಾತ್ರರಾಗಿದ್ದರು. ಪರಮಭಕ್ತಿ ಹಾಗೂ ವಿನೀತ ಸ್ವಭಾವದವರಿದ್ದರು. ಅವರ ವಾಣಿಯು ದೈವವಾಣಿಯೆಂದೇ ಭಕ್ತಾದಿಗಳು ನಂಬಿದ್ದರು. ಕಾಂಚಿಯ ನಿವಾಸಿಗಳಿಗೆ ಅವರೊಂದು ಅಮೂಲ್ಯ ರತ್ನವಾಗಿದ್ದರು. ಒಮ್ಮೆ ಶ್ರೀವೈಷ್ಣವ ಧರ್ಮದ ಉಗಮಸ್ಥಾನವಾದ ಶ್ರೀರಂಗದಲ್ಲಿ ತಿರುಕ್ಕಚ್ಚಿನಂಬಿಯರು ಮಹಾಪೂರ್ಣ ಹಾಗೂ ಅಳ್ವಾವಂದರ್ ಸಂದರ್ಶಿಸಿ ಅವರು ಗಳ ಪ್ರಶಂಸೆಗೆ ಪಾತ್ರರಾದರಲ್ಲದೆ, ಅಳವಂದರ್ ಅವರಿಗೆ "ದಾಸ್ಯನಾಮ ಪೇರರುಳಾಳ ದಾಸ" (ವರದರಾಜಸ್ವಾಮಿಯ ತೊತ್ತು) ಎಂಬ ಬಿರುದನ್ನು ದಯಪಾಲಿಸಿ ಗೌರ ವಿಸಿದರು. ಪುಂಡಮಲ್ಲಿಯಲ್ಲಿ ತಮ್ಮ ಆರಾಧ್ಯದೇವತೆಗೆ ದೇವಸ್ಥಾನವೊಂದನ್ನು ಕಟ್ಟಿಸಿದರು.

ರಾಮಾನುಜಾಚಾರ್ಯರು (1017–1137) ತಮ್ಮ ಬಾಲ್ಯ ಹಾಗೂ ವಿಕಾಸ ಜೀವನವನ್ನು ಕಾಂಚಿಯಲ್ಲಿಯೇ ಕಳೆದರು. ಕಾಂಚಿ ಹಾಗೂ ವರದರಾಜಸ್ವಾಮಿಯ ಮೇಲಿನ ಮೋಹವು ಅವರಲ್ಲಿ ದೀರ್ಘವಾಗಿತ್ತೆಂದು ಹೇಳಿದರೆ ಆಶ್ಚರ್ಯವೇನಿಲ್ಲ. ಶ್ರೀರಂಗ, ತಿರುಮಲೈ ಹಾಗೂ ಕಾಂಚಿಯು ಅವರ ಕಾರ್ಯ ಕ್ಷೇತ್ರವಾಗಿದ್ದವು. ಅದೇ ಕಾರಣಕ್ಕಾಗಿ ಅವರ ಶಿಷ್ಯರಲ್ಲೊಬ್ಬರಾಗಿದ್ದ ತಿರುವರಂಗತ್ತುಮ್ಮುದನಾರ್ ರಾಮಾನುಜರನ್ನು "ತೆನ್ ಅತಿಯೂರ್ ಕಳಲಿನೈ ಕೀಳ್‌ಪೂಂದ ಅನ್ವಾಳರ್" (ಅತ್ತಿಯೂರು ಸ್ವಾಮಿಯ ಪಾದಾರಾದಕರೆಂದು) ಕರೆದಿದ್ದಾರೆ. ಶ್ರೀ ಪೆರುಂಬ ದೂರಲ್ಲಿ ರಾಮಾನುಜರು 1017 ರಲ್ಲಿ ಜನ್ಮವೆತ್ತಿದರು. ತಮ್ಮ ಪ್ರಾಥಮಿಕ ಶಿಕ್ಷಣ ವನ್ನು ಅವರ ತಂದೆಯಿಂದ ಕಲಿತರು. ಅವರ ತಂದೆಯ ನಿಧನದ ನಂತರ ತನ್ನ ತಾಯಿ ಹಾಗೂ ಪತ್ನಿಯನ್ನು ಕರೆದುಕೊಂಡು ಬಂದು ಕಾಂಚಿಯಲ್ಲಿ ನೆಲಸಿದರು. ಅವರ ಕುಟುಂಬದವರು ವರದರಾಜಸ್ವಾಮಿ ದೇವಸ್ಥಾನದ ಪೂರ್ವಕ್ಕೆ ಸನ್ನಿಧಿ ಬೀದಿಯ ವಾಯುವ್ಯ ಭಾಗದ ಮೊದಲನೆಯ ಮನೆಯಲ್ಲಿ ವಾಸಿಸುತ್ತಿದ್ದರೆಂದು ಐತಿಹ್ಯವಿದೆ. ರಾಮಾನುಜರು ಕಾಂಚಿಯಲ್ಲಿ ಅದ್ವೈತ ಗುರುಗಳಾಗಿದ್ದ ಯಾದವ ಪ್ರಕಾಶರಲ್ಲಿ ವೇದಾಂತವನ್ನು ಕಲಿತರು. ಮೊದಲಿಗೆ ಗುರುಗಳ ಪ್ರಿಯಶಿಷ್ಯರಾಗಿ ದ್ದರು. ಆದರೆ ಕ್ರಮೇಣ ಅವರಿಬ್ಬರ ನಡುವೆ ಶ್ಲೋಕಗಳನ್ನು ಅರ್ಥೈಸುವುದರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿತು. ರಾಮಾನುಜರು ಗುರುಗಳ ತಪ್ಪುಗಳನ್ನು

ತೋರಿಸಿಯೂ ಕೊಟ್ಟರು. ಗುರುಗಳು ಅವರನ್ನು ಅಧಿಕಪ್ರಸಂಗಿ, ಅದ್ವೈತ ವಿರೋಧಿ ಯೆಂದು ಭಾವಿಸುತ್ತಿದ್ದರು. ಮತ್ತು ರಾಮಾನುಜರನ್ನು ಕೊಲ್ಲುವ ಹೊಂಚನ್ನು ಕೂಡ ಹೂಡಿದ್ದರು. ರಾಮಾನುಜರು ಅವರ ಶಿಷ್ಯವೃತ್ತಿಯನ್ನು ಬಿಟ್ಟುಕೊಡ ಬೇಕಾಯಿತು. ಮತ್ತು ತಿರುಕ್ಕಚ್ಚಿನಂಬಿಯನ್ನು ತಮ್ಮ ಗುರುಗಳಾಗಬೇಕೆಂದು ವಿನಂತಿಸಿಕೊಂಡರೂ ತಮ್ಮ ಬೇಡಿಕೆಗೆ ಕೂಡಲೆ ಪುರಸ್ಕಾರದೊರೆಯಲಿಲ್ಲ. ಅಲ್ಲದೆ ತಿರುಕ್ಕಚ್ಚಿ ನಂಬಿಯು ವಿದ್ಯಾಪಾರಂಗತರಾಗಿರಲಿಲ್ಲ. ಸ್ವಾಮಿಗೆ ಕೇವಲ ದೇಹ ಶ್ರಮ ದಿಂದ ಸೇವೆ ಸಲ್ಲಿಸುತ್ತಿದ್ದರು. ಸ್ವಾಮಿಗೆ ಅನನ್ಯ ಭಕ್ತಿಯಿಂದ ಸೇವೆಸಲ್ಲಿಸು ತ್ತಾರೆಯೋ ಅವರನ್ನೇ ತಮ್ಮ ಗುರುವನ್ನಾಗಿ ಸ್ವೀಕರಿಸಬೇಕೆಂದು ರಾಮಾನುಜರು ಅಪೇಕ್ಷಿಸಿದ್ದರು. ರಾಮಾನುಜರ ನಿಸ್ವಾರ್ಥ ಬುದ್ಧಿಯಿಂದ ಪ್ರಸನ್ನರಾದ ತಿರುಕ್ಕಚ್ಚಿ ನಂಬಿಯು ಮೊದಲಿಗೆ ಅವರನ್ನು ಸಾಲಭಾವಿಯಿಂದ ಪ್ರತಿ ದಿನವೂ ಒಂದು ಕೊಡ ತೀರ್ಥವನ್ನು ದೇವರ ಸೇವೆಗೆ ತರಬೇಕೆಂದು ನಿರ್ಮಿಸಿದರು. ಈ ಸೇವೆ ಯನ್ನು ರಾಮಾನುಜರು ನಿರಾಂತಕವಾಗಿ ನಡೆಸುತ್ತಿದ್ದರು. ಇಂದಿಗೂ ಕೂಡ ಅದೇ ಸಾಲಭಾವಿಯಿಂದ ತೀರ್ಥವನ್ನು ಸ್ವಾಮಿ ಕೈಂಕರ್ಯಕ್ಕೆ ತರುವ ವಾಡಿಕೆ ಯನ್ನು ಮುಂದುವರಿಸಲಾಗಿದೆ. ಶ್ರೀ ವೈಷ್ಣವರು ಕೈಂಕರ್ಯ ಸೇವೆಗೆ ಮಹತ್ವ ಕೊಟ್ಟಿರುವುದಕ್ಕೆ ಇದೊಂದು ಉತ್ತಮ ನಿದರ್ಶನ. ಅವರಲ್ಲಿ ವಿವೇಕ ಭಾವನೆಯು ಇದರಿಂದ ಬೆಳೆದು ಬಂದಿದೆ. ಐತಿಹ್ಯದ ಪ್ರಕಾರ ವರದರಾಜಸ್ವಾಮಿಯು ರಾಮಾ ನುಜರಿಗೆ ಷಡ್ದರ್ಶನವನ್ನು ತಿಳಿಸಿಕೊಡಲು ತಿರುಕ್ಕಚ್ಚಿ ನಂಬಿಯನ್ನು ಆರಿಸಿದರು. ಹಾಗೂ ಅವರು ಪೆರಿಯ ನಂಬಿಯಿಂದ ಮಾರ್ಗದರ್ಶನ ಪಡೆಯಬೇಕೆಂದು ಸ್ವಾಮಿಯು ಆದೇಶವಿತ್ತು. ಪೆರಿಯ ನಂಬಿಯು ಕೂಡ ಅದೇ ಉದ್ದೇಶದಿಂದ ತಮ್ಮ ಪತ್ನಿ ಯೊಡನೆ ಶ್ರೀರಂಗದಿಂದ ಕಾಂಚಿ ಅಭಿಮುಖವಾಗಿ ಹೊರಟರು. ಇಬ್ಬರು ನಂಬಿಯರು ಮಧುರಾಂತಕಮ್ (ಕಾಂಚಿಯಿಂದ 40 ಮೈಲು ನೈರುತ್ಯ) ಎಂಬಲ್ಲಿ ಸಂಧಿಸಿದರು. ಮತ್ತು ಅಲ್ಲಿಯೇ ಪೂರ್ವಭಾವಿ (initiation) ಎಂಬಲ್ಲಿ ಸಮಾ ರಂಭವು ನಡೆದನಂತರ ಎಲ್ಲರೂ ಕಂಚಿಗೆ ಹೊರಟುಬಂದರು. ರಾಮಾನುಜರು ತಮ್ಮ ಮನೆಯ ಒಂದು ಭಾಗವನ್ನು ಪೆರಿಯ ನಂಬಿಯ ನಿವಾಸಕ್ಕೆ ಬಿಟ್ಟು ಕೊಟ್ಟರು. ಅವರಿಂದ ತಮಿಳು ಪ್ರಬಂಧವನ್ನು ಕಲಿತರು. ರಾಮಾನುಜರು ಜಾತೀಯತೆ ನಿರ್ಬಂಧಗಳಿಂದ ಬಂಧಿತರಾಗಿರಲಿಲ್ಲ. ಆದರೂ ಕೂಡ ಅವರ ಪತ್ನಿಯು ತನ್ನ ಪತಿಯ ಉದಾರ ಮನಸ್ಸಿಗೆ ಪುರಸ್ಕಾರ ನೀಡಲಿಲ್ಲ. ಪೆರಿಯ ನಂಬಿಯು ಪತ್ನಿಯೊಡನೆ ಆಗಾಗ್ಗೆ ಸಣ್ಣಪುಟ್ಟ ವಿಷಯಗಳ ಬಗ್ಗೆ ಕಲಹ ತೆಗೆಯಲು ಪ್ರಾರಂಭಿಸಿದ ಕಾರಣ ಪೆರಿಯ ನಂಬಿಯು ಅವರ ಮನೆಯನ್ನು ಬಿಡಬೇಕಾಯಿತು. ಶ್ರೀರಂಗಕ್ಕೆ ಮರುಪ್ರಯಾಣ ಬೆಳಸಿದರು. ರಾಮಾನುಜರು ತಮ್ಮ ಪತ್ನಿಯ ಸಂಕುಚಿತ ಸ್ವಭಾವದಿಂದ ಬೇಸತ್ತರು. ಅವರು ತಮ್ಮ ಗೃಹವನ್ನು ತ್ಯಜಿಸಿ

ಸನ್ಯಾಸ ದೀಕ್ಷೆಯನ್ನು ವಹಿಸಿದರು. ರಾಮಾನುಜ ಮುನಿಯೆಂದು ಕರೆಯಿಸಿಕೊಂಡರು. ಮತ್ತು ತಮ್ಮ ಮಠವನ್ನು ಸ್ಥಾಪಿಸಿದರು. ಅವರ ಸೋದರಳಿಯ ಕಂದಾಡೈ ಮುದಲಿಯಾಂಡಾರ್ ಮತ್ತು ಕೂರೇಶ ಅಥವಾ ಕೂರತಾಳ್ವಾರ್ ರಾಮಾನುಜರ ಶಿಷ್ಯರಾದರು. ಮತ್ತು ಅವರ ಜೀವನದುದ್ದಕ್ಕೂ ಹಾಸುಹೊಕ್ಕಾಗಿ ನಿಂತರು. ಯಾದವ ಪ್ರಕಾಶರು ಕೂಡ ರಾಮಾನುಜರ ಶಿಷ್ಯರಾದರು. ಅವರಿಗೆ ಗೋವಿಂದ ಜೀಯರ್ ಎಂದು ನಾಮಕರಣ ಮಾಡಲಾಯಿತು. ಮುಂದೆ ಅವರು ಯತಿಧರ್ಮ ಸಮುಚ್ಚಯಮ್ ಎಂಬ ಗ್ರಂಥವನ್ನು ಕೂಡ ರಚಿಸಿದರು. ರಾಮಾನುಜರು ಕಾಂಚಿ ಯಲ್ಲಿ ಸಾಧಿಸಿದ ಕಾರ್ಯವು ಎಲ್ಲರ ಮೆಚ್ಚಿಗೆಗೂ ಪಾತ್ರವಾಯಿತು. ಕೆಲವು ನಿರ್ಧಿಷ್ಟ ಕಾರಣಗಳಿಗಾಗಿ ರಾಮಾನುಜರು ತಮ್ಮ ಮುಂದಿನ ಕಾರ್ಯಕ್ಷೇತ್ರವನ್ನು ಕಾಂಚಿ ಯಿಂದ ಶ್ರೀರಂಗಕ್ಕೆ ಬದಲಾಯಿಸಬೇಕಾಯ್ತು. ಆಳವಂದರ್ ಅವರ ಇಷ್ಟಸಿದ್ಧಿ ಯನ್ನು ಪೂರ್ಣಗೊಳಿಸಲು ಪೆರಿಯ ನಂಬಿಯು ರಾಮಾನುಜರನ್ನು ಶ್ರೀರಂಗದ ಮಠಾಧಿಪತಿಯನ್ನಾಗಿಸುವ ದೃಷ್ಟಿಯಿಂದ ತಿರುವರಂಗ ಪೆರುಮಾಳ್ ಅರಯರ್ (ವರರಂಗ) ಅವರನ್ನು ಆಚಾರ್ಯರನ್ನು ಆಹ್ವಾನಿಸಲು ಕಾಂಚಿಗೆ ಕಳುಹಿಸಿಕೊಟ್ಟರು. ಪೆರುಳಾಳರ ಮುಂದೆ ಸುಂದರವಾಗಿ ಹಾಡಿ ಸ್ವಾಮಿಯ ಮನಸ್ಸನ್ನು ತನ್ನೆಡೆಗೆ ಒಲಿಸಿ ಕೊಂಡರು. ರಾಮಾನುಜರನ್ನು ಶ್ರೀರಂಗಕ್ಕೆ ಕರೆದುಕೊಂಡು ಹೋಗುವ ಕರ್ತವ್ಯ ದಲ್ಲಿ ತಿರುವರಂಗರು ಯಶಸ್ಸನ್ನು ಪಡೆದರು. ರಾಮಾನುಜರು, ಮುದಲಿಯಾಂಡಾನ್ ಹಾಗೂ ಕೂರತ್ತಾಳ್ವಾರ್ ಅವರುಗಳನ್ನು ಒಳಗೊಂಡು ಅರೈಯಾರ್ ಅವರೊಡನೆ ಕಾಂಚಿಯನ್ನು ಬಿಟ್ಟು ಶ್ರೀರಂಗದಲ್ಲಿ ನೆಲಸಲು ಹೊರಟುಬಿಟ್ಟರು. ಕಾಂಚಿಯು ಅವರ ನಂತರದ ಜೀವನದಲ್ಲಿ ಹೆಚ್ಚು ಮಹತ್ವ ಪಡೆಯದಿದ್ದರೂ ಕೂಡ ಆಚಾ ರ್ಯರು ಸ್ವಾಮಿಯ ಆಶೀರ್ವಾದವನ್ನು ಪಡೆಯಲು ಕಾಂಚಿಗೆ ಬಂದು ಹೋಗುತ್ತಿ ದ್ದರು. ಶ್ರೀವೈಷ್ಣವ ಸಾರಸ್ವತ ಪ್ರಪಂಚಕ್ಕೆ ಆಚಾರ್ಯರು ದಾರಿದೀಪವಾಗಿ ನಿಂತರು. ಅವರ ಬೋಧನೆಗಳು ಮತ್ತು ಸುಧಾರಣೆಗಳು ಶ್ರೀವೈಷ್ಣವ ಇತಿಹಾಸದ ಮೇಲೆ ವಿಶೇಷ ಪ್ರಭಾವವನ್ನುಂಟುಮಾಡಿದ್ದರಲ್ಲ ಆಶ್ಚರ್ಯ ವೇನಿಲ್ಲ. ಅವರ ಶಿಷ್ಯೋತ್ತಮರಾಗಿದ್ದ ಕೂರತ್ತಾಳ್ವಾರ್ ವರದರಾಜಸ್ತವಮ್ ಗ್ರಂಥದಲ್ಲಿ ವರದರಾಜಸ್ವಾಮಿಯನ್ನು ಕುರಿತು ಹಾಡಿದ್ದಾರೆ. ಈ ಪಾಡಲ್‌ಗಳನ್ನೂ ರಚಿಸಿದ ಸಂದರ್ಭವು ಕೂಡ ಸ್ವಾರಸ್ಯವಾಗಿದೆ. ಗುರುಪರಂಪರೈ ಪ್ರಕಾರ, ಕೂರತ್ತಾಳ್ವಾರ್ ಅವರ ಕಣ್ಣುಗಳನ್ನೂ ಕೀಳಿಸಿದಾಗ ರಾಮಾನುಜರು ಅವರಿಗೆ ವರದರಾಜ ಪ್ರಪತ್ತಿಮಾಡಬೇಕೆಂದು ಪದ್ಯಗಳನ್ನು ರಚಿಸುವಂತೆ ನಿಯಮಿಸಿ ವರದ ರಾಜಸ್ತವವನ್ನು ಅನುಗ್ರಹಿಸಿದರು. ಸಹಸ್ರ ಸುಂದರ ಪಾಡಲ್‌ಗಳನ್ನೊಳಗೊಂಡ ಈ ಗ್ರಂಥವನ್ನು ಇಂದಿಗೂ ಕೂಡ ಕೆಲವು ಸಂದರ್ಭಗಳಲ್ಲಿ ಅನ್ನಲಾಗುತ್ತಿದೆ. ರಾಮಾನುಜರಿಗೆ ವರದರಾಜಸ್ವಾಮಿಯಲ್ಲಿ ವಿಶೇಷ ಆಸ್ತೆ ಇತ್ತೆಂದು ಈ ನಿದರ್ಶನ

ದಿಂದ ಕಂಡುಬರುತ್ತದೆ. ರಾಮಾನುಜರು ಯಜ್ಞಾಮೂರ್ತಿಯೆಂಬ ಅದ್ವೈತ ಧರ್ಮದವರೊಬ್ಬರನ್ನು ವರದರಾಜಸ್ವಾಮಿಯ ಅನುಗ್ರಹೀಯಾದ ಶ್ರೀವೈಷ್ಣವ ಧರ್ಮಕ್ಕೆ ಸೇರಿಸಿ ಅವರಿಗೆ ದೇವರಾಜ ಮುನಿ ಅಥವಾ ಅಗುಳಾಳ ಪೆರುಮಾಳ್ ಎಂಬೆರುಮಾನರ್ ಎಂದು ನಾಮಕರಣ ಮಾಡಿ ಅವರನ್ನು ವರದರಾಜಸ್ವಾಮಿಯ ಪೂಜೆಯನ್ನು ನಿತ್ಯವೂ ನಡೆಸಲು ನೇಮಿಸಿದರು. ವರದರಾಜಸ್ವಾಮಿಗೆ ಅವರು ಸಲ್ಲಿಸಿದ ಸೇವೆಯನ್ನು ಅನುಲಕ್ಷಿಸಿ ಅವರು ಮರಣ ಹೊಂದಿದ ಕೇವಲ 55 ವರ್ಷಗಳಲ್ಲಿ ಅವರ ಮೂರ್ತಿಯನ್ನು ಸ್ಥಾಪಿಸಲಾಯಿತು. 1191 ರ ಶಾಸನದ ಪ್ರಕಾರ ಇಳೈಯಾಳ್ವಾನ್ ಕಳಿಂಗರಾಯನ್ ಎಂಬ ಪ್ರಭಾವ್ವಿತ ವ್ಯಕ್ತಿಯು ರಾಮಾನುಜರ ಪ್ರತಿಮೆಯನ್ನು ಸ್ಥಾಪಿಸಿದ್ದಲ್ಲದೆ ಅದರ ಪೂಜೆಗೆ ಎರಡು ಹಳ್ಳಿಗಳ ವರಮಾನವನ್ನು ಬಿಟ್ಟುಕೊಟ್ಟನು.

ವಿಶಿಷ್ಟಾದ್ವೈತ ಸಂಪ್ರದಾಯದ ಪ್ರಚಾರ ಹಾಗೂ ಆಚರಣೆಯ ಸಲುವಾಗಿ ರಾಮಾನುಜರು ಆಚಾರ್ಯಪುರುಷರ ಪರಂಪರೆಯೊಂದನ್ನು ಸ್ಥಾಪಿಸಿದರು. ಈ ರೀತಿ 74 ಸಿಂಹಾಸನಾಧಿಪತಿಗಳನ್ನು ನೇಮಿಸಿ ಅವರಲ್ಲಿ ಕೆಲವರಿಗೆ ಮಾತ್ರ ಶ್ರೀಭಾಷ್ಯ ವಿವರಣೆ ಹಾಗೂ ಇತರರು ತಮಿಳು ಪ್ರಬಂಧವನ್ನು ಉಪದೇಶಿಸುವ ಅಧಿಕಾರವನ್ನಿತ್ತರು. ಈ ವ್ಯವಸ್ಥೆಯಿಂದ ರಾಮಾನುಜರು ತಮಿಳು ಪ್ರಬಂಧಕ್ಕೆ ಕೊಟ್ಟಿದ್ದ ಮನ್ನಣೆಯ ಸ್ವರೂಪವು ವ್ಯಕ್ತವಾಗುತ್ತದೆ. ಆಚಾರ್ಯಪುರುಷರು ಮತ್ತು ಅವರ ವಂಶಜರು ಇಂದಿಗೂ ಕೂಡ ಕಾಂಚಿ ಮತ್ತು ಇತರ ಕ್ಷೇತ್ರಗಳಲ್ಲಿ ದೇವಕಾರ್ಯ ಹಾಗೂ ಧರ್ಮಪ್ರಸಾರ ಕಾರ್ಯದಲ್ಲಿ ನಿರತರಾಗಿದ್ದಾರೆ.

ರಾಮಾನುಜರ ನಂತರ :– ರಾಮಾನುಜರ ನಂತರ ಅವರ ಬೋಧನೆಗಳನ್ನು ಅರ್ಥೈಸುವುದರಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಉದ್ಭವಿಸಿದ ಕಾರಣ ದ್ವಿಮಾರ್ಗಕ್ಕೆ ಅನುವು ಮಾಡಿಕೊಟ್ಟಿತು. ಈ ಭಿನ್ನಾಭಿಪ್ರಾಯಗಳು ಪ್ರಪತ್ತಿ ಮಾರ್ಗ ಹಾಗೂ ತಮಿಳು ಮತ್ತು ಸಂಸ್ಕೃತ ಧಾರ್ಮಿಕ ಗ್ರಂಥಗಳಿಗೆ ಕೊಡಬೇಕಾದ ಮಹತ್ವವನ್ನು ಅವಲಂಬಿಸಿತ್ತು. ಕೆಲವರು ಶ್ರೀಭಾಷ್ಯಕ್ಕೆ ಮಹತ್ವ ಕೊಟ್ಟು ಅದರ ಬೋಧನೆಯಲ್ಲಿ ನಿರತರಾದರೆ, ಮತ್ತೆ ಕೆಲವರು ಆಳ್ವಾರರ ಪ್ರಬಂಧಕ್ಕೆ ಅಧಿಕ ಬೆಲೆ ಕೊಡಹತ್ತಿದರು. ಕ್ರಮೇಣ ವೈಷ್ಣವ ಧರ್ಮವನ್ನು ವಿವೇಚಿಸುವುದರಲ್ಲಿ ಎರಡು ಪ್ರತ್ಯೇಕ ಮಾರ್ಗಗಳು ಉದ್ಭವಿಸಿದವು. ಅವು ಶ್ರೀಭಾಷ್ಯ ಮತ್ತು ದ್ರಾವಿಡಾಮ್ನಾಯ ಪ್ರವಚನ. ಮೊದಲನೆಯ ವೇದಾಂತ ಮಾರ್ಗವನ್ನು ಸೂತ್ರದ ಆಧಾರದ ಮೇಲೆಯೂ ಎರಡನೆಯದನ್ನು ನಾಲಾಯಿರ ಪ್ರಬಂಧ ಅದರಲ್ಲಿಯೂ ತಿರುವಾಯ್‌ಮೊಳಿಯ ಆಧಾರದ ಮೇಲೆ ಅಭ್ಯಸಿಸಲಾಯಿತು. ಮತ್ತು ಎರಡೂ ಪರಂಪರೆಗಳು ಬೆಳೆದುಬಂದವು. ಇವುಗಳನ್ನು ವಡಕಲೈ ಅಥವಾ ಸಂಸ್ಕೃತ ಮಾತ್ತು ತೆಂಕಲೈ

ಅಥವಾ ಪ್ರಬಂಧ ಸಂಪ್ರದಾಯಗಳಾಗಿ ರೂಪುಗೊಂಡವು. ಕ್ರಮೇಣ ಕಂಚಿಯು ವಡಕಲೈ, ಶ್ರೀರಂಗವು ತೆಂಕಲೈಯರ ಕೇಂದ್ರವಾಗಿಯೂ ಪರಿಣಮಿಸಿದವು. ಆದರೂ ಕೂಡ ರಾಮಾನುಜದರ್ಶನ ಮತ್ತು ಅವರ ಸೇವೆಯು ಈ ಎರಡು ಪ್ರಮುಖ ಸಂಪ್ರದಾಯಗಳ ಉದ್ದೇಶವಾಗಿದ್ದುದರಿಂದ ರಾಮಾನುಜದರ್ಶನದ ಬೋಧನೆಯಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಭಿನ್ನಪಂಗಡಗಳು ಕೂಡಲೆ ಅಸ್ತಿತ್ವದಲ್ಲಿ ಬರಲಿಲ್ಲ. ಗ್ರಂಥಗಳನ್ನು ಅಭ್ಯಸಿಸುವುದರಲ್ಲಿಯೂ ಕೂಡ ರಾಮಾನುಜರ ಆಪ್ತ ಶಿಷ್ಯರಾದ ಎಂಬಾರ್, ಕುರುಕೇಶ ನಂಬಿಯಾರ್ ಪಿಳ್ಳೈಲೋಕಾಚಾರ್ಯ ಹಾಗೂ ವೇದಾಂತ ದೇಶಿಕರು ಸಂಸ್ಕೃತ ಹಾಗೂ ತಮಿಳು ಭಾಷೆಯಲ್ಲಿ ಪಾಂಡಿತ್ಯ ಪಡೆದಿದ್ದರು. ತಮ್ಮ ಗ್ರಂಥಗಳಲ್ಲಿ ಮಣಿಪ್ರವಾಳ ಶೈಲಿಯನ್ನು ಉಪಯೋಗಿಸಿ ಮಧ್ಯಮ ಮಾರ್ಗವನ್ನು ಅನುಸರಿಸಿದರು. ಪ್ರಬಂಧ ವಿಭಾಗಕ್ಕೆ ಸೇರಿದ್ದ ತೆಂಕಲೆ ಆಚಾರ್ಯರು ತಮಿಳ್ ಪಾಡಲ್‌ಗಳನ್ನು ಸಂಸ್ಕೃತ ಗ್ರಂಥಗಳಾದ ಮಹಾಭಾರತ, ರಾಮಾಯಣ ಹಾಗೂ ಗೀತೆಯ ಆಧಾರದ ಮೇಲೆ ಅರ್ಥೈಸಿದರು. ಅದೇರೀತಿ, ವಡಕಲೈ ಸಂಪ್ರದಾಯದ ಕುರಕೇಶ ಮತ್ತು ವೇದಾಂತ ದೇಶಿಕರು ತಿರುವಾಯ್ ಮೊಳಿಯ ಮೇಲೆ ಟೀಕೆ ಬರೆದರು. ತೆಂಕಲೈ ಆಚಾರ್ಯ ಪೀಳಿಗೆಗೆ ಸೇರಿದ್ದ ಪಿಳ್ಳೈಲೋಕಾಚಾರ್ಯರು ಸಂಸ್ಕೃತದಲ್ಲಿಯೂ, ವಡಕಲೈ ಸಂಪ್ರದಾಯಕ್ಕೆ ಸೇರಿದ್ದ ವೇದಾಂತ ದೇಶಿಕರು ತಮಿಳು ಭಾಷೆಯಲ್ಲಿ ಪಾಂಡಿತ್ಯ ಪಡೆದಿರಲಿಲ್ಲವೆಂದು ಭಾವಿಸುವುದು ತಪ್ಪು. ಈ ಎರಡು ಪಂಗಡಗಳ ನಡುವೆ ದ್ವೇಷವಿರಲಿಲ್ಲ. ಆದರೆ 200 ಅಥವಾ 300 ವರ್ಷಗಳಿಂದ ಈಚೆಗೆ ವೈಷಮ್ಯವು ಹುಟ್ಟಿಕೊಂಡಿದೆ. ರಾಮಾನುಜರ ನಂತರ ಅರ್ಥ ಭೇದಗಳಿದ್ದರೂ ಉದ್ದೇಶ ಒಂದೇ ಇರುತ್ತಿತ್ತು. ಇತ್ತೀಚೆಗೆ ಕಂಡುಬರುವ ದ್ವೇಷವಿರಲಿಲ್ಲ. ವೇದಾಂತ ದೇಶಿಕರ ಕಾಲದ ನಂತರವೇ ತತ್ವಗಳ ಬಗ್ಗೆ ಬಿನ್ನಾಭಿಪ್ರಾಯಗಳು ರೂಪುಗೊಂಡು ಎರಡು ಪ್ರತ್ಯೇಕ ಗುರುಪರಂಪರೆಗಳು ಅಸ್ತಿತ್ವಕ್ಕೆ ಬಂದವು. ಮನವಾಳ ಮಹಾಮುನಿಗಳ ನಂತರ ಈ ಒಡಕು ಕಂಡುಬಂದರೂ ಅಷ್ಟು ತೀವ್ರವಾಗಿರಲಿಲ್ಲ. ಮನವಾಳ ಮಹಾಮುನಿಗಳು ತಮ್ಮ ಗ್ರಂಥಗಳಲ್ಲಿ ತಮ್ಮ ಸಂಪ್ರದಾಯದ ಆಚಾರ್ಯರುಗಳನ್ನಲ್ಲದೆ, ನಡಾದೂರು ಅಮ್ಮಾಳ್, ಶೃತಪ್ರಕಾಶಿಕ ಭಟ್ಟರ್, ವೇದಾಂತದೇಶಿಕರು ಮತ್ತು ಅವರ ಮಕ್ಕಳಾದ ನೈನ ವರದಾಚಾರ್ಯರನ್ನು ಉದಹರಿಸಿದ್ದಾರೆ. ಅವರ ಕಾಲದಲ್ಲಿಯೂ ಕೂಡ ಈ ಭಿನ್ನತೆಯು ತೀವ್ರಗತಿಯನ್ನು ಹೊಂದಿದಂತೆ ಕಾಣುವುದಿಲ್ಲ. ಪಿಳ್ಳೈಲೋಕಾಚಾರ್ಯ ಅಥವಾ ವೇದಾಂತ ದೇಶಿಕರ ಕಾಲದಲ್ಲಿಯೇ ಈ ಭಿನ್ನತೆಯು ಉಂಟಾಯಿತೆಂದು ಸಾಮಾನ್ಯವಾಗಿ ತಳೆದಿರುವ ಅಭಿಪ್ರಾಯದಲ್ಲಿ ತಿರುಳಿಲ್ಲ. ರಾಮಾನುಜರ ತರುವಾಯ ಬೇರ್ಪಟ್ಟ ಪ್ರಬಂಧ ಹಾಗೂ ಶ್ರಿಭಾಷ್ಯ ಪರಂಪರೆಯ ಆಚಾರ್ಯ ಪೀಳಿಗೆ ಈ ರೀತಿ ಇವೆ :

ರಾಮಾನುಜರು (1017–1130)

ಪ್ರಬಂಧ

- ಭಟ್ಟರ್ (12 ಶ.)
- ನಂಜಿಯಾರ್ (,,)
- ನಂಪಿಳ್ಳೈ (13 ,,)
- ಪೆರಿಯ ಅಚ್ಚಾನ್‌ಪಿಳ್ಳೈ (,,)
- ನಡಕ್ಕುತಿರುವೀದಿಪಿಳ್ಳೈ (,,)
- ಪಿಳ್ಳೈಲೋಕಾಚಾರ್ಯ (-ಮತ್ತು 14)
- ಮನವಾಳ ಪೆರುಮಾಳ ನಾಯನಾರ್
- ತಿರುವಾಯ್ ಮೊಳಿಪಿಳ್ಳೈ
- ಮನವಾಳ ಮಹಾಮುನಿ (1370–1443)

ತ್ರಿಭಾಷ್ಯ

- ಕುರುಕೇಶ (12 ಶ.)
- ಎಂಗಳ್ ಆಳ್ವಾರ್ (,,)
- ನಡಾದೂರು ಅಮ್ಮಾಳ್ (,,)
- ಆತ್ರೇಯ ರಾಮಾನುಜ (13)
- ವೇದಾಂತದೇಶಿಕರು (1268-1369)
- ನೈನವರದಾಚಾರ್ಯ (14)

ಪ್ರಬಂಧ ಪೀಳಿಗೆಯ ಆಚಾರ್ಯರುಗಳು ತ್ರಿರಂಗದಲ್ಲಿ ವೆಲನಿಸ್ವಾಮಿ ಪೀಠವನ್ನು ಅಲಂಕರಿಸಿದರು. ಕಾಂಚಿವಡಕಲೈ ಸಂಪ್ರದಾಯದವರ ಕೇಂದ್ರವಾಗಿತ್ತು, ಕಡೆಯ ನಾಲ್ಕು ಆಚಾರ್ಯರುಗಳಾದ ನಡಾದೂರು ಅಮ್ಮಾಳ್, ಆತ್ರೇಯ ರಾಮಾನುಜ, ವೇದಾಂತದೇಶಿಕ ಮತ್ತು ನೈನವರದಾಚಾರ್ಯರು ತಮ್ಮ ಚಟುವಟಿಕೆಗಳನ್ನು ಕಾಂಚಿಯಲ್ಲಿಯೇ ಕೇಂದ್ರಿಕರಿಸಿದರು.

ರಾಮಾನುಜರ ಕಿರಿಯ ಸಹಪಾಠಿಗಳಾಗಿದ್ದ ಕುರುಕೇಶರು ಅವರ ನಂತರ ಶ್ರೀರಂಗದಲ್ಲಿ ಸ್ವಾಮಿ ಪೀಠವನ್ನಲಂಕರಿಸಿದರು. ವಿಷ್ಣುಸಹಸ್ರನಾಮದ ಮೇಲೆ ಟೀಕೆ, ರಂಗನಾಥ ಸ್ತೋತ್ರದ ರಚನೆ. ಇವೆರಡು ಅವರ ಮುಖ್ಯ ಗ್ರಂಥಗಳಾಗಿವೆ. ಎರಡನೇ ಗ್ರಂಥದಲ್ಲಿ ಕಂಚಿ ವರದರಾಜಸ್ವಾಮಿಯ ಉಲ್ಲೇಖವಿದೆ. ಕರಿಗಿರಿಯು ರಾಮಾನುಜರ ಪ್ರಿಯವಾದ ಕ್ಷೇತ್ರಸ್ಥಾನವಾಗಿತ್ತೆಂದು ಹೇಳಿದ್ದಾರೆ. 6000 ಅಥವಾ 'ಆರಾಯಿರಂ' ಎಂದು

ಕರೆಯಲಾಗಿರುವ ತಿರುವಾಯುವೊಳಿಯ ಮೊಟ್ಟಮೊದಲನೆಯ ಟೀಕೆಯನ್ನು ಕುರುಕೇಶರು ರಚಿಸಿದರು. ಭಟ್ಟರ ಶಿಷ್ಯರಾಗಿದ್ದ ನಂಜೀಯರ್ ಕೂಡಕಿರುವಾಯು ಮೊಳಿಗೆ 9000 ಟೀಕೆಯನ್ನು ಬರೆದರು. ಅವರ ಶಿಷ್ಯರಾಗಿದ್ದ ನಂಪಿಳ್ಳೆಯವರು ಉತ್ತಮ ಗ್ರಂಥಕರ್ತರು ಹಾಗೂ ವಿಚಾರಿಗಳು ಆಗಿದ್ದರು. ತಿರುವಾಯುವೊಳಿ ಯನ್ನು ಕುರಿತು ಅವರು ನಡೆಸಿದ ಚರ್ಚೆಯನ್ನು ಅವರ ಶಿಷ್ಯ ವಡಕ್ಕುಂ ತಿರುವೀದಿ ಪಿಳ್ಳೈ ಲಿಖಿತ ರೂಪದಲ್ಲಿ ತಂದರು. ನಂಪಿಳ್ಳೆಯವರು ಕೃತಿಯು ಈಡು ಅಥವಾ 36000 ಎಂದು ಶ್ರೀವೈಷ್ಣವರಲ್ಲಿ ಜನಪ್ರಿಯವಾಗಿದೆ. ಈ ಗ್ರಂಥದಲ್ಲಿ ಅವರ ಪಾಂಡಿತ್ಯ ಹಾಗೂ ಭಾಷಾಜ್ಞಾನದ ಪರಿಮಿತಿಯನ್ನು ಕಾಣಬಹುದು. ನಂಪಿಳ್ಳೈ ಯವರ ನಾಯಕತ್ವದಲ್ಲಿ ಅವರ ಶಿಷ್ಯರಾದ ಪೆರಿಯ ವಾಚಾನ್ ಪಿಳ್ಳೈ ಮತ್ತು ಪಿನ್ಬ ಳಗಿಯ ಪೆರುಮಾಳ್ ಜೀಯರ್ ಶ್ರೀವೈಷ್ಣವ ಧರ್ಮಕ್ಕೆ ಅದ್ವಿತೀಯ ಸೇವೆಸಲ್ಲಿಸಿ ದರು. ಎಲ್ಲ ಆಳ್ವಾರರುಗಳ 4000 ಪ್ರಬಂಧಗಳ ಮೇಲೆ ಸಮಗ್ರ ಟೀಕೆಯನ್ನು ಬರೆದರು. ಪಿನ್ಬಳಗಿಯ ಪೆರುಮಾಳ್ ಜೀಯರ್ ರಚಿಸಿದ ಗುರುಪರಂಪರೈ (ಆಚಾರ್ಯ ಪೀಳಿಗೆ) ಗ್ರಂಥದಲ್ಲಿ ಕಾಂಚಿಯ ವರದರಾಜಸ್ವಾಮಿ ದೇವಾಲಯಕ್ಕೆ ಅನೇಕ ಉಲ್ಲೇಖಗಳಿವೆ. ರಾಮಾನುಜರ ಬಾಲ್ಯಜೀವನವನ್ನು ಉದಹರಿಸಿದ್ದಾರೆ. ನಡಾದೂರು ಅಮ್ಮಾಳ್ 74 ಸಿಂಹಾಸನಾಧಿಪತಿಗಳಲ್ಲೊಬ್ಬರಾಗಿದ್ದರು ಮತ್ತು ರಾಮಾನುಜರ ಸೋದರಳಿಯ. ಎಂಗಳ್ ಆಳ್ವಾರರ ಶಿಷ್ಯರು. ತಮ್ಮ ಸ್ವಂತ ಊರಾದ ಕಾಂಚಿಯನ್ನು ತಮ್ಮ ವಾಸ ಹಾಗೂ ಕಾರ್ಯಕ್ಷೇತ್ರಕ್ಕಾಗಿ ಆರಿಸಿಕೊಂಡರು. ವರದರಾಜಸ್ವಾಮಿ ದೇವಸ್ಥಾನದ ಆವಾರದಲ್ಲಿ ಕ್ರಮವಾಗಿ ಶ್ರೀಭಾಷ್ಯದ ಮೇಲೆ ವ್ಯಾಖ್ಯೆ ನೀಡುತ್ತಿದ್ದರು. ಸೂಕ್ಷ್ಮ ಮತಿಯೆನಿಸಿಕೊಂಡಿದ್ದ ಸುದರ್ಶನಭಟ್ಟರು ಅವರ ಉಪನ್ಯಾಸಗಳನ್ನು 'ಶೃತಪ್ರಕಾಶಿಕ' ಎಂಬ ಗ್ರಂಥರೂಪದಲ್ಲಿ ಹೊರತಂದರು. ಶ್ರೀಭಾಷ್ಯವನ್ನು ಸುಲಭವಾಗಿ ತಿಳಿಯಲು ಇದೊಂದು ಉತ್ತಮ ಗ್ರಂಥವಾಗಿದೆ. ಅವರ ಇತರ ಗ್ರಂಥಗಳು ಈ ರೀತಿ ಇವೆ—ತತ್ವಸಾರಮ್, ಪ್ರಪನ್ನ ಪಾರಿಜಾತಮ್, ಪರದ್ವತಿ ಪಂಚಾಂಗಮ್ ತತ್ವಸಾರಮ್ ಎಂಬ ಗ್ರಂಥದಲ್ಲಿ ಉಪನಿಷತ್ತು ಬೋಧನೆ ಗಳನ್ನು ಸಂಗ್ರಹಿಸಿದ್ದಾರೆ. ಹಸ್ತಿಗಿರಿ ಅಥವಾ ವರದರಾಜಸ್ವಾಮಿ ದೇವಸ್ಥಾನವು 108 ದಿವ್ಯ ಕ್ಷೇತ್ರಗಳಲ್ಲಿಯ 3 ಪ್ರಮುಖ ಸ್ಥಾನಗಳಲ್ಲೊಂದಾಗಿದೆಯೆಂದು ಪರದ್ವತಿ ಪಂಚಾಂಗದಿಂದ ವ್ಯಕ್ತವಾಗುತ್ತದೆ. ಪ್ರಬಂಧ ವಿಭಾಗದ ಮಾರ್ಗದರ್ಶಕರೆಂದೆನಿಸಿ ಕೊಂಡ ಪಿಳ್ಳೈ ಲೋಕಾಚಾರ್ಯರು ವಡಕ್ಕು ತಿರುವೀದಿ ಪಿಳ್ಳೆಯರ ಪುತ್ರರು. ಸಾಂಪ್ರದಾಯಿಕ ಐತಿಹ್ಯದ ಪ್ರಕಾರ ಅವರು 1265ರಲ್ಲಿ ಜನ್ಮವೆತ್ತಿದರು. ಅವರು ಘನವಿದ್ವಾಂಸರೂ ವಿಸ್ತೃತ ಲೇಖಕರು ಆಗಿದ್ದರು. ಅವರು ರಚಿಸಿದ ಅನೇಕ ಗ್ರಂಥ ಗಳ ಪೈಕಿ, ತತ್ತ್ವತ್ರಯ, ಮುಮುಕ್ಷುಪದಿ, ಶ್ರೀವಚನ ಭೂಷಣ ಇವುಗಳಲ್ಲಿ ಪ್ರಪತ್ತಿಯ ಸ್ವರೂಪವನ್ನು ಕುರಿತು ಚರ್ಚಿಸಿದ್ದಾರೆ. ವಚನ ಭೂಷಣವು ಅವರ ಎರಡನೆ ಪ್ರಮುಖ ಗ್ರಂಥವಾಗಿದೆ. ಮಣಿಪ್ರವಾಳ ಶೈಲಿಯಲ್ಲಿ ಶ್ರೀಯ ಪುರಷಾ

ಕಾರ, ಕೈಂಕರ್ಯದ ಮಹತ್ವ, ಸ್ವಾಮಿ ದೃಢಭಕ್ತಿ, ಆಚಾರ್ಯಾಭಿಮಾನ, ಪ್ರಪತ್ತಿಯ ವ್ಯಾಖ್ಯೆ, ಅರ್ಚ ಅಥವಾ ಮೂರ್ತಿಯ ಮಹತ್ವ ಅನೇಕ ವಿಷಯಗಳ ನ್ನೊಳಗೊಂಡಿದೆ. ಇವು ತೆಂಕಲೈ ವಿಭಾಗದ ಆಧಾರ ಸ್ತಂಭಗಳಾಗಿವೆ. ಇವರ ಕಿರಿಯ ಸಹೋದರ ಆಳಗಿಯಮನವಾಳ ಪೆರುಮಾಳ್ ನಾಯನಾರ್ ಘನ ವಿದ್ವಾಂಸರು ಮತ್ತು ಟೀಕಾಕಾರರು. ಆಳ್ವಾರರ ಮಹಿಮೆ ಹಾಗೂ ಪ್ರಬಂಧ ಗಳನ್ನು ಜನಪ್ರಿಯಗೊಳಿಸುವುದರಲ್ಲಿ ಬಹಳ ಪಟ್ಟಿಗೆ ಹೆಣಗಾಡಿದರು. ತಮಿಳ್ ಪಾಡಲ್‌ಗಳಾದ ಅಮಲನಾದಿಪಿರಾನ್ ಮತ್ತು ಆಂಡಾಳ್ ತಿರುಪ್ಪಾವೈ ಗ್ರಂಥಗಳ ಮೇಲೆ ಟೀಕೆಯನ್ನು ಬರೆದಿದ್ದಾರೆ. ಆಚಾರ್ಯ ಹೃದಯಂ ಅವರ ಅಚ್ಚುಮೆಚ್ಚಿನ ಗ್ರಂಥವಾಗಿದೆ. ಅವರಲ್ಲಿ ನಮ್ಮಾಳ್ವಾರ್ ಅವರ ಮನಸ್ಸನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಆಳ್ವಾರರ ಹೃದಯ ವೈಶಾಲ್ಯತೆ. ಹಾಗೂ ಭಾಗವತ ಸಂಪ್ರದಾಯಂ ದಲ್ಲಿ ಕೀಳ್ಜಾತಿಯಲ್ಲಿ ಹುಟ್ಟಿದವರಾಗಿದ್ದರೂ ಮೇಲ್ಜಾತಿಯವರಿಂದ ಗೌರವ ಘನತೆ ಯನ್ನು ದೊರಕಿಸಿಕೊಂಡ ಅಂಶವನ್ನು ನಿದರ್ಶನಗಳೊಡನೆ ವರ್ಣಿಸಿದ್ದಾರೆ.

ವೇದಾಂತ ದೇಶಿಕರು 1268ರಲ್ಲಿ ಕಾಂಚಿಪುರದ ಬಡಾವಣೆ ತೂಪ್ಪಿಲ್ ಎಂಬಲ್ಲಿ ಜನ್ಮವೆತ್ತಿದರು ಮತ್ತು 100 ವರ್ಷ ತುಂಬು ಜೀವನವನ್ನು ಜೀವಿಸಿದ್ದರೆಂದು ಐತಿಹ್ಯಗಳಿಂದ ವ್ಯಕ್ತವಾಗುತ್ತದೆ. ಅವರ ತಂದೆ ಅನಂತ ಸೂರಿಯು ಆಚಾರ್ಯ ಪುರುಷರು; ಅವರ ತಾಯಿ ತೋತಾದ್ರಿಯಮ್ಮ ಆತ್ರೇಯರಾಮಾನುಜರ ಸಹೋ ದರಿ. ಆತ್ರೇಯರಾಮಾನುಜರು ಪ್ರಖ್ಯಾತ ವಿದ್ವಾಂಸರು. ವೆಂಕಟನಾಥರು ಅವರ ಬಳಿ ವ್ಯಾಸಂಗ ಮಾಡಿ ವೈಷ್ಣವ ಧಾರ್ಮಿಕ ಸಾಹಿತ್ಯದ ಎಲ್ಲ ವಿಭಾಗಗಳನ್ನು ಎಳೆ ವಯಸ್ಸಿನಲ್ಲಿಯೇ ಕರಗತ ಮಾಡಿಕೊಂಡರು. ವೇದಾಂತ ದೇಶಿಕರಿಗೆ ಅಪಾರ ವಾದ ಜ್ಞಾಪಕ ಶಕ್ತಿ ಹಾಗೂ ವಿವೇಚನಾ ಬುದ್ಧಿ ಇತ್ತು ಅವರ ಕಾವ್ಯ ಶಕ್ತಿ ಅಗಾದ ವಾಗಿತ್ತು. ತತ್ವಗಳನ್ನು ಅರ್ಥೈಸುವ ವರವನ್ನು ಪಡೆದಿದ್ದರು. ಇವೆಲ್ಲ ಗುಣಗಳು ಅವರನ್ನು ಒಬ್ಬ ನಿರರ್ಗಳ ಸಾಹಿತಿಯನ್ನಾಗಿ ರೂಪಿಸಿತು. ಅವರ ಗ್ರಂಥಗಳು ಶೈಲಿಯಲ್ಲಿ ಸೌಂದರ್ಯ ಹಾಗೂ ಆಧ್ಯಾತ್ಮಿಕ ಅಂತರ್ದೃಷ್ಟಿಯನ್ನು ಪಡೆದಿವೆ. ವೇದಾಂತ ದೇಶಿಕರು ಕವಿ, ವೇದಾಂತಿ, ನುರಿತ ಚರ್ಚೆಗಾರರು. ಕವಿತಾರ್ಕಿಕ ಸಿಂಹ, ಸರ್ವತಂತ್ರ ಸ್ವತಂತ್ರ ಬಿರುದುಗಳನ್ನು ಪಡೆದಿದ್ದರು. ವೈಜ್ಞಾನಿಕ ವಿಷಯಗಳಲ್ಲಿ ಸಾಕಷ್ಟು ತಿಳುವಳಿಕೆ ಹೊಂದಿದ್ದರು, ಅವರು ತಮ್ಮ ಎಳೆಯ ವಯಸ್ಸಿನಲ್ಲಿಯೇ ಆತ್ರೇಯ ರಾಮಾನುಜರ ಕೂಡ ವಡಾದೂರ್ ಅಮ್ಮಾಳ್ ಅವರ ವ್ಯಾಖ್ಯಾನಗಳನ್ನು ಕೇಳಲು ಹೋಗುತ್ತಿದ್ದರು. ಅವರು ಕ್ಲಿಷ್ಟ ಸಮಸ್ಯೆಗಳನ್ನು ಸುಲಭವಾಗಿ ಬಿಡಿಸುವ ಸಾಮರ್ಥ್ಯ ಪಡೆದಿದ್ದರು. ವೇದವೇದಾಂಗ ಮತ್ತು ಆಗಮಗಳಲ್ಲಿ ಅದ್ವಿತೀಯ ಪಾಂಡಿತ್ಯ ಹೊಂದಿದ್ದರು. ವಿದ್ಯಾರಣ್ಯರನ್ನು ಚರ್ಚೆಯಲ್ಲಿ ಸೋಲಿಸಿದರು. ವಿದ್ಯಾರಣ್ಯ ಹಾಗೂ ಅಕ್ಷಯ ಭೂಮಿ ನಡುವಿನ ವಾದದಲ್ಲಿ ಮಧ್ಯಸ್ಥಿಕೆವಹಿಸಿದ್ದರು.

ದೇಶಿಕರು ತಿರುಪೇಂದಿಪುರಂ, ಶ್ರೀಮುಷ್ಣಂ ಮತ್ತು ಶ್ರೀರಂಗಂ ಮೊದಲಾದ ದಿವ್ಯ ಕ್ಷೇತ್ರಗಳನ್ನು ಸಂದರ್ಶಿಸಿದರು. ಶ್ರೀರಂಗದಲ್ಲಿ ಅದ್ವೈತ ಗುರುಗಳಾಗಿದ್ದ ಕೃಷ್ಣಮಿಶ್ರರನ್ನು ವಾದದಲ್ಲಿ ಸೋಲಿಸಿ, ವೇದಾಂತಾಚಾರ್ಯ ಮತ್ತು ಸರ್ವತಂತ್ರ ಸ್ವತಂತ್ರ ಬಿರುದುಗಳನ್ನು ಗಳಿಸಿದರು. ಅವರು ಅತಿ ಪ್ರಖ್ಯಾತ ಗ್ರಂಥಗಳಾದ ಶತಧೂಷಣಿ, ಸಂಕಲ್ಪ ಸೂರ್ಯೋದಯ, ಯಾದವಾಭ್ಯುದಯಂ, ಯತಿರಾಜ ಸಪ್ತತಿ, ಶ್ರೀಸ್ತುತಿ, ಭೂಸ್ತುತಿಯನ್ನು ರಚಿಸಿದರು. ದೇಶಿಕರು ಶ್ರೀರಂಗದಲ್ಲಿ ತಂಗಿದ್ದಾಗ ಮುಸ್ಲಿಮ್ ಸೇನೆಗಳು ನಗರಕ್ಕೆ ಮುತ್ತಿಗೆ ಹಾಕಿದವು. ಅನೇಕ ಶ್ರೀ ವೈಷ್ಣವರು ಹೆದರಿ ಶ್ರೀರಂಗವನ್ನು ತ್ಯಜಿಸಿದರು. ಸಹಗಮನವನ್ನಾಚರಿಸಿದರು. ಪಿಳ್ಳೈ ಲೋಕಾಚಾರ್ಯರು ರಂಗನಾಥರ ವಿಗ್ರಹವನ್ನು ಅರಣ್ಯಕ್ಕೆ ಒಯ್ದು ರಕ್ಷಿಸಿದರು. ವೇದಾಂತ ದೇಶಿಕರು ಕೂಡ ಸತ್ಯಮಂಗಳದಲ್ಲಿ ಆಶ್ರಯ ಪಡೆಯಬೇಕಾಯ್ತು ಶ್ರೀಭಾಷ್ಯದ ಟೀಕಾಗ್ರಂಥವಾದ ಶೃತ ಪ್ರಕಾಶಿಕವನ್ನು ಮುಸ್ಲಿಮರ ದಾಳಿಯಿಂದ ರಕ್ಷಿಸಿದರು. ತಮ್ಮ ಕಡೆಯ ದಿನಗಳನ್ನು ಶ್ರೀರಂಗದಲ್ಲಿಯೇ ನಿರ್ಭೀತಿಯಿಂದ ಕಳೆದರು. ಆದರೂ ಕೂಡ, ಕಾಂಚಿಯೊಡನೆ ನಿಕಟ ಸಂಪರ್ಕವನ್ನಿಟ್ಟಿದ್ದರು. ವರದ ರಾಜಸ್ವಾಮಿಯಲ್ಲಿಟ್ಟಿದ್ದ ಅಭಿಮಾನವು ಅವರ ಗ್ರಂಥಗಳಿಂದ ವ್ಯಕ್ತವಾಗುತ್ತದೆ. ಕಾಂಚಿಯ ಅನೇಕ ದೇವಾಲಯಗಳನ್ನು ಕುರಿತು ಸ್ತೋತ್ರಗಳನ್ನು ರಚಿಸಿದರು. ವರದರಾಜಸ್ವಾಮಿಯಲ್ಲಿಟ್ಟಿದ್ದ ವಿಶೇಷ ಪ್ರೇಮವು ವರದರಾಜ ಪಂಚಶತ್ ಎಂಬ ಗ್ರಂಥದ ಮೂಲಕ ಹೊರಹೊಮ್ಮಿತು. ಈ ಗ್ರಂಥವು 50 ಶ್ಲೋಕಗಳನ್ನೊಳಗೊಂಡಿದೆ. ಭಕ್ತಾದಿಗಳಿಗೆ ಪ್ರಪತ್ತಿ ಪ್ರಾರ್ಥನೆಗೆ ಸಾಮಾಗ್ರಿ ಒದಗಿಸಿಕೊಡುತ್ತದೆ. ದೇಶಿಕರ ಆದರ್ಶಕೃತಿಗಳನ್ನು ಕೆಲವು ವಿಶೇಷ ಸಂದರ್ಭಗಳಲ್ಲಿ ಅನ್ನಲಾಗುತ್ತದೆ.

ವೇದಾಂತದೇಶಿಕರು ವಿಜಯನಗರದ ಅರಸರು ನೀಡಿದ ಆಹ್ವಾನವನ್ನು ತ್ಯಜಿಸಿದರು. ಅದೇ ಸಮಯದಲ್ಲಿ ಅವರು ವೈರಾಗ್ಯ ಪಂಚಕವೆಂಬ ಅತ್ಯುತ್ತಮ ಗ್ರಂಥವನ್ನು ರಚಿಸಿದರು. ಈ ಗ್ರಂಥವನ್ನು ವರದರಾಜಸ್ವಾಮಿಗೆ ಸಲ್ಲಿಸಿದ ಒಂದು ಹೃದಯಸ್ಪರ್ಶಿ ಸೇವೆಯೆಂದು ಎಣಿಸಬಹುದು. ಅವರ ತಮಿಳು ಗ್ರಂಥವಾದ ಅಡೈಕ್ಕಲಪತ್ತು ಕಾವ್ಯವು ಅರುಳಾಳ ಸ್ವಾಮಿಯ ಮೇಲಿನ ಸೀಮಾತೀತ ಪ್ರೀತಿಯನ್ನು ಒಳಗೊಂಡಿದೆ. ಭಕ್ತಿಯೋಗವು ನೀಡದಂತಹ ಮೋಕ್ಷವನ್ನು ಪ್ರಪತ್ತಿ ಮಾರ್ಗದಿಂದ ಸಾಧಿಸಿತೋರಿಸಿದರು. ಅಂತಿಮವಾಗಿ ಪೆರಳಾಳರ ಪಾದಗಳಲ್ಲಿ ಶರಣು ಪಡೆದು ಪ್ರಪತ್ತಿ ಮಾರ್ಗದ ಮೌಲ್ಯವನ್ನು ತೋರಿಸಿಕೊಟ್ಟರು. ದೃಷ್ಟಾಂತವಾಗಿ ಕಾಕಾಸುರನು ಶ್ರೀರಾಮನ ಪಾದಗಳಲ್ಲಿ ಬಂದು ಬಿದ್ದಂತೆ ತಾವು ವರದರಾಜ ಸ್ವಾಮಿಯ ಪಾದಕ್ಕೆ ಶರಣಾದರು. ಮತ್ತೊಂದು ಕಡೆ, ವಿಭೀಷಣ, ಗಜೇಂದ್ರ, ಮತ್ತು ದ್ರೌಪದಿಯು ಸ್ವಾಮಿಯಲ್ಲಿ ಸಂಪೂರ್ಣ ಶರಣಾಗತಿಯನ್ನು ಹೊಂದಿ ಮೋಕ್ಷವನ್ನು ಪಡೆದರು. ಪ್ರಪತ್ತಿ ಮಾರ್ಗದ ಮಹತ್ವವನ್ನು ಅರಿಯಲು ವೇದ,

ಆಳ್ವಾರರುಗಳ ಪ್ರಬಂಧ ಮತ್ತು ಆಚಾರ್ಯರ ಗ್ರಂಥಗಳನ್ನು ಅಭ್ಯಸಿಸಬೇಕೆಂದು ತಿಳಿಸಿ ಹೇಳಿದರು. ಅವರಿಗೆ ಸಂಸ್ಕೃತ ಹಾಗೂ ತಮಿಳು ಗ್ರಂಥಗಳ ಮೇಲಿದ್ದ ಅಪಾರ ಪಾಂಡಿತ್ಯವು ಅವರ ಗ್ರಂಥಗಳಿಂದ ವ್ಯಕ್ತವಾಗುತ್ತದೆ. ಇವರ ನಿಸ್ವಾರ್ಥ ಸೇವೆಯನ್ನನುಲಕ್ಷಿಸಿ ಶ್ರೀವೈಷ್ಣವರೆಲ್ಲರೂ ಜಾತಿ ಬೇಧವಿಲ್ಲದೆ ಶ್ರೀಭಾಷ್ಯವನ್ನು ಅಭ್ಯಾಸ ಮಾಡುವುದಕ್ಕೆ ಮೊದಲು ವೇದಾಂತ ದೇಶಿಕರ ಹೆಸರನ್ನು ಆದರಪೂರ್ವಕವಾಗಿ ಸ್ಮರಿಸುತ್ತಾರೆ. ಅವರಿಗೆ ಆಳ್ವಾರರ ತಮಿಳು ಪ್ರಬಂಧವುಕೂಡ ಅತಿಪ್ರಿಯವಾಗಿತ್ತು. ಅವರು ದ್ರಾವಿಡೋಪನಿಷತ್ತು ಸಾರದಲ್ಲಿ ಆಳ್ವಾರುಗಳು ಹಾಗೂ ತಮಿಳಂ ಪ್ರಭಂಧಕ್ಕೆ ಶಾತ್ತುಮುರೈಯನ್ನು ಸಲ್ಲಿಸಿದ್ದಾರೆ. ತೆಂಕಲೈ ಶ್ರೀವೈಷ್ಣವರಂ ವೇದಾಂತ ದೇಶಿಕರ ಬಗ್ಗೆ ಮೈತ್ರಿಯನ್ನು ತೋರ್ಪಡಿಸಲಿಲ್ಲವೆಂದೂ ಅವರನ್ನು ಬಹಿಷ್ಕರಿಸಿದರೆಂದೂ ವಡಕಲೈ ಶ್ರೀವೈಷ್ಣವ ಗುರುಪರಂಪರೆ ಗ್ರಂಥಗಳು ಅಪಾದಿಸಿವೆ. ಆದರೆ ಅಣ್ಣಂಗರಾಚಾರ್ಯ ಮೊದಲಾದ ತೆಂಕಲೈ ವಿಭಾಗದ ಶ್ರೀವೈಷ್ಣವ ವಿಧ್ವಾಂಸರು ಈ ಕಥೆಯು ಕಾಲ್ಪನಿಕವಾದದ್ದೆಂದೂ ಮತ್ತು ಸತ್ಯಕ್ಕೆ ದೂರವಾಗಿರುವುದೆಂದು ಹೇಳಿದ್ದಾರೆ. ಅವರ ಪ್ರಕಾರ ವೇದಾಂತ ದೇಶಿಕರ ಗ್ರಂಥಗಳಲ್ಲಿ ಅಥವಾ ಅವರ ಸಮಕಾಲೀನ ಗ್ರಂಥಗಳಲ್ಲಿ ಈ ವಿವಾದಕ್ಕೆ ಉಲ್ಲೇಖವಿಲ್ಲ. ಅವರ ಜೀವನ ಚರಿತ್ರೆಗೆ ಸಂಬಂಧಪಟ್ಟ ಮೊಟ್ಟಮೊದಲನೆಯ ಹಾಗೂ ನಂಬಲರ್ಹವಾದ ಆಚಾರ್ಯ ಚಂಪುವು ಅವರ ಹಿತೈಷಿಗಳೊಬ್ಬರಿಂದ ರಚಿಸಲ್ಪಟ್ಟು ಅದರಲ್ಲಿ ಈ ಕಥೆಯು ಉಲ್ಲೇಖವಿಲ್ಲ. ಶ್ರಿವೈಷ್ಣವರ ನಡುವೆ ಒಡಕುಂಟಾಗಿದ್ದರ ಬಗ್ಗೆ ಅಥವಾ ಜಾತಿ ವೈಷಮ್ಯವಿತ್ತೆಂದಾಗಲಿ ಈ ಗ್ರಂಥದಿಂದ ಕಂಡುಬರುವುದಿಲ್ಲ. ವೇದಾಂತ ದೇಶಿಕರ ಕಾಲದಲ್ಲಿ ವಡಕಲೈ, ತೆಂಕಲೈ ಎಂಬ ಪದಗಳೇ ಇರಲಿಲ್ಲವೆಂದೂ ಅವರನ್ನು ಎಲ್ಲರೂ ಉದಾತ್ತಭಾವದಿಂದ ಕಾಣುತ್ತಿದ್ದರೆಂದು ವ್ಯಕ್ತವಾಗುತ್ತದೆ. ತೆಂಕಲೈ ಆಚಾರ್ಯ ಪರಂಪರೆಯಲ್ಲಿ ಅವರನ್ನು ಕುರಿತು ಯಾವುದೇ ಅವಮಾನಗೊಳಿಸುವಂತಹ ಸನ್ನಿವೇಶಗಳನ್ನು ಉಲ್ಲೇಖಿಸಿಲ್ಲ. ತದ್ವಿರುದ್ಧ ಅವರಿಗೆ ಅಪಾರ ಗೌರವ ಸಲ್ಲಿಸಲಾಗಿದೆ. ವೇದಾಂತ ದೇಶಿಕರನ್ನು ಕುರಿತು ಪಿಳ್ಳೈ ಲೋಕಾಚಾರ್ಯರು ತನಿಯನ್‌ಗಳನ್ನು ರಚಿಸಿದ್ದಾರೆ. ಮನವಾಳ ಮುನಿಗಳಂ ಕೂಡ ತಮ್ಮ ಟೀಕಾ ಗ್ರಂಥದಲ್ಲಿ ವೇದಾಂತ ದೇಶಿಕರನ್ನು ಉದಹರಿಸಿದ್ದಾರೆ. ಮತ್ತು 'ಅಭ್ಯುಕ್ತರ್' ಎಂದು ಗೌರವಾದರವಾಗಿ ಸಂಬೋಧಿಸಿದ್ದಾರೆ. ಅವರ ನಂತರದ ಆಚಾರ್ಯರು ಪ್ರತಿವಾದಿ ಭಯಂಕರಂ ಅಣ್ಣನ್ ಮತ್ತು ದೊಡ್ಡಾಚಾರ್ಯರು ಕೂಡ ಅವರಿಗೆ ಗೌರವ ಸಲ್ಲಿಸಿದ್ದಾರೆ. 19 ನೇ ಶತಮಾನದಲ್ಲಿ ಜೀವಿಸಿದ್ದ. ಮೈಸೂರಿನ ಆನಂದಾಳ್ವಾರ್ (ತೆರಕಲೈಯರ ಪ್ರಖ್ಯಾತ ವ್ಯಕ್ತಿ) ಮತ್ತು ಇನ್ನೊಬ್ಬ ಘನ ವಿದ್ವಾಂಸರಾಗಿದ್ದ ಕಂನ್ನವಾಕ್ಕಂಸ್ವಾಮಿಗಳು ವೇದಾಂತ ದೇಶಿಕರ ವೈಭವವನ್ನು ಕೊಂಡಿದ್ದಾರೆ. ಅವರ ಕೃತಿಗಳನ್ನು ಉದಹರಿಸಿದ್ದಾರೆ. ಕುನ್ರವಾಕಂಸ್ವಾಮಿಗಳಂ ತತ್ವರತ್ನಾವಳಿಯಲ್ಲಿ "ಜಯತಿ ಭಗವಾನ್ ವೇದಾಂತಾರ್ಯ ತಾರ್ಕಿಕ ಕೇಸರಿ" ಎಂದು ಅವರನ್ನು ಗೌರವ

ದಿಂದ ಸಂಬೋಧಿಸಿದ್ದಾರೆ. ಪ್ರಪತ್ತಿಯಲ್ಲಿ ದೇಶಿಕರು ಲಕ್ಷ್ಮಿಗೆ ಕೊಟ್ಟ ಸ್ಥಾನವನ್ನು ಅನುಲಕ್ಷಿಸಿ ತೆಂಕಲೆಯರು ತಮ್ಮ ಪಂಥವನ್ನು ಅವರು ಪುಷ್ಟೀಕರಿಸಿದರೆಂದು ಕೂಡ ಸಾಧಿಸಿದ್ದಾರೆ. ಅಲ್ಲದೆ, ವೇದಾಂತ ದೇಶಿಕರಲ್ಲಿ ಅವರಿಟ್ಟಿದ್ದ ಪ್ರೀತಿ ಹಾಗೂ ಭಕ್ತಿಯ ಕಾರಣಕ್ಕಾಗಿಯೇ ತಮ್ಮ ಅಧೀನದಲ್ಲಿದ್ದ ಎಲ್ಲ ದೇವಸ್ಥಾನಗಳಲ್ಲಿಯೂ ವೇದಾಂತ ದೇಶಿಕನ ವಿಗ್ರಹವನ್ನು ಸ್ಥಾಪಿಸಿದ್ದಾರೆ. ಅವರಿಗಾಗಿ ಅನೇಕ ಉತ್ಸವಗಳನ್ನು ಕೂಡ ನಡೆಸಿಕೊಂಡು ಬಂದಿದ್ದಾರೆ. ದೇಶಿಕರು ಎರಡೂ ಪಂಥಗಳ ನಡುವೆ ಉದಾರ ಭಾವನೆಯನ್ನು ತಳೆದಿದ್ದರು. ವಡಕಲೈಯರು ಅಭಿಪ್ರಾಯ ಪಟ್ಟಂತೆ ಪಂಥ ವೈಷಮ್ಯವು ಕೇವಲ ಊಹಾಲೋಕಕ್ಕೆ ಸೀಮಿತವಾಗಿದೆ. ವೇದಾಂತ ದೇಶಿಕರು ತಮ್ಮ ಸಮಕಾಲೀನ ತೆಂಕಲೈ ಆಚಾರ್ಯರೊಡನೆ ಸೌಹಾರ್ದತೆಯಿಂದ ಇದ್ದರೆಂದೂ ಮತ್ತು ಅದೇ ಆಚಾರ್ಯರು ಅವರಲ್ಲಿ ಅಪಾರ ಗೌರವನ್ನು ಇಟ್ಟಿದ್ದರೆಂದು ಕಂಡು ಬರುತ್ತದೆ. ವೇದಾಂತ ದೇಶಿಕರು ತಮ್ಮ ಗ್ರಂಥಗಳಲ್ಲಿ ಶ್ರೀರಂಗದಲ್ಲಿಯ ಪ್ರಬಂಧ ವರ್ಗಕ್ಕೆ ಸೇರಿದ್ದ ಶ್ರೀವೈಷ್ಣವ ಪ್ರಭಾವಿ ವ್ಯಕ್ತಿಗಳಿಗೆ ಅಭಿನಂದನೆಯನ್ನು ಸಲ್ಲಿಸಿದ್ದಾರೆ. ಇದೇ ಕಾರಣಕ್ಕಾಗಿ ದೇಶಿಕರು ಮುಸ್ಲಿಮರ ದಾಳಿಯ ಕಾಲದಲ್ಲಿ ಶ್ರೀರಂಗಕ್ಕೆ ಹಿಂತಿರುಗಲು ಕಾತುರತೆಯನ್ನು ವ್ಯಕ್ತಪಡಿಸಿದರು. ಅವರು ಅಲ್ಲಿಯ ಆಚಾರ್ಯರಲ್ಲಿಟ್ಟಿದ್ದ ಅಪಾರ ಭಕ್ತಿ ಅಭಿಮಾನ ಮತ್ತು ಪ್ರೀತಿಯನ್ನು ತೋರಿಸುತ್ತದೆ. ಪ್ರಖ್ಯಾತ ಅಭಿಸ್ತವ ಗ್ರಂಥದ ಶ್ಲೋಕವೊಂದರಲ್ಲಿ ಶ್ರೀರಂಗಕ್ಕೆ ಹಿಂತಿರುಗಿ ಬರುವ ಉತ್ಕಟ ಅಪೇಕ್ಷೆಯನ್ನು ಸೂಚಿಸಿದರು. ರಂಗಾಚಾರ್ಯರೆಂಬ ವಿದ್ವಾಂಸರೊಬ್ಬರು ಅಭಿಪ್ರಾಯ ಪಟ್ಟಂತೆ ಶ್ರೀರಂಗದ ಕಲುಷಿತ ವಾತಾವರಣದಿಂದ ಬೇಸತ್ತು ದೇಶಿಕರು ಸತ್ಯಮಂಗಳಕ್ಕೆ ಹೋದರೆಂಬುದರಲ್ಲಿ ಸತ್ಯವಿಲ್ಲ. ಶ್ರೀರಂಗದಲ್ಲಿ ಪರಸ್ಪರ ಮೈತ್ರಿ ಭಾವವಿತ್ತು. ಪ್ರತಿಯೊಬ್ಬ ಆಚಾರ್ಯರು ತಮ್ಮ ಸಹಪಾಠಿಗಳ ಅಭ್ಯುದಯವನ್ನು ಕೋರುತ್ತಿದ್ದರು. ಪೂರ್ವಾಚಾರ್ಯರಾದ ನಮಪಿಳ್ಳೈ, ಪೆರಿಯ ವಾಚನ್ ಪಿಳ್ಳೈ, ಮತ್ತು ಪಿಳ್ಳೈಲೋಕಾಚಾರ್ಯರಲ್ಲಿ ದೇಶಿಕರು ಅಪಾರ ಆದರವನ್ನು ಇಟ್ಟಿದ್ದರು. ಅನೇಕ ಕಡೆಗಳಲ್ಲಿ ಅವರು ತಮ್ಮ ಗ್ರಂಥಗಳಲ್ಲಿ ಪೆರಿಯ ವಾಚನ್ ಪಿಳ್ಳೆಯ ಟೀಕಾ ಗ್ರಂಥದಿಂದ ಉದಹರಿಸಿದರಲ್ಲದೆ ಅವರನ್ನು ಪ್ರೀತಿಯಿಂದ "ಆಚಾರ್ಯರೆಂದು ಕರೆದಿದ್ದಾರೆ. ತತ್ತ್ವ ವಿಚಾರದಲ್ಲಿಯೂ ಕೂಡ ಎರಡೂ ಪಂಥಗಳ ನಡುವೆ ಪ್ರತಿಸ್ಪರ್ಧೆ ಅಥವಾ ವೈಷಮ್ಯವಾಗಲಿ ಇದ್ದಂತೆ ಕಾಣುವುದಿಲ್ಲ. ಇತ್ತೀಚಿನವರೆಗೂ ಎರಡೂ ಪಂಥಗಳ ನಡುವೆ ಹೊಂದಾಣಿಕೆ ಇದ್ದವು ಮತ್ತು 18ನೆಯ ಶತಮಾನದವರೆಗೆ ಈ ಒಮ್ಮತವನ್ನು ಕಾಣುತ್ತೇವೆ. ಪ್ರಬಂಧ ವಿಭಾಗವು ಜನಪ್ರಿಯವಾಗಲಿಕ್ಕೆ ಭಾಷಾ ಸೌಲಭ್ಯ ಒಂದು ಮುಖ್ಯ ಕಾರಣವನ್ನು ಒದಗಿಸಿಕೊಟ್ಟಿತು. ಜನಪ್ರಿಯವಾದ ತಮಿಳು ಭಾಷೆಯ ಉಪಯೋಗ, ತಮಿಳು ಆಳ್ವಾರರನ್ನು ಕುರಿತು ನಡೆಯುತ್ತಿದ್ದ ವಿಶೇಷ ಪೂಜೆ ಪುನಸ್ಕಾರಗಳು, ಪ್ರಬಂಧ ವಿಭಾಗದ ಜನಪ್ರಿಯತೆಯನ್ನು ಗಳಿಸಲು ಕಾರಣವೊದಗಿಸಿತು.

ವೇದಾಂತ ದೇಶಿಕರ ಪುತ್ರರಾದ ನಾಯಿನ ವರದಾಚಾರ್ಯ ಅಥವಾ ಕುಮಾರ ವೇದಾಂತಾಚಾರ್ಯರು ಕಾಂಚಿಯಲ್ಲಿಯೇ ಜೀವಿಸಿದ್ದರು. ತಮ್ಮ ವ್ಯಾಸಂಗವನ್ನು ಕೂಡ ಅಲ್ಲಿಯೇ ನಡೆಸಿದರು. ತಮ್ಮ ತಂದೆಯವರಲ್ಲಿಯೇ ಶಿಷ್ಯಾರ್ಜನೆ ಮಾಡಿ ಶ್ರೀಭಾಷ್ಯದ ಮೇಲೆ ವ್ಯಾಖ್ಯಾನಮಾಡಿದರು. ವಡಕಲೈ ಪೂರ್ವಾಚಾರ್ಯ ಪರಂಪರೆಯಲ್ಲಿ ಕಡೆಯುವರಾಗಿದ್ದ ಅವರು ಅಧಿಕರಣ ಸರಾವಳಿ ಎಂಬ ಟೀಕಾಗ್ರಂಥ ವನ್ನು ರಚಿಸಿದರು. ವೇದಾಂತ ದೇಶಿಕರ ಮತ್ತೊಬ್ಬ ಶಿಷ್ಯರಾಗಿದ್ದ ಬ್ರಹ್ಮ ತಂತ್ರಸ್ವತಂತ್ರ ಸ್ವಾಮಿಯು ತಮ್ಮ ಬಾಲ್ಯವನ್ನು ಕಂಚಿಯಲ್ಲಿ ಕಳೆದರು. ನಂತರ ತಿರುಪತಿಯಲ್ಲಿ ನೆಲಸಿದರು. ಅವರು ಕಾಂಚಿ ಮಠಾಧಿಪತಿಗಳಾಗಿದ್ದರೆಂದು 1359ರ ಶಾಸನವೊಂದರಿಂದ ವ್ಯಕ್ತವಾಗುತ್ತದೆ. ಈ ಮಠವು ಮೊದಲು ತಿರುಪತಿ ನಂತರ, ಮೇಲುಕೋಟೆಗೆ ವರ್ಗಾಯಿಸಲ್ಪಟ್ಟು ಪರಕಾಲ ಮಠವೆಂದು ಪ್ರಸಿದ್ಧಿ ಪಡೆಯಿತು. ಬ್ರಹ್ಮತಂತ್ರರು ಶ್ರೀಭಾಷ್ಯ ಪರಂಪರೆ ಹಾಗೂ ಭಗವತ್ ವಿಷಯ ಪರಂಪರೆಯಲ್ಲಿ ಉಲ್ಲೇಖಿಸಲ್ಪಟ್ಟಿದ್ದಾರೆ. ಕುಮಾರ ವೇದಾಂತಾಚಾರ್ಯರ ಶಿಷ್ಯರಾದ ಪ್ರತಿವಾದಿ ಭಯಂಕರಂ ಅಣ್ಣನ್ ಅವರು ಶ್ರೀಭಾಷ್ಯವನ್ನು ಅಭ್ಯಾಸಮಾಡಿ ಅದರ ಮೇಲೆ ಸುಖಪಕ್ಷೀಯಮ್ ಎಂಬ ಟೀಕೆಯನ್ನು ರಚಿಸಿದರು. ಆಗಿನ ಕಾಂಚಿಯಲ್ಲಿ ಜೀವಿಸಿದ್ದ ವಿದ್ವಾಂಸರ ಪೈಕಿ ಅವರೇ ಮೊದಲಿಗರು. ಅವರು ನಂತರ ಶ್ರೀರಂಗದಲ್ಲಿದ್ದು ಸಪ್ತತಿರತ್ನಮಾಲಿಕಾ ಎಂಬ 70 ಶ್ಲೋಕಗಳನ್ನೊಳಗೊಂಡ ಗ್ರಂಥವನ್ನು ವೇದಾಂತ ದೇಶಿಕರನ್ನು ಹೊಗಳಿ ಬರೆದರು. ನಂತರ ಮನವಾಳ ಮುನಿಗಳ ಕೈಕೆಳಗೆ ತಮಿಳು ಪ್ರಬಂಧದ 36,000 ಟೀಕೆಯನ್ನು ಅಭ್ಯಾಸ ಮಾಡಿದರು. ಮತ್ತು ಮನವಾಳ ಮುನಿಗಳ ಅಷ್ಟದಿಗ್ಗಜರಲ್ಲಿ ಒಬ್ಬರಾಗಿ ಮೆರೆದರು. ಮನವಾಳ ಮಹಾಮುನಿಗಳನ್ನು ಸ್ತುತಿಸಿ ಅನೇಕ ಶ್ಲೋಕಗಳನ್ನು ರಚಿಸಿದರು. ಅವನ್ನು ಇಂದಿಗೂ ತೆಂಗಲೆಯರು ಕ್ರಮವಾಗಿ ಅನ್ನುತ್ತಾರೆ. ಅಣ್ಣನ್ ಅವರು ಎರಡೂ ಪಂಥಗಳ ಪರಂಪರೆಯಲ್ಲಿ ಸಮನಾಗಿ ಮೆರೆದರು. ಅವರ ಪೀಳಿಗೆಗೆ ಸೇರಿದ್ದ ತೆಂಕಲೈ ಸಂಪ್ರದಾಯದವರು ಇಂದಿಗೂ ಕೂಡ ಕಾಂಚಿ ಹಾಗೂ ತಿರುಪತಿಯಲ್ಲಿ ಜೀವಿಸಿದ್ದಾರೆ.

ಮನವಾಳ ಮಹಾಮುನಿ : (1370–1443) ಮನವಾಳ ಮಹಾಮುನಿಗಳ ಜೀವನ ಚರಿತ್ರೆ ಹಾಗೂ ಆಧ್ಯಾತ್ಮಿಕ ಚರಿತ್ರೆಯು ಶ್ರೀ ವೈಷ್ಣವ ಇತಿಹಾಸದಲ್ಲಿ ಮತ್ತೊಂದು ಮೈಲಿಗಲ್ಲು. ಅವರು ರಚಿಸಿದ ಪ್ರಬಂಧಗಳು ಮತ್ತು ಸಂಸ್ಥೆಯನ್ನು ಕಟ್ಟುವ ಜಾಣತನವು ಶ್ರೀವೈಷ್ಣವ ಭಕ್ತಾದಿಗಳಲ್ಲಿ ಅಳಿಸಲಾರದ ಸವಿನೆನಪನ್ನು ಉಳಿಸಿದೆ. ಮನವಾಳರು ಆಳ್ವಾರ್ ತಿರುನಗರಿ (ನಮ್ಮಾಳ್ವಾರ್ ಜನ್ಮವೆತ್ತಿದ ಸ್ಥಳ) ಯಲ್ಲಿ ಜನ್ಮವೆತ್ತಿದರು. ಅವರು ಶ್ರೀಶೈಲೇಶ ಅಥವಾ ತಿರುವಾಯ್ ಮೊಳಿಪಿಳ್ಳೈ (ಅಂದರೆ ಪಿಳ್ಳೈ ಲೋಕಾಚಾರ್ಯರ ಶಿಷ್ಯರ) ಶಿಷ್ಯರು. ಸ್ವಲ್ಪ ಕಾಲ ಗೃಹಸ್ಥಾಶ್ರಮ ಜೀವನ ನಡೆಸಿ ಮುಂದೆ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಶ್ರೀರಂಗದಲ್ಲಿ

ತಮ್ಮದೇ ಆದ ಮಠದಲ್ಲಿ ನೆಲಸಿದರು. ಅವರನ್ನು ಪೆರಿಯ ಜೀಯರ್ ಎಂದು ಸಂಬೋಧಿಸಲಾಗಿತ್ತು. ಆಳ್ವಾರರು ಹಾಗೂ ರಾಮಾನುಜರ ಬೋಧನೆಗಳನ್ನು ಪ್ರಚುರಗೊಳಿಸಲು ಟೊಂಕಕಟ್ಟಿ ನಿಂತರು. ಮತ್ತು ಈ ಕಾರ್ಯದಲ್ಲಿ ಅವರು ತೋರಿಸಿದ ಪಾಂಡಿತ್ಯ ಮತ್ತು ನಿಷ್ಠೆಯು ಎಲ್ಲರ ಮನಸ್ಸನ್ನು ಸೆಳೆಯಿತು. ಅವರು ಶ್ರೀರಂಗದಲ್ಲಿ ನಡೆಸುತ್ತಿದ್ದ ವ್ಯಾಖ್ಯಾನಗಳೂ ಹಾಗೂ ಆಳ್ವಾರ್ ಪಾಡಲ್‌ಗಳ ವಿಶ್ಲೇಷಣೆಯು ಭಕ್ತಾದಿಗಳನ್ನು ಆಕರ್ಷಿಸಿತು. ಪ್ರಖ್ಯಾತರಾಗಿದ್ದ ಕೋಯಿಲ್ ಕಂದಾಡೈ ಅಣ್ಣನ್, ಪ್ರತಿವಾದಿ ಭಯಂಕರಂ ಅಣ್ಣನ್, ಎರುಂಬಿಯಪ್ಪ ಹಾಗೂ ವಾನಮಾಮಲೈ ಜೀಯರ್ ಅವರ ಶಿಷ್ಯರಾದರು. ಒಮ್ಮೆ ಮಾತ್ರ ಕಾಂಚಿಗೆ ಸಂದರ್ಶನವಿತ್ತು ಅಲ್ಲಿ ಒಂದು ವರ್ಷ ಕಾಲ ಕಡಾಂಬಿನಾಯನಾರ್ ಅವರಲ್ಲಿ ಶ್ರೀಭಾಷ್ಯ ಅಭ್ಯಾಸ ನಡೆಸಿದರು. ತಿರುವೇಲ ದೇವಸ್ಥಾನದಲ್ಲಿ ಅವರ ಭಾಷಣ ಮಾಲಿಕೆಯನ್ನು ಏರ್ಪಡಿಸಲಾಗಿತ್ತು. ವರದರಾಜಸ್ವಾಮಿಗೆ ಸೇವೆ ಸಲ್ಲಿಸುವ ರೂಪ ದಲ್ಲಿ ಅವರು "ದೇವರಾಜಮಂಗಳ"ವೆಂಬ 12 ಶ್ಲೋಕಗಳನ್ನೊಳಗೊಂಡ ಗ್ರಂಥ ವನ್ನು ರಚಿಸಿದರು. ವರದರಾಜಸ್ವಾಮಿಯ ಸಗುಣಗಳನ್ನು ಈ ಗ್ರಂಥದಲ್ಲಿ ಸ್ಮರಿಸಿದ್ದಾರೆ. ಆಳ್ವಾರ್ ದಿವ್ಯ ಪ್ರಬಂಧಗಳು ಮತ್ತು ಅವುಗಳ ಮೇಲಿನ ಟೀಕೆ-ಈಡು 36000 ಅವರ ಜನಪ್ರಿಯವಾದ ಇತರ ಕೊಡುಗೆಗಳು. ತಿರಟ್ಟು ಎಂಬ ಶಬ್ದಕೋಶವನ್ನು ಕೂಡ ರಚಿಸಿದರು. ಪಿಳ್ಳೈಲೋಕಾಚಾರ್ಯ ಮತ್ತು ಇತರ ಮಹಾನುಭಾವರ ಮೇಲೆ ವಿದ್ವತ್‌ಪೂರಿತವಾದ ಟೀಕಾಮಾಲೆಯನ್ನು ಬರೆದರು. ಶ್ರೀವಚನಭೂಷಣ, ತತ್ವತ್ರಯಮ್, ರಹಸ್ಯತ್ರಯಂಮ್, ಅಳಗಿಯ ಮನವಾಳ ನಾಯನಾರ್ ಅವರ ಆಚಾರ್ಯಹೃದಯಂ, ಅಮುದನಾರ್ ಅವರ ನೊಟ್ರೊಂ ದಾಡಿ ಮತ್ತು ಪೂರ್ವಾಚಾರ್ಯರನ್ನು ಜನಪ್ರಿಯಗೊಳಿಸಲು ತಿರಟ್ಟು ಅಥವಾ ಸಂಗ್ರಹಗಳನ್ನು ಕೂಡ ಬರೆದರು. ಈಡು ಪ್ರಮಾಣ ತಿರಟ್ಟು, ತತ್ವತ್ರಯ ಪ್ರಮಾಣ ತಿರಟ್ಟು, ಯತಿರಾಜವಿಂಶತಿ ಎಂಬ ಕಾವ್ಯಸಂಗ್ರಹವನ್ನು ರಾಮಾನುಜರ ಮಹಿಮೆಯನ್ನು ಕುರಿತು ರಚಿಸಿದ್ದಲ್ಲದೆ, ಉಪದೇಶ ರತ್ನಮಾಲಾ ಎಂಬ ಕಾವ್ಯ ವನ್ನು ಆಳ್ವಾರ್ ಹಾಗೂ ಆಚಾರ್ಯರ ಜೀವನವನ್ನು ಕುರಿತು ಬರೆದರು. ಈ ಕಾವ್ಯದ ಶೈಲಿಯು ನಿರರ್ಗಳವಾಗಿದೆ. ವರದರಾಜಸ್ವಾಮಿಯ ದೇವಾಲಯವನ್ನು ಕೂಡಿಕೊಂಡು ಪ್ರಖ್ಯಾತ ಶ್ರೀವೈಷ್ಣವ ದೇವಾಲಯಗಳಲ್ಲಿ ಪ್ರಮುಖ ಉತ್ಸವ ಕಾಲಗಳಲ್ಲಿ ಈ ಕಾವ್ಯವನ್ನು ಅನ್ನಲಾಗುತ್ತಿದೆ. 73 ಶ್ಲೋಕಗಳನ್ನು ಒಳಗೊಂಡಿ ರುವ ಈ ಕಾವ್ಯವು ಆಳ್ವಾರರ ಆಧ್ಯಾತ್ಮಿಕ ಮಹಿಮೆ, ಮೊದಲಾದ ಮಹತ್ವದ ವಿಷಯಗಳನ್ನು ಸ್ಮರಿಸಿದೆ. ಆಳ್ವಾರರ ಉದಾತ್ತ ಭಾವನೆಯ ತತ್ವಗಳನ್ನು ಮನ ವಾಳ ಮಹಾಮುನಿಗಳು ಜನಪ್ರಿಯಗೊಳಿಸಿದ ಮಹತ್ಕಾರ್ಯಕ್ಕಾಗಿ ಶ್ರೀವೈಷ್ಣವ ದೇವಸ್ಥಾನಗಳಲ್ಲಿ ಅವರಿಗೆ ವಿಶೇಷ ಮರ್ಯಾದೆಯನ್ನು ಸಲ್ಲಿಸಲಾಗುತ್ತಿದೆ.

ಪ್ರಬಂಧ ಪಠನಕ್ಕೆ ಮೊದಲು ಅವರ ಆಶೀರ್ವಾದ ರೂಪದ ಶ್ಲೋಕವನ್ನು ಅನ್ನಲಾಗುತ್ತದೆ.

ಮನವಾಳ ಮಹಾಮುನಿಗಳನ್ನು ರಾಮಾನುಜರ ಅವತಾರವೆಂದು ತಿಳಿದಿದ್ದರೆಂಬು ಅವರ ಶಿಷ್ಯರು ರಚಿಸಿದ ಗ್ರಂಥಗಳಿಂದ ವ್ಯಕ್ತವಾಗುತ್ತದೆ. ಎರುಂಬಿಯಪ್ಪನು ಬರೆದ ವರದವರ ಮುನಿಸರ್ಕವ್, ಯತೀಂದ್ರ ಪ್ರವಣ ಪ್ರಭಾವಂ ಗ್ರಂಥಗಳು ಪ್ರಮಾಣವನ್ನು ಒದಗಿಸಿ ಕೊಡುತ್ತವೆ. ವರದರಾಜಸ್ವಾಮಿ ದೇವಾಲಯದಲ್ಲಿ ಮನವಾಳ ಮಹಾಮುನಿಗೆ ಪ್ರತ್ಯೇಕ ಸನ್ನಿಧಿ ಇದೆ. ಮತ್ತು ಅಪ್ಪಿಸಿ (ಅಕ್ಟೋಬರ್–ನವಂಬರ್, ತಿಂಗಳಲ್ಲಿ ಅವರ ಜನ್ಮ ನಕ್ಷತ್ರ ದಿನವನ್ನು ಕೂಡಿಕೊಂಡು 10 ದಿನಗಳ ವರೆಗೆ ಉತ್ಸವಾದಿನಗಳು ನಡೆಯುತ್ತದೆ. ಮನವಾಳ ಮಹಾಮುನಿಗಳ ಸಂಘಟನಾ ಚಾತುರ್ಯದ ಕಾರಣ ಪ್ರಬಂಧ ವರ್ಗವು ಜನಪ್ರಿಯಗೊಂಡಿತು. ಶ್ರೀವೈಷ್ಣವ ಧರ್ಮವನ್ನು ಪ್ರಚುರಗೊಳಿಸಲು ಮುನಿಗಳು ಮೈಸೂರು ಸೀಮೆಯಿಂದ ಕನ್ಯಾಕುಮಾರಿಯವರೆಗೆ ಅಷ್ಟ ದಿಗ್ಗಜರನ್ನು ನೇಮಿಸಿದರು. ವನಮಾಮಲೈ ತಿರುಪತಿ ಮೊದಲಾದ ದಿವ್ಯ ಕ್ಷೇತ್ರಗಳಲ್ಲಿ ಅವರು ನೇಮಿಸಿದ ಅಷ್ಟ ದಿಗ್ಗಜರ ವಂಶಜರು ಇಂದಿಗೂ ಸಹ ತಮ್ಮ ಕರ್ತವ್ಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ವರವರಮುನಿಯ ತತ್ವಗಳನ್ನು ಜನಪ್ರಿಯ ಗೊಳಿಸಲು ಹೆಣಗಾಡಿದ್ದಾರೆ. ಅನೇಕ ವಿಷ್ಣು ದೇವಾಲಯಗಳು ಅವರ ಪ್ರಭಾವಕ್ಕೆ ಒಳಗಾಗಿದ್ದರಲ್ಲಿ ಆಶ್ಚರ್ಯ ವಿಲ್ಲ. ವರದರಾಜಸ್ವಾಮಿ ದೇವಾಲಯವು ಕೂಡ ಅದರಿಂದ ಹೊರತಾಗಿಲ್ಲ. ಮನವಾಳ ಮುನಿಗಳ ಬೋಧನೆಗಳು ಜನಪ್ರಿಯವಾಗಿದ್ದು 15 ಅಥವಾ 16 ನೆಯ ಶತಮಾನದ ವೇಳೆಗೆ ಅವರ ವಿಗ್ರಹವನ್ನು ವರದರಾಜಸ್ವಾಮಿ ದೇವಾಲಯದ ಆವಾರದಲ್ಲಿ ಪ್ರತಿಷ್ಠಿಸಲಾಯಿತು. 1555ರ ಶಾಸನವೊಂದರ ಪ್ರಕಾರ ಕೆಲವು ಆಚಾರ್ಯರು ಹಾಗೂ ಆಳ್ವಾರರುಗಳ ತಿರುನಕ್ಷತ್ರಗಳನ್ನು ಕೊಂಡಾಡಲು ದತ್ತಿಯನ್ನು ನೀಡಲಾಗಿತ್ತು. ಅವುಗಳಲ್ಲಿ ಪೆರಿಯ ಜೀಯರ್ ಅಥವಾ ಮನವಾಳ ಮುನಿಗಳ ನಕ್ಷತ್ರ (ಮೂಲ)ವನ್ನು ಕೂಡಿಕೊಂಡು ತಿರುಕ್ಕಚ್ಚಿ ನಂಬೀ (ಮೃಗಶಿರ), ಎಂಬೆರುಮಾನಾರ್ (ತೆರುವಾದರೈ) ಕೂರತ್ತಾಳ್ವಾರ್ (ಹಸ್ತ) ನಾಥಮುನಿ (ಅಮಶಮ್) ತಿರುನಕ್ಷತ್ರಗಳನ್ನು ಆಚರಿಸಲು ಅವಕಾಶ ನೀಡಲಾಗಿತ್ತು. ಮನವಾಳ ಮುನಿಗಳನ್ನು ನಾಥಮುನಿ ಹಾಗೂ ಎಂಬೆರುಮಾನಾರ್ ಅವರ ಸ್ಥಾನಕ್ಕೆ ಏರಿಸಲಾಯಿತು. 1582 ರ ಮತ್ತೊಂದು ಶಾಸನವು ಅವರ ತಿರುನಕ್ಷತ್ರವನ್ನು ಕೊಂಡಾಡಲು ಬಿಟ್ಟುಕೊಟ್ಟ ಮತ್ತೊಂದು ದತ್ತಿಯನ್ನು ಸ್ಮರಿಸುತ್ತದೆ. 1724ರ ಶಾಸನವೊಂದು ಪೆರಿಯ ಜೀಯರ್ ತದಿಯಾರಾದನೆ ನಿಮಿತ್ತವಾಗಿ ಅನೇಕ ಹಳ್ಳಿಗಳನ್ನು ಬಿಟ್ಟುಕೊಡಲಾಯಿತೆಂದು ಸೂಚಿಸಿದೆ. ಮನವಾಳ ಮುನಿಗಳೊಡನೆ ಪೂರ್ವಾಚಾರ್ಯ ಪರಂಪರೆಯು ಕೊನೆಗೊಳ್ಳುತ್ತದೆ. ಅವರ ನಂತರ ಜೀಯರ್

ಗಳು ಮತ್ತು ಅವರು ನಡೆಸುತ್ತಿದ್ದ ಸಂಸ್ಥೆ ಅಥವಾ ಮಠಗಳ ಇತಿಹಾಸದ ಮೇಲೆ, ಶ್ರೀವೈಷ್ಣವ ಧರ್ಮ ಪರಂಪರೆಯನ್ನು ತಿಳಿಯಬಹುದು. ಅಳಗಿಯ ಮನವಾಳ ಜೀಯರ್ ಮಠ, ವಣ್‌ಶಠಗೋಪ ಮಠ. ಮತ್ತು ವಾನಮಾಮಲೈ ಮಠ ಮೊದಲಾದ ಸಂಸ್ಥೆಗಳು ಶ್ರೀವೈಷ್ಣವ ಭಕ್ತಾದಿಗಳಿಗೆ ಸಂಘಟನಾ ಕಾರ್ಯದಲ್ಲಿ ಮಾರ್ಗದರ್ಶನ ನೀಡಲು ಸ್ಥಾಪಿಸಲ್ಪಟ್ಟವು. ಸ್ಥಳೀಯವಾಗಿಯೂ ಕೂಡ ರಾಮಾನುಜ ದರ್ಶನವನ್ನು ಜನಪ್ರಿಯಗೊಳಿಸಲು ಕಾಂಚಿಯಲ್ಲಿ ವರದರಾಜಸ್ವಾಮಿ ದೇವಸ್ಥಾನದ ಆವಾರದಲ್ಲಿ ಅನೇಕ ಮಠಗಳನ್ನು ಸ್ಥಾಪಿಸಲಾಯಿತು. ವಿಜಯನಗರದ ಅರಸರು ಕೂಡ ಈ ಅವಧಿಯಲ್ಲಿ ವಿಶೇಷ ಶ್ರದ್ಧೆ ವಹಿಸಿದಕಾರಣ ಶ್ರೀವೈಷ್ಣವ ಧರ್ಮವು ಹೆಚ್ಚು ಮುಂದುವರಿಯಲು ಸಾಧ್ಯವಾಯಿತು. ಮತ್ತೊಂದು ವಿಶೇಷವೆಂದರೆ ಮೂಲವರು ಆಳ್ವಾರರು ಹಾಗೂ ಆಚಾರ್ಯರನ್ನು ಕುರಿತು ಅನೇಕ ಉತ್ಸವಾದಿಗಳು ಪ್ರಾರಂಭಿಸಲ್ಪಟ್ಟವು. 16 ನೇ ಶತಮಾನದ ಶಾಸನಗಳಲ್ಲಿ ತಿರುಕಚ್ಚಿ ನಂಬಿ, ಕೂರತ್ತಾಳ್ವಾರ್ ಹಾಗೂ ಮನವಾಳ ಮಹಾಮುನಿಗಳಿಗೆ ಸಲ್ಲಿಸಿದ ಸೇವೆಗಳ ಉಲ್ಲೇಖವಿದೆ. ಈ ಯುಗವು ಶ್ರೀವೈಷ್ಣವ ಧರ್ಮದ ಸುವರ್ಣ ಯುಗವೆಂದು ಧಾರಾಳವಾಗಿ ಹೇಳಬಹುದು.

ಮನವಾಳ ಮಹಾಮುನಿಗಳ ನಂತರ ಕಂಚಿಯ ಪ್ರಮುಖ ಜೀಯರ್ ಆಗಿದ್ದ ಅಳಗಿಯ ಮನವಾಳ ಜೀಯರ್ 1420 ರಿಂದ 1468 ರವರೆಗೆ ಜೀವಿಸಿದ್ದರು. ಮತ್ತು ದೇವಸ್ಥಾನದ ವ್ಯವಹಾರಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದರು. 15ನೇ ಶತಮಾನದ ಅಂತ್ಯ ಹಾಗೂ 16ನೇ ಶತಮಾನದ ಆದಿ ಭಾಗದ ಶಾಸನಗಳು ಅವರ ಸೇವೆಯನ್ನು ಸ್ಮರಿಸಿವೆ. ಅಳಗಿಯ ಜೀಯರ್ ಹಾಗೂ ಅವರ ಶಿಷ್ಯ ಕಂಡಾಡೈ ರಾಮಾನುಜಯ್ಯನ್ ಅವರು ದೇವಸ್ಥಾನದ ವ್ಯವಹಾರದಲ್ಲಿ ವಿಶೇಷ ಪಾತ್ರ ವಹಿಸಿದ್ದರು. ಇವರಿಬ್ಬರೂ ಸಾಳುವ ನರಸಿಂಹನ ಸಮಕಾಲೀನರಾಗಿದ್ದರು. ವೆಂಕಟೇಶ್ವರ ಒಕ್ಕಲಿಗೆ ಸೇರಿದ್ದ ಸಾಳುವ ನರಸಿಂಹನು ರಾಮಾನುಜಯ್ಯರನ್ನು ತಿರುಪತಿ ಹಾಗೂ ರಾಮಾನುಜ ಕೂಟದ ಕಾರ್ಯಕರ್ತರನ್ನಾಗಿ ನೇಮಿಸಿದ್ದನು. ಅವರ ಸೇವೆಯ ವಿವರಗಳು ವರದರಾಜಸ್ವಾಮಿಯ ಶಿಲಾಶಾಸನಗಳಿಂದ ವ್ಯಕ್ತವಾಗುತ್ತದೆ. ಎರಡನೇ ಅಳಗಿಯ ಮನವಾಳ ಮುನಿಗಳು ಶ್ರೀಕಾರ್ಯಕರ್ತರಾಗಿ ಸದಾಶಿವರಾಯನ ಕಾಲದಲ್ಲಿ ಸೇವೆಸಲ್ಲಿಸಿದರು ಮತ್ತು 4 ವರ್ಷಗಳ ದತ್ತಿ ಬಿಟ್ಟರು. ಅವರು ತೊಂಡರಡಿಪ್ಪೊಡಿ ಆಳ್ವಾರ್ ಅವರ 10 ದಿವಸಗಳ ಉತ್ಸವ ಹಾಗೂ ಆಂಡಾಳ್ (ಸೂಡಿಕುಡುತ್ತನಾಚ್ಚಿಯಾರ್) ತಿರುವಧ್ಯಯನ ಉತ್ಸವಕ್ಕೆ ಈ ದತ್ತಿಯನ್ನು ಉಪಯೋಗಿಸಲಾಗಿತ್ತು. ಅಳಗಿಯ ಮನವಾಳ ಮುನಿಗಳ ಪೆರುಂತೋಪ್ಪು ಅಥವಾ ನಂದನವನಕ್ಕೆ ಆಡಿ, ಆವಣಿ, ಪುರಟ್ಟಾಸಿ, ಕಾರ್ತಿಗೈ, ಮಾಸಿ ಹಾಗು ವೈಯಾಸಿ ತಿಂಗಳುಗಳಲ್ಲಿ ಸ್ವಾಮಿಯು ಬಿಜಯಗೈದಾಗ ಅವರ ಸೇವೆಗೆಂದು

ದತ್ತಿಯನ್ನು ಬಿಟ್ಟರು. 1560 ರಲ್ಲಿ ಅಳಗಿಯ ಸಿಂಘರು (ನರಸಿಂಹ) ಮತ್ತು ತಿರುಪ್ಪಾಣಿ ಆಳ್ವಾರ್ ಅವರ ಉತ್ಸವಾದಿಗಳಿಗೆ ಬಿಟ್ಟುಕೊಟ್ಟ ಹಳ್ಳಿಯನ್ನು ಪೊಯ್ಗೈ ಪ್ಪಾಕ್ಕಮ್ ಅಥವಾ ಅಳಗಿಯ ಮನವಾಳಪುರಂ ಎಂದು ಕರೆಯಲಾಗಿತ್ತು. ಇದೇ ಜೀಯರ್ ದೇವಸ್ಥಾನದ ರಚನಾ ಕ್ರಮದಲ್ಲಿ ಅನೇಕ ಮಾರ್ಪಾಡುಗಳನ್ನು ಮಾಡಿದರು. ಅವರು ಉಭಯ ವೇದಾಂತ ಪ್ರದರ್ಶಕರು ಶ್ರೀಭಾಷ್ಯ ದುರಂಧರರು ಹಾಗೂ ಕಾಂಚಿಯ ಭೂಷಣಪ್ರಾಯರು ಆಗಿದ್ದರು.

ವನ್ ಶಠಗೋಪಜೀಯರ್ : ಅಹೋಬಿಲಮಠವೆಂದು ಮುಂದೆ ಪ್ರಸಿದ್ಧಿಗೆ ಬಂದ ವನ್‌ಶಠಗೋಪ ಮಠ ಮತ್ತು ಅದರ ಜೀಯರ್‌ಗಳು 15 ಮತ್ತು 16ನೇ ಶತಮಾನದಲ್ಲಿ ಅಪಾರ ಸೇವೆ ಸಲ್ಲಿಸಿದರು. ಈ ಮಠದ ಸಂಸ್ಥಾಪಕರಾಗಿದ್ದ ಆದಿವನ್ ಶಠಗೋಪಜೀಯರು ಅಲ್ಲಸಾನಿ ಪೆದ್ದಣನ ಗುರುವಾಗಿದ್ದು ಅವರನ್ನು ಕೃಷ್ಣದೇವನು ಆಮುಕ್ತಮಾಲ್ಯದ ಗ್ರಂಥದಲ್ಲಿ ಸ್ಮರಿಸಿದ್ದಾನೆ. ಆಂಧ್ರದಲ್ಲಿ ಅವರು ಶ್ರೀವೈಷ್ಣವ ಧರ್ಮ ಪ್ರಚಾರಕ್ಕೆ ಹೆಚ್ಚು ಶ್ರಮವಹಿಸಿದರು. ವರದರಾಜಸ್ವಾಮಿ ದೇವಸ್ಥಾನದ ಶಿಲಾಶಾಸನದ ಪ್ರಕಾರ ಶಠಗೋಪಪುರದಲ್ಲಿ ಅವರ ಹೆಸರಿನಲ್ಲಿ ಭೂದಾನ ಮಾಡಲಾಯಿತು. ಮೇಲುಕೋಟೆಯವರಾಗಿದ್ದ ಜೀಯರು ಕಾಂಚಿಯಲ್ಲಿ ಶಿಕ್ಷಣ ಪಡೆದರು. ಸ್ವಲ್ಪಕಾಲ ಗೃಹಸ್ಥಾಶ್ರಮವನ್ನನುಭವಿಸಿ, ಅಹೋಬಲ ಎಂಬಲ್ಲಿ ನರಸಿಂಹ ಸನ್ನಿಧಿಯಲ್ಲಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದರು. ಅವನ ನಂತರ ಶ್ರೀಮನ್ ನಾರಾಯಣ ಹಾಗೂ ಪರಾಂಕುಶ ಜೀಯರ್ ಅಧಿಕಾರವನ್ನು ವಹಿಸಿದ್ದರು.

ನಲ್ಲಾನ್ ಚಕ್ರವರ್ತಿ ಹಾಗೂ ತಲ್ಲಪಾಕ್ಕ ವಂಶಜರು : ಅಚ್ಯುತರಾಯನ ಶಿಲಾಶಾಸನಗಳು ಅನೇಕ ಶ್ರೀವೈಷ್ಣವ ಕುಟುಂಬಗಳನ್ನು ಉಲ್ಲೇಖಿಸಿವೆ. 1538ರ ಶಾಸನದ ಪ್ರಕಾರ ಅಚ್ಯುತರಾಯನ ಆಚಾರ್ಯಪುರುಷರಾದ ನಲ್ಲಾನ್‌ಚಕ್ರವರ್ತಿಯು ಕಾಂಚಿ ದೇವಸ್ಥಾನಕ್ಕೆ ನೀಡಿದ ದೇಣಿಗೆಯನ್ನು ಸ್ಮರಿಸಿದೆ. ಉತ್ತಮ ಗಾಯಕರು ಮತ್ತು ಕಾವ್ಯಗಾಯನದಲ್ಲಿ ನುರಿತವರು ಆಗಿದ್ದ ತಲ್ಲಪಾಕ್ಕ ವಂಶಜರು ನೂರಾರು ಭಕ್ತಿಕಾವ್ಯಗಳನ್ನು ರಚಿಸಿ ಶೃತಿಗೆ ಜೋಡಿಸಿ ತಿರುಪತಿ ವೆಂಕಟೇಶ್ವರ ದೇವರ ಮುಂದೆ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಅವರು ನಂದ ವೈದಿಕ ಬ್ರಾಹ್ಮಣರು ಮತ್ತು ಭಾರದ್ವಾಜ ಗೋತ್ರಜ್ಞರು. ಅಣ್ಣಮಾಚಾರ್ಯ ಅಥವಾ ಸಂಕೀರ್ತನಾಚಾರ್ಯ ಈ ವಂಶಕ್ಕೆ ಸೇರಿದ್ದರು. ಸಾಳುವ ನರಸಿಂಹ ಹಾಗೂ ಕೃಷ್ಣದೇವನ ಕಾಲದಲ್ಲಿ ಜೀವಿಸಿದ್ದರು. ಶ್ರೇಷ್ಠ ತೆಲುಗು ಕವಿ–ಮತ್ತು ಅನೇಕ ಕವನಗಳು ಮತ್ತು ಹಾಡುಗಳನ್ನು ರಚಿಸಿ ವೆಂಕಟೇಶ್ವರ ಸಾನ್ನಿಧ್ಯದಲ್ಲಿ ಹಾಡಿದರು. ಮೊದಲು ಸ್ಮಾರ್ತ ಬ್ರಾಹ್ಮಣರಾಗಿದ್ದು ನಂತರ ರಾಮಾನುಜ ಸಿದ್ಧಾಂತದ ಕಟ್ಟಾ ಅಭಿಮಾನಿಗಳಾಗಿದ್ದರು. ಅವರ ಕುಮಾರ ಪೆದ್ದ ಅಥವಾ ಪೆರಿಯ ತಿರುಮಲೈಯ್ಯಂಗಾರ್

ಮೊಮ್ಮಗ ಸಿರಿಯ ಅಥವಾ ಚಿನ್ನ ತಿರುಮಲಯ್ಯಂಗಾರ್ ಮತ್ತು ಮರಿಮೊಮ್ಮಗ ತಿರುವೆಂಗಳಪ್ಪಾರ್ ದೇಣಿಗೆಗಳನ್ನು ಕೊಟ್ಟಿರುವುದಾಗಿ ಸ್ಮರಿಸಿವೆ. ತಿರುಪತಿ ಶಾಸನ ಗಳು ಕೂಡ ಅವರ ಶ್ರೀಮಂತಿಕೆ ಹಾಗೂ ಉದಾರಸ್ವಭಾವವನ್ನು ಸ್ಮರಿಸಿವೆ. 1553ರ ಶಾಸನದ ಪ್ರಕಾರ ಪೆದ್ದ ತಿರುಮಲಯ್ಯಂಗಾರ್ಯರು ಹಾಗೂ ಅವರು ಮಕ್ಕಳು ಅರುಳಾಳರಸೇವೆ ಮತ್ತು ಉತ್ಸವಾದಿಗಳಿಗೆ ಯೋಗ್ಯ ವ್ಯವಸ್ಥೆಯನ್ನು ಮಾಡಿರುವುದಾಗಿ ತಿಳಿದುಬರುತ್ತದೆ. ಪೆದ್ದ ತಿರುಮಲಯ್ಯಂಗಾರ್ಯರು ಘನ ವಿದ್ವಾಂಸರು ಹಾಗೂ ತತ್ವಜ್ಞಾನಿಗಳು ಸಹ ಆಗಿದ್ದರು. ಅವರ ಮಗ ಚಿನ್ನ ತಿರುಮಲಯ್ಯಂಗಾರ್ಯರು ಕೂಡ ಉತ್ತಮ ಕೃತಿಗಳನ್ನು ರಚಿಸಿದ್ದಲ್ಲದೆ 'ಆಧ್ಯಾತ್ಮ ಸಂಕೀರ್ತನಲಕ್ಷಣಂ' ಎಂಬ ಕೀರ್ತನಾಕಾವ್ಯವನ್ನು ಬರೆದರು. ತಿರುಮಲೈ ಗೋವಿಂದ ರಾಜ ಹಾಗೂ ತಿರುಚ್ಚಾನೂರು ದೇವಾಲಯಗಳಿಗೆ ನೆರವು ನೀಡಿದರು. ತಿರುವೆಂಗಳ ಪ್ಪಾರ್ ಕೂಡ ವರದರಾಜಸ್ವಾಮಿಗೆ ಎರಡು ಗ್ರಾಮಗಳ ವರಮಾನವನ್ನು 1553 ರಲ್ಲಿ ಬಿಟ್ಟುಕೊಟ್ಟರು. ತೆಲುಗು ಭಾಷೆಯಲ್ಲಿ ಬಾಲಪ್ರಬೋಧಿನಿ ಅಥವಾ ಅಮರ ವನ್ನು ರಚಿಸಿದರು. ಅಣ್ಣಮಾಚಾರ್ಯರ ವಂಶಜರೆಂದು ಪ್ರಸ್ತಾವನೆಯಲ್ಲಿ ಹೇಳಿಕೊಂಡಿದ್ದಾರೆ.

ಪರಕಾಲ ಅಳಗಿಯ ಸಿಂಗರ್ : 1555ರ ಕಂಚಿಯ ಶಾಸನವು ತಿರುನಾರಾಯಣ ಪುರ ಪರಕಾಲ ಅಳಗಿಯಸಿಂಗರ್ (ಮುಡುಂಬೈ ಅಪ್ಪಿಳ್ಳೈ ಅಣ್ಣಾಮೈಯ್ಯಂಗಾರ್ಯರ ಮಕ್ಕಳು) ಅವರ ದೇಣಿಗೆಯನ್ನು ಸ್ಮರಿಸುತ್ತದೆ. ಪರಕಾಲ ಅಳಗಿಯ ಸಂಗರ್ ಅವರು ಮೇಲುಕೋಟೆಯ ಪರಕಾಲ ಮಠದ ಪೀಠಾಧಿಕಾರಿಗಳಾಗಿದ್ದರು. ಅವರ ತಂದೆಯೂ ಮುಡುಂಬಿ (ಪಿಳ್ಳೈಲೋಕಾಚಾರ್ಯರ ಗ್ರಾಮ) ಯವರು. ಈ ಶಾಸನದ ಪ್ರಕಾರ ಅಳಗಿಯ ಸಿಂಗರ್ ಅವರು ಎಲ್ಲ ಆಳ್ವಾರರು ಹಾಗೂ ಆಚಾರ್ಯಪುರುಷರ ಉತ್ಸವಾದಿಗಳಿಗೆ ಉದಾರ ದೇಣಿಗೆಯನ್ನು ನೀಡಿದರು.

ತಾತಾಚಾರ್ಯ ಪೀಳಿಗೆ

ತಾತಾಚಾರ್ಯ ವಂಶಜರು ಮತ್ತೊಂದು ಪ್ರಖ್ಯಾತ ಶ್ರೀವೈಷ್ಣವ ಪೀಳಿಗೆ ಯವರು. ಪ್ರಪನ್ನಮೃತಂ ಎಂಬ ಸಂಸ್ಕೃತ ಗ್ರಂಥದ ಪ್ರಕಾರ ಈ ವಂಶಜರು ರಾಮಾನುಜಗ ಸೋದರಮಾವ ತಿರುಮಲನಂಬಿ ಅಥವಾ ಶ್ರೀಶೈಲನಾಥರ ಪೀಳಿಗೆ ಯವರೆಂದೂ ತಿಳಿದು ಬರುತ್ತದೆ. ಈ ಗ್ರಂಥವನ್ನು ತಾತಾಚಾರ್ಯರ ಶಿಷ್ಯರಾದ ಅನಂತಾಚಾರ್ಯರು ರಚಿಸಿದರು. ಈ ವಂಶಜರ ಪೈಕಿ ಇಬ್ಬರು ಮಹಾವ್ಯಕ್ತಿಗಳು ರಾಮಾಯಣ ಗ್ರಂಥ ಪಾರಾಯಣದಲ್ಲಿ ನುರಿತವರಾಗಿದ್ದು ತಿರುಪತಿಯಿಂದ ಎಟ್ಟೂರು ಮಾರ್ಗವಾಗಿ ಹಂಪೆಗೆ ವಲಸೆ ಬಂದು ವಿಜಯನಗರದ ಅರಸರಲ್ಲಿ ಆಶ್ರಯ ಪಡೆದರು. ವಿಜಯನಗರದ ಅರಸರು ಅವರನ್ನು ವಿಶೇಷ ಗೌರವದಿಂದ ಕಾಣು

ತ್ತಿದ್ದರು. ಅವರ ಪೀಳಿಗೆಗೆ ಸೇರಿದ್ದ ಪಂಚಮತಭಂಜನಂ ತಾತಾಚಾರ್ಯರು ಹಾಗೂ ದೊಡ್ಡಯಾಚಾರ್ಯರು ರಾಮರಾಯ ಆಸ್ಥಾನದಲ್ಲಿ ಗೌರವಾನ್ವಿತ ವ್ಯಕ್ತಿಗಳಾಗಿದ್ದು ವಿಶಿಷ್ಟಾದ್ವೈತವನ್ನು ಪ್ರತಿಪಾದಿಸಿದರು. ಸೋಳಸಿಂಹಪುರದವರಾಗಿದ್ದ ದೊಡ್ಡಯಾಚಾರ್ಯರು ಚಂಡಮಾರುತಂ ಎಂಬ ಗ್ರಂಥವನ್ನು ರಚಿಸಿದರು. ಅಪ್ಪಯ್ಯದೀಕ್ಷಿತರ ಟೀಕೆಗಳನ್ನು ಅಲ್ಲಗಳೆದರು. ತಾಲಿಕೋಟೆಯ ಯುದ್ಧದ ನಂತರ ವಿಜಯನಗರದ ಆಶ್ರಯವನ್ನು ತೊರೆದು ತಾತಾಚಾರ್ಯ ವಂಶಜರು ಕಾಂಚಿಯಲ್ಲಿ ನೆಲೆಸಿದರು (1572). 1574ರ ಶಾಸನವೊಂದು ಮೊಟ್ಟ ಮೊದಲಿಗೆ ತಾತಾಚಾರ್ಯರ ವಂಶಜರನ್ನು ಸ್ಮರಿಸಿದೆ. ಅವರಲ್ಲಿ ಎಟ್ಟೂರು ಕುಮಾರ ತಿರುಮಲೈ ತಾತಾಚಾರ್ಯರು ಇಡೀ ವಂಶವಲ್ಲಿಯೇ ಪ್ರಖ್ಯಾತ ವ್ಯಕ್ತಿಗಳಾಗಿದ್ದರು. ಅವರ ಸೇವೆಯನ್ನು ಮಾರ್ಗಳಿ ತಿಂಗಳಿನಲ್ಲಿ ನಡೆಸಲಾಗುವ ತಿರುವಧ್ಯಯನ ಮತ್ತು ಶ್ರೀಜಯಂತಿ ಉತ್ಸವಾದಿಗಳಲ್ಲಿ ಸ್ಮರಿಸಲಾಗುವುದು. 1582ರ ಶಾಸನವೊಂದು ಅವರನ್ನು ಶ್ರೀಕಾರ್ಯ ಧುರಂದರ ಎಂದು ಸಂಬೋಧಿಸಿದೆ. ಈ ಶಾಸನವು ಬಹುಮುಖ್ಯವಾಗಿದ್ದು, ತಾತಾಚಾರ್ಯರು ಹಾಗೂ ವಿಜಯನಗರ ದಳವಾಯಿ, ದೇವಸ್ಥಾನದ ಬಂಡಾರತ್ತಾರ್ ಇವರುಗಳ ನಡುವೆ ವರದರಾಜಸ್ವಾಮಿ, ತಾಯಾರ್ ಪೆರುಂದೇವಿನಾಚ್ಚಿಯಾರ್, ಆಳ್ವಾರ್ ಹಾಗೂ ಆಚಾರ್ಯರ ಸೇವೆಗೆ ಸಂಬಂಧಿಸಿದೆ. ಮಣವಾಳ ಮುನಿಗಳ ಜನ್ಮ ನಕ್ಷತ್ರವನ್ನು ಕೊಂಡಾಡಬೇಕೆಂದು ಬಿನ್ನವಿಸಿರುವುದಲ್ಲದೆ, ಅವರಿಗೆ ಮುನಿಗಳಲ್ಲಿದ್ದ ಗೌರವವನ್ನು ಸೂಚಿಸುತ್ತದೆ. ಎರಡನೇಯ ವೆಂಕಟನ ಕಾಲದಲ್ಲಿ ಕುಮಾರ ತಾತಾಚಾರ್ಯರು ಗುರುಗಳಾಗಿದ್ದರು. ಮತ್ತು ಅವರ ದೇಣಿಗೆಗಳನ್ನು ಸ್ಮರಿಸುವ ವೆಂಕಟರಾಯನ ಅನೇಕ ಶಾಸನಗಳು ವರದರಾಜಸ್ವಾಮಿ ದೇವಾಲಯದಲ್ಲಿದೆ. ವೆಂಕಟರಾಯನು ತಾಯಾರ್ ಸನ್ನಿಧಿಗೆ ಕೃಷ್ಣದೇವನು ಕಟ್ಟಿಸಿದ ಪುಣ್ಯಕೋಟಿ ವಿಮಾನ ಮಾದರಿಯಲ್ಲಿ ವಿಮಾನವನ್ನು ನಿರ್ಮಿಸಿದನು. ತಾತಾಚಾರ್ಯರು ಪುಣ್ಯಕೋಟಿ ವಿಮಾನವನ್ನು ದುರಸ್ತುಮಾಡಿ ಚಿನ್ನದ ತಗಡನ್ನು ನವೀಕರಿಸಿದರು. ಅಲ್ಲದೆ ಅನೇಕ ಆಭರಣಗಳು ವಾಹನಗಳನ್ನು ದಾನವಾಗಿ ಕೊಟ್ಟದ್ದಲ್ಲದೆ, ಕಾಂಚಿಯಲ್ಲಿ ತಾತಸಮುದ್ರ (ಅಯ್ಯನ್ ಕುಳಂ) ಎಂಬ ಕೆರೆಯನ್ನು ಕಟ್ಟಿಸಿ ಅದರ ದಂಡೆಯ ಮೇಲೆ ಅಂಜನೇಯನಿಗಾಗಿ ಒಂದು ಸನ್ನಿಧಿಯನ್ನು ನಿರ್ಮಿಸಿದರು. ಹನುಮದ್ವಿಂಶತಿ ಸ್ತೋತ್ರವನ್ನು ರಚಿಸಿ ವರದರಾಜಸ್ವಾಮಿ ದೇವಸ್ಥಾನದ ಗೋಪುರದ ದ್ವಾರದಲ್ಲಿ ಕೆತ್ತಿಸಿದರು. ಎಟ್ಟೂರು ತಾತಾಚಾರ್ಯರ ಹೆಸರನ್ನು ಕೊನೆಬಾರಿಗೆ 1614ರಲ್ಲಿ ಕೇಳಿಬರುತ್ತೇವೆ. ಬಹುಶಃ ಅಲ್ಲಿಯ ಪೀಳಿಗೆ ತಾತಾಚಾರ್ಯರ ಆಳ್ವಿಕೆಯು ಮುಕ್ತಾಯವಾಯಿತೆಂದು ಹೇಳಬಹುದು. ಇಮ್ಮಡಿ ಕುಮಾರ ತಿರುಮಲೈ ತಾತಾಚಾರ್ಯರ ಹೆಸರು ಶ್ರೀಪೆರಂಬದೂರು 1634ರ ಶಾಸನವೊಂದರಿಂದ ಕೇಳಿಬರುತ್ತದೆ. ತೆನ್ನೇರಿ (ಕಾಂಚಿಯಿಂದ 15 ಮೈಲು ದೂರ) ಯ

ಎರಡು ಶಾಸನಗಳ ಪ್ರಕಾರ ಕೆರೆಯು ತೂಬನ್ನು ಕಟ್ಟಿಸಿದರು. ಆದರೆ ವರದರಾಜ ಸ್ವಾಮಿ ದೇವಸ್ಥಾನದ ಶಾಸನಗಳಲ್ಲಿ ಅವರ ಹೆಸರು ಕೇಳಿಬರುವುದಿಲ್ಲ. ವಿಜಯ ನಗರದ ಅಧಃಪತನದ ಕಾರಣ ತಾತಾಚಾರ್ಯರ ವಂಶಜರಿಗೆ ಇದ್ದ ಒಲವು ಕಡಿಮೆ ಯಾದರೂ, ಮೈಸೂರು ಅರಸರು ಶ್ರೀವೈಷ್ಣವ ಧರ್ಮಕ್ಕೆ ಪ್ರೋತ್ಸಾಹ ನೀಡಲು ಆರಂಭಿಸಿದರಲ್ಲದೆ, ತಾತಾಚಾರ್ಯ ಕುಟುಂಬದವರಿಗೆ ಶ್ರೀರಂಗಪಟ್ಟಣದಲ್ಲಿ ಆಶ್ರಯ ವಿತ್ತರು. ಈ ಅಂಶವು ಮೈಸೂರಿನಲ್ಲಿರುವ ಶಾಸನವೊಂದರಿಂದ ವ್ಯಕ್ತವಾಗುವು ದಲ್ಲದೆ, ಕೋಟಿಕನ್ಯಾದಾನಂ ಲಕ್ಷ್ಮೀಕುಮಾರ ತಾತಾಚಾರ್ಯರ ಪುತ್ರ, ಇಮ್ಮಡಿ ತಿರುಮಲತಾತಾಚಾರ್ಯರ ಪೌತ್ರ ವೆಂಕಟವರದಾಚಾರ್ಯರು ಮೈಸೂರಿಗೆ ದಯಮಾಡಿಸಿ ದೇವರಾಜ ಒಡೆಯರ ರಾಜಗುರುಗಳಾಗಿ ಶೋಭಿಸಿದರೆಂದು ತಿಳಿದು ಬರುತ್ತದೆ. 1663ರಲ್ಲಿ ಅವರು ಮೈಸೂರನ್ನು ಸೇರಿದರು. 1711ರ ನಂತರ ತಾತಾಚಾರ್ಯರ ವಂಶಜರು ಮೈಸೂರ ನಗರದಿಂದ ಕಾಂಚಿಗೆ ವಾಪಸ್ಸು ಬಂದರು ಮತ್ತು ತಾತಾಚಾರ್ಯರಿಗೆ ಅಗ್ರತಾಂಬೂಲ ಮರ್ಯಾದೆಯನ್ನು ನೀಡಲು ಪ್ರಾರಂಭವಾಯಿತು. ಆದರೆ ಈ ಮರ್ಯಾದೆಗೆ ಒಂದು ನಿಬಂಧನೆಯನ್ನು ವಿಧಿಸ ಲಾಯಿತು. ಇದಕ್ಕೆ ಅತ್ತಾನ್ ಜೀಯರ್ ಒಪ್ಪಂದವೆಂದು ಕರೆಯಲಾಗಿದೆ. ಇದರ ಪ್ರಕಾರ, ತೆಂಗಲೈ ಮತಸಂಪ್ರದಾಯ ಮತ್ತು ಆಚಾರ್ಯರಿಗೆ ಗೌರವ ಹಾಗೂ ತೆಂಗಲೆಯರ ತನಿಯನ್ "ಶ್ರೀಶೈಲೇಶ ದಯಾಪಾತ್ರ" ಇತರ ಶ್ರೀವೈಷ್ಣವ ಕ್ಷೇತ್ರಗಳಲ್ಲಿದ್ದಂತೆ ಅನ್ನುವುದು ಈ ಒಪ್ಪಂದಕ್ಕೆ ಎಟ್ಟೂರು ಇಮ್ಮಡಿ ಲಕ್ಷ್ಮಿ ಕುಮಾರ ತಾತಾಚಾರ್ಯರು ಸಹಿಹಾಕಿ ಅತ್ತಾನ್ ಜೀಯರ್ ವಂಶಜರ ಅವರ ವಶಕ್ಕೆ ಒಪ್ಪಿಸಲಾಯಿತು. ಯಾವ ಕಾರಣಕ್ಕಾಗಿ ಈ ಒಪ್ಪಂದವನ್ನು ಮಾಡಲಾಯಿತೆಂದು ತಿಳಿದುಬರುವುದಿಲ್ಲ. ತಾತಾಚಾರ್ಯರು ಆಗಿನ ಕ್ರಮದಲ್ಲಿ ತೀವ್ರ ಬದಲಾವಣೆ ಗಳನ್ನುಂಟು ಮಾಡುವರೇನೋ ಎಂಬ ಭೀತಿಯಿಂದ ತೆಂಗಲೆ ಸಂಪ್ರದಾಯಕ್ಕೆ ರಕ್ಷಾಕವಚವನ್ನು ಒದಗಿಸುವ ಸಲುವಾಗಿಯೋ ಎಂದು ಊಹಿಸಲು ಸಾಧ್ಯವಿಲ್ಲ. ತಾತಾಚಾರ್ಯರು ಆಗಿನ ವಿಧಿಗಳಿಗೆ ಪುರಸ್ಕಾರ ನೀಡಿದ್ದಲ್ಲದೆ ತೆಂಗಲೈ ಸಂಪ್ರ ದಾಯವು 18ನೇ ಶತಮಾನದ ಅಂತ್ಯಭಾಗದವರೆ ಅವ್ಯಾಹತವಾಗಿ ನಡೆದುಬಂದರೂ 19ನೇ ಶತಮಾನದಿಂದ ಈಚೆಗೆ ವಾದವಿವಾದಗಳು ಅತಿರೇಕದ ಮಟ್ಟವನ್ನು ತಲುಪಿತು.

ಈ ಮೇಲ್ಕಂಡ ವಂಶದವರಲ್ಲದೆ, ತೆಂಗಲೈ ಪಂಗಡಕ್ಕೆ ಸೇರಿದ್ದ ಪ್ರತಿವಾದಿ ಭಯಂಕರಂ ಪೀಳಿಗೆಗೆ ಸೇರಿದ್ದ ಶ್ರೀವತ್ಸಗೋತ್ರದ ಶ್ರೀರಂಗಾಚಾರ್ಯರು ಮತ್ತು ಅವರ ಮಕ್ಕಳಾದ ಗೋವಿಂದಾಚಾರ್ಯರು ತೀರ್ಥ ಹಾಗೂ ಅರುಳಪ್ಪಾಡು ಹಕ್ಕನ್ನು ಕಾಂಚಿಯಲ್ಲಿ ದೊರಕಿಸಿದ್ದರೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ. ಈ ವಂಶಜರು ಕಾಂಚಿ ಹಾಗೂ ತಿರುಪತಿ ಕ್ಷೇತ್ರಗಳಲ್ಲಿ ಶ್ರೀವೈಷ್ಣವ ಧರ್ಮ

ಪ್ರಚಾರ ಕಾರ್ಯದಲ್ಲಿ ಮಹತ್ವ ಪಾತ್ರ ವಹಿಸಿದರು. 1688ರಲ್ಲಿ ಔರಂಗಜೇಬನ ದಾಳಿಯು ಬಿಸಿಯು ಕಾಂಚಿಪುರಕ್ಕೆ ತಗುಲಿದ ಕಾರಣ, ವರದರಾಜಸ್ವಾಮಿ ಹಾಗೂ ದೇವಿಯರ ವಿಗ್ರಹಗಳನ್ನು ಉಡಯಾರ್ ಪಾಳ್ಯಂ ಎಂಬಲ್ಲಿ ಸುರಕ್ಷಿತವಾಗಿ ಇಡಲಾಗಿತ್ತು. 22 ವರ್ಷಗಳ ನಂತರ ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯ ಅತ್ತಾನ್ ತಿರುವೆಂಕಟರಾಮಾನುಜ ಜೀಯರ್ ಹಾಗೂ ಅವರ ಆದೇಶದ ಮೇರೆಗೆ ಈ ವಿಗ್ರಹಗಳನ್ನು ಲಾಲಾತೋದರಮಲ್ ಬಲಾತ್ಕಾರವನ್ನು ಉಪಯೋಗಿಸಿ ಕಾಂಚಿಗೆ ಪುನಃ ತಂದು ಪ್ರತಿಷ್ಠಿಸಿದನು. (1710) ಈ ವಿವರಗಳನ್ನು ತಾಯಾರ್ ಸನ್ನಿಧಿಯ ಶಾಸನವೊಂದರಲ್ಲಿ ಕೊಡಲಾಗಿದೆ. ಅತ್ತಾನ್ ಜೀಯರ್ ದೇವಸ್ಥಾನದ ಕಾರುಭಾರವನ್ನು ವಹಿಸಿಕೊಂಡರು ಮತ್ತು 1723ರ ವರೆಗೆ ಮುಂದುವರೆಸಿದರು. ಮತ್ತು ಅನುವಂಶಿಕವಾಗಿ ನಡೆದುಬರುವಂತೆ ತೋದರಮಲ್ಲನು ಏರ್ಪಾಡು ಮಾಡಿದನು. 1794 ರಲ್ಲಿ ಸರ್ಕಾರವು ದೇವಸ್ಥಾನದ ವಹಿವಾಟನ್ನು ವಹಿಸಿಕೊಂಡಿತು. ತೆಂಗಲೈ ಸಂಪ್ರದಾಯವನ್ನು ಕಾಂಚಿಯಲ್ಲಿ ಉಳಿಸಿಕೊಳ್ಳಲು ಅತ್ತಾನ್ ಜೀಯರ್ ಅಗ್ರಪಾತ್ರ ವಹಿಸಿದರು.

Dr. K. V. Raman ಅವರ "Sri Varada Raja Swami Temple of Kanchi" ಗ್ರಂಥವನ್ನು ಆಧಾರವಾಗಿಟ್ಟುಕೊಂಡು ಈ ಲೇಖನವನ್ನು ರೂಪಿಸಲಾಗಿದೆ. ಅವರಿಗೆ ನಾನು ಚಿರಋಣಿ.

ಹಯವದನ ನಾಟಕದ ಜನಪದ ರೂಪಕತಂತ್ರ

ಎಚ್. ಎಸ್. ಗಂಗಮ್ಮ

ಗಿರೀಶ್ ಕಾರ್ನಾಡರ 'ಹಯವದನ' ನಾಟಕವು ಅನೇಕ ವಿದ್ವಾಂಸರ ಚರ್ಚೆಗೆ ಒಳಗಾಗಿದೆ. ಹಯವದನ ನಾಟಕದ ಪ್ರಮುಖ ವಸ್ತು ಜನಪದರಲ್ಲಿ ಸ್ಥಾಯಿಯಾಗಿರುವಂತಹ ಕಾಮ. ಪ್ರತಿಯೊಂದು ಪ್ರಾಣಿಯಲ್ಲಿಯೂ ಸ್ಥಾಯಿಯಾಗಿರುವ ಕಾಮದ ಅಂಶವನ್ನು ಸಾಂಕೇತಿಕವಾಗಿ ನಿರೂಪಿಸಲು ಇಲ್ಲಿ ಪ್ರಯತ್ನಿಸಿದ್ದಾರೆ. ಇಂತಹ ಒಂದು ಪ್ರಯತ್ನಕ್ಕೆ ಮಾಧ್ಯಮವಾಗಿ ಅವರು ನಾಟಕವನ್ನು ಆಯ್ದುಕೊಂಡಿರುವುದು ಒಂದು ವಿಶೇಷ. ಈ ನಾಟಕದ ವಿಮರ್ಶೆಗೆ ತೊಡಗುವುದು ಈ ಲೇಖನದ ಉದ್ದೇಶವಲ್ಲ. ಈ ನಾಟಕವು ಜಾನಪದ ದೃಶ್ಯರೂಪವಾದ ಯಕ್ಷಗಾನವನ್ನು ಹೆಚ್ಚಾಗಿ ಹೋಲುತ್ತದೆ ಎಂಬುದನ್ನು ಪ್ರಸ್ತುತಪಡಿಸುವುದು ಈ ಲೇಖನದ ಮುಖ್ಯ ಉದ್ದೇಶ.

ಯಕ್ಷಗಾನದಲ್ಲಿ ಮೊದಲಿಗೆ ಭಾಗವತರು ಗಣಸ್ತುತಿಯನ್ನು ಮಾಡುವಂತೆ ಹಯವದನ ನಾಟಕದಲ್ಲಿಯೂ ಗಣಸ್ತುತಿ ಬಂದಿದೆ.

> **ಗಜವದನ ಹೇರಂಭಾ**
> **ವಿಜಯಧ್ವಜ ಶತರವಿಪ್ರತಿಭಾ**
>
> **ಏಕದಂತ ವೈಕಲ್ಯಾಂತಾ**
> **ಋದ್ಧಿ-ಸಿದ್ಧಿದ್ವಯರ ಕಾಂತಾ**
> **ಭರತ ಸೃಷ್ಟಿಗಾಧಾರ ಸ್ತಂಭಾ ॥**
>
> **ಮೂಷಕ ವಾಹನ ಸರ್ವಭೂಷಾ**
> **ನಿನ್ನ ನೆನೆದು ಶ್ರೀಗಣೇಶಾ**
> **ಮಾಡುವೆವೊ ನಾಟಕಕಾರಂಭಾ ॥.**

ಯಕ್ಷಗಾನದಲ್ಲಿ ಭಾಗವತನಾದವನು ನಾಟಕದಲ್ಲಿ ಬರುವ ಪಾತ್ರಗಳ ಪರಿಚಯವನ್ನು ಪ್ರೇಕ್ಷಕ ಸಮುದಾಯಕ್ಕೆ ಪರಿಚಯ ಮಾಡಿಸಿಕೊಡುವುದರಲ್ಲಿ ಕಾರ್ಯನಿರತನಾಗಿರುತ್ತಾನೆ. ಅದೇ ರೀತಿ ಹಯವದನ ನಾಟಕದಲ್ಲಿಯೂ ಭಾಗವತನೇ ಪಾತ್ರ ಪರಿಚಯ ಮಾಡಿಕೊಡುತ್ತಾನೆ. ಧರ್ಮಪುರ ನಗರ. ಈ ನಗರದಲ್ಲಿಯ ಇಬ್ಬರು ಯುವಕರು ಈ ನಾಟಕದ ನಾಯಕರು. ಒಬ್ಬನ ಹೆಸರು ದೇವದತ್ತ. ಇವನು ರೂಪದಲ್ಲಿ ಸುಂದರನಾಗಿಯೂ, ವರ್ಣದಲ್ಲಿ ಬೆಳ್ಳಗಾಗಿಯೂ ಶರೀರಯಷ್ಟಿಯಲ್ಲಿ

ತೆಳ್ಳಗಾಗಿಯೂ, ವಿದ್ಯೆಯಲ್ಲಿ ನಿಸ್ಸೀಮನಾಗಿಯೂ ಇರುವ ಈ ಯುವಕ ವಿಪ್ರವರ್ಯ ನಾದ ವಿದ್ಯಾಸಾಗರನ ಏಕಮೇವ ಪುತ್ರ. ತರ್ಕದಲ್ಲಿ ಪ್ರಕಾಂಡ ಪಂಡಿತರನ್ನೂ ಕಾವ್ಯಸ್ಪರ್ಧೆಯಲ್ಲಿ ಕಲಾಪಂಡಿತರನ್ನೂ ಎದುರಿಸಿ ದಿಂಡುಗೆಡೆದ ಇವನಂಥ ಇನ್ನೋರ್ವನನ್ನು ರಾಜ್ಯದಲ್ಲೇ ಯಾರೂ ಕಂಡರಿಯರು. ಇನ್ನೊಬ್ಬನ ಹೆಸರು ಕಪಿಲ. ಬಂಡಿಯ ಗಾಲಿಗೆ ಕೀಲು ಇರುವಂತೆ ರಾಜ್ಯದ ಶಸ್ತ್ರಾಗಾರಕ್ಕೆ ಆಧಾರವಾಗಿರುವ ಕಮ್ಮಾರನಾದ ಲೋಹಿತನ ಪುತ್ರ. ವರ್ಣದಲ್ಲಿ ಮೇಘಶ್ಯಾಮ. ರೂಪದಲ್ಲಿ ಸಾಮಾನ್ಯ. ಆದರೆ ಮನೆಯ ಕಸುಬಿನಲ್ಲಿ ಮೈಯ ಕಸುವಿನಲ್ಲಿ, ಆಟದಲ್ಲಿ, ಓಟದಲ್ಲಿ, ಮೇಲಾಟದಲ್ಲಿ, ಕೋಲಾಟದಲ್ಲಿ, ಬೇಟೆಯಲ್ಲಿ ಇವನಿಗೆ ಸರಿಸಾಟಿ ಯಾರೂ ಇಲ್ಲ. ಇವರಿಬ್ಬರೂ ಸ್ನೇಹಿತರು. ಇವರ ಸ್ನೇಹವನ್ನು ನೋಡಿದವರು ಇವರನ್ನು ರಾಮ –ಲಕ್ಷ್ಮಣ, ಕೃಷ್ಣ–ಬಲರಾಮ, ಲವ–ಕುಶ ಎಂದು ಕರೆಯುತ್ತಿದ್ದರು. ಇಲ್ಲಿ ಉಚ್ಚ ಕುಲದವನಾದ ಬ್ರಾಹ್ಮಣನಿಗೂ ನೀಚ ಕುಲದವನಾದ ಶೂದ್ರನಿಗೂ ಇರುವ ಸ್ನೇಹ ಜನಪದ ಆಶಯವಾಗಿದೆ.

ಯಕ್ಷಗಾನದಂತೆ ಇಲ್ಲಿಯ ಪಾತ್ರಗಳು ಆಟವನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಬೇಕಾಗುವ ನಿರ್ದೇಶನವನ್ನು ಭಾಗವತನಿಂದಲೇ ಪಡೆಯುತ್ತಾರೆ. ನಟನು ಮೊದಲಿಗೆ ಹಯವದನನನ್ನು ನೋಡಿ ಹೆದರಿಕೊಂಡು ಭಾಗವತರೇ ಭಾಗ ವತರೇ ಎಂದು ಅರಚುತ್ತಾ ಬಂದಾಗ ಭಾಗವತರು ಏನಿದು ಹೀಗೆ ಹುಚ್ಚಾಪಟ್ಟೆ ವರ್ತನೆ! ಅದೂ ರಸಿಕರ ಎದುರಿಗೆ? ರಂಗಭೂಮಿಯ ಪಾವಿತ್ರ್ಯ ಕೆಡಿಸಿ, ಎಂದು ಕೇಳುವುದನ್ನು ನೋಡಿದಾಗ ರಂಗಭೂಮಿಯ ಪಾವಿತ್ರ್ಯವನ್ನು ಕೆಡಿಸಬಾರದೆಂಬ ಪ್ರಜ್ಞೆ ಹಯವದನ ನಾಟಕದ ಭಾಗವತನಿಗಿದೆ.

ಭಯಾನಕವಾದ ಪಾತ್ರವನ್ನು ಒಮ್ಮೆಲೇ ರಂಗಭೂಮಿಯ ಮೇಲೆ ಬರಗೊಡು ವುದು ಜನಪದ ನಾಟಕಗಳಲ್ಲಿ ಇಲ್ಲ. ಹಾಗೆಯೇ ಹಯವದನ. ನಾಟಕದಲ್ಲಿ ಹಯ ವದನನನ್ನು ರಂಗಭೂಮಿಗೆ ಒಮ್ಮೆಲೆ ಬರಗೊಡುವುದಿಲ್ಲ. ಮೊದಲಿಗೆ ಬಿಕ್ಕಿ ಬಿಕ್ಕಿ ಅಳುತ್ತಿರುವುದಷ್ಟೇ ಕೇಳಿಬರುತ್ತದೆ. ತೆರೆಹಿಡಿದವರು ತೆರೆಯನ್ನು ಸ್ವಲ್ಪ ಇಳಿಸು ತ್ತಾರೆ. ಆಗ ಹಯವದನ ಮುಖದ ಮೇಲೆ ಒಂದು ಬಿಳಿಯ ಮುಸುಕು ಹಾಕಿ ನಿಂತಿರುತ್ತಾನೆ. ಭಾಗವತ ಮತ್ತೆ ಸನ್ನೆ ಮಾಡಿದಾಗ ಆ ಮುಸುಕನ್ನು ತೆಗೆಯುತ್ತಾನೆ. ಆಗ ಹಯವದನನ ಕುದುರೆಮುಖ ಕಾಣಿಸುತ್ತದೆ.

ಭಾಗವತನು ಹಯವದನನನ್ನು ಈ ರೀತಿ ತಲೆಬರಲು ಕಾರಣವೇನೆಂದು ಕೇಳಿದಾಗ ಹಯವದನ ತನ್ನ ಕಥೆಯನ್ನು ಹೇಳುತ್ತಾನೆ. ಇದು ಜನಪದ ಕಥೆಯಂತೇ ಇದೆ. "ನನ್ನ ತಾಯಿ ಕರ್ಣಾಟಕ ದೇಶದ ರಾಜಪುತ್ರಿ. ಬಹಳ ಸುಂದರಿ. ಅವಳು

ವಯಸ್ಸಿಗೆ ಬಂದಾಗ ಅವಳ ತಂದೆ ಒಂದು ಸ್ವಯಂವರ ಏರ್ಪಡಿಸಿದ. ದೇಶದೇಶದ ರಾಜಪುತ್ರರೆಲ್ಲಾ ಬಂದರು. ಆದರೆ ಅವಳಿಗೆ ಮಾತ್ರ ಯಾರೂ ಹಿಡಿಸಲಿಲ್ಲ. ಕೊನೆಗೆ ಅರಬ್ಬೀ ದೇಶದ ರಾಜಪುತ್ರ ಬಂದ. ಬಿಳಿಯ ಕುದುರೆಯನ್ನೇರಿ ಬಂದ. ಅವನನ್ನು ನೋಡಿದ ಕೂಡಲೇ ತಾಯಿ ಮೂರ್ಛೆ ಬಂದು ಬಿದ್ದು ಬಿಟ್ಟಳು. ಅಂತೂ ಇವನೇ ಇವಳ ಮನಸ್ಸಿಗೆ ಬಂದ ಎಂದು ಮದುವೆಯ ಸಿದ್ಧತೆ ಮಾಡಿದ. ಆದರೆ ಮೂರ್ಛೆ ತಿಳಿದೆದ್ದ ಕೂಡಲೇ ಆಕೆ ತಾನು ಮದುವೆಯಾದರೆ ಆ ಬಿಳಿಯ ಕುದುರೆಯನ್ನೇ ಆಗುವುದು ಎಂದು ಹೇಳಿದಳು. ಬೇಡವೆಂದು ಎಷ್ಟು ಹೇಳಿದರೂ ಆಕೆ ಕೇಳಲಿಲ್ಲ. ಕೊನೆಗೆ ಅವಳಿಗೂ ಕುದುರೆಗೂ ವಿವಾಹಮಾಡಿದರು. ಹದಿನೈದು ವರ್ಷ ಸಂಸಾರ ಮಾಡಿದ ಮೇಲೆ ಒಂದು ದಿನ ಎದ್ದು ನೋಡುತ್ತಾಳೆ. ಕುದುರೆಯೇ ಇಲ್ಲ. ಅದರ ಸ್ಥಳದಲ್ಲಿ ಒಬ್ಬ ಗಂಧರ್ವ ನಿಂತಿದ್ದ. ಆ ಗಂಧರ್ವ ಕುಬೇರನ ಶಾಪದಿಂದ ಕುದುರೆಯಾಗಿ ಹುಟ್ಟಿದ್ದನಂತೆ. ಹದಿನೈದು ವರ್ಷ ಮನುಷ್ಯ ಪ್ರೀತಿ ಸಿಕ್ಕಿ ಮುಕ್ತನಾಗಿದ್ದ. ಶಾಪಮುಕ್ತನಾದ ಅವನು ತಿರುಗಿ ಇಂದ್ರಸಭೆಗೆ ಹೊರಟ. ಸಭೆಗೆ ತನ್ನ ಹೆಂಡತಿಗೂ ಬಾ ಎಂದ. ಆದರೆ ಅವಳು ಒಪ್ಪಲಿಲ್ಲ ನೀನು ಮೊದಲಿನ ಹಾಗೆ ಕುದುರೆಯ ರೂಪದಲ್ಲಿ ಉಳಿದರೆ ಮಾತ್ರ ಬರುತ್ತೇನೆ ಅಂದಳಂತೆ. ಗಂಧರ್ವನಿಗೆಸಿಟ್ಟು ಬಂದುನೀನು ಕುದುರೆಯಾಗಿ ಬಿಡು ಎಂದು ಶಾಪ ಕೊಟ್ಟ ಅವಳು ಕುದುರೆಯಾಗಿ ಹೋಗಿಬಿಟ್ಟಳು. ಅವರಿಬ್ಬರ ಸಂಸಾರಕ್ಕೆ ಹುಟ್ಟಿದವನು ನಾನು" ಎಂದು ಹೇಳುತ್ತಾನೆ. ಇಲ್ಲಿ ರಾಜಕುಮಾರಿ ಬಿಳಿಯ ಕುದುರೆಯನ್ನು ಮದುವೆಯಾಗುವೆನೆಂದು ಹಠಹಿಡಿಯುವುದು, ಕುದುರೆ ಗಂಧರ್ವ ಆದುದು ಜನಪದ ಕಥೆಯಲ್ಲಿ ಬರುವ ಆಶಯಗಳಾಗಿವೆ.

ಜನಪದ ನಾಟಕದಲ್ಲಿ ಭಾಗವತನಾದವನು ಕಷ್ಟದಲ್ಲಿರುವವರಿಗೆ ಪರಿಹಾರವನ್ನು ಸೂಚಿಸುತ್ತಾನೆ. ಅಂತೆಯೇ ಹಯವದನ ನಾಟಕದಲ್ಲಿಯೂ ಕೂಡ ಹಯವದನನು "ಭಾಗವತರೇ ನಾನು ಏನಾದರೂ ಮಾಡಿ ಪೂರ್ಣಮನುಷ್ಯ ಆಗಲಿಕ್ಕೇ ಬೇಕು. ಪೂರ್ಣಾಂಗನಾಗಲಿಕ್ಕೇ ಬೇಕು. ಆದರೆ ಏನು ಮಾಡಲಿ ? ಏನು ಮಾಡಲಿ ?" ಎಂದು ಪೇಚಾಡುವಾಗ ಭಾಗವತನು ಹಯವದನನಿಗೆ ಪರಿಹಾರ ಸೂಚಿಸುತ್ತಾನೆ. ಚಿತ್ರಕೂಟದ ಮಹಾಕಾಳಿಯ ಆರಾಧನೆ ಮಾಡು. ಚಿತ್ರಕೂಟದ ಪರ್ವತದ ಮೇಲೆ ಅವಳ ಸ್ಥಾನ. ಅವಳು ಬಹಳ ಜಾಗ್ರತ ದೇವತೆ. ಕೇಳಿದ್ದನ್ನು ಕೊಡುತ್ತಾಳಂತೆ. ಆದ್ದರಿಂದ ಅಲ್ಲಿಗೆ ಹೋಗಲು ಹೇಳಿ ಆತನ ಸಹಾಯಕ್ಕೆ ನಟನನ್ನು ಕಳಿಸುತ್ತಾನೆ.

ಕಪಿಲ ದೇವದತ್ತನನ್ನು ಕುರಿತು "ನೀನು ಸಂಜೆ ಗರುಡೀಮನೆಗೆ ಬರುತ್ತೇನೆಂದು ಹೇಳಿದವನು ಯಾಕೆ ಬರಲಿಲ್ಲ. ಏನು ಮಜಾ ಆಯ್ತು ಗೊತ್ತೇನು ? ನಿಜವಾಗಿಯೂ ನೀನು ಬರಬೇಕಾಗಿತ್ತು. ಗಾಂಧಾರದ ಜಟ್ಟಿ ಬಂದಿದ್ದ" ಎಂದು ಹೇಳುತ್ತಾ ದೇವದತ್ತನ ಕಡೆಗೆ ತಿರುಗುತ್ತಾನೆ. ಆಗ ದೇವದತ್ತ ಅನ್ಯಮನಸ್ಕನಾಗಿರುವುದನ್ನು ಕೇಳಿ "ಈ ಸಲದ ಹುಡುಗಿ ಯಾರು ?" ಎನ್ನುತ್ತಾನೆ. ಆಗ

ದೇವದತ್ತ ಯಾರೂ ಇಲ್ಲ ಎಂದು ಸುಳ್ಳು ಹೇಳುತ್ತಾನೆ. ಕಪಿಲ ಹೇಳಲೇಬೇಕೆಂದು ಪಟ್ಟು ಹಿಡಿಯುತ್ತಾನೆ. ಆಗ ದೇವದತ್ತ ಹೇಳುತ್ತಾನೆ. ಪಾವನವೀಥಿ ಎಂಬ ಬೀದಿ. ಅವಳ ಮನೆಯ ಹೊರಬಾಗಿಲಿನ ಚೌಕಟ್ಟಿನ ಮೇಲೆ ಒಂದು ಗಂಡುಭೇರುಂಡ ಪಕ್ಷಿಯ ಚಿತ್ರ ಕೆತ್ತಿದೆ. [ಗಂಡು ಭೇರುಂಡ ಪಕ್ಷಿಗೆ ಎರಡು ಮುಖ. ಇದು ಮುಂದೆ ಬರುವ ಕ್ರಿಯೆಯನ್ನು ಧ್ವನಿಸುತ್ತದೆ.] ಅವಳು ಬಾಗಿಲು ಬಡಿಯಲು ಕೈಎತ್ತಿದಳು. ಅವಳ ಕೈ ತಾಗಿದ ಕೂಡಲೇ ಆ ಪಕ್ಷಿ ಜೀವ ತಳೆದು ಬಿಟ್ಟಿತು. ಇದು ಜನಪದ ಆಶಯ. ಕೊನೆಯಲ್ಲಿ ಪದ್ಮಿನಿಯು ದೇವದತ್ತನನ್ನು ಮದುವೆಯಾದರೂ ಸಹ ಆಕೆ ಕಪಿಲನನ್ನು ಪ್ರೀತಿಸುತ್ತಾಳೆ. ಇಲ್ಲಿ ಕಾಮವೆಂಬುದು ಎಷ್ಟು ಕೀಳುಮಟ್ಟಕ್ಕಿಳಿ ಯುತ್ತದೆಂಬುದನ್ನು ನೋಡಬಹುದು. ಯಾವ ಕುಲದಲ್ಲಿ ಹುಟ್ಟಿದರೆ ಏನು ? ಕಾಮತತ್ತ್ವಕ್ಕೆ ವಶನಾದ ವ್ಯಕ್ತಿ ಯಾವ ರೀತಿ ನಡೆದುಕೊಳ್ಳುತ್ತಾನೆಂಬುದನ್ನು ದೇವ ದತ್ತನ ಪಾತ್ರದಲ್ಲಿ ನೋಡಬಹುದು.

ದೇವದತ್ತ ಕಾಮತತ್ತ್ವಕ್ಕೆ ಒಳಗಾಗಿ ಪದ್ಮಿನಿಯು ತನಗೆ ಸಿಗಲಿ ಎಂದು ಹರಕೆ ಹೋರುವುದು ಜನಪದರಲ್ಲಿಯ ನಂಬಿಕೆಯ ದ್ಯೋತಕವಾಗಿದೆ. "ಪದ್ಮಿನಿ ನನಗೆ ದೊರೆತರೆ ಆ ದುರ್ಗಾಮಾತೆಗೆ ನನ್ನ ಎರಡೂ ಹಸ್ತಗಳನ್ನು ಕಡಿದು ಕೊಡುತ್ತೇನೆ. ಆ ರುದ್ರನಿಗೆ ನನ್ನ ಶಿರವನ್ನೇ ಬಲಿ ಕೊಡುತ್ತೇನೆ" ಎಂದು ಹರಕೆ ಹೋರುತ್ತಾನೆ. ಆದರೆ ಪದ್ಮಿನಿಯನ್ನು ಮದುವೆಯಾದ ನಂತರ ಆ ಹರಕೆಯನ್ನು ಮರೆತುಬಿಟ್ಟಿರು ತ್ತಾನೆ. ಒಂದು ಸಲ ಪದ್ಮಿನಿ, ಕಪಿಲ, ದೇವದತ್ತರು ತಿರುಗಾಡಿಕೊಂಡು ಬರಲು ಹೋದಾಗ ತಟ್ಟನೆ ತಾನು ಹರಕೆ ಹೊತ್ತ ವಿಷಯ ನೆನಪಿಗೆ ಬರುತ್ತದೆ. ಆಗ ಒಬ್ಬನೇ ನೇರವಾಗಿ ಗುಡಿಗೆ ಬರುತ್ತಾನೆ. ದೇವಿಗೆ ಸಾಷ್ಟಾಂಗವೆರಗಿ "ಭವಾನಿ, ಭೈರವಿ, ಕಾಳಿಕೆ, ದುರ್ಗೇ, ಮಹಾ ಮಾಯೆ ನಿನಗೆ ಕೊಟ್ಟ ವಚನ ಮರತೇ ಹೋಗಿತ್ತು. ನನ್ನನ್ನು ಕ್ಷಮಿಸು, ತಾಯಿ. ನನ್ನ ಜನ್ಮದ ಸರ್ವೋತ್ಕಟ ಆಸೆ ಪೂರೈಸಿದ ಪದ್ಮಿನಿ ನನ್ನ ಅರ್ಧಾಂಗಿಯಾದಳು. ನಾನು ಆಗಲೇ ನಿನ್ನನ್ನು ಸ್ಮರಿಸ ಬೇಕಾಗಿತ್ತು. ಆದರೆ ನೀನು ಕೊಟ್ಟ ಸುಖದ ಭ್ರಮೆಯಲ್ಲಿ ನಿನ್ನನ್ನೇ ಮರೆತೆ. ಈಗ ಆ ಹರಕೆ ತೀರಿಸುತ್ತೇನೆ." ಎಂದು ಕತ್ತಿ ತೆಗೆದುಕೊಂಡು ಶಿರಚ್ಛೇದ ಮಾಡಿ ಕೊಳ್ಳುತ್ತಾನೆ. ಅವನನ್ನು ಹುಡುಕುತ್ತ ಬಂದ ಕಪಿಲ ದೇವದತ್ತನ ಶಿರಚ್ಛೇದ ವನ್ನು ನೋಡಿ ನಿನ್ನ ಹೊರತು ನಾನು ಬಾಳುವುದು ಸಾಧ್ಯವಿಲ್ಲ, ಎಂದು ಹೇಳಿ ತಾನು ಶಿರಚ್ಛೇದ ಮಾಡಿಕೊಳ್ಳುತ್ತಾನೆ. ಇದು ಅವರ ಸ್ನೇಹ ಎಷ್ಟು ಗಾಢ ವಾಗಿತ್ತೆಂಬುದಕ್ಕೆ ಉತ್ತಮ ನಿದರ್ಶನ.

ದೇವದತ್ತ ಕಪಿಲರು ಎಷ್ಟು ಹೊತ್ತಾದರೂ ಬರದೇ ಇದ್ದಾಗ ಪದ್ಮಿನಿ ಅವ ರನ್ನು ಹುಡುಕಿಕೊಂಡು ಅಲ್ಲಿಗೆ ಬರುತ್ತಾಳೆ. ಇವರ ಶಿರಚ್ಛೇದಗಳನ್ನು ನೋಡಿ ಏನು ಮಾಡಲಿ ? ಮನೆಯಲ್ಲಿ ಏನೆಂದು ಹೇಳಲಿ ? ನನ್ನನ್ನು ನಂಬುವವರು

ಯಾರು ? ಈ ರಂಡೆಗಾಗಿ ಇಬ್ಬರೂ ಬಡಿದಾಡಿ ಸತ್ತರು ಎಂದು ನನ್ನನ್ನು ಹಿಯಾಳಿಸುತ್ತಾರೆ ಆ ಮೇಲೆ ನನ್ನ ಗತಿ ? ಕಪಿಲ ಹೋದ, ದೇವದತ್ತ ಹೋದ ಅವರ ಜೊತೆಗೆ ನಾನು ಹೋಗುತ್ತೇನೆಂದು ಕತ್ತಿ ಎತ್ತುತ್ತಾಳೆ. ಅಷ್ಟರಲ್ಲಿ ದೇವಿಯು ಧ್ವನಿ ಕೇಳಿಸುತ್ತದೆ. ಇದು ಜನಪದ ಆಶಯ. ಪದ್ಮಿನಿ ಕಣ್ದೆರೆದು ದೇವಿಯನ್ನು ಕಂಡು ಓಡಿಹೋಗಿ ಅವಳ ಕಾಲಿಗೆರಗುತ್ತಾಳೆ. ಸರಿ ಏನು ಬೇಕು ? ಹೇಳು ಪ್ರಸನ್ನಳಾಗಿದ್ದೇನೆ, ಎಂದಾಗ ಕಪಿಲ ದೇವದತ್ತರ ಜೀವ ಪುನಃ ಬರುವಂತೆ ಮಾಡು ಎಂದು ಕೇಳುತ್ತಾಳೆ. ಆಗ ದೇವಿ ಆ ತಲೆಗಳನ್ನು ತಿರುಗಿ ಅವರವರ ದೇಹಕ್ಕೆ ಅಂಟಿಸಿ ನಂತರ ಅವರ ಕುತ್ತಿಗೆಯ ಮೇಲೆ ಆ ಕತ್ತಿಯನ್ನು ಒಂದೊಂದು ಸಲ ಒತ್ತು ಅವರು ಜೀವ ತಾಳುತ್ತಾರೆ ಎನ್ನಲು ಪದ್ಮಿನಿ ಗಡಿಬಿಡಿಯಲ್ಲಿ ಉತ್ಸುಕತೆಯಿಂದ ತಲೆಗಳನ್ನು ದೇಹಗಳಿಗೆ ಹಚ್ಚುತ್ತಾಳೆ. ಆದರೆ ದೇವದತ್ತನ ಮೊಗವಾಡ ಕಪಿಲನಿಗೆ ಕಪಿಲನ ಮೊಗವಾಡ ದೇವದತ್ತನಿಗೆ ಅದಲು ಬದಲು ಮಾಡಿ ಹಚ್ಚುತ್ತಾಳೆ. ಕತ್ತಿಯನ್ನೆತ್ತಿ ಅದನ್ನು ಅವರ ಕುತ್ತಿಗೆಯ ಮೇಲೆ ಎಳೆಯುತ್ತಾಳೆ. ಆಗ ಅವರಿಬ್ಬರೂ ಮೆಲ್ಲನೆ ಎದ್ದು ಕೂಡುತ್ತಾರೆ. ಇವುಗಳೆಲ್ಲ ಜನಪದ ಆಶಯಗಳನ್ನು ಕುರಿತು ಸೂಚಿಸುವಂತವುಗಳಾಗಿವೆ.

ಈಗ ಪದ್ಮಿನಿಯ ಗಂಡ ಯಾರಾಗಬೇಕೆಂಬುದು ಸಮಸ್ಯೆ. ಜನಪದ ನಾಟಕದಲ್ಲಿ ಭಾಗತನಾದವನೇ ಸಮಸ್ಯೆ ಬಂದಾಗ ಉತ್ತರ ಹೇಳುವುದು. ಈ ಹಯವದನ ನಾಟಕದಲ್ಲಿಯೂ ಭಾಗವತನೇ ಇದಕ್ಕೆ ಉತ್ತರ ಹೇಳುತ್ತಾನೆ. ಏನು? ಈ ಮೂವರ ಹತ ಭಾಗ್ಯರ ಬಾಳನ್ನೇ ತಕ್ಕಡಿಯಲ್ಲಿ ತೂಗುವ ಈ ಸಮಸ್ಯೆಗೆ ಪರಿಹಾರ ಏನು ? ಅವರ ವಿಧಿ ಒಗಟಾಗಿಯೇ ಉಳಿಯಬೇಕೆ ? ಅಥವಾ ಇಲ್ಲಿ ನೆರೆದ ರಸಿಕ ಸಮಾಜದ ಕೊರಳಿಗೆ ಪ್ರಶ್ನೆ–ಚಿಹ್ನೆಯನ್ನು ಕಟ್ಟಿ ಅವರನ್ನು ಬೀಳ್ಕೊಡುವುದು ರಸಿಕತೆಯ ಅವಮಾನವಾದೀತೆ ? ವಿಕ್ರಮರಾಜನಿಗೆ ಬೇತಾಳ ಇದೇ ಸಮಸ್ಯೆ ಕೇಳಿದಾಗ ಆ ಅರಸು ಹೇಳಿದ ಉತ್ತರವನ್ನೇ ಭಾಗವತ ಕೊಡುತ್ತಾನೆ. "ವೃಕ್ಷಗಳಲ್ಲಿ ಕಲ್ಪವೃಕ್ಷ ಹೇಗೊ ಹಾಗೆ ಅಂಗಗಳಲ್ಲಿ ಶಿರಸ್ಸು. ಆದ್ದರಿಂದ ದೇವದತ್ತನ ತಲೆ ಇದ್ದವನೇ ದೇವದತ್ತ. ಪದ್ಮಿನಿ ಅವನ ಹೆಂಡತಿ" ಎಂದು ಸಮಸ್ಯೆ ಪರಿಹಾರ ಮಾಡುತ್ತಾನೆ.

ಈ ನಾಟಕದಲ್ಲಿ ಬರುವ ಗೊಂಬೆಗಳು ತಮ್ಮನ್ನು ಸರಿಯಾಗಿ ನೋಡಿಕೊಳ್ಳದೇ ಇದ್ದ ಸಂದರ್ಭದಲ್ಲಿ ಅವರನ್ನು ಕುರಿತು ಹಾಸ್ಯ ಮಾಡುವುದು ಜನಪದ ನಾಟಕದಲ್ಲಿಯ ಹಾಸ್ಯದ ದ್ಯೋತಕಗಳಾಗಿವೆ. ಇಲ್ಲಿ ಗೊಂಬೆಗಳು ಮಾತನಾಡುವುದು ಜನಪದ ಆಶಯಗಳಾಗಿವೆ.

ಆರಂಭದಲ್ಲಿ ಬರುವ ಹಯುವದನನ ಪಾತ್ರ ಜನಪದ ಕಥೆಗಳಲ್ಲಿ ಬರುವಂತಹ ವ್ಯಕ್ತಿಗಳನ್ನೇ ಹೋಲುತ್ತದೆ. ಅದ್ಭುತ ರಮ್ಯಕ್ಕೆ ಇದು ಒಂದು ಉದಾಹರಣೆಯಾಗಿದೆ. ನಂತರ ಬರುವ ಕಪಿಲ ದೇವದತ್ತರ ಕಥೆಯ ಪ್ರಸಂಗವು ಕೂಡ ಜನ

ಪದ ಕಥೆಯಲ್ಲಿ ಬರುವ ಅನೇಕ ಅದ್ಭುತಾಂಶಗಳನ್ನು ಒಳಗೊಂಡಿದೆ. ಕಪಿಲ ಮತ್ತು ದೇವದತ್ತರ ಕಥೆಗೆ 'ಬೇತಾಳ ಪಂಚವಿಂಶತಿ ಕಥಾ' ಎಂಬ ಕಥಾ ಸಂಕಲನ ದಲ್ಲಿ ಬರುವ ಆರನೆಯ ಕಥೆಯೇ ಮೂಲವೆಂದು ನಾಟಕಕಾರರೇ ಹೇಳಿದ್ದಾರೆ. ಬೇತಾಳ ಪಂಚವಿಂಶತಿ ಕಥಾದಲ್ಲಿ ಬರುವ ಕಥೆಗಳೆಲ್ಲವೂ ಜನಪದರ ಅದ್ಭುತ ರಮ್ಯ ಕಥಾ ವರ್ಗಕ್ಕೆ ಸೇರಿದವುಗಳು. ಆ ಕಥೆಯನ್ನೇ ಆಧಾರವಾಗಿಟ್ಟುಕೊಂಡು ನಾಟಕ ಕಾರರು ರಚಿಸಿರುವ ಈ ನಾಟಕದಲ್ಲಿ ಜನಪದೀಯತೆ ಮತ್ತು ಜಾನಪದ ಅಂಶಗಳು ಒಡಗೂಡಿ ಬಂದಿರುವುದು ಸಹಜ.

ಇಲ್ಲಿ ನಾಟಕಕಾರರು ತಮ್ಮ ಅಭಿವ್ಯಕ್ತಿಯ ವಿಧಾನಕ್ಕಾಗಿ ಜನಪದ ನಾಟಕದ ರೂಪತಂತ್ರಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ. ನಾಟಕ ಕಾರರೇ ಹೇಳುವಂತೆ 'ಈ ನಾಟಕ ತೋರಿಕೆಗೆ ಅಸಂಭಾವ್ಯ ಅಸಂಬದ್ಧ ಎಂದು ಕಂಡರೂ ಅಗಿದು ಜಗಿದು ನೋಡಿದಾಗ ಮಾನವನಲ್ಲಿಯ ಅನಾದಿ ಸ್ಥಾಯಿ ಕಾಮದ ಸ್ಥಾನ ವನ್ನು ತೋರಿಸಿಕೊಡುವ ಮತ್ತು ಅವನ ಪಶುತ್ವದಿಂದ ಹೇಗೆ ಭಿನ್ನ ಬೇರೆ ಎಂಬುದರ ಪರಿಜ್ಞಾನವನ್ನು ಅವನಿಗೆ ಉಂಟುಮಾಡುವ ಆದರೆ ಒಳ್ಳೊಳ್ಳೆ ಬುದ್ಧಿವಂತರನ್ನು ಹಾದಿಗೆಡಿಸಿದ, ಗಂಭೀರ ಹಾಸ್ಯ ಪ್ರಜ್ಞೆಯ ಒಂದು ಸಾಂಕೇತಿಕ ನಾಟಕವಾಗಿದೆ".

ಆರನೆಯ ಪಂಚವಾರ್ಷಿಕ ಯೋಜನೆ ಮತ್ತು ಬಡತನ ನಿವಾರಣೆ

ಕೆ.ಸಿ. ಬಸವರಾಜ

ಬಡತನ ಮತ್ತು ನಿರುದ್ಯೋಗವನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡುವುದು ಆರನೇ ಯೋಜನೆಯ ಗುರಿಗಳಲ್ಲಿ ಒಂದಾಗಿದೆ. 1950–51ರಲ್ಲಿ 476 ರೂಪಾಯಿಗಳಿದ್ದ ತಲಾ ಆದಾಯವು ಕಳೆದ ಮೂರು ದಶಕಗಳ ಆರ್ಥಿಕ ಅಭಿವೃದ್ಧಿಯಿಂದ 1978–79ಕ್ಕೆ 730 ರೂಪಾಯಿಗಳಿಗೆ ಏರಿದೆ. ಇಷ್ಟಾದರೂ ಬಡತನದ ಪ್ರಮಾಣ ದೇಶದಲ್ಲಿ ಹೆಚ್ಚುತ್ತಲೇ ಬಂದಿದೆ. ಈ ಬಡತನವನ್ನು ನಿವಾರಿಸಲು ನಿರ್ದಿಷ್ಟ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದು ಅನಿವಾರ್ಯವಾಗಿದೆ. ಅಭಿವೃದ್ಧಿಯ ದರದಲ್ಲಿ ಗಣನೀಯ ಪ್ರಮಾಣದ ಏರಿಕೆ ಬಡತನ ನಿವಾರಿಸಲು ಸ್ವಲ್ಪ ಮಟ್ಟಿಗೆ ಸಹಾಯಕವಾಗಬಹುದು. ಆದರೆ ಆದರಿಂದಲೇ ಬಡತನ ನಿವಾರಿಸುವುದು ಕಷ್ಟವಾಗುತ್ತದೆ. ಆದುದರಿಂದ ಹಿಂದಿನ ಅನುಭವವನ್ನಾಧರಿಸಿ ಬಡತನ ನಿವಾರಿಸಲು ಹೆಚ್ಚು ಪರಿಣಾಮಕಾರಿಯಾಗಬಹುದಾದ ಕಾರ್ಯಕ್ರಮಗಳನ್ನು ಸಂಯೋಜಿಸಬೇಕಾಗುತ್ತದೆ. ನಿರ್ದಿಷ್ಟ ಕಾರ್ಯಕ್ರಮಗಳು ಕೇವಲ ಸರಕುಗಳ ಪಟ್ಟಿಯಲ್ಲಿ ಬದಲಾವಣೆ ತರುವುದಲ್ಲದೆ, ಈ ಉತ್ಪಾದನೆಯು ವಿವಿಧ ವರ್ಗಗಳಲ್ಲಿ ಮತ್ತು ಪ್ರದೇಶಗಳಲ್ಲಿ ಸಮನಾಗಿ ವಿತರಣೆಯಾಗುವಂತೆ ಮಾಡಬೇಕಾಗುತ್ತದೆ. ಇವುಗಳ ಜೊತೆಗೆ ಈಗಾಗಲೆ ಅನುಷ್ಠಾನದಲ್ಲಿರುವ ನಿರ್ದಿಷ್ಟ ವರ್ಗದ ಬಡತನ ನಿವಾರಣೆಯ ಕಾರ್ಯಕ್ರಮಗಳ ಕ್ಷೇತ್ರ, ಪ್ರಮಾಣ ಮತ್ತು ಗುರಿಗಳಲ್ಲಿ ಬದಲಾವಣೆ ತರಲಾಗುತ್ತದೆ. ಈ ಕಾರ್ಯಕ್ರಮಗಳ ಉದ್ದೇಶ ಉತ್ಪಾದನೆ ಹೆಚ್ಚಿಸುವುದಲ್ಲದೆ, ಬಡವರ ಆದಾಯವನ್ನು ಹೆಚ್ಚಿಸುವುದು ಮತ್ತು ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದಾಗಿದೆ. ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಉತ್ತೇಜನ ನೀಡಿ ಅವುಗಳು ಬೆಳೆಯುವಂತೆ ಮಾಡಲಾಗುವುದು. ಸಾಂಸ್ಥಿಕ ಸುಧಾರಣೆಗಳ ಮೂಲಕ ಸಾರ್ವಜನಿಕ ನೀತಿ ಮತ್ತು ಸೇವೆಗಳಲ್ಲಿ ಬಡವರ ಪರವಾದ ವಿತರಣಾ ಪರಿಣಾಮ ಉಂಟಾಗುವಂತೆ ಮಾಡಲಾಗುವುದು. ಇವುಗಳು ಯಶಸ್ವಿಯಾಗುವಂತೆ ಮಾಡಲು ಪರಿಣಾಮಕಾರಿಯಾದ ಮತ್ತು ದಕ್ಷ ಆಡಳಿತ ವ್ಯವಸ್ಥೆಯನ್ನು ಒದಗಿಸಲು ಯೋಜಿಸಲಾಗಿದೆ.

ಬಡತನ ನಿವಾರಣೆಗೆ ಈ ಯೋಜನೆಯಲ್ಲಿ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಈ ಯೋಜನೆಯಲ್ಲಿ ಬಡತನವನ್ನು ಒಬ್ಬ ವ್ಯಕ್ತಿ ಅನುಭೋಗಿಸುವ ಆಹಾರದ

ಕ್ಯಾಲೋರಿಗಳ ಮೇಲೆ ವ್ಯಾಖ್ಯಾನಿಸಲಾಗಿದೆ. ಇದರ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ 2400 ಕ್ಯಾಲೋರಿಗಿಂಥ ಕಡಿಮೆ ಆಹಾರ ದಿನಕ್ಕೆ ಅನುಭೋಗಿಸುವವರು ಮತ್ತು ಪಟ್ಟಣ ಪ್ರದೇಶಗಳಲ್ಲಿ 2100 ಕ್ಯಾಲೋರಿಗಿಂತ ಕಡಿಮೆ ಆಹಾರ ದಿನಕ್ಕೆ ಅನುಭೋಗಿಸುವವರು ಬಡತನ ರೇಖೆಯಿಂದ ಕೆಳಗಿರುವವರು ಎಂದು ಗುರುತಿಸಲಾಗಿದೆ. ಅನುಭೋಗದ ವೆಚ್ಚದ ಆಧಾರದ ಮೇಲೂ ಬಡತನವನ್ನು ಗುರುತಿಸಲಾಗಿದೆ. 1979–80ರ ಬೆಲೆಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ತಿಂಗಳಿಗೆ 76 ರೂ.ಗಳಿಗಿಂತ ಕಡಿಮೆ ಅನುಭೋಗದ ವೆಚ್ಚ ಮಾಡುವವರು ಮತ್ತು ಪಟ್ಟಣ ಪ್ರದೇಶಗಳಲ್ಲಿ ತಿಂಗಳಿಗೆ 88 ರೂಪಾಯಿಗಳಿಗಿಂತ ಕಡಿಮೆ ವೆಚ್ಚ ಮಾಡುವವರನ್ನು ಬಡತನದ ರೇಖೆಯಿಂದ ಕೆಳಗೆ ಬರುವವರೆಂದು ಗುರುತಿಸಲಾಗಿದೆ. ಇದರ ಪ್ರಕಾರ ಈ ಯೋಜನೆಯ ಪ್ರಾರಂಭದಲ್ಲಿ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 51.10 ರಷ್ಟು ಜನರು ಬಡತನದ ರೇಖೆಯಿಂದ ಕೆಳಗಿರುವುದು ಕಂಡು ಬರುತ್ತದೆ.

ಈ ಕೆಳಗಿನ ಕಾರ್ಯಗಳ ಮೂಲಕ ಆರನೆಯ ಯೋಜನೆಯು ಬಡತನ ನಿವಾರಣೆ ಯತ್ನ ಮಾಡುತ್ತದೆ. ಅವುಗಳೆಂದರೆ ಬಡತನ ಗುರುತಿಸುವುದು ಮತ್ತು ಅಳೆಯುವುದು, ಸಾಧಿಸಬಹುದಾದ ಗುರಿಗಳನ್ನು ಇಟ್ಟುಕೊಳ್ಳುವುದು ಮತ್ತು ಗುರಿ ಮುಟ್ಟಲು ಸಾಧ್ಯವಾಗುವಂತೆ ನಿಖರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು. ನಮ್ಮ ದೇಶದ ಬಡವರಲ್ಲಿ ಹೆಚ್ಚು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಅವರುಗಳು ಹೆಚ್ಚಾಗಿ ಭೂರಹಿತ ಕಾರ್ಮಿಕರು, ಸಣ್ಣ ಮತ್ತು ಶ್ರೀಮಂತ ರೈತರು, ಗ್ರಾಮೀಣ ಕುಶಲ ಕಾರ್ಮಿಗಳು, ಹಿಂದುಳಿದ ವರ್ಗ ಮತ್ತು ಪಂಗಡಗಳಿಗೆ ಸೇರಿದವರಾಗಿರುತ್ತಾರೆ. ಇವರಲ್ಲಿ ಸಂಪತ್ತು ಇರುವುದಿಲ್ಲ, ಇದ್ದರೂ ಅದರಿಂದ ಉತ್ಪಾದನೆ ಇರುವುದಿಲ್ಲ. ತೀರ ಕೆಳಮಟ್ಟದ ಕುಶಲತೆ ಮತ್ತು ನಿರ್ದಿಷ್ಟವಾದ ಉದ್ಯೋಗವಿಲ್ಲದವರಾಗಿರುತ್ತಾರೆ. ಅಥವಾ ತೀರಾ ಕಡಿಮೆ ಕೂಲಿಕೆಲಸಗಳಲ್ಲಿ ತೊಡಗಿದರಾಗಿರುತ್ತಾರೆ.

ಆರನೇ ಯೋಜನೆಯ ಪ್ರಕಾರ, 1977–78ರ ಅನುಭೋಗದ ವಿತರಣೆಯಲ್ಲಿ ಯಾವ ಬದಲಾವಣೆಗಳಿರುವುದಿಲ್ಲವಾದರೂ, ಯೋಜನಾವಧಿಯಲ್ಲಿ ಬಡತನವನ್ನು ಶೇಕಡಾ 38.93ಕ್ಕೆ ಕಡಿಮೆ ಮಾಡುವ ಗುರಿ ಇಟ್ಟುಕೊಳ್ಳಲಾಗಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ಹೂಡುವ ಬಂಡವಾಳ ಬಡತನ ನಿವಾರಣಾ ಕಾರ್ಯಕ್ರಮಗಳಲ್ಲಿ ತೊಡಗುವುದರಿಂದ ಕುಶಲತೆ ಮತ್ತು ಸಂಪತ್ತಿನ ವರ್ಗಾವಣೆಗಳುಂಟಾಗಿ ಮತ್ತು ಉದ್ಯೋಗಾವಕಾಶಗಳು ಹೆಚ್ಚಾಗಿ ಬಡತನದ ಸ್ಥಿತಿ ಸುಧಾರಿಸಬಹುದೆಂದು ಆಶಿಸಲಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಸಂಪತ್ತಿನ ವಿತರಣೆಯಲ್ಲಿ ಬದಲಾವಣೆಯನ್ನುಂಟು ಮಾಡಿ, ಕುಶಲತೆಯನ್ನು ಹೆಚ್ಚಿಸುವಲ್ಲಿ ಪರಿಣಾಮಕಾರಿಯಾದರೆ, “ರಾಷ್ಟ್ರೀಯ ಗ್ರಾಮೀಣ ಉದ್ಯೋಗ” ಕಾರ್ಯಕ್ರಮ ಉದ್ಯೋಗವಕಾಶ

ಹೆಚ್ಚಿಸುವಲ್ಲಿ ಪರಿಣಾಮಕಾರಿಯಾಗುತ್ತದೆ. ಇವುಗಳ ಜೊತೆಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ನಿರುದ್ಯೋಗ ಮತ್ತು ಅರೆ ಉದ್ಯೋಗಗಳನ್ನು ನಿವಾರಿಸುವಲ್ಲಿ ಸಹಾಯಕಾರಿಯಾಗುತ್ತವೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗಾಗಿ ಆರನೇ ಯೋಜನೆಯಲ್ಲಿ "ವಿಶೇಷ ಕೇಂದ್ರೀಯ ಸಹಾಯ" ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಜೊತೆಗೆ ಕ್ಷಾಮ ಪರಿಹಾರ ಕಾರ್ಯಕ್ರಮಗಳು, ಬುಡಕಟ್ಟು ಮತ್ತು ಗುಡ್ಡಗಾಡು ಪ್ರದೇಶಗಳ ಅಭಿವೃದ್ಧಿಕಾರ್ಯಕ್ರಮಗಳು ವಿತರಣೆಯಲ್ಲಿ ಮಹತ್ವ ಪೂರ್ಣ ಬದಲಾವಣೆ ತರುತ್ತವೆ ಎಂದು ಆಶಿಸಲಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದನ್ವಯ ಒಂದು ಅಭಿವೃದ್ಧಿ ಕ್ಷೇತ್ರಕ್ಕೆ 3000 ಕುಟುಂಬಗಳಂತೆ ಈ ಯೋಜನಾವಧಿಯಲ್ಲಿ ಪ್ರತಿ ಕ್ಷೇತ್ರವನ್ನೂ ಈ ಕಾರ್ಯ ಕ್ರಮದ ವ್ಯಾಪ್ತಿಗೆ ತರಲಾಗುವುದು. ದೇಶದಲ್ಲಿರುವ ಒಟ್ಟು 5000 ಕ್ಷೇತ್ರಗಳ ಸುಮಾರು 75 ಮಿಲಿಯನ್ ಜನರನ್ನು, ಅಂದರೆ ಶೇಕಡಾ 13ರಷ್ಟು ಗ್ರಾಮೀಣ ಜನತೆಯನ್ನು ಈ ಕಾರ್ಯಕ್ರಮದ ಪರಿಧಿಯೊಳಗೆ ತರಲಾಗುವುದು. ಯೋಜನಾ ವಧಿಯಲ್ಲಿ ಈ ಕಾರ್ಯಕ್ರಮಕ್ಕೆ ವಿವಿಧ ಸಂಸ್ಥೆಗಳ 3000 ಕೋಟಿ ರೂ.ಗಳಲ್ಲದೆ, 1500 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು. ಈ ಕಾರ್ಯಕ್ರಮದ ಮತ್ತು ಇಷ್ಟೊಂದು ಪ್ರಮಾಣದ ವೆಚ್ಚದ ಗುರಿ ಬಡವರನ್ನು ಮುಟ್ಟುವುದಾಗಿದೆ. ಈ ಕಾರ್ಯಕ್ರಮದ ಯಶಸ್ಸಿನಿಂದ ವರ್ಷಕ್ಕೆ 3000 ಕೋಟಿ ರೂ.ಗಳ ಆದಾಯದ ಹೆಚ್ಚಳ ಉಂಟಾಗಬಹುದೆಂದು ಆಶಿಸಲಾಗಿದ್ದು. ಇದರೊಟ್ಟಿಗೆ ಶೇಕಡಾ 11 ರಷ್ಟು ಅಂದರೆ 61 ಮಿಲಿಯನ್ ಗ್ರಾಮೀಣ ಜನರು ಬಡತನದ ರೇಖೆಯಿಂದ ಮೇಲೇರ ಬಹುದೆಂದು ಲೆಕ್ಕಾಚಾರ ಹಾಕಲಾಗಿದೆ. ಇದಲ್ಲದೆ ಪಟ್ಟಣ ಪ್ರದೇಶಗಳಲ್ಲಿ ಸುಮಾರು 6.1 ಮಿಲಿಯನ್ ಬಡಜನರನ್ನು ಬಡತನದ ರೇಖೆಯಿಂದ ಮೇಲೆ ತರಲು ಈ ಯೋಜನೆಯಲ್ಲಿ ಆರೋಗ್ಯ, ಶಿಕ್ಷಣ, ಒಳ್ಳೆ ನಾಗರೀಕ ಸೌಲಭ್ಯ, ವಸತಿ ಸೌಕರ್ಯ, ನೀರಿನ ವ್ಯವಸ್ಥೆ, ಕೊಳಗೇರಿ ಉತ್ತಮ ಪಡಿಸುವ ಕಾರ್ಯಕ್ರಮಗಳ ಮೂಲಕ ವಿತರಣಾ ಪ್ರಯೋಜನವನ್ನು ಪಡೆಯುವಂತೆ ಯೋಜನೆ ಹಾಕಲಾಗಿದೆ. ಈ ಕಾರ್ಯಕ್ರಮಗಳು ಪಟ್ಟಣ ಪ್ರದೇಶದ ಬಡತನ ನಿವಾರಣೆಗೆ ಹೆಚ್ಚು ಸಹಾಯ ಕಾರಿಯಾಗುತ್ತವೆ.

ಉದ್ಯೋಗ : ದೇಶದಲ್ಲಿ ಉದ್ಯೋಗದ ಸ್ಥಿತಿ ತೀರ ಅತೃಪ್ತಿಕರವಾಗಿದ್ದು, ನಿರುದ್ಯೋಗ, ಅರೆಉದ್ಯೋಗಿಗಳ ಸಂಖ್ಯೆ ಕಳೆದ ದಶಕದಿಂದ ಏರುತ್ತಲೇ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಆರನೇ ಯೋಜನೆಯ ಉದ್ಯೋಗದ ನೀತಿಯು ಈ ಕೆಳಗಿನ ಗುರಿಗಳನ್ನು ಸಾಧಿಸಲು ಯತ್ನಿಸುತ್ತದೆ. ಅವುಗಳೆಂದರೆ ಹೆಚ್ಚು ಪ್ರತಿಫಲವಿರುವ ಉದ್ಯೋಗಗಳನ್ನು ಹೆಚ್ಚಿಸಿ ಅರೆಉದ್ಯೋಗವನ್ನು ಕಡಿಮೆ ಮಾಡುವುದು ಮತ್ತು ನಿರುದ್ಯೋಗವನ್ನು ಗಣನೀಯವಾಗಿ ಕಡಿಮೆ ಮಾಡುವುದು.

ನಿರುದ್ಯೋಗವನ್ನು ಕಡಿಮೆ ಮಾಡಲು ದೊಡ್ಡ ಪ್ರಮಾಣದ ಕೈಗಾರಿಕೆಗಳನ್ನು ಪ್ರಾರಂಭಿಸುವುದರಿಂದ ಸಾಧ್ಯವಾಗುವುದಿಲ್ಲವಾದ್ದರಿಂದ, ಕೃಷಿ, ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು, ಗ್ರಾಮೀಣ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳು, ನಿರ್ಮಾಣ ಕಾರ್ಯಗಳು, ಸಾರ್ವಜನಿಕ ಆಡಳಿತ ಮುಂತಾದವುಗಳಿಂದ ಸಾಧಿಸಬಹುದೆಂದು ಕಂಡುಕೊಂಡು, ಈ ಯೋಜನಾವಧಿಯಲ್ಲಿ ಈ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಗುವುದು.

ಇತ್ತೀಚಿನ ಅಂದಾಜಿನಂತೆ ಆರನೇ ಯೋಜನೆಯ ಅವಧಿಯಲ್ಲಿ (ವೈಯಕ್ತಿಕ) ಶ್ರಮಿಕವರ್ಷದ ಆಧಾರದ ಮೇರೆ ಉದ್ಯೋಗಾವಕಾಶಗಳು ವರ್ಷಕ್ಕೆ ಶೇಕಡಾ 4.17ರಷ್ಟು ಹೆಚ್ಚುವ ನಿರೀಕ್ಷೆಯಿದ್ದು, ಇದೇ ಅವಧಿಯಲ್ಲಿ ಶ್ರಮಿಕರ ಅಥವಾ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ವರ್ಷಕ್ಕೆ ಶೇಕಡಾ 2.54ರಷ್ಟು ಹೆಚ್ಚುತ್ತದೆ. ನಿರಪೇಕ್ಷ ಸಂಖ್ಯೆಗಳಲ್ಲಿ ಉದ್ಯೋಗವು 34 ಮಿಲಿಯನ್ (ವೈಯಕ್ತಿಕ) ಶ್ರಮಿಕ ವರ್ಷಗಳಷ್ಟು ಹೆಚ್ಚಾಗುತ್ತದೆ. ಆದುದರಿಂದ ಸೃಷ್ಟಿಸಿದ ಉದ್ಯೋಗಾವಕಾಶಗಳೆಲ್ಲಾ ಪೂರ್ಣಾವಧಿಯದಾಗಿದ್ದರೆ, ಅದು ಹೆಚ್ಚುವ ಉದ್ಯೋಗಾಕಾಂಕ್ಷಿಗಳ ಸಂಖ್ಯೆಗೆ ಸಮನಾಗುತ್ತದೆ. ಆದರೆ ಸೃಷ್ಟಿಸುವ ಉದ್ಯೋಗಾವಕಾಶಗಳೆಲ್ಲಾ ಪೂರ್ಣಾವಧಿಯದಾಗಿರುವುದಿಲ್ಲವಾದ್ದರಿಂದ, ಈ ಅವಕಾಶಗಳಿಂದ ಹಿಂದಿನ ಉಳಿಕೆಯಾಗಿರುವ ನಿರುದ್ಯೋಗವನ್ನು ಗಣನೀಯವಾಗಿ ಕಡಿಮೆಮಾಡಬಹುದಾಗಿದೆ.

ಕನಿಷ್ಠ ಅವಶ್ಯಕತೆಗಳ ಪೂರೈಕೆ ಕಾರ್ಯಕ್ರಮ : ಈ ಕಾರ್ಯಕ್ರಮಗಳನ್ನು ಹಿಂದಿನ ಯೋಜನೆಯ ಅನುಭವದ ಮೇಲೆಯೇ ಮುಂದುವರಿಸಲಾಗುವುದು. ಈ ಕಾರ್ಯಕ್ರಮವು ಸಾಮಾಜಿಕ ಸೇವೆಗಳ ಮೂಲಕ ಬಡತನರೇಖೆಯಿಂದ ಕೆಳಗಿರುವವರಿಗೆ ಅನುಭೋಗದ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವಲ್ಲಿ ಸಹಾಯಮಾಡುತ್ತದೆ. ಈ ತರಹದ ಕಾರ್ಯಕ್ರಮಗಳು ಯೋಜನೆಯ ಮೂಲಗುರಿ ಸಾಧಿಸುವಲ್ಲಿ ಹೆಚ್ಚು ಸಮರ್ಪಕವಾಗಿ ಕೆಲಸಮಾಡುತ್ತವೆ. ಈ ಕಾರ್ಯಕ್ರಮದನ್ವಯ ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಜನಸಮುದಾಯಕ್ಕೆ ಕನಿಷ್ಠ ಪ್ರಮಾಣದ ಸಾಮಾಜಿಕ ಸೇವೆಗಳನ್ನು ಒದಗಿಸುವುದು ಅನಿವಾರ್ಯವಾಗುತ್ತದೆ. ಈ ಕಾರ್ಯಕ್ರಮದ ಮುಖ್ಯ ಅಂಗಗಳೆಂದರೆ ಪ್ರಾಥಮಿಕ ಶಿಕ್ಷಣ, ಗ್ರಾಮೀಣ ಆರೋಗ್ಯ ಕಾರ್ಯಕ್ರಮ, ಗ್ರಾಮೀಣ ನೀರು ಸರಬರಾಜು ಯೋಜನೆ, ಗ್ರಾಮೀಣ ರಸ್ತೆ ನಿರ್ಮಾಣ, ಗ್ರಾಮೀಣ ವಿದ್ಯುದೀಕರಣ, ಭೂರಹಿತರಿಗೆ ಗ್ರಾಮೀಣ ವಸತಿ ಯೋಜನೆ, ಪಟ್ಟಣ ಪ್ರದೇಶದ ಕೊಳಚೆಗೇರಿಗಳನ್ನು ಉತ್ತಮಪಡಿಸುವುದು ಮತ್ತು ಪೌಷ್ಟಿಕ ಆಹಾರದ ಯೋಜನೆಗಳು.

ಈ ಕಾರ್ಯಕ್ರಮಗಳಿಗೆ ಆರನೇ ಯೋಜನೆಯಲ್ಲಿ 5807 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಈ ಕಾರ್ಯಕ್ರಮದ ಗುರಿಯನ್ನು ಮಧ್ಯೆ ಬರಬಹುದಾದ

ಅಡೆತಡೆಗಳನ್ನು ಗಮನದಲ್ಲಿಟ್ಟುಕೊಂಡು ಗೊತ್ತುಪಡಿಸಲಾಗಿದೆ. ಈ ಕಾರ್ಯಕ್ರಮಗಳು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳೊಂದಿಗೆ ಅಧಿಕ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನೂ ಸೃಷ್ಟಿಸಬಹುದೆಂದು ಆಶಿಸಲಾಗಿದೆ. ಈಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕೆ ಕೇಂದ್ರ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ವಿಶೇಷ ಯಂತ್ರಗಳನ್ನು ಸ್ಥಾಪಿಸಿ ಈ ಕಾರ್ಯಕ್ರಮದ ಪೂರ್ಣ ಜವಾಬ್ದಾರಿ ಅವುಗಳ ಮೇಲೆ ಹಾಕಲು ಉದ್ದೇಶಿಸಲಾಗಿದೆ.

ಈ ಕಾರ್ಯಕ್ರಮದನ್ವಯ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ 1985ನೇ ಸುಮಾರಿಗೆ 6–11 ವಯೋಮಿತಿಯ ಶೇಕಡಾ 95ರಷ್ಟು ಮಕ್ಕಳನ್ನು 11–14 ವಯೋಮಿತಿಯ ಶೇಕಡಾ 50 ರಷ್ಟು ಮಕ್ಕಳನ್ನು ಮತ್ತು 1990ನೇ ವರ್ಷಕ್ಕೆ ಪ್ರಾಥಮಿಕ ಶಿಕ್ಷಣ ಸಾರ್ವತ್ರಿಕವಾಗುವಂತೆ ಅನುಷ್ಠಾನಕ್ಕೆ ತರಲು ಯೋಜಿಸಲಾಗಿದೆ ದೂರದ ಹಳ್ಳಿಗಾಡು ಪ್ರದೇಶ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು ವಿಶೇಷ ಗಮನ ಕೊಡಲಾಗುವುದು. ಅದರಲ್ಲೂ ಅನುಸೂಚಿತ ಜಾತಿ ಮತ್ತು ಪಂಗಡಗಳು ಮತ್ತು ಹೆಣ್ಣು ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಪಡೆಯುವಂತೆ ವಿಶೇಷವಾಗಿ ವ್ಯವಸ್ಥೆಮಾಡಲು ಯೋಜಿಸಲಾಗಿದೆ. ಈಗಿನ ಅಂಕಿ ಅಂಶದ ಪ್ರಕಾರ ಶಾಲೆ ಸೇರುವ ಪ್ರತಿ 100 ಮಕ್ಕಳಲ್ಲಿ 36 ಮಕ್ಕಳು ಮಾತ್ರ ಐದನೇ ತರಗತಿಯನ್ನು ಮುಗಿಸುತ್ತಾರೆ. ಉಳಿದವರು ಅನಿವಾರ್ಯಕಾರಣಗಳಿಂದಾಗಿ ಮಧ್ಯದಲ್ಲಿ ಶಾಲೆ ಬಿಡುತ್ತಾರೆ. ಭಾರತದಲ್ಲಿ ಯೋಜನೆಗಳು ಪ್ರಾರಂಭವಾದಂದಿನಿಂದಲೂ ಈ ಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಆದುದರಿಂದ ಈ ಯೋಜನೆಯಲ್ಲಿ ಮಕ್ಕಳು ಶಾಲೆ ಬಿಡದಂತೆ ಪೂರಕ ಕಾರ್ಯಕ್ರಮಗಳನ್ನು ಕೈಗೊಂಡು ಎಲ್ಲಾ ಮಕ್ಕಳು ಶಾಲೆಗೆ ಹಾಜರಾಗುವಂತೆ ಮಾಡಲು ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ಕೆ ಸುಮಾರು 905 ಕೋಟಿ ರೂ ಗಳನ್ನು ಮೀಸಲಿಡಲಾಗಿದ್ದು, ಗಣನೀಯ ಪ್ರಗತಿ ಸಾಧಿಸುವ ಆಶೆ ಹೊಂದಲಾಗಿದೆ.

ಇದಲ್ಲದೆ 15–35 ವಯೋಮಿತಿಯ ಅನಕ್ಷರಸ್ತ ಯುವಕರಿಗೆ ಸಾಂಪ್ರದಾಯಿಕವಲ್ಲದ ಶಿಕ್ಷಣ ವ್ಯವಸ್ಥೆಯ ಮೂಲಕ ಅಕ್ಷರಸ್ತರನ್ನಾಗಿ ಮಾಡುವುದು ಮತ್ತು 1990ರ ವೇಳೆಗೆ ಎಲ್ಲಾ ಅನಕ್ಷರಸ್ತ ವಯಸ್ಕರನ್ನು ಕನಿಷ್ಠ ಶಿಕ್ಷಣ ಪಡೆಯುವಂತೆ ಮಾಡಲು ಈ ಯೋಜನೆಯು ಪ್ರಾಶಸ್ತ್ಯ ಕೊಡುತ್ತದೆ.

ಕ್ರಿಸ್ತ ಶಕ 2000 ವರ್ಷಕ್ಕೆ ಎಲ್ಲರಿಗೂ ಒಳ್ಳೆಯ ಆರೋಗ್ಯದ ಕಾರ್ಯಕ್ರಮದನ್ವಯ, ಆರನೆ ಯೋಜನಾವಧಿಯಲ್ಲಿ ಗ್ರಾಮೀಣ ವೈದ್ಯಕೀಯ ಸೌಲಭ್ಯಗಳನ್ನು ವಿಸ್ತರಿಸಿ, ಶಕ್ತ ಪಡಿಸುವುದು ಗುರಿಯಾಗಿದೆ. ಇದಕ್ಕೋಸ್ಕರ ಪ್ರತಿ ಹಳ್ಳಿಗೆ

ಅಥವಾ ಸಾವಿರ ಜನರ ಒಂದು ಸಮುದಾಯವನ್ನು ಒಂದು ಅಂಗ ಎಂದು ಪರಿಗಣಿಸಿ ಒಬ್ಬ ಸಮುದಾಯ ಆರೋಗ್ಯ ರಕ್ಷಕನನ್ನು ನೇಮಿಸುವುದು, ಪ್ರತಿ 5000 ಜನರಿರುವ ಬಯಲು ಪ್ರದೇಶ ಅಥವಾ 3000 ಜನರಿರುವ ಗುಡ್ಡಗಾಡು ಪ್ರದೇಶಕ್ಕೆ ಒಂದು ಉಪ ಆರೋಗ್ಯಕೇಂದ್ರ ಕೊಡುವುದು, ಪ್ರತಿ 30,000 ಜನರಿರುವ ಬಯಲು ಪ್ರದೇಶ ಅಥವಾ 20,000 ಜನರಿರುವ ಗುಡ್ಡಗಾಡು ಪ್ರದೇಶಕ್ಕೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸುವುದು ಮತ್ತು ಒಂದು ಲಕ್ಷ ಜನಸಂಖ್ಯೆಗೆ ಅಥವಾ ಒಂದು ಸಮುದಾಯ ಅಭಿವೃದ್ಧಿ ಕೇಂದ್ರಕ್ಕೆ ಒಂದು ಸಮುದಾಯ ಆರೋಗ್ಯ ಕೇಂದ್ರ ಸ್ಥಾಪಿಸುವುದು ಈ ಯೋಜನೆಯ ಗುರಿಯಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ 1980-85ರ ಯೋಜನಾವಧಿಯಲ್ಲಿ ಸುಮಾರು 577 ಕೋಟಿ ರೂ.ಗಳನ್ನು ಮೀಸಲಿಡಲಾಗಿದ್ದು, ಇದು ಸಮಸ್ಯೆಯ ಪ್ರಮಾಣಕ್ಕೆ ತೀರಾ ಕಡಿಮೆ ಎನಿಸಿದರೂ ಪರಿಸ್ಥಿತಿಯನ್ನು ಸುಧಾರಿಸುವುದು ಎಂದು ಆಶಿಸಲಾಗಿದೆ.

ಗ್ರಾಮೀಣ ನೀರು ಸರಬರಾಜು ಯೋಜನೆಯನ್ವಯ 1,90 ಲಕ್ಷ ಹಳ್ಳಿಗಳನ್ನು ಸಮಸ್ಯೆಯ ಹಳ್ಳಿಗಳೆಂದು ಗುರುತಿಸಲಾಗಿದ್ದು, ಅವುಗಳಿಗೆ ಪೂರ್ಣ ಪ್ರಮಾಣದಲ್ಲಿ ಕುಡಿಯುವ ನೀರು ಒದಗಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಈ ಕಾರ್ಯಕ್ರಮದಿಂದ ಹಿಂದುಳಿದ ಮತ್ತು ಅನುಸೂಚಿತ ಜಾತಿ ಮತ್ತು ವರ್ಗದವರಿಗೆ ಹೆಚ್ಚು ಸಹಾಯಕವಾಗುತ್ತದೆ. ಈ ಹಳ್ಳಿಗಳಿಗೆ ಬಾವಿಗಳ ಮೂಲಕ ನೀರನ್ನು ಪೂರೈಸಲು ಈ ಯೋಜನಾವಧಿಯಲ್ಲಿ ಸುಮಾರು 2007 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.

ಗ್ರಾಮೀಣ ರಸ್ತೆ ಕಾರ್ಯಕ್ರಮದನ್ವಯ ಈ ಯೋಜನಾವಧಿಯಲ್ಲಿ 1500 ಜನಸಂಖ್ಯೆಯಿರುವ ಎಲ್ಲಾ ಹಳ್ಳಿಗಳನ್ನು ಮತ್ತು ಶೇಕಡಾ 50ರಷ್ಟು ಎಲ್ಲಾ ಹಳ್ಳಿಗಳನ್ನು 1990ರ ಹೊತ್ತಿಗೆ ರಸ್ತೆಗಳ ಮೂಲಕ ಸಂಪರ್ಕ ಕಲ್ಪಿಸಲು ಯೋಜಿಸಲಾಗಿದ್ದು ಈ ಯೋಜನೆಯಲ್ಲಿ ಈ ಕಾರ್ಯಕ್ಕೆ 1165 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.

ಗ್ರಾಮೀಣ ವಿದ್ಯುದೀಕರಣ ಕಾರ್ಯಕ್ರಮದನ್ವಯ, ಐದನೇ ಯೋಜನೆಯಲ್ಲಿ ಹಾಕಿಕೊಂಡಿದ್ದ ನೀತಿಯನ್ನು ಬದಲಿಸಿ, 1990ರ ಹೊತ್ತಿಗೆ ಪ್ರತಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಶೇಕಡಾ 60ರಷ್ಟು ಹಳ್ಳಿಗಳು ವಿದ್ಯುತ್ ಸೌಕರ್ಯ ಪಡೆಯುವಂತೆ ಮಾಡಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಐದನೇ ಯೋಜನೆಯ ಗುರಿಯಾದ ಶೇಕಡಾ 40ರಷ್ಟು ಹಳ್ಳಿಗಳನ್ನು ವಿದ್ಯುದೀಕರಿಸಲು 1,15,165 ಹಳ್ಳಿಗಳ ಜೊತೆಗೆ 46,464 ಹಳ್ಳಿಗಳನ್ನು 1980–85ರ ಅವಧಿಯಲ್ಲಿ ವಿದ್ಯುದೀಕರಿಸಲಾಗುವುದು. ಈ ಕಾರ್ಯಕ್ರಮಕ್ಕೆ ಈ ಅವಧಿಯಲ್ಲಿ 307 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.

ಭೂರಹಿತ ಕಾರ್ಮಿಕರಿಗೆ ವಸತಿ ಕಾರ್ಯಕ್ರಮದನ್ವಯ 1985ರ ಹೊತ್ತಿಗೆ 14.5 ಮಿಲಿಯನ್ ವಸತಿಗಳನ್ನು ಭೂರಹಿತರಿಗೆ ಒದಗಿಸಲು ಯೋಜಿಸಲಾಗಿದ್ದು ಈಗಾಗಲೇ ಸುಮಾರು 7.7 ಮಿಲಿಯನ್ ಭೂರಹಿತರಿಗೆ ಮನೆಯ ಅಂಕಣಗಳನ್ನು ಒದಗಿಸಲಾಗಿದ್ದು, ಉಳಿದ 6.8 ಮಿಲಿಯನ್ ಕುಟುಂಬಗಳಿಗೆ ಉಳಿದ ಯೋಜನಾ ಪಧಿಯಲ್ಲಿ ಒದಗಿಸಲಾಗುವುದು. ಈ ಕಾರ್ಯಕ್ಕೆ 354 ಕೋಟಿ ರೂ.ಗಳನ್ನು ವೆಚ್ಚಮಾಡಲು ಯೋಜಿಸಲಾಗಿದ್ದು ಇದರಲ್ಲಿ 170 ಕೋಟಿ ರೂ.ಗಳನ್ನು ಮನೆಯ ಅಂಕಣ ಒದಗಿಸಲು ಉಳಿದ 184 ಕೋಟಿ ರೂ.ಗಳು ಮನೆಕಟ್ಟಲು ಸಹಾಯ ಮಾಡಲು ಉಪಯೋಗಿಸಲಾಗುವುದು.

ಕೊಳಚೆ ಪ್ರದೇಶಗಳ ವಾತಾವರಣವನ್ನು ಉತ್ತಮಪಡಿಸುವ ಕಾರ್ಯಕ್ರಮದನ್ವಯ ಈ ಯೋಜನಾವಧಿಯಲ್ಲಿ ಸುಮಾರು 151 ಕೋಟಿ ರೂಗಳನ್ನು ವೆಚ್ಚ ಮಾಡಲಾಗುವುದು. ದೇಶದ ಪಟ್ಟಣಗಳ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 20 ರಷ್ಟು ಜನ ಕೊಳೆಗೇರಿಗಳಲ್ಲಿ ವಾಸಿಸುತ್ತಿದ್ದು, 1985ರ ಹೊತ್ತಿಗೆ ಸುಮಾರು 33.1 ಮಿಲಿಯನ್ ಜನಸಂಖ್ಯೆಗೆ ಒಳ್ಳೆಯ ಸೌಕರ್ಯಗಳನ್ನು ಒದಗಿಸಬೇಕಾಗಿದ್ದು, ಇದರಲ್ಲಿ 10 ಮಿಲಿಯನ್ ಜನರಿಗೆ ಒಳ್ಳೆಯ ಸೌಲಭ್ಯಗಳನ್ನು 1985ರ ಹೊತ್ತಿಗೆ ಒದಸಲು ಯೋಜಿಸಲಾಗಿದೆ.

ಪೌಷ್ಟಿಕ ಆಹಾರ ಕಾರ್ಯಕ್ರಮದನ್ವಯ ವಿಶೇಷ ಪೌಷ್ಟಿಕ ಆಹಾರ ಮತ್ತು ಮಧ್ಯಾಹ್ನ ಊಟದ ಕಾರ್ಯಕ್ರಮಗಳನ್ನು ಆರಂಭಿಸಿದ್ದು, ವಿಶೇಷ ಪೌಷ್ಟಿಕ ಆಹಾರ ಕಾರ್ಯಕ್ರಮದ ಪ್ರಕಾರ ಆರನೇ ಯೋಜನೆಯ ಅವಧಿಯಲ್ಲಿ 8,18 ಮಿಲಿಯನ್ ಮಕ್ಕಳು ಮತ್ತು ತಾಯಂದಿರನ್ನು ಈ ಕಾರ್ಯಕ್ರಮದ ವ್ಯಾಪ್ತಿಗೆ ತರಲು ಯೋಜಿಸಲಾಗಿದೆ.

ಮಧ್ಯಾಹ್ನ ಊಟದ ವ್ಯವಸ್ಥೆ ಕಾರ್ಯಕ್ರಮದನ್ವಯ 17.4 ಮಿಲಿಯನ್ ಮಕ್ಕಳನ್ನು ಪೌಷ್ಟಿಕ ಆಹಾರ ಕಾರ್ಯಕ್ರಮದ ವ್ಯಾಪ್ತಿಗೆ ಈ ಯೋಜನಾವಧಿಯಲ್ಲಿ ತರಲಾಗುವುದು. ಈ ಕಾರ್ಯಕ್ರಮಗಳಿಗೆ ಸುಮಾರು 219 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಈ ಎಲ್ಲಾ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನದಿಂದ, ಬೆಲೆಗಳಲ್ಲಿ ಕಡಿತ ಸಾಧಿಸುವುದರಿಂದ ಮತ್ತು ಯೋಜಿಸಲಾದ ಶೇಕಡಾ 5.2ರ ಬೆಳವಣಿಗೆ ದರವನ್ನು ಕಾಯ್ದುಕೊಳ್ಳುವುದರಿಂದ ಮತ್ತು ಪ್ರತಿ ಕ್ಷೇತ್ರದ ಯಶಸ್ವಿ ಕಾರ್ಯಾಚರಣೆಯಿಂದ ಆರನೇ ಯೋಜನೆಯು ಗುರಿ ಮುಟ್ಟುವಲ್ಲಿ ಯಶಸ್ವಿಯಾಗಿ, ಶ್ರೀಸಾಮಾನ್ಯನು ಸ್ವಲ್ಪ ತೃಪ್ತಿಯ ಉಸಿರಾಡಲು ಸಾಧ್ಯವಾದೀತು.

'ಸಂಶೋಧಕರಿಗೊಂದು ಸೂಚನೆ' ಕುರಿತು ಒಂದು ವಿವರಣೆ

ಡಾ. ಎಂ. ಚಿದಾನಂದ ಮೂರ್ತಿಯವರು 'ಸಾಧನೆ' 11, ಪುಟ 133–34 ರಲ್ಲಿ "ಸಂಶೋಧಕರಿಗೊಂದು ಸೂಚನೆ" ಎಂಬ ಕಿರುಲೇಖನದಲ್ಲಿ ನನ್ನ ಎರಡು ಲೇಖನಗಳ ಪ್ರಸ್ತಾಪ ಮಾಡಿದ್ದಾರೆ. ಅವರ 'ಸೂಚನೆ'ಗಳನ್ನನುಲಕ್ಷಿಸಿ ಮುಂದಿನ ಕೆಲವು ಮಾತುಗಳನ್ನು ಅನಿವಾರ್ಯವಾಗಿ ಬರೆಯುತ್ತಿದ್ದೇನೆ :

'ಇಜ್ ಧಾತುವನ್ನು ಕುರಿತು' ('ಉಪಾಯನ'ದಲ್ಲಿ ಪ್ರಕಟಿತ) ಎಂಬ ಲೇಖನದಲ್ಲಿ ಅವರು 'back-formation' ಎಂಬ ಪ್ರಕ್ರಿಯೆಯ ಪ್ರಭಾವ ಎಂದು ಹೇಳಿದ್ದು ತಪ್ಪೆಂದು ನಾನು ನನ್ನ ಲೇಖನ 'ಕಾಲ ವಿಷಯಕ ಚರ್ಚೆಯಲ್ಲಿ ವಡ್ಡಾರಾಧನೆಯ ಭಾಷೆ' ಎಂಬುದರಲ್ಲಿ ಸಾಧಾರವಾಗಿ ಹೇಳಿದ್ದೆ. ಆದರೆ ನನ್ನ ಲೇಖನಕ್ಕಿಂತ ಮುಂಚೆಯೇ ಡಾ. ಚಿದಾನಂದ ಮೂರ್ತಿಯವರು ತಾವೇ ತಮ್ಮ ಅಭಿಪ್ರಾಯವನ್ನು ಮಾರ್ಪಡಿಸಿಕೊಂಡು ಪರಿಷತ್ ಪತ್ರಿಕೆಯಲ್ಲಿ 'ಬಿಸ್ವನಿವಾಕ್ಕೆ ಸಂಬಂಧಿಸಿದ ಒಂದು ಲಿಪಿ ಸಮಸ್ಯೆ ಮತ್ತು ಕೇಶಿರಾಜ (ಪ. ಪ. ಸಂ 62 1–2–1977) ಎಂಬ ಲೇಖನ ಬರೆದಿದ್ದಾರೆ. ನಾನು ಅದನ್ನು ಗಮನಿಸದಿದ್ದುದು ನಿಜ.

ಆದರೆ '-ವರ, -ವಾರ'ಗಳನ್ನು ಕುರಿತು ಅವರು ಬರೆದ ಎರಡನೆಯ ಲೇಖನ. 'ಸಾಧನೆ' 9–4 ರಲ್ಲಿ ಪ್ರಕಟವಾದುದನ್ನು ನಾನು ಗಮನಿಸದೆ 'ಸಾಧನೆ' 10–3 ರಲ್ಲಿ ಪ್ರಕಟವಾದ ನನ್ನ ಲೇಖನ ಬರೆದಿರುವೆನೆಂದು ಅವರು ಗ್ರಹಿಸಿದ್ದು ಮಾತ್ರ ತಪ್ಪು. 'ಸಾಧನೆ' 7–1 ರಲ್ಲಿ ಡಾ. ಮೂರ್ತಿಯವರು ವರ,-ವಾರ'ಗಳನ್ನು ಕುರಿತು ಬರೆದ ಲೇಖನ ಪ್ರಕಟವಾದ ತರುವಾಯ ಡಾ. ಕಲಬುರ್ಗಿಯವರು 'ಸಾಧನೆ' 9–1 ರಲ್ಲಿ ತಮ್ಮ ಪ್ರತಿಕ್ರಿಯಾ ರೂಪದ ಲೇಖನ ಪ್ರಕಟಿಸಿದರು. ವಾಸ್ತವವಾಗಿ ನಾನು ಬರೆದ ಲೇಖನ 'ಸಾಧನೆ' 9–2 ರಲ್ಲೇ ಪ್ರಕಟವಾಗಬೇಕಾಗಿತ್ತು. ನನ್ನ ಲೇಖನವನ್ನು ನಾನು 'ಸಾಧನೆ'ಯ ಸಂಪಾದಕರಿಗೆ ಡಾ. ಕಲಬುರ್ಗಿಯವರ ಲೇಖನ ಪ್ರಕಟವಾದ ಕೂಡಲೇ ಬರೆದು ಕಳುಹಿಸಿದ್ದೇನೆ. ಆದರೆ ನನ್ನ ಲೇಖನಕ್ಕಿಂತ ಮುಂಚೆಯೇ ಡಾ. ಚಿದಾನಂದ ಮೂರ್ತಿಯವರು, ಡಾ. ಕಲಬುರ್ಗಿಯವರ ಲೇಖನದ ಆಕ್ಷೇಪಣೆಗಳಿಗೆ ಉತ್ತರ ರೂಪವಾಗಿ ಬರೆದ ಲೇಖನ ಸಾಧನೆ (9–4)ಯಲ್ಲಿ ಪ್ರಕಟವಾಯಿತು. ನನ್ನ ಲೇಖನ ಬಹಳ ತಡವಾಗಿ, ಅಂದರೆ 'ಸಾಧನೆ' 10–4 ರಲ್ಲಿ ಪ್ರಕಟವಾಯಿತು. ಹೀಗಾಗಿ ನನ್ನ ಲೇಖನ ಮತ್ತು ಡಾ. ಮೂರ್ತಿಯವರ (ಸಾಧನೆ 9–4 ರಲ್ಲಿ ಪ್ರಕಟಿತ

ವಾದ) ಎರಡನೆಯ ಲೇಖನಗಳಲ್ಲಿ ಒಂದೇ ಬಗೆಯ ಹಲವು ಸಂಗತಿಗಳು ಪ್ರಸ್ತಾಪ ಗೊಂಡಿವೆ. (ಬೇಕಾದರೆ ನಾನು ನನ್ನ ಲೇಖನ (ಸಾಧನೆ 10-3)ದ ಜತೆಗೆ 'ಸಾಧನೆ'ಯ ಸಂಪಾದಕರಿಗೆ ಬರೆದ ಪತ್ರದ ದಿನಾಂಕವನ್ನು ಪರಿಶೀಲಿಸಿ ನೋಡ ಬಹುದು.)

ವಿಶ್ವವಿದ್ಯಾಲಯದಿಂದ ದೂರದಲ್ಲಿರುವ ಖಾಸಗಿ ಕಾಲೇಜೊಂದರಲ್ಲಿ ಉಪ ನ್ಯಾಸಕನಾಗಿದ್ದುಕೊಂಡು ಭಾಷಾ ವಿಜ್ಞಾನ, ಶಾಸನ ಶಾಸ್ತ್ರಗಳಂಥ ವಿಷಯಗಳ ಮೇಲೆ ಸಂಶೋಧನಾ ಲೇಖನಗಳನ್ನು ಬರೆಯುವುದರ ಕಷ್ಟ ಏನು ಎಂದು ಪ್ರಾಜ್ಞರು ಸುಲಭವಾಗಿ ಗ್ರಹಿಸಬಹುದು. ಆದರೂ ಸಂಶೋಧಕನಿಗೆ ಇದೊಂದು ನೆಪವಾಗಬೇಕಿಲ್ಲ. ಆದರೆ ಪತ್ರಿಕೆಗಳ ಸಂಪಾದಕರು ನಮ್ಮಂಥವರ ಲೇಖನಗಳನ್ನು ಸಕಾಲಕ್ಕೆ ಪ್ರಕಟಿಸುವುದು ಆಗದಿದ್ದರೆ ಹೋಗಲಿ ; ಕನಿಷ್ಟ ತಮ್ಮ ಕೈಗೆ ಲೇಖನ ತಲುಪಿದ ದಿನಾಂಕವನ್ನಾದರೂ ಮುದ್ರಿಸಬೇಕು. ಆಗ ಇಂಥ ತಪ್ಪು ಗ್ರಹಿಕೆಗೆ ಅವಕಾಶ ಉಳಿಯುವುದಿಲ್ಲ.

ಇನ್ನು ಡಾ. ಮೂರ್ತಿಯವರು ನಾನು (ಮತ್ತು ಡಾ. ಕಲಬುರ್ಗಿಯವರು) ನಮ್ಮ ವಾದಗಳಿಗೆ ಆಧಾರಗಳನ್ನು ತೋರಿಸಿಲ್ಲ ಎಂದು ಹೇಳಿದ್ದಾರೆ. ನನ್ನ ಲೇಖನದಲ್ಲಿ ವರ ಮತ್ತು ವಾರಗಳ ಕೆಲವು ಉದಾಹರಣೆಗಳು ಡಾ. ಮೂರ್ತಿಯವರು ಹೇಳುವಂತೆ 'ಪುರ' ಎಂಬುದರಿಂದಲೇ ಬಂದಿವೆ ಎಂದು ಸೂಚಿಸಿ ಹೊಸ ಆಧಾರ ಗಳನ್ನು ತೋರಿಸಿದ್ದೇನೆ. ಆದರೆ ಇನ್ನು ಕೆಲವಾದರೂ ಬೇರೆ ಮೂಲಗಳಿಂದ ಬಂದಿರಬಹುದೆಂದು ನಾನು ಸೂಚಿಸಿದ್ದೇನೆ. ಸದ್ಯಕ್ಕೆ ಈ ವಿಷಯದಲ್ಲಿ ಹೆಚ್ಚಿಗೆ ಬರೆಯಲಾರೆ. ಡಾ. ಕಲಬುರ್ಗಿಯವರು ತಮ್ಮ ವಾದ ಸಮರ್ಥನೆಗಾಗಿ ಇನ್ನೊಂದು ಲೇಖನ ಬರೆಯುವುದಾಗಿ ನನ್ನ ಮುಂದೆ ಹೇಳಿದ್ದಾರೆ. ಅವರ ಲೇಖನ ಪ್ರಕಟವಾದ ತರುವಾಯ, ಅವಶ್ಯವೆನಿಸಿದಲ್ಲಿ, ನಾನೂ ಒಂದು ಲೇಖನ ಬರೆಯುವೆ.

— ಎಂ. ಬಿ. ನೇಗಿನಹಾಳ

ಶಾಂತ ನಿರಂಜನ ಕವಿಯ ಮತವಿಚಾರ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ರಾದ ಪ್ರೊ. ಹಾ. ಮಾ. ನಾಯಕರ ಪ್ರಧಾನ ಸಂಪಾದಕತ್ವದಲ್ಲಿ ಹಾಗೂ ಶ್ರೀ ಎನ್. ಬಸವಾರಾಧ್ಯರ ವಿಭಾಗ ಸಂಪಾದಕತ್ವದಲ್ಲಿ 1973 ರಲ್ಲಿ "ಅಬ್ಬಲೂರು- ಚರಿತೆ'' ಎಂಬ ಕಾವ್ಯವು ಪ್ರಕಟಗೊಂಡಿದೆ. ಐತಿಹಾಸಿಕವಾದ ಅನೇಕ ಹೊಸ ವಿಷಯ

ಗಳ ಮೇಲೆ ಬೆಳಕು ಬೀರುವ ಹಾಗೂ ತನ್ನದೇ ಆದ ಅನೇಕ ಉತ್ತಮ ಗುಣಗಳನ್ನು ಒಳಗೊಂಡ ಈ ಸತ್ಕಾವ್ಯವನ್ನು ವಿದ್ವತ್ಪೂರ್ಣವಾಗಿ ಸಂಪಾದಿಸಿದ ಈ ಇಬ್ಬರು ವಿದ್ವಾಂಸರಿಗೆ ಸವಿನಯ ಕೃತಜ್ಞತೆಗಳು.

ಈ ಕಾವ್ಯವು ಏಕಾಂತರಾಮಯ್ಯ ಎಂಬ ಶಿವಭಕ್ತನು ತನ್ನ ರುಂಡವನ್ನು ಕತ್ತರಿಸಿಕೊಂಡು ಪರಸಮಯಿಗಳಾದ ಜೈನರನ್ನು ಹಿಮ್ಮೆಟ್ಟಿಸಿ ಶೈವ ಧರ್ಮವನ್ನು ಎತ್ತಿ ಹಿಡಿಯುವ ಕತೆಯನ್ನು ಒಳಗೊಂಡಿದೆ. ರಾಮಯ್ಯನು 12ನೆ ಶತಮಾನದ ವಚನಕಾರರ ಸಮಕಾಲೀನನಾಗಿದ್ದ ಐತಿಹಾಸಿಕ ವ್ಯಕ್ತಿ. ಶಾಂತನಿರಂಜನ ಕವಿಯು ಸು. 1650 ರಲ್ಲಿ ಇವನ ಮೇಲೆ "ಅಬ್ಬಲೂರು ಚರಿತೆ" ಎಂಬ ಕಾವ್ಯವನ್ನು ಸಾಂಗತ್ಯದಲ್ಲಿ ಬರೆದಿದ್ದಾನೆ.

ಪ್ರಸ್ತುತ ವಿಷಯವೇನೆಂದರೆ ಎನ್. ಬಸವಾರಾಧ್ಯರು ಕವಿ-ಕಾಲ ವಿಚಾರವನ್ನು ಪ್ರಸ್ತಾಪಿಸುತ್ತಾ—"ಶಾಂತನಿರಂಜನ ವೀರಶೈವ ಕವಿ" (xii) ಎಂದು ಸ್ಪಷ್ಟವಾಗಿ ಹೇಳಿರುತ್ತಾರೆ.

ಅವರೇ ಹೇಳಿರುವಂತೆ ಅವರು—ಈ ಕವಿಯು ವೀರಶೈವ ಕವಿ—ಎಂಬ ನಿರ್ಣಯಕ್ಕೆ ಬರಲು ಈ ಕೆಳಗಿನ ಉಕ್ತಿಗಳನ್ನು ಅವಲಂಬಿಸಿದ್ದಾರೆ:

(1) "ಶಿವಭಕ್ತಿ ಗುರು ವಂಶೋದ್ಭವನಾದ ಚಿಕ್ಕೇಶ ತವೆ ರಾಜಿಸಿದ ಗುರುರಾಯ".

(2) "ಗುರುಕುಲ ವಂಶಾಬ್ಧಿ ಚಂದ್ರಮ ಕಂತುಹರನ ಮತದವರ ಸಂತತಿಯನು ಕಾಯ್ದು ಚಿಕ್ಕೇಶ ಗುರುರಾಯ ಮುಂದೆಸೆದನು ಕೀರ್ತಿಯಾಂತು".

(3) "ಅಂತವರನ್ವಯ ಶಾಂತನಿರಂಜನ ಅಂತರವಳು ನಿವಾಸ"

ಎಂದು ಕವಿಯು ತನ್ನ ಕಾವ್ಯದಲ್ಲಿ ತಾನೇ ಹೇಳಿಕೊಂಡಿರುವ ತನ್ನ ಗುರುಪರಂಪರೆಯ ಆಧಾರದ ಮೇಲೆ ಹೀಗೆ ಯೋಚಿಸಿರುವಂತಿದೆ.

ಮತ್ತೊಂದು ವಿಷಯವೇನೆಂದರೆ 12ನೆ ಶ ದ ವಚನಕಾರನೂ, ವೀರಶೈವನೂ ಆದ ಏಕಾಂತರಾಮಯ್ಯನಿಗಾಗಿ ಸೂರ್ಯನ ಚಲನೆಯನ್ನು ನಿಲ್ಲಿಸಿ ಅವನ ರುಂಡ–ಮುಂಡಗಳು ಒಂದಾಗುವಂತೆ ಸಹಕಾರ ಕೊಡುವಲ್ಲಿ ಚಿಕ್ಕೇಶಯ್ಯ (ಮೂರು ಜಾವ ದೇವ ಗುರುವು) ವೀರಶೈವನಾಗಿರಲೇ ಬೇಕು ಹಾಗೂ ಅಂಥ ವೀರಶೈವೀಯ ಏಕಾಂತರಾಮಯ್ಯನನ್ನು ಕುರಿತು ಕಾವ್ಯ ಬರೆಯುವಲ್ಲಿ ಪ್ರಸ್ತುತ ಶಾಂತ ನಿರಂಜನ ಕವಿಯೂ ವೀರಶೈವನಾಗಿರಲೇ ಬೇಕು ಎಂಬ ನಂಬಿಕೆಯು ಶ್ರೀ ಎನ್. ಬಸವಾರಾಧ್ಯರಿಗೆ ಸಹಜವಾಗಿಯೇ ಉಂಟಾಗಿದೆ.

ಆದರೆ ಮಾನ್ಯರ ಈ ಮಾತನ್ನು ವಿನಯಪೂರ್ವಕವಾಗಿ ನಿರಾಕರಿಸುತ್ತಾ— ಈ ಶಾಂತನಿರಂಜನ ಕವಿಯು ವಿಶ್ವಕರ್ಮ ಅಥವಾ ವಿಶ್ವಬ್ರಾಹ್ಮಣ ವಂಶಸ್ಥನು ಎಂದು ಈ ಕೆಳಗಿನ ಆಧಾರಗಳ ಮೇಲೆ ನಿರ್ಣಯಿಸುತ್ತೇನೆ. ಇದೇ ಕವಿಯ ಇದೇ ಕಾವ್ಯದಲ್ಲಿ ಬರುವ ಉಕ್ತಿಗಳಿಂದ ಈ ಸಿದ್ಧಾಂತಕ್ಕೆ ಬರಬಹುದಾಗಿದೆ—

"ಶೂಲಿಯರ್ಧಾಂಗಿ ವೊಪ್ಪಿರ್ದಳು ನಿರ್ಮಲ
ಕಾಳಿಕಾಂಬಿಕೆ ಸಲಹೆನ್ನ ಪದ್ಯ-೫

ಸಾಮಾನ್ಯವಾಗಿ ಶ್ರೀ ಕಾಳಿಕಾಂಬೆಯನ್ನು ತಮ್ಮ ಕಾವ್ಯದ ಪ್ರಾರಂಭದ ಸ್ತುತಿ ಪದ್ಯದಲ್ಲಿ ಯಾವುದೇ ವೀರಶೈವ ಕವಿಗಳು ಪ್ರಾರ್ಥಿಸುವುದು ಕಂಡುಬರುವುದಿಲ್ಲ. ಮೇಲಾಗಿ ಕಾಳಿಕಾಂಬಿಕೆಯು ಅನ್ಯಮಾತಸ್ಥರು ಪೂಜಿಸುತ್ತಿದ್ದರೂ ಕೂಡ ಆಕೆ ಭಾರತದಾದ್ಯಂತ ವಿಶ್ವಕರ್ಮ ಮತಸ್ಥರ ಕುಲದೇವತೆ.

''ತಮ ವೈರಿ ಭ್ರಮರ ಬಾಂಧವ ನಾಮ ದ್ವಾದಶ
ದ್ಯುಮಣಿಯ ಪಾದಕೊಂದಿಸುವೆ'' ಪದ್ಯ-೮

ಸೂರ್ಯ ದೇವನ ಸ್ತುತಿಯೂ ಕೂಡ ಅಪರೂಪದ್ದಾಗಿರುವುದೇ ಅಲ್ಲದೆ—ವಿಶ್ವಕರ್ಮ ಮತಸ್ಥರು ಸೂರ್ಯನ ಆರಾಧಕರಾಗಿದ್ದಾರೆ. 'ಅಕ್ಕಸಾಲೆ' ಎಂಬ ಪದವು ಅಕ್ಕ < ಅರ್ಕ (=ಸೂರ್ಯ) ಎಂಬ ಮೂಲವುಳ್ಳುದ್ದು ಎಂಬ ವಾದವೂ ಉಂಟು. ಆಭರಣವನ್ನೂ ತಯ್ಯಾರಿಸುವ ಅಕ್ಕಸಾಲಿಗನಾದ ಶಾಂತನಿರಂಜನ ಕವಿಗೆ ಸೂರ್ಯನು— ''ದ್ಯುಮಣಿ'' (=Jewel of the Sky– ಕಿಟ್ಟೆಲ್) ಯಾಗಿ ಕಂಡಿರುವುದು ಅತ್ಯಂತ ಸಹಜದಾಗಿಯೂ ಸುಂದರವಾಗಿಯೂ ಇದೆ,

"ತಪಸು ಮಂತ್ರನ್ಯಾಸ ಯಜ್ಞಸೂತ್ರವು ಶಿಖಿ
ಉಪದೇಶ ಪಂಚ ಬ್ರಹ್ಮರಿಗೆ
ಸಫಲ ಸನ್ಮಾರ್ಗದೋರಿದ ರೂಥಾಚಾರ್ಯನ
ಕೃಪೆಯಿಂದ ರಚಿಪೆನೀ ಕೃತಿಯ'' ಪದ್ಯ-೧೧

ಈ ಪದ್ಯದಲ್ಲಿ ವಿಶ್ವಕರ್ಮ ಮತೀಯ ಧರ್ಮಕ್ಕೆ ಸಂಬಂಧಿಸಿದ ಕೆಲವು ಪಾರಿಭಾಷಿಕ ಪದಗಳು ಕಂಡು ಬರುತ್ತವೆ :

(1) ಮಂತ್ರನ್ಯಾಸ=ಮಂತ್ರೋಕ್ತವಾಗಿ ದೇವತಾ ವಿಗ್ರಹವನ್ನು ಪ್ರತಿಷ್ಠಾಪಿಸುವುದು ಎಂಬ ಅರ್ಥವುಂಟು. ಸಾಮಾನ್ಯವಾಗಿ ಶಿಲ್ಪಿಗಳೆಲ್ಲರೂ ವಿಶ್ವಕರ್ಮ ಮತಸ್ಥರಾಗಿದ್ದು ಅವರಿಗೆ ಗುರುಗಳು ವಿಗ್ರಹಗಳನ್ನು ರೂಪಿಸುವ ಹಾಗೂ ಪ್ರತಿಷ್ಠಾಪಿಸುವ ವಿದ್ಯೆಯನ್ನು ಹೇಳಿಕೊಡುತ್ತಿದ್ದನು.

(2) ಪಂಚ ಬ್ರಹ್ಮ=ನಾವುಗಳೆಲ್ಲರೂ ತಿಳಿದಿರುವಂತೆ ಚತುರ್ಮುಖ ಬ್ರಹ್ಮನ ಕಲ್ಪನೆಯು ಪ್ರಚಲಿತವಾಗಿದೆ. ಆದರೆ ವಿಶ್ವಬ್ರಾಹ್ಮಣ ಮತಸ್ಥರಲ್ಲಿ ಪಂಚಮುಖ ಬ್ರಹ್ಮನ ಕಲ್ಪನೆಯುಂಟು.

(3) ಯಜ್ಞಸೂತ್ರವು ಶಿಖಿ–ಎಂಬ ಮಾತುಗಳು ವೈದಿಕ ಸಂಪ್ರದಾಯಸ್ಥರಾದ ವಿಶ್ವಕರ್ಮರಲ್ಲಿ ಸಹಜವಾಗಿಯೇ ಕಂಡು ಬರುತ್ತದೆ.

—ಈ ಎಲ್ಲವುಗಳ ಬಗ್ಗೆ ಪಂಚಬ್ರಹ್ಮರಿಗೆ ಉಪದೇಶಮಾಡಿ ಉದ್ಧರಿಸಿದ ಗುರುವಿನ ಕೃಪೆಯಿಂದ ಈ ಕೃತಿಯನ್ನು ರಚಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ.

> "ಗುರುವಿಕೆಯನಾಂತು ಸದ್ಯೋಜಾತ ವಾಮ ತ
> ತ್ಪುರುಷನಾಘೋರನೀಶಾನ್ಯ ಮುಖ ಜನಿತರಿಗೆ
> ಗುರುವಾದನಗ್ಗಳಿಯದೇವ ಗುರುರಾಯನಾ ಚರಣಕ್ಕೆ ನತನಪ್ಪೆನು" ೧–ಸಂಧಿ ೪.

ಸದ್ಯೋಜಾತ, ವಾಮ, ತತ್ಪುರುಷ, ಅಘೋರ, ಈಶಾನ್ಯ–ಎಂಬ ಐದು ಮುಖಗಳನ್ನು ಹೊಂದಿದವನ ಮಕ್ಕಳಿಗೆ ಗುರುವಾದ ತನ್ನ ಗುರುವಿಗೆ ನಮಸ್ಕರಿಸುವುದಾಗಿ ಕವಿ ಹೇಳಿಕೊಂಡಿದ್ದಾನೆ. ವಿಶ್ವಕರ್ಮನಿಗೆ ಈ ಮೇಲೆ ಹೇಳಿದ ಐದು ಮುಖಗಳುಂಟು ಎಂಬುದು ವಿಶ್ವಕರ್ಮ ಮತಸ್ಥರ ನಂಬಿಕೆಯಾಗಿರುತ್ತದೆ.

> "ವ್ಯಾಪಿಸಿ ವಿಶ್ವ ಬ್ರಾಹ್ಮಣರ ಸಂದೋಹದಿ
> ತಾ ಪಿರಿದಾಗಿರುತಿರ್ದ"

ಪ್ರಸ್ತುತ ವಿಶ್ವಬ್ರಾಹ್ಮಣ=ವಿಶ್ವಕರ್ಮ ಮತಸ್ಥರ ಸಮೂಹದಲ್ಲಿ ತನ್ನಗುರುವಾದ ಚಿಕ್ಕೇಶನು ಅಥವಾ ಮೂರು ಜಾವದಯ್ಯನು ಯಾವಾಗಲೂ ಇರುತ್ತಿದ್ದ ಎಂದು ಕವಿಯು ಹೇಳಿಕೊಂಡಿರುತ್ತಾನೆ.

ಈ ಎಲ್ಲ ಕಾರಣಗಳಿಂದ 'ಅಬ್ಬಲೂರು–ಚರಿತೆ'ಯ ಕರ್ತೃ ಶಾಂತನಿರಂಜನ ಕವಿಯು ವೀರಶೈವನಲ್ಲವೆಂದೂ ವಿಶ್ವಕರ್ಮ ಮತಕ್ಕೆ ಸೇರಿದವನೆಂದೂ ಸಾಧಾರಪಡಿಸಬಹುದಾಗಿದೆ. ಇಷ್ಟೇ ಅಲ್ಲದೆ ಶಾಂತನಿರಂಜನ ಕವಿಯು ಸ್ತುತಿಸಿರುವ 12ನೇ ಶತಮಾನದ ಇವನ ಗುರು ಚಿಕ್ಕೇಶಯ್ಯ ಅಥವಾ ಅಂತರವಳ್ಳಿ ಮೂರು ಜಾವಿದೇವಯ್ಯನೂ ಕೂಡ ಇದೇ ವಿಶ್ವಕರ್ಮ ಮತಕ್ಕೆ ಸೇರಿದವನಾಗಿರುತ್ತಾನೆಂದು ಸಾಬೀತಾಗಿರುತ್ತದೆ.

ಕೆ. ಎಸ್. ಕುಮಾರಸ್ವಾಮಿ

ಈ ಸಂಚಿಕೆಯ ಲೇಖಕರು

ರಘು ಕುಲಕರ್ಣಿ	ಭಾಷಾ ವಿಜ್ಞಾನ ವಿಭಾಗ, ಉಸ್ಮಾನಿಯಾ ವಿಶ್ವವಿದ್ಯಾಲಯಂ, ಹೈದರಾಬಾದ್ – 500 007.
ಕೆ. ವಿ. ತಿರುಮಲೇಶ್	ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಎಂಡ್ ಫಾರಿನ್ ಲಾಂಗ್ವೇಜಸ್, ಹೈದರಾಬಾದ್ – 500 007.
ಎ. ವಿ. ನಾವಡ	ಕನ್ನಡ ವಿಭಾಗ, ಭಂಡಾರ್‌ಕರ್ ಕಾಲೇಜು, ಕುಂದಾಪುರ – 576 201. (ದ.ಕ.)
ಜಿ. ಎಸ್. ಶಿವರುದ್ರಪ್ಪ	ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು - 560 056.
ವೇಣುಗೋಪಾಲ ಸೊರಬ	27, ಆಜಾದ್ ನಗರ, ಕನಕಪುರ – 562 117.
ಬಿ. ಆರ್. ಹಿರೇಮಠ	ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಎಂ. ಎಂ. ಕಲಬುರ್ಗಿ	ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಪ್ರೀತಿ, ಎಸ್.	ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

ಎಚ್. ಎಸ್. ಮುರಳೀಧರ	ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು – 560 056.
ಟಿ. ರಾಮಸ್ವಾಮಿ	ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸು.
ಬಸವರಾಜ ನಾಯ್ಕರ	ಆಂಗ್ಲ ಭಾಷಾ ಅಧ್ಯಾಪಕ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ.
ಎಂ. ಚಿದಾನಂದಮೂರ್ತಿ	ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು – 560 056.
ರಾಮಗಿರಿ ರವೀಂದ್ರ	ಬೆರಳಚ್ಚುಗಾರ, ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿ, ಚಳ್ಳಕೆರೆ – 577 522.
ಎಂ. ಆರ್. ನಾರಾಯಣ	ಮಂಗಳ ಗಂಗೋತ್ರಿ, ಮಂಗಳೂರು – 574 152.
ಜಿ. ಆರ್. ಕುಪ್ಪುಸ್ವಾಮಿ	18, ಎಲ್. ಎಸ್. ರಾವ್ ಲೇ-ಔಟ್, 16ನೇ ಕ್ರಾಸ್, 12ನೇ ಮೈನ್, ಮಲ್ಲೇಶ್ವರಂ, ಬೆಂಗಳೂರು – 560 003.
ಎಚ್. ಎಸ್. ಗಂಗಮ್ಮ	ಸಂಶೋಧನ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 3.

ಕೆ. ಸಿ. ಬಸವರಾಜು

ಅರ್ಥಶಾಸ್ತ್ರ ವಿಭಾಗ,
ಮಂಗಳೂರು ವಿಶ್ವವಿದ್ಯಾಲಯ,
ಮಂಗಳೂರು – 574 152.

ಎಂ. ಬಿ. ನೇಗಿನಹಾಳ

ಕನ್ನಡ ವಿಭಾಗ,
ಜಿ. ಎಚ್. ಕಾಲೇಜ,
ಹಾವೇರಿ – 581 110.

ಕೆ. ಎಸ್. ಕುಮಾರಸ್ವಾಮಿ

ಕನ್ನಡ ಉಪನ್ಯಾಸಕ,
ಸರ್ ಎಂ. ವಿ. ಕಾಲೇಜು
ಭದ್ರಾವತಿ

ನಮ್ಮ ನಿಯತಕಾಲಿಕಗಳು

ಸೃಜನಾತ್ಮಕ ಮತ್ತು ಸಂಶೋಧನಾತ್ಮಕ ಹಾಗೂ ಜನಪ್ರಿಯ ಬರಹಗಳಿಂದ ಕೂಡಿದ ಸಾಹಿತ್ಯಕ, ಮಾನವಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಿಗೆ ಮೀಸಲಾದ

ಸಾಧನೆ
ಕನ್ನಡ ತ್ರೈಮಾಸಿಕ
ವಾರ್ಷಿಕ ಚಂದಾ 8–00 ರೂ.
(ವಿದ್ಯಾರ್ಥಿಗಳಿಗೆ) 5–00 ರೂ.
ಆಜೀವ ಚಂದಾ ಹಣ 100–00 ರೂ.
ಗಳನ್ನು ಎರಡು ಕಂತುಗಳಲ್ಲಿ ಒಂದು
ವರ್ಷದ ಅವಧಿಯಲ್ಲಿ ಪಾವತಿ
ಮಾಡಬಹುದು.

ವಿಜ್ಞಾನ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10–00 ರೂ.

ವಿದ್ಯಾ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10–00 ರೂ.

ಜನಪ್ರಿಯ ವಿಜ್ಞಾನ
ಕನ್ನಡದ ಏಕೈಕ ವಿಜ್ಞಾನ ಮಾಸಿಕ
ವಾರ್ಷಿಕ ಚಂದಾ 12–00 ರೂ.
(ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು
ವಿದ್ಯಾರ್ಥಿಗಳಿಗೆ 6–00 ರೂ.

ವಿವರಗಳಿಗೆ ವ್ಯವಹರಿಸಿ :
ನಿರ್ದೇಶಕರು
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056